ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮಣ್ಣಿವಣ್ಣನ್ ಬಿಡಿಎ ಆಯುಕ್ತ

ಬಿಡಿಎ ನೂತನ ಆಯುಕ್ತರಾಗಿ ಮೇಜರ್ ಪಿ.ಮಣ್ಣಿವಣ್ಣನ್ ಅವರನ್ನು ನೇಮಕ ಮಾಡಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ. ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಹುದ್ದೆಯೊಂದಿಗೆ ಹೆಚ್ಚುವರಿಯಾಗಿ ಬಿಡಿಎ ಆಯುಕ್ತರನ್ನಾಗಿ ನೇಮಕ ಮಾಡಲಾಗಿದೆ.



ದಾರಿದೀಪೋಕ್ತಿ

ಕುದಿಸಿದ ನೀರು ಆಲೂಗಡ್ಡೆಯನ್ನು ಮೆದುಗೊಳಿಸಿದರೆ, ಮೊಟ್ಟೆಯನ್ನು ಗಟ್ಟಿಗೊಳಿಸುತ್ತದೆ. ನೀವು ಯಾರು, ಸತ್ವವೇನು, ಸಾಮರ್ಥ್ಯವೇನು ಎಂಬುದು ಬಹಳ ಮುಖ್ಯವೇ ಹೊರತು ಸಂದರ್ಭ, ಸನ್ನಿವೇಶ ಅಲ್ಲ.

ವಕ್ರತುಂಡೋಕ್ತಿ

ಒಬ್ಬನಿಗಿಂತ ಇಬ್ಬರು ಲೇಸು ಅಂತಾರೆ. ಆದರೆ ಒಟ್ಟಿಗೇ ಇರುವ ಇಬ್ಬರ ಪ್ರತಿಮೆಯನ್ನು ಎಲ್ಲೂ ಸ್ಥಾಪಿಸಿಲ್ಲ.

ಸೊಂಪಾದ ಪುಟಗಳು

ಭಾರತ ಜಪಾನ್ ಮೀರಿಸಿದರೆ ಎಡಚರರಿಗೆ ಉರಿ

ವೀಕೆಂಡ್ ವಿತ್ ಮೋಹನ್ – ಮೋಹನ್ ವಿಶ್ವ 6

ಪಂಚಕರ್ಮವು ಆಗದಿರಲಿ ನಿಮ್ಮ ಜೀವನದ ಅಯ್ಯೋ, ನನ್ನ ಕರ್ಮ!

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ – ಡಾ.ಸಾಧನಶ್ರೀ 7

ನಟ ದರ್ಶನ್ ವಿದೇಶ ಪ್ರಯಾಣಕ್ಕೆ ಅನುಮತಿ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಅವರು ಸಿನಿಮಾ ಶೂಟಿಂಗ್‌ಗಾಗಿ ವಿದೇಶಕ್ಕೆ ಹೋಗಲು ಕೋರ್ಟ್ ಶುಕ್ರವಾರ ಅನುಮತಿ ನೀಡಿದೆ. ಜಾಮೀನಿನ ಮೇಲೆ ಹೊರಗಿರುವ ದರ್ಶನ್, ದುಬೈ ಮತ್ತು ಯುರೋಪ್‌ಗೆ ಪ್ರಯಾಣಿಸಲು ಅನುಮತಿ ಕೋರಿದ್ದರು.

ಗುಜರಾತ್ ಔಟ್

ಚಂಡೀಗಢ: ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ತಂಡ ಗುಜರಾತ್ ತಂಡವನ್ನು 20 ರನ್‌ಗಳಿಂದ ಸೋಲಿಸಿ ಎಲಿಮಿನೇಟರ್–2ನೇ ಪಂದ್ಯವನ್ನಾಡಲು ಅರ್ಹತೆ ಪಡೆಯಿತು. ಭಾನುವಾರ ಮುಂಬೈ, ಪಂಜಾಬ್ ಅನ್ನು ಎದುರಿಸಲಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಕುಸಿತ | ತುರ್ತು ಕ್ರಮಕ್ಕೆ ಆದೇಶ

ಅಧಿಕಾರಿಗಳಿಗೆ ಸಿಎಂ ಕ್ಲಾಸ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಳೆಯಿಂದಾಗುವ ಭೂ ಹಾಗೂ ಗೋಡೆ ಕುಸಿತದಿಂದ ಜನರಿಗೆ ಸಮಸ್ಯೆಯಾಗದಂತೆ ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ನಿರ್ದೇಶಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ದಕ್ಷಿಣ ಕನ್ನಡದಲ್ಲಾಗಿರುವ ಭೂಕುಸಿತ ಸಂಬಂಧ ತಕ್ಷಣ ತೆರಳುವಂತೆ ಸಚಿವ ದಿನೇಶ್ ಗುಂಡೂ ರಾವ್ ಅವರಿಗೆ ಸೂಚಿಸಿದ್ದಾರೆ. ಶುಕ್ರವಾರ ನಡೆಸಿದ ಮ್ಯಾರಾಥಾನ್ ಪರಿಶೀಲನಾ ಸಭೆಯಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಪರಿಹಾರ ಬಾಕಿ ಉಳಿಸಿಕೊಂಡಿರುವ ಸಂಬಂಧ ಅಧಿಕಾರಿಗಳ ವಿರುದ್ಧ ಗರಂ ಆಗಿದ್ದಾರೆ.

ವಿಧಾನಸೌಧದಲ್ಲಿ ವಿವಿಧ ಇಲಾಖೆಗಳ ಪರಿಶೀಲನಾ ಸಭೆ ನಡೆಯಿತು. ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ಬಿರುಸಿನ ಸಭೆ ನಡೆಸಿದರು. ಮಳೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಕುಸಿತ, ಗೋಡೆ ಕುಸಿತ ಆಗಿ ಸಾವು ಸಂಭವಿಸಿರುವ ಬಗ್ಗೆ ಸಮಗ್ರ ಮಾಹಿತಿ ಸಂಗ್ರಹಿಸಿದ ಮುಖ್ಯಮಂತ್ರಿಗಳು, ತಕ್ಷಣ ಸ್ಥಳಕ್ಕೆ ತೆರಳಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಂಡು ವರದಿ ಮಾಡುವಂತೆ ಜಿಲ್ಲಾ ಉಸ್ತುವಾರಿ ಸಚಿವರಾದ ದಿನೇಶ್ ಗುಂಡೂರಾವ್ ಮತ್ತು ದ.ಕ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾವಾರು ರೈತರ ಆತ್ಮಹತ್ಯೆ ಅಂಕಿ ಅಂಶವನ್ನು ಗಮನಿಸಿದ ಸಿಎಂ, ಇನ್ನೂ 13 ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಪರಿಹಾರ ಬಾಕಿ ಇರುವುದನ್ನು ನೋಡಿ ಗರಂ ಆದರು. ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿಗಳಿಂದ ವರದಿ ಪಡೆದರಲ್ಲದೆ, ಹಾವೇರಿ ಸೇರಿ ಇನ್ನೆರಡು ಜಿಲ್ಲೆಗಳಲ್ಲಿ ಒಟ್ಟು 13 ರೈತ ಆತ್ಮಹತ್ಯೆ ಪ್ರಕರಣಗಳಲ್ಲಿ ಪರಿಹಾರ ಬಾಕಿ ಇರುವುದನ್ನು ಆದಷ್ಟು ಬೇಗ ಬಗೆಹರಿಸಿ ಪರಿಹಾರ ಒದಗಿಸಿ ಎನ್ನುವ ಸೂಚನೆ ನೀಡಿದರು. → 4

ಸಿಎಂ ಸೂಚನೆಗಳು

- ಸ್ಮಶಾನ ಮತ್ತು ಖಬರಸ್ತಾನಗಳಿಗೆ ಜಮೀನು ಒದಗಿಸಲು ಆದ್ಯತೆ ನೀಡಬೇಕು
- ಸರಕಾರಿ ಜಮೀನು ಲಭ್ಯವಿಲ್ಲದ ಕಡೆ ಖಾಸಗಿ ಜಮೀನು ಖರೀದಿ ಮಾಡಬೇಕು
- ಹಾಸ್ಟೆಲ್‌ಗಳಿಗೆ ನಿರ್ಜನ ಪ್ರದೇಶದಲ್ಲಿ ನಿವೇಶನ ನೀಡಬಾರದು
- ನಿವೃತ್ತ ಸೈನಿಕರಿಗೆ ನಿವೇಶನ ಕುರಿತ ಅರ್ಜಿಗಳನ್ನು ಆದಷ್ಟು ಬೇಗನೆ ವಿಲೇ ಮಾಡಿ
- ಮುಂದಿನ ಸಭೆ ವೇಳೆ ನಿವೇಶನ ಲಭ್ಯವಿಲ್ಲದ ಬಗ್ಗೆ ದೂರು ಬರಬಾರದು
- ಸೈನಿಕರ ಕಲ್ಯಾಣ ನಿಗಮ ಸ್ಥಾಪನೆ ಕುರಿತ ಪ್ರಸ್ತಾವನೆ ಮುಂದಿನ ಸಭೆಯಲ್ಲಿ ಮಂಡಿಸಿ
- ಎಲ್ಲ ತಾಲೂಕುಗಳಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಜಮೀನು ಗುರುತಿಸಿ
- ಫಲಾನುಭವಿಗಳಿಗೆ ಕೌಶಲ್ಯ ತರಬೇತಿ ನೀಡಿ, ಬೆಳವಣಿಗೆ ಮೇಲೆ ನಿಗಾವಹಿಸಿ

ವಿಧಾನಸೌಧದಲ್ಲಿ ವಿವಿಧ ಇಲಾಖೆಗಳ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಕೂಡಲೇ ಕೆರೆ ಒತ್ತುವರಿ ತೆರವುಗೊಳಿಸಿ

ರಾಜ್ಯದಲ್ಲಿ 10,931 ಕೆರೆಗಳು ಒತ್ತುವರಿಯಾಗಿವೆ. ಇದುವರೆಗೆ 6,065 ಕೆರೆಗಳ ಒತ್ತುವರಿ ತೆರವು ಮಾಡಲಾಗಿದೆ. ಎಲ್ಲ ಕೆರೆಗಳ ಸಮೀಕ್ಷೆ ನಡೆಸಿ ಒತ್ತುವರಿ ತೆರವುಗೊಳಿಸಲು ಕಳೆದ ಸಭೆಯಲ್ಲಿ ತಿಳಿಸಿದ್ದರೂ ನಿರೀಕ್ಷಿತ ಪ್ರಗತಿಯಾಗಿಲ್ಲ. ಕೂಡಲೇ ಎಲ್ಲ ಕೆರೆಗಳ ಸಮೀಕ್ಷೆ ನಡೆಸಿ, ಒತ್ತುವರಿ ತೆರವುಗೊಳಿಸಿ ಎಂದು ಸಿಎಂ ಹೇಳಿದರು.

ಕಾವ್ಯ ತಪಸ್ವಿ ಎಚ್ಚೆಸ್ವಿ ಅಸ್ತಂಗತ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ತಮ್ಮ ಹೃದಯಗೀತೆಗಳ ಮೂಲಕ ಕನ್ನಡಿಗರ ಮನೆಮಾತಾದ, 85ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಹಿರಿಯ ಸಾಹಿತಿ ಡಾ.ಎಚ್.ಎಸ್.ವೆಂಕಟೇಶ್ ಮೂರ್ತಿ (81) ಅವರು ಶುಕ್ರವಾರ ಕೊನೆಯುಸಿರೆಳೆದಿದ್ದಾರೆ. ಮೃತರಿಗೆ ನಾಲ್ವರು ಪುತ್ರರಿದ್ದಾರೆ. ವಯೋಸಹಜ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಕೆಂಗೇರಿಯ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ಬೆಳಗ್ಗೆ ಆಸ್ಪತ್ರೆಯಲ್ಲಿಯೇ ನಿಧನರಾದರು. ಸುಗಮ ಸಂಗೀತ ಕ್ಷೇತ್ರದಲ್ಲಿ 'ಎಚ್ಚೆಸ್ವಿ' ಎನ್ನುವ ಮೂಲಕವೇ ಹೆಸರಾಗಿದ್ದ ವೆಂಕಟೇಶ್ ಮೂರ್ತಿ ಅವರ ಅಗಲಿಕೆಗೆ ಆಪ್ತ ಬಳಗ, ಗಣ್ಯರು, ಸಾಹಿತ್ಯಾಸಕ್ತರು ಕಂಬನಿ ಮಿಡಿದಿದ್ದಾರೆ. ಎಚ್ಚೆಸ್ವಿ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಹೊದಿಗೆರೆ ಗ್ರಾಮದ ಮಧ್ಯಮ ಕುಟುಂಬದಲ್ಲಿ ಜೂನ್ 23, 1944ರಲ್ಲಿ ಜನಿಸಿದರು. 30 ವರ್ಷಗಳ ಕಾಲ ಗ್ರಾಮ್ಯಜೀವನ ನಡೆಸಿ ನಂತರ 1973ರಲ್ಲಿ ಬೆಂಗಳೂರಿನ ಸೇಂಟ್ ಜೋಸೆಫ್ ವಾಣಿಜ್ಯ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ನೇಮಕಗೊಂಡರು. 2000ರಲ್ಲಿ ನಿವೃತ್ತರಾದ ನಂತರ ಅವರು ಬೆಂಗಳೂರಿನಲ್ಲಿ ನೆಲೆಸಿದ್ದರು. → 4



1944-2025



ಉಳ್ಳಾಲ ತಾಲೂಕಿನ ಮಂಜನಾಡಿ ಗ್ರಾಮದ ಮೊಂಟೆಪದವು ಪಂಬದಹಿತ್ತಿಲುಕೋಡಿಕೊಪ್ಪಲು ಎಂಬಲ್ಲಿ ರಕ್ಷಣಾ ಕಾರ್ಯದಲ್ಲಿ ನಿರತರಾಗಿರುವ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಸಿಬ್ಬಂದಿ.

ಮಳೆ ಅವಾಂತರಕ್ಕೆ 8 ಬಲಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಗುರುವಾರ ರಾತ್ರಿ ಮತ್ತು ಶುಕ್ರವಾರ ಸುರಿದ ಮಳೆ ಅವಘಡಗಳಿಗೆ ಒಟ್ಟು ಎಂಟು ಮಂದಿ ಬಲಿಯಾಗಿದ್ದಾರೆ. ಉಳ್ಳಾಲ ತಾಲೂಕಿನ ಮಂಜನಾಡಿ ಗ್ರಾಮದ ಮೊಂಟೆಪದವು ಪಂಬದಹಿತ್ತಿಲುಕೋಡಿಕೊಪ್ಪಲು ಎಂಬಲ್ಲಿ ಮನೆ ಮೇಲೆ ಗುಡ್ಡ ಕುಸಿದಿದ್ದು, ಒಂದೇ ಕುಟುಂಬ ಮೂವರು ಮೃತಪಟ್ಟಿದ್ದಾರೆ. ಮೃತರನ್ನು ಪ್ರೇಮಾ ಪೂಜಾರಿ (54) ಮತ್ತು ಅವರ ಮೊಮ್ಮಕ್ಕಳಾದ ಆರ್ಯನ್ (3) ಮತ್ತು ಆರುಷ್ (2) ಎಂದು ಗುರುತಿಸಲಾಗಿದೆ. ದೇರಳಕಟ್ಟೆ ಕಾನಕೆರೆ ಬಳಿ ನೌಶದ್ ಎಂಬುವವರ ಮನೆಗೆ ಹೊಂದಿಕೊಂಡಿದ್ದ ತಡೆಗೋಡೆ ಕುಸಿದು ಫಾತಿಮಾ ನಯೀಮಾ (12) ಎಂಬ ಬಾಲಕಿ ಮೃತಪಟ್ಟಿದ್ದಾಳೆ. ಮಂಗಳೂರು ಕಡಲತೀರದ ತೋಟ ಬೆಂಗ್ರೆ ಅಳಿವೆ ಬಾಗಿಲು ಎಂಬಲ್ಲಿ ನಾಡದೋಣಿ ಮಗುಚಿ ಮೀನುಗಾರರಾದ ಯಶವಂತ, ಕಮಲಾಕ್ಷ ಎಂಬುವವರು ನೀರು ಪಾಲಾಗಿದ್ದಾರೆ. ಅಲ್ಲದೆ, ಕುವೆಟ್ಟು ಗ್ರಾಮದ ಅಮರ್ ಜಾಲು ಎಂಬಲ್ಲಿ ವಿದ್ಯುತ್ ಶಾಕ್ ಹೊಡೆದು ಪವರ್ ಮ್ಯಾನ್ ವಿಜೇಶ್ ಜೈನ್ (27) ಎಂಬುವವರು ಮೃತಪಟ್ಟಿದ್ದಾರೆ. ಬಂಟ್ವಾಳ ಎಸ್‌ವಿಎಸ್ ಕಾಲೇಜು ಸಮೀಪ ಲಾರಿ ಕಂದಕಕ್ಕೆ ಉರುಳಿ ಜಾರ್ಖಂಡ್‌ನ ಕಾರ್ಮಿಕ ನಿರ್ಮಲಾ ಅನ್ನ (32) ಎಂಬುವವರು ಮೃತಪಟ್ಟಿದ್ದಾರೆ.

indegene®

ಇಂಡಿಜೀನ್ ಲಿಮಿಟೆಡ್

ನೋಂದಾಯಿತ ಕಚೇರಿ: ಆಸ್ಪೆನ್ ಜಿ4, 3ನೇ ಮಹಡಿ, ಮಾನ್ಯತಾ ಎಂಬಸಿ ಬ್ಯುಸಿನೆಸ್ ಪಾರ್ಕ್, ಔಟರ್ ರಿಂಗ್ ರೋಡ್, ನಾಗವಾರ, ಬೆಂಗಳೂರು – 560045.
ಕಾರ್ಪೊರೇಟ್ ಐಡೆಂಟಿಟಿ ಸಂಖ್ಯೆ (CIN): L73100KA1998PLC102040
ಫೋನ್: +91 80 4674 4567 / +91 80 4644 7777;
ಇಮೇಲ್: compliance.officer@indegene.com, **ವೆಬ್‌ಸೈಟ್:** www.indegene.com

ಸೂಚನೆ

ಈ ಮೂಲಕ ತಿಳಿಸುವುದೇನೆಂದರೆ, ಕಂಪನಿಯ ಸದಸ್ಯರ 27ನೇ ವಾರ್ಷಿಕ ಮಹಾಸಭೆ (ಎಜಿಎಂ) 2025ರ ಜೂನ್ 26, ಗುರುವಾರ, ಸಂಜೆ 16:30 ಗಂಟೆಗೆ (ಭಾರತೀಯ ಕಾಲಮಾನ), ವಿಡಿಯೋ ಕಾನ್ಫರೆನ್ಸಿಂಗ್ ("ವಿಸಿ") ಮತ್ತು ಇತರ ಆಡಿಯೋ–ವಿಷುವಲ್ ವಿಧಾನಗಳ ("ಒಎವಿಎಂ") ಮೂಲಕ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂಖ್ಯೆ 09/2024 ದಿನಾಂಕ ಸೆಪ್ಟೆಂಬರ್ 19, 2024, ಮತ್ತು ಭಾರತೀಯ ಷೇರು ವಿನಿಮಯ ಮಂಡಳಿ (ಸೆಬಿ) ಹೊರಡಿಸಿದ ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2024/133 ದಿನಾಂಕ ಅಕ್ಟೋಬರ್ 3, 2024, ಮತ್ತು ಕಂಪನಿಗಳ ಕಾಯಿದೆ, 2013 ("ಕಾಯಿದೆ") ಮತ್ತು ಭಾರತೀಯ ಷೇರು ವಿನಿಮಯ ಮಂಡಳಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಗಳು, 2015 ರ ನಿಬಂಧನೆಗಳ ಅನುಸಾರವಾಗಿ ನಡೆಯಲಿದೆ.

ಮೇಲಿನ ಸುತ್ತೋಲೆಗಳ ದೃಷ್ಟಿಯಿಂದ, 27ನೇ ಎಜಿಎಂ ಸೂಚನೆ, ಹಣಕಾಸು ಹೇಳಿಕೆಗಳನ್ನು (ಮಂಡಳಿಯ ವರದಿ ಮತ್ತು ಅದರ ಅನುಬಂಧಗಳು, ಆಡಿಟರ್‌ಗಳ ವರದಿಗಳು ಅಥವಾ ಇದರೊಂದಿಗೆ ಲಗತ್ತಿಸಬೇಕಾದ ಇತರ ದಾಖಲೆಗಳು ಸೇರಿದಂತೆ) ಒಳಗೊಂಡ ವಾರ್ಷಿಕ ವರದಿ 2024–25ರ ಪ್ರತಿಗಳನ್ನು 2025ರ ಮೇ 30 ರಂದು ಎಂಯುಎಫ್‌ಜಿ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಅಂದರೆ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ ("RTA") ಅಥವಾ ಸಂಬಂಧಿತ ಡೆಪಾಸಿಟರಿ ಪಾರ್ಟಿಸಿಪಂಟ್‌ಗಳ ("ಡಿಪಿಗಳ") ಬಳಿ ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಮಾತ್ರ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಕಳುಹಿಸಲಾಗಿದೆ. ಕಂಪನಿಯ ವೆಬ್‌ಸೈಟ್ https://www.indegene.com/ ನಲ್ಲಿ, ಸ್ಟಾಕ್ ಎಕ್ಸ್‌ಚೇಂಜ್‌ಗಳಾದ BSE ಮತ್ತು NSE ಯ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ನಲ್ಲಿ, ಮತ್ತು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ನ ವೆಬ್‌ಸೈಟ್ https://www.evoting.nsdl.com ನಲ್ಲಿಯೂ 27ನೇ ಎಜಿಎಂ ಸೂಚನೆ ಮತ್ತು ವಾರ್ಷಿಕ ವರದಿ 2024–25 ಲಭ್ಯವಿರುತ್ತದೆ ಎಂದು ಸದಸ್ಯರು ಗಮನಿಸಬಹುದು.

ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 108 ರ ಜೊತೆಗೆ, ಕಂಪನಿಗಳ (ನಿರ್ವಹಣೆ ಮತು ಆಡಳಿತ) ನಿಯಮಗಳು, 2014 ರ ನಿಯಮ 20 ಮತ್ತು ಲಿಸ್ಟಿಂಗ್ ನಿಯಮಗಳು, ನಿಯಂತ್ರಣ 44 ರ ಅಡಿಯಲ್ಲಿ, ಕಂಪನಿಯು ತನ್ನ ಸದಸ್ಯರಿಗೆ ಎಜಿಎಂ ಸೂಚನೆಯಲ್ಲಿ ನಿಗದಿಪಡಿಸಲಾದ ನಿರ್ಣಯಗಳ ಮೇಲೆ ವಿದ್ಯುನ್ಮಾನವಾಗಿ ಮತ ಚಲಾಯಿಸಲು ಸೌಲಭ್ಯವನ್ನು ಒದಗಿಸಲು ಸಂತೋಷಪಡುತ್ತದೆ. ಇದು ಎನ್‌ಎಸ್‌ಡಿಎಲ್‌ನಿಂದ ಸುಗಮಗೊಳಿಸಲ್ಪಟ್ಟ ರಿಮೋಟ್ ಇ–ವೋಟಿಂಗ್ ಮತ್ತು ಎಜಿಎಂ ಸಮಯದಲ್ಲಿ ಇ–ವೋಟಿಂಗ್ ಎರಡನ್ನೂ ಒಳಗೊಂಡಿದೆ.

ಕಂಪನಿಯ ನಿರ್ದೇಶಕರ ಮಂಡಳಿಯು, ವಿದ್ಯುನ್ಮಾನ ವಿಧಾನಗಳ ಮೂಲಕ ಮತ ಚಲಾಯಿಸಲು ಸದಸ್ಯರ ಅರ್ಹತೆಯನ್ನು ನಿರ್ಧರಿಸಲು 2025 ರ ಜೂನ್ 19, ಗುರುವಾರವನ್ನು ಕಟ್–ಆಫ್ ದಿನಾಂಕವಾಗಿ ನಿಗದಿಪಡಿಸಿದೆ. ಕಟ್–ಆಫ್ ದಿನಾಂಕದಂದು ಸದಸ್ಯರ ರಿಜಿಸ್ಟರ್‌ನಲ್ಲಿ ಅಥವಾ ಠೇವಣಿದಾರರು ನಿರ್ವಹಿಸುವ ಫಲಾನುಭವಿ ಮಾಲೀಕರ ರಿಜಿಸ್ಟರ್‌ನಲ್ಲಿ ಹೆಸರುಗಳು ಕಾಣಿಸಿಕೊಳ್ಳುವ ಸದಸ್ಯರು ಎಜಿಎಂ ಸೂಚನೆಯಲ್ಲಿ ನಿಗದಿಪಡಿಸಲಾದ ನಿರ್ಣಯಗಳ ಮೇಲೆ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.

ಕಂಪನಿಗಳ ಕಾಯಿದೆ, 2013 ರ ನಿಬಂಧನೆಗಳು ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳ ಪ್ರಕಾರ ನಿಗದಿಪಡಿಸಲಾದ ವಿವರಗಳು ಹೀಗಿವೆ:

a) ಸೂಚನೆಯನ್ನು ಕಳುಹಿಸಲು ಪ್ರಾರಂಭಿಸುವ ದಿನಾಂಕ: ಶುಕ್ರವಾರ, ಮೇ 30, 2025
b) ರಿಮೋಟ್ ಇ–ವೋಟಿಂಗ್ ಪ್ರಾರಂಭವಾಗುವ ದಿನಾಂಕ ಮತ್ತು ಸಮಯ: ಸೋಮವಾರ, ಜೂನ್ 23, 2025 ರಂದು ಬೆಳಿಗ್ಗೆ 9:00 (ಭಾರತೀಯ ಕಾಲಮಾನ)
c) ರಿಮೋಟ್ ಇ–ವೋಟಿಂಗ್ ಕೊನೆಗೊಳ್ಳುವ ದಿನಾಂಕ ಮತ್ತು ಸಮಯ: ಬುಧವಾರ, ಜೂನ್ 25, 2025 ರಂದು ಸಂಜೆ 5:00 (ಭಾರತೀಯ ಕಾಲಮಾನ) (ರಿಮೋಟ್ ಇ–ವೋಟಿಂಗ್‌ನ ಕೊನೆಯ ದಿನಾಂಕದಂದು ಸಂಜೆ 5:00 ನಂತರ ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಮತದಾನಕ್ಕೆ ಅವಕಾಶವಿರುವುದಿಲ್ಲ.)
d) ಎಜಿಎಂ ಸಮಯದಲ್ಲಿ ಮತದಾನದ ಸೌಲಭ್ಯವನ್ನು ಸಹ ಕಂಪನಿಯು ಒದಗಿಸುತ್ತದೆ. ವಿಸಿ/ಒಎವಿಎಂ ಮೂಲಕ ಎಜಿಎಂನಲ್ಲಿ ಹಾಜರಿರುವ ಸದಸ್ಯರು ಮತ್ತು ನಿರ್ಣಯಗಳ ಮೇಲೆ ರಿಮೋಟ್ ಇ–ವೋಟಿಂಗ್ ಮೂಲಕ ತಮ್ಮ ಮತಗಳನ್ನು ಚಲಾಯಿಸದವರು, ಮತ್ತು ಹಾಗೆ ಮಾಡಲು ಬೇರೆ ಯಾವುದೇ ತಡೆಯಿಲ್ಲದವರು, ಎಜಿಎಂ ಸಮಯದಲ್ಲಿ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.
e) ರಿಮೋಟ್ ಇ–ವೋಟಿಂಗ್ ಮೂಲಕ ಈಗಾಗಲೇ ತಮ್ಮ ಮತಗಳನ್ನು ಚಲಾಯಿಸಿರುವ ಸದಸ್ಯರು ಸಹ ವಿಸಿ/ಒಎವಿಎಂ ಮೂಲಕ ಎಜಿಎಂಗೆ ಹಾಜರಾಗಬಹುದು, ಆದರೆ ಅವರು ಮತ್ತೊಮ್ಮೆ ತಮ್ಮ ಮತಗಳನ್ನು ಚಲಾಯಿಸಲು ಅರ್ಹರಾಗಿರುವುದಿಲ್ಲ.
f) ಎಲೆಕ್ಟ್ರಾನಿಕ್ ವೋಟಿಂಗ್ ಇವೆಂಟ್ ನಂಬರ್ (EVEN): 133794
g) ಸೂಚನೆ ಕಳುಹಿಸಿದ ನಂತರ ಕಂಪನಿಯ ಷೇರುಗಳನ್ನು ಪಡೆದುಕೊಳ್ಳುವ ಮತ್ತು ಸದಸ್ಯರಾಗುವ ಯಾವುದೇ ವ್ಯಕ್ತಿ ಹಾಗೂ ಕಟ್–ಆಫ್ ದಿನಾಂಕವಾದ ಗುರುವಾರ, ಜೂನ್ 19, 2025 ರಂದು ಷೇರುಗಳನ್ನು ಹೊಂದಿರುವವರು, evoting@nsdl.co.in ಗೆ ವಿನಂತಿಯನ್ನು ಕಳುಹಿಸುವ ಮೂಲಕ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಪಡೆಯಬಹುದು. ಆದಾಗ್ಯೂ, ಅಂತಹ ವ್ಯಕ್ತಿಯು ರಿಮೋಟ್ ಇ–ವೋಟಿಂಗ್‌ಗಾಗಿ ಈಗಾಗಲೇ ಎನ್‌ಎಸ್‌ಡಿಎಲ್‌ನಲ್ಲಿ ನೋಂದಾಯಿಸಿದ್ದರೆ, ಅವರು ತಮ್ಮ ಅಸ್ತಿತ್ವದಲ್ಲಿರುವ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಅನ್ನು ತಮ್ಮ ಮತ ಚಲಾಯಿಸಲು ಬಳಸಬಹುದು.
h) ಎಜಿಎಂ ಸೂಚನೆಯಲ್ಲಿ ನಮೂದಿಸಲಾದ ಇ–ವೋಟಿಂಗ್ ಸೂಚನೆಗಳನ್ನು ಎಚ್ಚರಿಕೆಯಿಂದ ಓದಲು ಸದಸ್ಯರಿಗೆ ಸೂಚಿಸಲಾಗಿದೆ. ಇ–ವೋಟಿಂಗ್‌ಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು ಅಥವಾ ಕುಂದುಕೊರತೆಗಳಿದ್ದಲ್ಲಿ, ಸದಸ್ಯರು https://www.evoting.nsdl.com ನಲ್ಲಿ ಲಭ್ಯವಿರುವ ಆಗಾಗ್ಗೆ ಕೇಳಲಾಗುವ ಪ್ರಶ್ನೆಗಳನ್ನು (FAQs) ನೋಡಬಹುದು. ಇ–ವೋಟಿಂಗ್ ಕುರಿತು ಯಾವುದೇ ಪ್ರಶ್ನೆಗಳು ಅಥವಾ ಸಹಾಯಕ್ಕಾಗಿ, ಸದಸ್ಯರು ಎನ್‌ಎಸ್‌ಡಿಎಲ್‌ನ ಶ್ರೀ ಫಾಲ್ಗುಣಿ ಚಕ್ರವರ್ತಿಯನ್ನು NSDL ನ evoting@nsdl.com ಲ್ಲಿ ಸಂಪರ್ಕಿಸಬಹುದು ಅಥವಾ 022–4886 7000 ಗೆ ಕರೆ ಮಾಡಬಹುದು.

ಇಂಡಿಜೀನ್ ಲಿಮಿಟೆಡ್ ಪರವಾಗಿ
ಸಹಿ/–
ಸೃಷ್ಟಿ ರಮೇಶ್ ಕೌಶಿಕ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣೆ ಅಧಿಕಾರಿ

ದಿನಾಂಕ: 30 ಮೇ, 2025
ಸ್ಥಳ: ಬೆಂಗಳೂರು

ಕಮಲ್ ಹಾಸನ್ ಭಾವಚಿತ್ರಕ್ಕೆ ಬೆಂಕಿ: ಎಫ್ಐಆರ್

ಬೆಂಗಳೂರು: ನಟ ಕಮಲ್ ಹಾಸನ್ ಅವರ ಭಾವಚಿತ್ರಕ್ಕೆ ಬೆಂಕಿಹಾಕಿ ಸುಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ, ನಮ್ಮ ಕರುನಾಡ ಯುವಸೇನೆ' ಕಾರ್ಯಕರ್ತ ವಿ.ರವಿಕುಮಾರ್ ವಿರುದ್ಧ ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ. ಪೊಲೀಸ್ ಸಿಬ್ಬಂದಿಯೊಬ್ಬರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HLLASKN00532545 1. ಉಜ್ರಾ ಜಬೀನ್, ಮಾಲೀಕ ಸ್ಟಾರ್ ಮೆಡಿಕಲ್ಸ್ ಅಂಡ್ ಜನರಲ್ ಏಜೆನ್ಸೀಸ್ 2. ಸೈಯದ್ ಫಜ್ಲುಲ್ಲಾ	ಆಸ್ತಿಯ ಪಶ್ಚಿಮ ಭಾಗ ಹಳೆಯ ಸಿಎಂಸಿ ನಂ. 215/228, ಮತ್ತು ಹೊಸ ಬಿಬಿಎಂಪಿ ನಂ. 214/1/228/1, ಸರ್ವೆ ನಂ. 230, 80 ಫೀಟ್ ರೋಡ್ ಕ್ರಾಸ್, ದೊಡ್ಡಮುನಿಯಮ್ಮ ಕಾಂಪೌಂಡ್, ಎಚ್‌ಬಿಆರ್ ಲೇಔಟ್, ಕಚರಕನಹಳ್ಳಿ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು ತಾಲ್ಲೂಕು, ಬೆಂಗಳೂರು–560043, ಕರ್ನಾಟಕದ.	05.04.2025	ದಿನಾಂಕ 30.04.2025 ರಂತೆ ರೂ. 1,76,36,734.65/- (ರೂಪಾಯಿ ಒಂದು ಕೋಟಿ ಎಪ್ಪತ್ತ ಆರು ಲಕ್ಷ ಮೂವತ್ತ ಆರು ಸಾವಿರದ ಏಳು ನೂರ ಮೂವತ್ತ ನಾಲ್ಕು ಮತ್ತು ಪೈಸೆ ಅರವತ್ತ ಐದು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ–ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಸಮ್ಮಾನ್ ಫಿನ್‌ಸರ್ವ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ಬೆಂಗಳೂರು
ಅಧಿಕೃತ ಅಧಿಕಾರಿ

KMF Builders & Developers Ltd.

Regd. Office: - Flat No. 508, Golf Manor, NAL Wind Tunnel Road, Murgeshpalya, Bangalore-560017, Ph:-25238007, 41486142-43
CIN: L45203KA1995PLC017422 www.kmfbuilders.com kmfbuilders95@gmail.com

Extract of Statement of Standalone audited financial Results for the Quarter and year ended 31.03.2025 (Fig in Lakhs)

Sl No	Particulars	QTRLY: Quarter Ended (31/03/2025) audited	QTRLY: Quarter Ended (31/12/2024) Unaudited	QTRLY: Quarter Ended (31/03/2024) audited	YEARLY: Year Ended (31/03/2025) audited	YEARLY: Year Ended (31/03/2024) audited
1	Total Income from operations	311.81	17.09	43.51	345.39	2055.47
2	Net Profit/ (Loss) for the period (before Tax, Exceptional and/or Extraordinary items	28.59	-132.86	18.97	-51.52	65.38
3	Net Profit/ (Loss) for the period (before Tax, after Exceptional and /or Extraordinary items	28.59	-132.86	18.97	-51.52	65.38
4	Net Profit/ (Loss) for the period (after Tax, after Exceptional and /or Extraordinary items	29.01	-132.86	12.09	-51.10	47.91
5	Total Comprehensive income for the period (after tax) (attributable to owners of the company)	29.01	-132.86	12.09	-51.10	47.91
6	Paid up Equity Share Capital (Face Value of Rs. 5/- each)	609.10	609.10	609.10	609.10	609.10
7	Reserves (excl. Revaluation Reserve) as per audited balance sheet of previous year	0.00	0.00	0.00	0.00	0.00
8	Earnings Per Share (of Rs.5 each) (for continuing and operations)	0.24	-1.09	0.10	-0.42	0.39
	Basic & Diluted					

Note: -The above is an extract of the detailed format of unaudited financial results filed with the stock exchanges under regulation 33 of the SEBI (listing Obligations and Disclosure Requirements) Regulations, 2015.
The above unaudited financial results for the qtr and year ended 31.03.2025 were reviewed by the audit committee at the meeting held on 30.05.2025 and approved by the Board of Directors and taken on record at the meeting held on 30.05.2025
The full format of the unaudited financial results is available on the stock exchanges website **www.bseindia.com** & on the company website **www.kmfbuilders.com**

Place: Bangalore
Date: 30.05.2025

By order of the Board
KMF Builders & Developers ltd
sd/-
Gorve Chadha
Managing Director

ಮಾರಾಟಕ್ಕೆ ನೆರವು ನೀಡಿದ್ದ ಇಬ್ಬರು ಪೊಲೀಸರ ಅಮಾನತು

ಐಪಿಎಲ್ ಟಿಕೆಟ್ ಅಕ್ರಮ ಮಾರಾಟ



ಬೆಂಗಳೂರು: ಆರ್‌ಸಿಬಿ ಹಾಗೂ ಕೋಲ್ಕತ್ತಾ ನಡುವಿನ ಐಪಿಎಲ್ ಪಂದ್ಯಕ್ಕೆ ಅಕ್ರಮವಾಗಿ ಟಿಕೆಟ್ ಮಾರಾಟ ಮಾಡಲು ನೆರವು ನೀಡಿದ್ದ ಇಬ್ಬರು ಟ್ರಾಫಿಕ್ ಕಾನ್‌ಸ್ಟೇಬಲ್‌ಗಳನ್ನು ಅಮಾನತು ಮಾಡಿ ಇಲಾಖಾ ತನಿಖೆಗೆ ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಎಂ.ಎನ್. ಅನುಚೇತ್ ಆದೇಶಿಸಿದ್ದಾರೆ.

ಹಲಸೂರು ಸಂಚಾರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ರವಿಚಂದ್ರ ಹಾಗೂ ಸಂಚಾರ ನಿರ್ವಹಣಾ ಕೇಂದ್ರದಲ್ಲಿ(ಟಿಎಂಸಿ) ಕೆಲಸ ಮಾಡುತ್ತಿರುವ ವೆಂಕಟಗಿರಿ ಗೌಡ ಎಂಬವರನ್ನು ಅಮಾನತು ಮಾಡಲಾಗಿದೆ. ಅಲ್ಲದೆ, ಇಲಾಖಾ ತನಿಖೆಗೆ ಆದೇಶಿಸಲಾಗಿದೆ. ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೇ 17ರಂದು ಆರ್‌ಸಿಬಿ ಹಾಗೂ ಕೊಲ್ಕತ್ತಾ ನಡುವೆ ಪಂದ್ಯವಿತ್ತು.

ವಿಜಯನಗರ ಪಾರ್ಕ್‌ವೊಂದರಲ್ಲಿ ಕಾಳಸಂತೆಯಲ್ಲಿ ಐಪಿಎಲ್ ಟಿಕೆಟ್ ಮಾರಾಟ ಮಾಡುತ್ತಿದ್ದ ಶಂಕರ್ ಹಾಗೂ ಸುರೇಶ್ ಗೋವಿಂದರಾಜನಗರ ಪೊಲೀಸರಿಗೆ ಸಿಕ್ಕಿಬಿದ್ದಿದ್ದರು. ಆರೋಪಿಗಳಿಂದ 52 ಟಿಕೆಟ್‌ಗಳನ್ನು ವಶಕ್ಕೆ ಪಡೆದುಕೊಂಡಿದ್ದರು. ಬಂಧಿಸಿ ಹೆಚ್ಚಿನ ವಿಚಾರಣೆಗೊಳಪಡಿಸಿದಾಗ ಇಬ್ಬರು ಕಾನ್‌ಸ್ಟೇಬಲ್‌ಗಳು ಮಾರಾಟ ಮಾಡಲು ಟಿಕೆಟ್ ನೀಡುತ್ತಿದ್ದರು ಎಂಬುದನ್ನು ಬಾಯಿಬಿಟ್ಟಿದ್ದರು.

ಕಾಳಸಂತೆಯಲ್ಲಿ ಟಿಕೆಟ್ ಮಾರಾಟ ಹಿಂದೆ ಕಾನ್‌ಸ್ಟೇಬಲ್‌ಗಳ ಹೆಸರು ಕೇಳಿಬಂದಿದ್ದರಿಂದ ಅವರಿಗೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ. ಇದರ ಬೆನ್ನಲ್ಲೇ ಬಂಧನಭೀತಿಯಿಂದ ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯಕ್ಕೆ ಇಬ್ಬರು ಅರ್ಜಿ ಸಲ್ಲಿಸಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಸಂಚಾರ ಪೊಲೀಸರ ವಿರುದ್ಧ ಆರೋಪ ಕೇಳಿಬಂದಿದ್ದರಿಂದ ಇಬ್ಬರನ್ನು ಅಮಾನತು ಗೊಳಿಸಿ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.

ಗ್ರೂಪ್ ಸಿ ವೃಂದದ ನೌಕರರಿಗೆ ಡಿಜಿಟಲ್ ಕೌನ್ಸೆಲಿಂಗ್‌ಗೆ ಸಿದ್ಧತೆ

ಅಬಕಾರಿ ನೌಕರರ ವರ್ಗಾವಣೆ ಶೀಘ್ರ

ಬೆಂಗಳೂರು: ರಾಜ್ಯದಲ್ಲಿ ಮೇ 15ರಿಂದ ಸರಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆ ಪ್ರಕ್ರಿಯೆ ಆರಂಭವಾಗಿರುವ ಬೆನ್ನಲ್ಲೇ ಅಬಕಾರಿ ಇಲಾಖೆಯಲ್ಲಿ ಗ್ರೂಪ್ ಸಿ ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಕೌನ್ಸೆಲಿಂಗ್ ಮೂಲಕ ವರ್ಗಾವಣೆಗೆ ಸಿದ್ಧತೆ ನಡೆಯುತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ ಪ್ರಕ್ರಿಯೆ ಈಗಾಗಲೇ ಶುರುವಾಗಿದೆ. ಅಬಕಾರಿ ನಿರೀಕ್ಷಕರು, ಉಪ ನಿರೀಕ್ಷಕರು, ಮುಖ್ಯ ಪೇದೆ ಮತ್ತು ಅಬಕಾರಿ ಪೇದೆಯನ್ನು ಸೇವಾವಧಿ ಹಿರಿತನ ಆಧಾರ ಮೇರೆಗೆ ಡಿಜಿಟಲ್ ವಿಧಾನದಲ್ಲಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆಗೆ ಮಾಡಲಾಗುತ್ತದೆ.

ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಕೌನ್ಸೆಲಿ ಂಗ್ ಮೂಲಕ ವರ್ಗಾವಣೆಗೆ ಸರಕಾರ, ಜನವರಿಯಲ್ಲಿ ಕರಡು ಅಧಿಸೂಚನೆ ಹೊರಡಿಸಿ ಆಕ್ಷೇಪಣೆ ಮತ್ತು ಸಲಹೆಗೆ ಅವಕಾಶ ಕಲ್ಪಿಸಿತ್ತು. ಕರಡು ನಿಯಮದ ಅಧಿಸೂಚನೆ ಪ್ರತಿಯನ್ನು ಅಧಿಕಾರಿ, ಸಿಬ್ಬಂದಿ ಗಮನಕ್ಕೆ ತರಲು ಮತ್ತು ನಾಮಫಲಕದಲ್ಲಿ ಪ್ರಕಟಿಸುವಂತೆ ಇಲಾಖೆ ಆಯುಕ್ತರು ಅಪರ ಆಯುಕ್ತರು(ಜಾರಿ ಮತ್ತು ಅಪರಾಧ), ಅಬಕಾರಿ ಜಂಟಿ ಆಯುಕ್ತರಿಗೆ ಮತ್ತು ಅಬಕಾರಿ ಉಪ ಆಯುಕ್ತರಿಗೆ ಸೂಚಿಸಲಾಗಿತ್ತು. ವರ್ಗಾವಣೆಯಲ್ಲಿ ಸುಧಾರಣೆ, ನಿಯ ಮಾಧಾರಿತ ವರ್ಗಾವಣೆ ಮೂಲಕ ಪಾರದರ್ಶಕತೆ ತರಲು ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆ ಕರ್ನಾಟಕ ನಾಗರಿಕ ಸೇವೆಗಳು (ಅಬಕಾರಿ ಇಲಾಖೆಯ ವರ್ಗಾವಣೆ) ನಿಯಮಗಳು, 2025ಕ್ಕೆ ಒಪ್ಪಿಗೆ ನೀಡಿತ್ತು. ಇದೀಗ ಕರಡು ಸಂಬಂಧ ಪಟ್ಟಂತೆ ಆಕ್ಷೇಪಣೆ, ಸಲಹೆ ಸ್ವೀಕರಿಸಿ ಮೇ 14ರಂದು ಸರಕಾರ ಅಂತಿಮ ಅಧಿಸೂಚನೆ ಹೊರಡಿಸಿದೆ. ಇಲಾಖೆ ಹುದ್ದೆಗಳನ್ನು ಕಾರ್ಯನಿರ್ವಾಹಕ, ಕಾರ್ಯನಿರ್ವಾಹಕೇತರ ಎಂದು ವಿಂಗಡಿಸಲಾಗಿದೆ. 5 ವರ್ಷಗಳಲ್ಲಿ ಬೆಂಗಳೂರು ನಗರ,ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸಿದ ಅಬಕಾರಿ ಜಂಟಿ ಆಯುಕ್ತರು, ಉಪ ಆಯುಕ್ತರು, ಅಧೀಕ್ಷಕರು, ನಿರೀಕ್ಷಕರು ಮತ್ತು ಉಪ ನಿರೀಕ್ಷಕರನ್ನು ಸದರಿ ಜಿಲ್ಲೆ ಹೊರತುಪಡಿಸಿ ಬೇರೆ ಜಿಲ್ಲೆಗಳಿಗೆ ವರ್ಗಾಯಿಸುವುದೂ ಸೇರಿ ಇತರೆ ನಿಯಮ ಜಾರಿಗೆ ತರಲಾಗಿದೆ. ಇಲಾಖೆಯ ವಿವಿಧ ವೃಂದದ ಅಧಿಕಾರಿಗಳು, ನೌಕರರು ನಿಯೋಜಿ ಸಿರುವ ಹುದ್ದೆಯಲ್ಲಿ ಕನಿಷ್ಠ ಸೇವಾ ಅವಧಿ ನಿಗದಿ ಪಡಿಸಲಾಗಿದೆ.

ಹುದ್ದೆಗಳ ವಿಗಂಡನೆ

- ಅಬಕಾರಿ ಉಪ ಆಯುಕ್ತರು ಕಚೇರಿ ಕೇಂದ್ರಸ್ಥಾನ ಬೆಳಗಾವಿ
- ಅಬಕಾರಿ ವಿಭಾಗ ಕಚೇರಿ, ಜಂಟಿ ಆಯುಕ್ತರು
- ಅಬಕಾರಿ ಜಿಲ್ಲಾ ಉಪ ಕಚೇರಿ ಉಪ ಆಯುಕ್ತರು
- ಉಪ ವಿಭಾಗ ಕಚೇರಿ ಉಪ ಅಧೀಕ್ಷಕರು
- ನಿರೀಕ್ಷಕರು, ಉಪ ನಿರೀಕ್ಷಕರು, ಮುಖ್ಯ ಪೇದೆ, ಪೇದೆ
- ಕಾರ್ಯನಿರ್ವಾಹಕ ಹುದ್ದೆಗಳನ್ನು ಹೊರತು ಪಡಿಸಿ ಉಳಿದ ಎಲ್ಲವೂ ಕಾರ್ಯನಿರ್ವಾಹಕೇತರ ಹುದ್ದೆಗಳು

ವರ್ಗಾವಣೆ ದಂಧೆಗೆ ಬ್ರೇಕ್

ಇಲಾಖೆಯಲ್ಲಿ ಅಬಕಾರಿ ಹೆಚ್ಚುವರಿ ಆಯುಕ್ತ, ಜಂಟಿ ಆಯುಕ್ತ, ಉಪ ಆಯುಕ್ತ, ಅಧೀಕ್ಷಕ, ಉಪ ಆಧೀಕ್ಷಕ, ಅಬಕಾರಿ ನಿರೀಕ್ಷಕ, ಉಪ ನಿರೀಕ್ಷಕ, ಮುಖ್ಯ ಪೇದೆ ಸೇರಿ ಒಟ್ಟು 5,825 ಹುದ್ದೆಗಳ ಪೈಕಿ 3,456 ಹುದ್ದೆಗಳು ಭರ್ತಿಯಾದರೆ, ಉಳಿದ ಹುದ್ದೆಗಳು ಖಾಲಿ ಇವೆ. ಗ್ರೂಪ್ 'ಎ' ಹುದ್ದೆಗಳು 150 ಇದ್ದರೆ, ಗ್ರೂಪ್ 'ಬಿ' ಹುದ್ದೆಗಳು 130 ಹುದ್ದೆಗಳಿವೆ. ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆ ಸೇರಿ ಒಟ್ಟು 5,548 ಹುದ್ದೆಗಳ ಪೈಕಿ 3,229 ಹುದ್ದೆಗಳು ಭರ್ತಿಯಾಗಿವೆ. ವರ್ಗಾವಣೆಗೆ ಅಬಕಾರಿ ಉಪ ಆಯುಕ್ತರ ಹುದ್ದೆ, ಉಪ ಅಧೀಕ್ಷಕ, ಅಬಕಾರಿ ನಿರೀಕ್ಷಕ, ಉಪ ನಿರೀಕ್ಷಕ ಹುದ್ದೆಗಳಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಇದೀಗ ಗ್ರೂಪ್ 'ಸಿ' ವೃಂದದ ನಿರೀಕ್ಷಕರು, ಉಪ ನಿರೀಕ್ಷಕರು, ಮುಖ್ಯ ಪೇದೆ ಮತ್ತು ಅಬಕಾರಿ ಪೇದೆಯನ್ನು ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಅರ್ಧ ಹುದ್ದೆಗಳ ವರ್ಗಾವಣೆ ದಂಧೆಗೆ ಬ್ರೇಕ್ ಬಿದ್ದಿದೆ. ಆದರೆ, ಗ್ರೂಪ್ 'ಎ' ಉಪ ಆಯುಕ್ತ, ಗ್ರೂಪ್ 'ಬಿ' ವೃಂದದ ಅಧೀಕ್ಷಕ ಮತ್ತು ಉಪ ಅಧೀಕ್ಷಕ ಅಧಿಕಾರಿಗಳನ್ನು ಕೌನ್ಸಿಲಿಂಗ್ ಮೂಲಕ ವರ್ಗಾಯಿಸುತ್ತಿಲ್ಲ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

izmo ltd.

Driving **Growth**

Audited Financial Results for the Quarter & Financial Year ended 31-03-2025

Statement of Consolidated Audited Financial Results for the Quarter & FY ended 31-03-2025

(Rs. in Lakhs)

Sl. No.	Particulars	Quarter Ended: Audited 31.03.2025	Quarter Ended: Un-Audited 31.12.2024	Quarter Ended: Audited 31.03.2024	Year Ended: Audited 31.03.2025	Year Ended: Audited 31.03.2024
1	Revenue from Operation	5981.23	5,866.52	5,028.84	22,461.01	18,674.83
2	Other Income	85.32	221.52	85.63	3,525.91	334.27
3	**Total Income**	**6,066.55**	**6,088.04**	**5,114.47**	**25,986.92**	**19,009.10**
4	**Profit/(Loss) for the period**	**688.93**	**605.90**	**903.74**	**4,888.03**	**2,605.06**
5	Total other Comprehensive Income	5.68	-	10.18	5.68	10.18
6	**Total other Comprehensive Income**	**694.61**	**605.90**	**913.92**	**4,893.71**	**2,615.24**
7	Paid-up Equity Share Captial (Face value Rs.10/- per share)	1,487.21	1,487.21	1,411.36	1,487.21	1,411.36
8	Reserves	34,427.51	34,213.27	29,233.89	34,427.51	29,233.89
9	Earnings Per Share (Face value of share at Rs.10/-each)(not Annualised)					
	(a) Basic	4.63	4.07	6.40	33.90	19.30
	(b) Diluted	4.63	4.07	6.40	33.90	19.30
	See accompanying notes to the Financial Results.					

Statement of Stand alone Audited Financial Results for the Quarter & FY ended 31-03-2025

(Rs. in Lakhs)

Sl. No.	Particulars	Quarter Ended: Audited 31.03.2025	Quarter Ended: Un-Audited 31.12.2024	Quarter Ended: Audited 31.03.2024	Year Ended: Audited 31.03.2025	Year Ended: Audited 31.03.2024
1	Revenue from Operation	1,220.99	1,164.91	1,147.03	4,685.64	4,261.94
2	Other Income	30.68	84.53	31.99	3,219.80	113.50
3	**Total Income**	**1,251.67**	**1,249.44**	**1,179.02**	**7,905.44**	**4,375.44**
4	**Profit/(Loss) for the period**	**19.30**	**9.74**	**1.60**	**2,443.40**	**19.07**
5	Total other Comprehensive Income	5.68	-	10.18	5.68	10.18
6	**Total Comprehensive Income for the Period**	**24.98**	**9.74**	**11.78**	**2,449.07**	**29.25**
7	Paid-up Equity Share Captial (Face value Rs.10/- per share)	1,487.21	1,487.21	1,411.36	1,487.21	1,411.36
8	Reserves	19,636.29	19,700.14	16,495.75	19,636.29	16,495.75
9	Earnings Per Share (Face value of share at Rs.10/-each)(not Annualised)					
	(a) Basic	**0.13**	**0.07**	**0.01**	**16.95**	**0.14**
	(b) Diluted	**0.13**	**0.07**	**0.01**	**16.95**	**0.14**
	See accompanying notes to the Financial Results.					

The above is an extract of the detailed format of Financial Results for the Q4 and FY Ended 31.03.2025 filed with Stock Exchanges under Regulation 33 of the SEBI (Listing Obligations and Disclosures Requirements) Regulation, 2015. The complete format of Financial Results is available on the Stock Exchange websites at www.bseindia.com, www.nseindia.com and also on Company's website at www.izmoltd.com.

Notes to Financial Results:

1. The above audited Q4 and Annual financial results for the financial year ended 31st March, 2025 have been reviewed by the Audit Committee and approved by the Board of Directors at its meeting held on 30th May, 2025.
2. Statutory Audit of financial results for the Q4 and financial year ended 31st March, 2025 has been carried out by the Auditors.
3. Investors Grievances during the quarter: Received - Nil, Attended - Nil, Pending - Nil.
4. The Company added 110 clients in the US market including 103 clients in Frog Data.
5. Client addition in Europe including UK were 53 clients.
6. **izmo Microsystems Pvt. Ltd.**
   a. It has crossed revenues of Rs. 8 crores in the first full year of operation. New client additions include Bharat Electronics Limited. We expect the semiconductor packaging and System in Package (SIP) business to grow substantially in the years to come.
   b. As was announced on March 25th, 2025 IMPL is the exclusive industry partner with IIT Madras in a groundbreaking project at the Centre for Programmable Photonic Integrated Circuits and Systems (CPPICS), Center of Excellence (CoE). The CoE-CPPICS has been established on 1st January 2021 in the Department of Electrical Engineering, IIT Madras with a substantial seed funding of Rs. 2,665 Lakhs from the MeitY, Govt. of India and in-kind contribution of Rs. 325 Lakhs from izmo Microsystems Bengaluru.
7. The Company operates in one reportable segment only.
8. **Employee benefit expenses for the FY ended 31st March, 2025 includes Rs.143.09 lakhs (PY Rs. 144.50 lakhs) expenses recognised on account of Stock option offered to employees under ESOP Schemes, recognised over the vesting period.**
9. **The Company has collected US$ 286K (Rs.241.68 lakhs) from several companies towards image copyright infringement charges during FY. This is part of the other income. This is a result of legal action taken by the company against several large international media companies using Izmo's automotive images illegally.**
10. **Other expenses for Q4 & FY ended 31.03.2025 includes Rs.215.51 lakhs (PY Rs. 14.22 lakhs) pertains to old balance write off charged to P&L, on consolidated basis and hence to that extent net profit is reduced for the said period.**
11. Outstanding Qualified Borrowings at the start of the financial year - Rs.151.65 lakhs
12. Outstanding Qualified Borrowings at the end of the financial year - Rs.325.74 lakhs
13. Highest credit rating of the company relating to the unsupported bank borrowings or plain vanilla bonds, which have no structuring/support built in. - Not Applicable
14. Incremental borrowing done during the year (qualified borrowing) - Rs.250 lakhs
15. Borrowings by way of issuance of debt securities during the year - Rs.NIL
16. Ind AS 116- Leases -The Company has different lease rental contracts which comes under the purview of IND AS 116-Leases. However the management is of the opinion that impact on the Company's financial statements is not material.
17. The figures for the quarter ended 31st March, 2025 and 31st March, 2024 are the balancing figures between audited figures in respect of the full financial year and published year-to-date figures upto the third quarter of the respective financial year.

Bengaluru
30th May, 2025

For and on behalf of the Board
sd/-
Sanjay Soni
Managing Director
DIN : 00609097
Flat No. 9, Prestige Casablanca Apt. Airport Road, Bengaluru - 560017

*For FY 24-25 as compared to PY, at consolidated level.

#177/2C, Bilekahalli Industrial Area,Off Bannerghatta Road, Bengaluru-560 076
Ph: +91 80 67125400, Fax: +91 80 67125408
www.izmoltd.com CIN : L72200KA1995PLC018734

ದಿ ಸೌತ್ ಇಂಡಿಯಾ ಪೇಪರ್ ಮಿಲ್ಸ್ ಲಿಮಿಟೆಡ್

CINL85110KA1959PLC001352
ನೋಂದಾಯಿತ ಕಛೇರಿ: ಚಿಕ್ಕಯ್ಯನ ಛತ್ರ, ನಂಜನಗೂಡು–571302, ಕರ್ನಾಟಕ ರಾಜ್ಯ

ಅಂಚೆ ಮತದಾನ ಸೂಚನೆ ಮತ್ತು ಇ–ವೋಟಿಂಗ್ ಸೂಚನೆ

ಈ ಸೂಚನೆ ಮೂಲಕ ತಿಳಿಸುವುದೇನೆಂದರೇ ಶ್ರೀ ಗೋಮಾತಮ್ ರವಿ, ಶ್ರೀ ನಾಗರಾಜ ಶ್ರೀವತ್ಸ, ಶ್ರೀ ಪುರುಷೋತ್ತಮ್ ಜವರೇಗೌಡ ಹಾಗೂ ಶ್ರೀಮತಿ ಗಾರ್ಗಿ ಓಜಾ ಇವರನ್ನು ಕಂಪೆನಿಯ ಸ್ವತಂತ್ರ ನಿರ್ದೇಶಕರಾಗಿ ನೇಮಕ ಮಾಡಲು ಕಂಪನಿಯು ವಿಶೇಷ ನಿರ್ಣಯಗಳ ಮೂಲಕ ತನ್ನ ಸದಸ್ಯರ ಅನುಮೋದನೆಯನ್ನು ಕೋರುತ್ತಿದೆ.

ಕಂಪನೀಯ ಕಾಯ್ದೆ 11ರ ಹಾಗೂ ಕಂಪೆನಿಗಳ (ನಿರ್ವಹಣ ಮತ್ತು ಆಡಳಿತ) ನಿಯಮಾವಳಿಗಳ ನಿಯಮ 22 ಹಾಗೂ ಇತರ ಷರತ್ತು ನಿಬಂಧನೆಗಳು ಅನುಸಾರವಾಗಿ ರಿಮೋಟ್ ಇ–ವೋಟಿಂಗ್ ಮೂಲಕ ಅಂಚೆ ಮತದಾನಕ್ಕಾಗಿ (Postal Ballot) ಕಂಪನಿಯು ಸದಸ್ಯರ ಅನುಮೋದನೋಯನ್ನುಕೋರುತ್ತಿದೆ.

ಈ ಅಂಚೆ ಮತದಾನದ ಸೂಚನೆಯನ್ನು ಇಮೇಲ್ ಮೂಲಕ, ಇ–ಮೇಲ್ ಐಡಿ (Email ID) ನೋದಾಯಿಸಿರುವ ಸದಸ್ಯರುಗಳಿಗೆ 28–05–2025 ರಂದು ಕಳುಹಿಸಲಾಗಿದೆ. ಯಾವ ವ್ಯಕ್ತಿಯು ಹೆಸರು ಕಂಪನಿಯ ಸದಸ್ಯರುಗಳು ರಿಜಿಸ್ಟರ್ ಅಥವಾ ಡಿಪಾಜಿಟರೀಸ್‌ರವರು ನಿರ್ವಹಿಸುತ್ತಿರುವ ಫಲಾನುಭವಿ ಮಾಲೀಕರ Beneficial Owners ರಿಜಿಸ್ಟರ್‌ನಲ್ಲಿ ನಿರ್ಧರಣಾ ದಿನಾಂಕ (Cut Off Date) 23–05–2025 ರಂದು ದಾಖಲಾತಿಯಲ್ಲಿದೆಯೊ ಅಂತಹ ಸದಸ್ಯರು ಮಾತ್ರ ಇ–ವೋಟಿಂಗ್ ಮಾಡಬಹುದು. ಸದಸ್ಯರು ತಮ್ಮ ಸಮ್ಮತಿ ಅಥವಾ ಅಸಮ್ಮತಿಯನ್ನು ಇ–ನೋಟಿಂಗ್ ಮೂಲಕವೇ ತಿಳಿಸಬೇಕು. ಒಮ್ಮೆ ವಿಶೇಷ ನಿರ್ಣಯದ ಮೇಲೆ ಮತ ಚಲಾಯಿಸಿದ ಸದಸ್ಯರಿಗೆ ತದನಂದರ ಅದನ್ನು ಮತ್ತೆ ಬದಲಾಯಿಸುವ ಅವಖಾಸವಿರುವುದಿಲ್ಲ.

ಕಂಪೆನಿಯು ತನ್ನ ಸದಸ್ಯರಿಗೆ ರಿಮೆಟ್ ಇ–ವೋಟಿಂಗ್ ಸೌಲಭ್ಯವನ್ನು ಒದಗಿಸಲು ಕೆಫಿನ್ ಟೆಕ್ನಾಲಜೀಸ್ ಲಿ.ನ ಸೇವೆಗಳನ್ನು ತೊಡಗಿಸಿಕೊಂಡಿದೆ. ರಿಮೆಟ್ ಇ–ವೋಟಿಂಗ್ ಮೂಲಕ ಅಂಚೆ ಮತದಾನವು 31 ಮೇ, 2025 ಶನಿವಾರ (ಬೆಳಿಗ್ಗೆ 9.00 ಘಂಟೆಗೆ) ಪ್ರಾರಂಭವಾಗುತ್ತದೆ ಮತ್ತು 29 ಜೂನ್, 2025 ಭಾನುವಾರ (ಸಾಯಂಕಾಲ 05.00 ಘಂಟೆಗೆ) ಮುಕ್ತಾಯವಾಗುತ್ತದೆ. ರಿಮೋಟ್ ಇ–ವೋಟಿಂಗ್ ಘಟಕವನ್ನು ಆನಂತರ ನಿಷ್ಕ್ರಿಯಗೊಳಿಸಲಾಗುವುದು. ಡಿಮ್ಯಾಟ್ ಮೋಡ್‌ನಲ್ಲಿ ಷೇರು ಹೊಂದಿರುವ ಯಾವ ಸದಸ್ಯರು ತಮ್ಮ ಇ–ಮೇಲ್ ಐಡಿ (Email ID) ಗಳನ್ನು ನೋಂದಾಯಿಸಿಲ್ಲವೋ ಅಂತಹವರು ತಮ್ಮ ಡಿಪಾಸಿಟರೀಗಳನ್ನು ಸಂಪರ್ಕಿಸಿ ನೋಂದಾಯಿಸಿಕೊಳ್ಳುವುದು. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ–ಮೇಲ್ ಐಡಿಯನ್ನು ನೋಂದಾಯಿಸಿಕೊಳ್ಳಲು Form ISR-I ಅನ್ನು ಭರ್ತಿ ಮಾಡಿ ಅದರೊಂದಿಗೆ KYC ದಸ್ತಾವೇಜುಗಳನ್ನು ನಮ್ಮ ರೆಜೀಸ್ಟ್ರಾರ್‌ಗಳನ್ನು ಕೆಫಿನ್ ಟೆಕ್ನಾಲಜೀಸ್ ಲಿ.ಗೆ ಕಳುಹಿಸಬೇಕು. ಇವರ ವಿಳಾಸ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಪ್ಲಾಟ್ ನಂ. 31 ಮತ್ತು 22, ಗಾಚಿಬಾವ್ಲಿ ಫೈನಾನ್ಷಿಯಲ್ ಡಿಸ್ಟ್ರಿಕ್ ನಾನಕರಾಮಗುಡ, ಸರಿಲಿಂಗಾಮಪಳ್ಳಿ, ಹೈದರಾಬಾದ್, ತೆಲಂಗಾಣ–500 032 ಸಂಪರ್ಕಿಸಬೇಕಾದ ವ್ಯಕ್ತಿ ಶ್ರೀ ಎನ್ ಶಿವಕುಮಾರ ಈ Form ISR-I ನಮ್ಮ ಕಂಪೆನಿಯ ವೆಬ್‌ಸೈಟ್ www.sipaper.com ಹಾಗೂ ಈ ಲಿಂಕ್ https://riskfintech.com/clinetservices/isc/default.aspx ನಲ್ಲಿ ಲಭ್ಯವಿದೆ.

ಅಂಚೆ ಮತದಾನದ ಸೂಚನೆಯು (Postal Ballot Notice) ಕಂಪೆನಿಯ ವೆಬ್‌ಸೈಟ್ www.sipaper.com ನಲ್ಲಿ ಹಾಗೂ ಕೆಫಿನ್ ಟೆಕ್ನಾಲಜೀಸ್‌ನ ವೆಬ್‌ಸೈಟ್ ಆದ https:\\evoting.kfintech.com ನಲ್ಲಿ ಲಭ್ಯವಿದೆ. ಇ–ವೋಟಿಂಗ್‌ಗೆ ಸಂಬಂಧಿಸಂದತೆ ಯಾವಿದೇ ಪ್ರಶ್ನೆಗಳಿದ್ದಲ್ಲಿ, ಷೇರುದಾರರಿಗಾಗಿ ಇರುವ Frequently Asked Question (FAQ)ಅನ್ನು ಪರಾಮರ್ಶಿಸಬಹುದು. ಸದಸ್ಯರಿಗಾಗಿ ಇ–ವೋಟಿಂಗ್ ಕೈಪಿಡಿಯು https:\\evoting.kfintech.com ನ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿದೆ. ಈ ವಿಷಯವಾಗಿ ಶ್ರೀಮತಿ ಶೋಭಾ ಆನಂದ್ ಅವರನ್ನು ಈ ಕೆಳಕಂಡ ವಿಳಾಸದಲ್ಲಿ ಸಂಪರ್ಕಿಸಬಹುದು. ಕೆಫುನ್ ಟಿಕ್ನಾಲಜೀಸ್ ಲಿಮಿಟೆಡ್. ಪ್ಲಾಟ್ ನಂ. 30 ಮತ್ತು 32, ಗಾಚಿಬಾವ್ಲಿ ಫೈನಾನ್ಷಿಯಲ್ ಡಿಸ್ಟ್ರಿಕ್ ನಾನಕರಾಮಗುಡ, ಸರಿಲಿಂಗಾಮಪಳ್ಳಿ, ಹೈದರಾಬಾದ್, ತೆಲಂಗಾಣ–500 032 ಇವರ ಇ–ಮೇಲ್ ಐಡಿ ಹಾಗೂ ದೂರವಾಣಿ ಸಂಖ್ಯೆ 18003454001

ಅಂಚಿ ಮತದಾನದ ಫಲಿತಾಂಶವನ್ನು 1 ಜುಲೈ 2025 ದಂದು ಅಥವಾ ಅದಕ್ಕೂ ಮೊದಲು ಘೋಷಿಸಲಾಗುವುದು ತದನಂತರ ಈ ಫಲಿತಾಂಶವನ್ನು ಕಂಪನಿಯ ವೆಬ್‌ಸೈಟ್ www.sipaper.com ಹಾಗೂ ಕೆಫಿನ್ ಟೆಕ್ನಾಲಜೀಸ್‌ನ ವೆಬ್‌ಸೈಟ್ https:\\evoting.kfintech.com ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಈ ಫಲಿತಾಂಶವನ್ನು ಸ್ಟಾಕ್ ಎಕ್ಸ್‌ಚೇಂಜ್ ಆದ ಬಿ ಎಸ್ ಇ ಲಿಮಿಟೆಡ್‌ಗೆ ತಿಳಿಲಾಗುವುದು.

ಮಂಡಳಿಯ ಆದೇಶದ ಮೇರೆಗೆ
ಸಹಿ/–
ಮನೀಷ್ ಎಮ್ ಪಟೇಲ್
ಛೇರ್‌ಮನ್ ಹಾಗೂ ವ್ಯವಸ್ಥಾಪಕ ನಿರ್ದೇಶಕರು
DIN00128179

ಸ್ಥಳ : ನಂಜನಗೂಡು
ದಿನಾಂಕ : 28–05–2025

ಭಾವಯಾನಿಯ ಅಂತಿಮ ಯಾನ

ಎಚ್ಚೆಸ್ವಿ ಭಾವಗೀತೆಗಳು

ಪ್ರೀತಿ ಕೊಟ್ಟ ರಾಧೆಗೆ..

ಮಾತು ಕೊಟ್ಟ ಮಾಧವ
ಪ್ರೀತಿ ಕೊಟ್ಟ ರಾಧೆಗೆ
ಮಾತು ಕೊಟ್ಟ ಮಾಧವ ।
ತನ್ನನಿತ್ತ ಕೊಳಲಿಗೆ
ರಾಗ ತೆತ್ತ ಮಾಧವ ॥
ಗಂಧ ಕೊಟ್ಟ ಹೆಣ್ಣಿಗೆ
ಅಂದ ಕೊಟ್ಟ ಮಾಧವ ।
ಅನ್ನ ಕೊಟ್ಟ ಭಕ್ತಗೆ
ಹೊನ್ನ ಕೊಟ್ಟ ಮಾಧವ ॥
ಹಾಲು ಕೊಟ್ಟ ವಿಧುರಗೆ
ಬಾಳು ಕೊಟ್ಟ ಮಾಧವ ।
ದೇಹ ಕೊಟ್ಟ ಮಣ್ಣಿಗೆ
ಜೀವ ಕೊಟ್ಟ ಮಾಧವ ॥

ಅಮ್ಮ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ

ಅಮ್ಮ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ
ಎಲ್ಲಾ ಸೇರಿ ನನ್ನ ಬಾಯಿಗೆ ಬೆಣ್ಣೆಯ ಮೆತ್ತಿದರಮ್ಮ
ನೀನೆ ನೋಡು ಬೆಣ್ಣೆಗಡಿಗೆ ಸೂರಿನ ನೆಲುವಲ್ಲಿ
ಹೇಗೆ ತಾನೇ ತೆಗೆಯಲಿ ಅಮ್ಮ ನನ್ನ ಪುಟ್ಟ ಕೈಗಳಲ್ಲಿ ॥
ಶಾಮ ಹೇಳಿದ ಬೆಣ್ಣೆ ಮೆತ್ತಿದ ತನ್ನ ಬಾಯಿ ಒರೆಸುತ್ತಾ
ಬೆಣ್ಣೆ ಒರೆಸಿದ ಕೈಯ ಬೆನ್ನ ಹಿಂದೆ ಮರೆಸುತ್ತಾ ॥
ಎತ್ತಿದ ಕೈಯ ಕಡಗೋಲನ್ನು ಮೂಲೆಲಿಟ್ಟು ನಕ್ಕಳು ಗೋಪಿ
ಸೂರದಾಸ ಪ್ರಿಯಶಾಮನ ಶಾಮನ
ಸೂರದಾಸ ಪ್ರಿಯಶಾಮನ ಶಾಮನ ಮುತ್ತಿಟ್ಟು ನಕ್ಕಳು ಗೋಪಿ ॥

ಲೋಕದ ಕಣ್ಣಿಗೆ ರಾಧೆಯು ಕೂಡ..

ಲೋಕದ ಕಣ್ಣಿಗೆ ರಾಧೆಯು ಕೂಡ
ಎಲ್ಲರಂತೆ ಒಂದು ಹೆಣ್ಣು.
ನನಗೋ ಆಕೆ ಕೃಷ್ಣನ ತೋರುವ
ಪ್ರೀತಿಯು ನೀಡಿದ ಕಣ್ಣು.
ತಿಂಗಳ ರಾತ್ರಿ ತೊರೆಯ ಸಮೀಪ
ಉರಿದಿರೆ ಯಾವುದೋ ದೀಪ,
ಯಾರೋ ಮೋಹನ, ಯಾವ ರಾಧೆಗೋ,
ಪಡುತಿರುವನು ಪರಿತಾಪ.
ನಾನು ನನ್ನದು ನನ್ನವರೆನ್ನುವ
ಹಲವು ತೊಡಕುಗಳ ಮೀರಿ,
ಭಾವಿಸಿ ಸೇರಲು ಬೃಂದಾವನವ,
ರಾಧೆ ತೋರುವಳು ದಾರಿ.
ಮಹಾಪ್ರವಾಹ, ತಡೆಯುವರಿಲ್ಲ,
ಪಾತ್ರವಿರದ ತೊರೆ ಪ್ರೀತಿ.
ತೊರೆದರು ತನ್ನ, ತೊರೆಯದು ಪ್ರಿಯನ,
ರಾಧೆಯ ಪ್ರೀತಿಯ ರೀತಿ, ಇದು
ರಾಧೆಯ ಪ್ರೀತಿಯ ರೀತಿ.

ಇಷ್ಟು ಕಾಲ ಒಟ್ಟಿಗಿದ್ದು ಎಷ್ಟು ಬೆರೆತರೂ

ಇಷ್ಟು ಕಾಲ ಒಟ್ಟಿಗಿದ್ದು ಎಷ್ಟು ಬೆರೆತರೂ
ಅರಿತೆವೇನು ನಾವು ನಮ್ಮ ಅಂತರಾಳವ ॥
ಕಡಲ ಮೇಲೆ ಸಾವಿರಾರು ಮೈಲಿ ಸಾಗಿಯೂ
ನೀರಿನಾಳ ತಿಳಿಯಿತೇನು ಹಾಯಿ ದೋಣಿಗೆ
ಸದಾಕಾಲ ತಬ್ಬುವಂತೆ ಮೇಲೆ ಬಾಗಿಯೂ
ಮಣ್ಣ ಮುತ್ತು ದೊರೆಯಿತೇನು ನೀಲಿಬಾನಿಗೆ
ಸಾವಿರಾರು ಮುಖದ ಚೆಲುವ ಹಿಡಿದು ತೋರಿಯೂ
ಒಂದಾದರೂ ಉಳಿಯಿತೇ ಕನ್ನಡಿಯ ಪಾಲಿಗೆ....
ಇಷ್ಟು ಕಾಲ ಒಟ್ಟಿಗಿದ್ದೂ.....

ಹುಚ್ಚು ಖೋಡಿ ಮನಸು !!

ಹುಚ್ಚು ಖೋಡಿ ಮನಸು
ಅದು ಹದಿನಾರರ ವಯಸು
ಮಾತು ಮಾತಿಗೇಕೋ ನಗು
ಮರುಘಳಿಗೇ ಮೌನ,
ಕನ್ನಡಿ ಮುಂದಷ್ಟು ಹೊತ್ತು
ಬರೆಯದಿರುವ ಕವನ ॥
ಸೆರಗು ತೀಡಿದಷ್ಟು ಸುಕ್ಕು
ಹಠ ಮಾಡುವ ಕೂದಲು
ನಿರಿ ಏಕೋ ಸರಿಯಾಗದು
ಮತ್ತೆ ಒಳಗೆ ಹೋದಳು ॥
ಕೆನ್ನೆ ಕೊಂಚ ಕೆಂಪಾಯಿತೆ
ತುಟಿಯ ರಂಗು ಹೆಚ್ಚೇ
ನಗುತ ಅವಳ ಛೇಡಿಸುತಿದೆ
ಗಲ್ಲದ ಕರಿ ಮಚ್ಚೆ ॥
ಬರಿ ಹಸಿರು ಬರಿ ನೋವು
ಎದೆಯೊಳೆಷ್ಟು ಹೆಸರು
ಯಾರ ಮದುವೆ ದಿಬ್ಬಣವೋ
ಸುಮ್ಮನೆ ನಿಟ್ಟುಸಿರು ॥

ತೂಗುಮಂಚ

ತೂಗುಮಂಚದಲ್ಲಿ ಕೂತು ಮೇಘಶ್ಯಾಮ ರಾಧೆಗಾತು
ಆಡುತಿಹನು ಏನೋ ಮಾತು ರಾಧೆ ನಾಚುತಿದ್ದಳು ।
ಸೆರಗ ಬೆರಳಿನಲ್ಲಿ ಸುತ್ತಿ ಜಡೆಯ ತುದಿಯ ಕೆನ್ನೆಗೊತ್ತಿ
ಜುಮ್ಮುಗುಡುವ ಮುಖವನೆತ್ತಿ ಕಣ್ಣ ಮುಚ್ಚುತಿದ್ದಳು ॥
ಮುಖವ ಎದೆಯ ನಡುವೆ ಒತ್ತಿ ತೋಳಿನಿಂದ ಕೊರಳ ಸುತ್ತಿ
ತುಟಿಯು ತೀಡಿ ಬೆಂಕಿ ಹೊತ್ತಿ ಹಮ್ಮನುಸಿರ ಬಿಟ್ಟಳು ।
ಸೆರಗು ಜಾರುತಿರಲು ಕೆಳಗೆ ಬಾನುಭೂಮಿ ಮೇಲು ಕೆಳಗೆ
ಅದುರುತಿರುವ ಅಧರಗಳಿಗೆ ಬೆಳ್ದಿಹಾಲ ಬಟ್ಟಲು ॥
ಚಾಚುತಿರಲು ಅರಳಿಗರಳು ಯಮುನೆಯೆಡೆಗೆ ಚಂದ್ರ ಬರಲು
ಮೇಲೆ ತಾರೆಗಣ್ಣ ಹೊರಳು ಹಾಯಿದೋಣಿ ತೇಲಿತೋ
ತನಗೆ ತಾನೇ ತೂಗುಮಂಚ ತಾಗುತಿತ್ತು ದೂರದಂಚ
ತೆಗೆಯೋ ಗರುಡ ನಿನ್ನ ಚುಂಚ ಹಾಲುಗಡಿಗೆ ಹೇಳಿತು ॥



ಇರಬೇಕು ಇರುವಂತೆ ಎನ್ನುತ್ತಲೇ ಹೊರಟರು ಕವಿ ಎಚ್ಚೆಸ್ವಿ

ಜೀವನಪ್ರೀತಿ ಸವಿಗಾನದ ಭಾವಕವಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಎಚ್.ಎಸ್.ವೆಂಕಟೇಶಮೂರ್ತಿ ಅವರನ್ನು ಯುವ ಕವಿಗಳು ಎನ್ನುತ್ತಿದ್ದ ನಮ್ಮ ಪೀಳಿಗೆಯ ವರಿಗೆ ಅವರನ್ನು ನೆನೆದಾಗ ನಾವೂ ಕೂಡಾ ಪುಟ್ಟವರು ಎಂಬ ಮುದದ ಭಾವ ಆವರಿಸಿ ಕೊಳ್ಳುತ್ತದೆ.

ಎಚ್ಚೆಸ್ವಿ ಅವರ ಹೃದಯದಲ್ಲಿದ್ದ ಕನ್ನಡ ಭಾಷೆಯನ್ನು ಅಧ್ಯಯನ ಮಾಡುವ ಮತ್ತು ಬರಹಗಾರನಾಗುವ ಉತ್ಕಟಾಕಾಂಕ್ಷೆ ಸುಮ್ಮನಿರ ಗೊಡಲಿಲ್ಲ. ಧಾರವಾಡ ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಬಿ.ಎ. ಪದವಿ ಪಡೆದು, ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಿ ಬೆಂಗಳೂರು ವಿಶ್ವವಿದ್ಯಾಲಯದ ಎಂ.ಎ. ಪದವಿಯನ್ನು ಪಡೆದರು. 1973ರಲ್ಲಿ ಪ್ರೊ. ಜಿ.ಎಸ್.ಶಿವ ರುದ್ರಪ್ಪನವರ ನೇತೃತ್ವದಲ್ಲಿ ಕಥನ ಕವನಗಳು ಎಂಬ ವಿಷಯ ಕುರಿತು ಥೀಸಿಸ್ ಬರೆದು ಬೆಂಗಳೂರು ವಿಶ್ವವಿದ್ಯಾಲಯದ ಪಿಎಚ್‌ಡಿ ಪದವಿ ಗಳಿಸಿದರು.

ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ ಮಳೆ ಸುರಿಸಿ ಹಗುರಾದ ಮುಗಿಲಿನಂತೆ.. ಹೀಗಿದ್ದ ಆಧುನಿಕ ಕವಿ, ಡಾ. ಎಚ್ ಎಸ್. ವೆಂಕಟೇಶ ಮೂರ್ತಿ. ಎಚ್ಚೆಸ್ವಿ ಒಂದು ರೀತಿಯ ಬೆಳದಿಂಗಳು. ಸೇಡಿಲ್ಲದ, ಕೇಡಿಲ್ಲದ ಕಾವ್ಯ ಅವರದು. ಸಂಜೆ ಯಾಗುತ್ತಿದೆ ನಡೆನಡೆ ಗೆಳೆಯ ಬೃಂದಾವನದ ಕಡೆಗೆ ಎಂದು ಸಂತೃಪ್ತ ಜೀವನ ನಡೆಸಿ, ಕೆಲವ ರನ್ನು ಕೈ ಹಿಡಿದು ನಡೆಸಿ, ತಮ್ಮ ವೇಣುನಾದದಂಥ ಬದುಕಿನಿಂದ ಎಲ್ಲರನ್ನೂ ಪ್ರಭಾವಿಸಿ, ಸಂತನೊಬ್ಬ ಬೃಂದಾವನ ಪ್ರವೇಶ ಮಾಡುವಂತೆ, ಮುಗುಳ್ನ ಗುತ್ತಲೇ ಹೊರಟು ಬಿಟ್ಟಿದ್ದಾರೆ ಎಚ್ಚೆಸ್ವಿ. ಬಾಲ್ಯ ದಲ್ಲಿಯೇ ಯಕ್ಷಗಾನ, ಬಯಲಾಟ, ಪ್ರಾದೇಶಿಕ ಜಾನಪದ ಇವರ ಮೇಲೆ ಗಾಢ ಪರಿಣಾಮ ಬೀರಿದ್ದವು ಎನ್ನುವುದಕ್ಕೆ ಇವರ ಕೃತಿಗಳೇ ಸಾಕ್ಷಿ. ತಂದೆ-ತಾಯಿಯಿಂದಲೇ, ಕುಮಾರವ್ಯಾಸ ಭಾರತ, ಜೈಮಿನಿ ಭಾರತಗಳನ್ನು ಕೇಳಿ, ಓದಿ, ಕುಮಾರ ವ್ಯಾಸ, ಪುರಂದರ, ಲಕ್ಷ್ಮೀಶನಂಥ ಕವಿ ಗಳಿಂದ ಪ್ರಭಾವಿತರಾದವರು. ಇವರ ಗುರು ಗಳಾದ ನರಸಿಂಹ ಶಾಸ್ತ್ರಿ, ಎಚ್ಚೆಸ್ವಿ ಅವರ ಸೃಜನಶೀಲ ಶಕ್ತಿಗೆ ಮೂರ್ತರೂಪ ನೀಡಿದವರು ಎನ್ನ ಬಹುದು.

ತಮ್ಮ ಬಳಿ ಇದ್ದ, ಕುವೆಂಪು, ಬೇಂದ್ರೆ, ಗೋರೂರು, ಮಾಸ್ತಿ, ಕಾರಂತ ಪುಸ್ತಕಗಳನ್ನು ಎಚ್ಚೆಸ್ವಿ ಅವರಿಗೆ ಓದಿಸಿದವರು. ಹಾಗಾಗಿ ಅವರು ತಮ್ಮ ಮೊದಲ ಕವನ ಸಂಕಲನ 'ಪರಿವೃತ್ತ'ವನ್ನು ನರಸಿಂಹ ಶಾಸ್ತ್ರಿಗಳಿಗೆ ಅರ್ಪಿಸಿದ್ದಾರೆ. ಎಚ್ಚೆಸ್ವಿ ಅವರ 'ಅನಾತ್ಮ ಕಥನ' ಅವರ ಬಾಲ್ಯದ ಕಥೆಯನ್ನು ಮನೋಜ್ಞವಾಗಿ ಕಟ್ಟಿಕೊಡುತ್ತದೆ. ಇದು ನಿರ್ಮಲವಾದ ಆಪ್ತಭಾವದ ಸ್ಫುರಣ ಎಂದೇ ವಿಮರ್ಶಕರು ಗುರುತಿಸುತ್ತಾರೆ. ಅದು ಓದುಗರನ್ನು ಆಯಸ್ಕಾಂತದಂತೆ ಓದುಗರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ಮೃದು ಹಾಸ್ಯದ ಜವನಿಕೆಯೊಳಗೆ ಜೀವಮಾಮ ಪರ್ಯಂತ ಅನುಭವಗಳ ಆಗಿ ಹೋಗಿರುವ ಸಂಗತಿಗಳ ಒಂದು ಅನನ್ಯ ನೋಟವಾಗಿದೆ.

ಭಾವಗೀತೆಯ ಲೋಕಕ್ಕೆ ಅಪಾರ ಕೊಡುಗೆ

'ಪರಿವೃತ್ತ', 'ಬಾಗಿಲು ಬಡಿವ ಜನಗಳು', : ಮೊಖ್ತಾ', 'ಸಿಂದಬಾದನ ಆತ್ಮಕಥೆ', 'ಒಣ ಮರದ ಗಿಳಿಗಳು', 'ಮರೆತ ಸಾಲುಗಳು', 'ಸೌಗಂಧಿಕ', 'ಇಂದುಮುಖಿ', 'ಹರಿಗೋಲು', 'ವಿಸರ್ಗ', ''ಎಲೆಗಳು ನೂರಾರು', 'ಅಗ್ನಿ ಸ್ತಂಭ', 'ಎಷ್ಟೊಂದು ಮುಖ', 'ಅಮೆರಿಕದಲ್ಲಿ ಬಿಲ್ಲುಹಬ್ಬ', 'ವಿಮುಕ್ತಿ', 'ಭೂಮಿಯೂ ಒಂದು ಆಕಾಶ', 'ಮೂವತ್ತು ಮಳೆಗಾಲ' ಮುಂತಾದವು ಎಚ್ ಎಸ್ ವಿ ಅವರ ಕವನ ಸಂಕಲನಗಳು. 'ತಾಪಿ', 'ಅಮಾನುಷರು', 'ಕದಿರನ ಕೋಟೆ', 'ಅಗ್ನಿಮುಖಿ' ಕಾದಂಬರಿಗಳು. 'ಬಾನಸ ವಾಡಿಯ ಬೆಂಕಿ;, 'ಪುಟ್ಟಾರಿಯ ಮತಾಂತರ' ಕಥಾ ಸಂಕಲನಗಳು.

ಎಚ್ಚೆಸ್ವಿ ಅವರ ನಾಟಕಗಳೆಂದರೆ 'ಹೆಜ್ಜೆ ಗಳು', 'ಒಂದು ಸೈನಿಕ ವೃತ್ತಾಂತ', 'ಕತ್ತಲೆಗೆ ಎಷ್ಟು ಮುಖ', 'ಚಿತ್ರಪಟ', 'ಉರಿಯ ಉಯ್ಯಾಲೆ', 'ಅಗ್ನಿವರ್ಣ', 'ಸ್ವಯಂವರ' ಮುಂತಾದವು. ಸಾಹಿತ್ಯ ಚರಿತ್ರೆಯಲ್ಲಿ ಎಚ್ಚೆಸ್ವಿ ಅವರ 'ಕೀರ್ತನಕಾರರು' ಕನ್ನಡ ಸಾಹಿತ್ಯದ ಮಹತ್ವದ ಕೃತಿ. ಎಚ್ಚೆಸ್ವಿ ಅವರ ವಿಮರ್ಶಾ ಕೃತಿಗಳಲ್ಲಿ 'ನೂರು ಮರ, ನೂರು ಸ್ವರ', 'ಮೇಘದೂತ', ''ಕಥನ ಕವನ', 'ಆಕಾಶದ ಹಕ್ಕು' ಪ್ರಧಾನವಾಗಿವೆ. 'ಕ್ರಿಸ್ಮಸ್ ಮರ' ಅನುಭವ ಕಥನ. 'ಶತಮಾನದ ಕಾವ್ಯ' ಅವರ ಸಂಪಾದನೆ. ಕಾಳಿದಾಸನ 'ಋತು ಸಂಹಾರ'ದ ಅನುವಾದ 'ಋತುವಿಲಾಸ'. 'ಸಿ.ವಿ.ರಾಮನ್', 'ಹೋಮಿ ಜಹಾಂಗೀರ ಭಾಭಾ', ''ಸೋದರಿ ನಿವೇದಿತಾ', 'ಬಾಹುಬಲಿ' ಮುಂತಾದವು ವ್ಯಕ್ತಿಚಿತ್ರಗಳ ಬರವಣಿಗೆಗಳಾಗಿವೆ. 'ಚಿನ್ನಾರಿ ಮುತ್ತ', 'ಕ್ರೌರ್ಯ', 'ಮತದಾನ', 'ಒಂದೂರಲ್ಲಿ' ಮುಂತಾದ ಚಿತ್ರಗಳಿಗೆ ಸಾಹಿತ್ಯ ಒದಗಿಸಿರುವುದಲ್ಲದೆ ಕಿರುತೆರೆ ಧಾರಾವಾಹಿ ಗಳಿಗೂ ಗೀತೆಗಳನ್ನು ರಚಿಸಿದ್ದಾರೆ. ಇವರ ಹಲವಾರು ಭಾವಗೀತೆಗಳು ಧ್ವನಿಸುರುಳಿಗಳಾಗಿ ಕನ್ನಡಿಗರ ಮನ ಸೂರೆಗೊಂಡಿವೆ. 'ಹಸಿರು ರಿಬ್ಬನ್' ಎಂಬ ಚಲನಚಿತ್ರವನ್ನೂ ನಿರ್ದೇ ಶಿಸಿದ್ದಾರೆ.

ಎಚ್ಚೆಸ್ವಿ ಅವರು ವಿವಿಧ ಪ್ರಾಕಾರಗಳಲ್ಲಿ ಸಮರ್ಥವಾದ ಸಾಹಿತ್ಯ ಸಾಧನೆಗಳ ಪ್ರತೀಕವಾಗಿದ್ದಾರೆ. ನಮ್ಮ ನಾಡಿನಲ್ಲಿ ಇಂದು ವಿರಳವಾಗುತ್ತಿರುವ ಕನ್ನಡದ ಮೂಲ ಸಾಂಸ್ಕೃತಿಕ ಪರಂಪರೆಗಳ ಮೇರು ಪ್ರತಿನಿಧಿಯಾಗಿದ್ದಾರೆ. ಅವರಿಗೆ ಬರವಣಿಗೆ ಎಂಬುದೊಂದು ಪ್ರೀತಿ. 'ಅಲ್ಲಿ ನಾನು' ಎಂಬ ಅವರು ಕಳೆದುಹೋಗಿರುತ್ತಾರೆ ಅಥವಾ ಅವರು ಅವರ ಬರವಣಿಗೆಯಲ್ಲಿ ಕಾಣುವ ಹನಿ ಹನಿಯಲ್ಲೂ ತಮ್ಮನ್ನು ಪ್ರೀತಿಯಿಂದ ಆಧ್ಯಾತ್ಮವಾಗಿರಿಸಿಕೊಂಡಿರುತ್ತಾರೆ. ಅವರ ಅವಧಿಯಲ್ಲಿನ 'ಅನಾತ್ಮ ಕಥನ' ಓದುತ್ತಿದ್ದಂತೆ ಅವರಲ್ಲಿ ತಾವು ಕಂಡಿದ್ದರಲ್ಲೆಲ್ಲಾ ಪ್ರೀತಿಯೇ ಆಗಿಬಿಡುವ ಮನೋಜ್ಞ ಸರಳತೆ ಆತ್ಮೀಯವಾಗಿ ಹಿಡಿದಿಟ್ಟುಕೊಳ್ಳುತ್ತದೆ. ಅವರನ್ನು ವಂಚಿಸಿದವರ ಕಥೆ ಹೇಳುವಾಗ ಕೂಡಾ ಅವರ ಬಗ್ಗೆ ಅವರಲ್ಲಿರುವುದು ಒಂದು ರೀತಿಯ 'ಪ್ರೀತಿಯೇ ಏನೋ' ಎಂಬ ಭಾವ ಹುಟ್ಟಿಸುತ್ತಾರೆ.

'ಸೌಗಂಧಿಕಾ'ದಲ್ಲಿ ದ್ರೌಪದಿಯ ಬಗೆಗಿನ ಪಕ್ಕ ನೋಡಿದರಲ್ಲಿ ಏನಿದೆ ಮಣ್ಣು, ಸಣ್ಣಗೆ ಕಣ್ಣು ಕೊಂಕಿಸಿ, ತೆರೆದ ಕಿಟಕಿಯ ಹೊರಗೆ ಆಚೆ ನೋಟ ಚಾಚಿದಳು' ಎಂಬ ಮಾತಿರಲಿ, ಸೋನಿ ಅಂದರೆ ಸೋನಿ, ಬೆಳದಿಂಗಳ ಬಟ್ಟಲ' ಎಂಬ ಪುಟ್ಟ ಮಕ್ಕಳ ಸೋನಿ ಪದ್ಯ'ವೇ ಇರಲಿ ಎಚ್ಚೆಸ್ವಿ ಅವರ ಕವಿತ್ವ ತನ್ನ ಚಿರಯೌವನವನ್ನು ಉಳಿಸಿಕೊಂಡು ಸಾಗಿದೆ. ಎಚ್ಚೆಸ್ವಿ ಬರವಣಿಗೆಗಳಲ್ಲಿ ಪಂಪ, ರನ್ನ, ಕುಮಾರ ವ್ಯಾಸರ ಹೆಜ್ಜೆಗುರುತುಗಳು ಪಡಿಮೂಡುವುದರ ಜತೆ ಜತೆಗೆ ಮಾಸ್ತಿ, ಬೇಂದ್ರೆಯವರ ಒಳದನಿ, ಅಡಿಗ, ಅನಂತಮೂರ್ತಿ, ಲಂಕೇಶರ ನವಪ್ರಜ್ಞೆಗಳ ಹೊಳಹುಗಳು ಕೂಡಾ ಮಿಂಚುತ್ತವೆ.

ತಮ್ಮ ಬರವಣಿಗೆಗಳೆಲ್ಲದರಲ್ಲಿ ಕನ್ನಡದ ಮೂಲತನವನ್ನು ಕಾಣಿಸಿಕೊಡುವ ಎಚ್ಚೆಸ್ವಿ ಅವರಿಗೆ ಇಂದಿನ ಕನ್ನಡ ಶಾಲೆಗಳ ಪರಿಸ್ಥಿತಿಯ ಬಗ್ಗೆ, ಮುಂದಿನ ಪೀಳಿಗೆಗಳು ತಮ್ಮ ಇತಿಹಾಸ ದಿಂದ ವಂಚಿತವಾಗುವ ಪರಿಸ್ಥಿತಿ ಏರ್ಪಾಡುತ್ತಿರುವ ಬಗೆಗೆ ಅತೀವ ಖೇದವಿದೆ. ಎಚ್ಚೆಸ್ವಿ ಅವರು ತಮ್ಮ ಪಾಂಡಿತ್ಯಪೂರ್ಣ ಬರವಣಿಗೆಗಳ ಪರಿಧಿಯಾಚೆಗೆ, ಸಾಮಾನ್ಯನಿಗೆ ಹತ್ತಿರವಾಗುವಂತೆ 'ಚಿನ್ನಾರಿ ಮುತ್ತ'ದಂತಹ ಸೊಗಸಾದ ಹಾಡುಗಳನ್ನು ಬರೆದಿದ್ದಾರೆ. 'ಇಷ್ಟು ಕಾಲ ಒಟ್ಟಿಗಿದ್ದು ಎಷ್ಟು ಬೆರೆತೆವು', 'ಲೋಕದ ಕಣ್ಣಿಗೆ ರಾಧೆಯು ಕೂಡಾ ಎಲ್ಲರಂತೇ ಒಂದು ಹೆಣ್ಣು' ಎಂಬಂತಹ ಭಾವಗೀತೆಗಳಲ್ಲಿ ಅತ್ಯಂತ ಆತ್ಮೀಯ ಭಾಷೆಯಲ್ಲಿ ಮಹತ್ತನ್ನು ಹೇಳುವ ಸೌಂದರ್ಯ ಕೂಡಾ ಮೇಳವಿಸಿದೆ. ತೀವ್ರವಾದ ಪಾರಂಪರಿಕತೆಯ ಆಳದ ಕಾವ್ಯ ವನ್ನು ಅವರು ಹೇಗೆ ಹೊಕ್ಕಬಲ್ಲರೋ ಅಂತೆಯೇ ಆಧುನಿಕ ಚಿತ್ರಣಗಳು ಕೂಡಾ ಅವರ ಕಾವ್ಯ ದಲ್ಲಿ ಪುಟಿ ಪುಟಿದು ಬರಬಲ್ಲವು. ಹಕ್ಕಿ ಪಕ್ಕಿ ಜೊತೆಗೆ ವೃತ್ತ ಪತ್ರಿಕೆ ನಡೆಸುತ್ತಿದ್ದರು. ಗುಡಿ ಗೋಪುರ ಕಾರ್ಖಾನೆಯ ಮುಡಿಗೆ ಎಂಬಂತಹ ನಿರೂಪಣೆ ಗಳಲ್ಲಿ ಹಾಡುವ ಹಕ್ಕಿಯ ಜೊತೆಗೆ, ದಿನಪತ್ರಿಕೆ, ದೇಗುಲ, ಗೋಪುರ, ಕಾರ್ಖಾನೆ ಗಳೆಲ್ಲವೂ ತಮ್ಮ ಪ್ರಾತಿನಿಧ್ಯವನ್ನು ಸಮರ್ಥವಾಗಿ ಚೆಲ್ಲಬಲ್ಲವು.

ಜಯಂತ್ ಕಾಯ್ಕಿಣಿ, ಟಿ.ಎನ್.ಸೀತಾರಾಮ್. ಟಿ.ಎಸ್.ನಾಗಾಭರಣ, ನಟ ಶ್ರೀಧರ್, ಪಿ.ಶೇಷಾದ್ರಿ, ಅವರು ಎಚ್.ಎಸ್. ವೆಂಕಟೇಶಮೂರ್ತಿ ಅವರ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದರು.

ಜನಮನ ಕದ್ದ ಎಚ್ಚೆಸ್ವಿ ಹೃದಯಂಗಮ ಹಾಡುಗಳು

ಎಚ್.ಎಸ್. ವೆಂಕಟೇಶಮೂರ್ತಿ ಅವರು ತಮ್ಮ ಅಗಾಧ, ಸತ್ವಯುತ ಸಾಹಿತ್ಯವನ್ನು ಕನ್ನಡದ ಪಾಲಿಗೆ ಉಳಿಸಿ ಹೋಗಿದ್ದಾರೆ. ಕನ್ನಡಕ್ಕೆ ಅವರು ನೀಡಿದ ಕೊಡುಗೆಗಳಲ್ಲಿ ನವ್ಯ ಕವಿತೆಗಳು ಇರುವಂತೆಯೇ ಸಾಕಷ್ಟು ಸಂಖ್ಯೆಯ ಭಾವಗೀತೆ ಗಳು, ಚಲನಚಿತ್ರ ಗೀತೆಗಳು ಇವೆ. ಎಚ್ಚೆಸ್ವಿ ಅವರ ನವ್ಯ ಕವಿತೆಗಳಿಗಿಂತ ಅವರ ಭಾವಗೀತೆ ಗಳು, ಸೀರಿಯಲ್ ಟೈಟಲ್ ಟ್ರ್ಯಾಕ್‌ಗಳು ಜನರ ಮನಸ್ಸನ್ನು ಸೆಳೆದಿವೆ ಎನ್ನಬಹುದು. ಇವರು ಬರೆದ ಸಾಕಷ್ಟು ಹಾಡುಗಳು ಕನ್ನಡ ಸಿನಿಮಾಗಳಲ್ಲಿ ಬಳಕೆಯಾಗಿವೆ. ಥಟ್ಟನೆ ನೆನಪಿಗೆ ಬರುವುದೆಂದರೆ ನಾಗಾಭರಣ ನಿರ್ದೇಶನದ ಚಿನ್ನಾರಿ ಮುತ್ತದ ಹಾಡುಗಳು. ಇದರ ಚಿತ್ರ ಕತೆ, ಸಂಭಾಷಣೆಯನ್ನು ಬರೆದವರೂ ಎಚ್.ಎಸ್.ವೆಂಕಟೇಶಮೂರ್ತಿ. ಚಿತ್ರದಲ್ಲಿದ್ದ ಅಷ್ಟು ಹಾಡುಗಳನ್ನೂ ಇವರೇ ಬರೆದಿದ್ದಾರೆ. ಇದಕ್ಕೆ ಸಿ.ಅಶ್ವಥ್ ಸಂಗೀತ ನೀಡಿ



ದ್ದರು. ಮುತ್ತ ಮುತ್ತ ಮುತ್ತ ಚಿನ್ನಾರಿ ಮುತ್ತ, ರೆಕ್ಕೆ ಇದ್ದರೆ ಸಾಕೇ ಹಕ್ಕಿಗೆ ಬೇಕು ಬಾನು, ಎಷ್ಟೊಂದ್ ಜನ ಇಲ್ಲಿ ಯಾರು ನಮ್ಮೋರು ಮುಂತಾದ ಹಾಡುಗಳು ಅತ್ಯಂತ ಜನಪ್ರಿಯವಾಗಿವೆ. ಇನ್ನು ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಕೊಟ್ರೇಶಿ ಕನಸು' ಚಿತ್ರದ ಎಲ್ಲ ಹಾಡು ಗಳನ್ನೂ ಎಚ್ಚೆಸ್ವಿ ಅವರೇ ಬರೆದಿದ್ದರು. ಸಿ.ಅಶ್ವತ್ಥ ಅವರೇ ಈ ಚಿತ್ರಕ್ಕೂ ಸಂಗೀತ ಕೊಟ್ಟಿದ್ದಾರೆ. ಇವೂ ಜನರಿಗೆ ಇಷ್ಟವಾಗಿದ್ದವು. ಅಮೆರಿಕಾ ಅಮೆರಿಕಾ ಚಿತ್ರದಲ್ಲಿರುವ 'ಬಾನಲ್ಲಿ ಓಡೋ ಮೇಘ' ಎಂಬ ಹಾಡನ್ನು ಎಚ್ಚೆಸ್ವಿ ಬರೆ ದಿದ್ದು, ರಮೇಶ್, ಹೇಮಾ ಪಂಚಮುಖಿ ಅಭಿನ ಯಿಸಿದ್ದರು. ನಂತರ ರಕ್ಷಿತ್ ಶೆಟ್ಟಿ ಅಭಿನಯದ ಕಿರಿಕ್ ಪಾರ್ಟಿ ಚಿತ್ರದಲ್ಲಿ ಅವರ ಒಂದು ಭಾವ ಗೀತೆಯನ್ನು ಬಳಸಿಕೊಳ್ಳಲಾಗಿತ್ತು. 'ತೂಗು ಮಂಚದಲ್ಲಿ ಕೂತು ಮೇಘ ಶ್ಯಾಮ ರಾಧೆಗಾತು' ಎಂಬ ಹಾಡು ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಸಂಗೀತ ದಲ್ಲಿ ಸಿನಿಮಾದಲ್ಲಿ ಬಂದ ಬಳಿಕ ಮತ್ತಷ್ಟು ಜನಪ್ರಿಯವಾಗಿತ್ತು. ಎಚ್ಚೆಸ್ವಿಯವರನ್ನು ಭಾವಗೀತೆಗಳ ಕವಿಯೆಂದೇ ಅನೇಕರು ಕರೆಯುತ್ತಾರೆ. ಕ್ಯಾಸೆಟ್‌ಗಳ ಕಾಲದಿಂದಲೂ ಅವರ ಹಾಡುಗಳು ಜನಪ್ರಿಯವಾಗಿವೆ. ಅಮ್ಮ ನಾನು ದೇವ ರಾಣೆ, ಲೋಕದ ಕಣ್ಣಿಗೆ ರಾಧೆಯು ಕೂಡ, ಹುಚ್ಚು ಖೋಡಿ ಮನಸು, ಇರಬೇಕು ಇರು ವಂತೆ ತೊರೆದು ಸಾವಿರ ಚಿಂತೆ, ನಂಬಬಹುದೇ ಗೆಳತಿ, ಇರುಳ ಸಮಯ ಸುರಿವ ಮಳೆಯೊಳಗೆ- ಮೊದಲಾದ ಹಾಡುಗಳನ್ನು ಎಲ್ಲ ಸುಗಮ ಸಂಗೀತಗಾರರು ಪ್ರೀತಿಯಿಂದ ಹಾಡುತ್ತಾ ಬಂದಿದ್ದಾರೆ. ಇವು ಇಲ್ಲದೆ ಯಾವುದೇ ಸುಗಮ ಸಂಗೀತ ಕಾರ್ಯ ಕ್ರಮವೇ ಇಲ್ಲ ಎಂಬಷ್ಟು ಇವು ಜನಪ್ರಿಯ ವಾಗಿವೆ. 'ಇರುಳ ವಿರುದ್ಧ ಬೆಳಕಿನ ಯುದ್ಧ, 'ದೂರದಿಂದಲೇ ಜೀವ ಹಿಂಡುತಿದೆ ಕಾಣ ದೊಂದು ಹಸ್ತ' 'ತನ್ನಾವರಣವೆ ಸೆರೆಮನೆ ಯಾದರೆ ಜೀವಕೆ ಎಲ್ಲಿಯ ಮುಕ್ತಿ' 'ಮುಕ್ತ ಮುಕ್ತ ಮುಕ್ತ ಮೊದಲಾದ ಕನ್ನಡ ಟಿವಿ ಧಾರಾವಾಹಿಗಳ ಟೈಟಲ್ ಟ್ರ್ಯಾಕ್‌ಗಳನ್ನೂ ಎಚ್ಚೆಸ್ವಿ ನೀಡಿದ್ದಾರೆ.

ತಾಪಿ ಪ್ರಮುಖ ಕಾದಂಬರಿ

ಪರಿವೃತ್ತ, ಬಾಗಿಲು ಬಡಿವ ಜನಗಳು, ಸೌಗಂಧಿಕ, ಮೂವತ್ತು ಮಳೆಗಾಲ ಪ್ರಮುಖವಾಗಿವೆ. ಅಮಾನುಷರು, ಕದಿರನ ಕೋಟೆ, ಅಗ್ನಿಮುಖಿ ಅವರ ಪ್ರಮುಖ ಕಾದಂಬರಿಗಳು. ತಾಪಿ ಇದು ಅವರ ಪ್ರಮುಖ ಕಾದಂಬರಿಗಳಲ್ಲಿ ಒಂದಾಗಿದೆ. ಸಿನಿಮಾ, ಕಿರುತರೆಗೆ ಬರೆದ ಹಾಡುಗಳು: ಚಿನ್ನಾರಿಮುತ್ತ, ಕೊಟ್ರೇಶಿಯ ಕನಸು, ಕ್ರೌರ್ಯ, ಮತದಾನ ಚಲನಚಿತ್ರಗಳಿಗೆ ಗೀತಸಾಹಿತ್ಯ, ಕೆಲವಕ್ಕೆ ಸಂಭಾಷಣೆಗಳನ್ನು ಬರೆದಿದ್ದಾರೆ.

ಸಾಹಿತ್ಯದತ್ತ ಹೊರಳಲು ಕಾರಣವೇನು?

ಪ್ರಾಧ್ಯಾಪಕರಾಗಿ ನಿವೃತ್ತಿ ಪಡೆದ ನಂತರವೂ ಎಚ್ಚೆಸ್ವಿ ಬರವಣಿಗೆಯಲ್ಲಿ ಸಕ್ರಿಯರಾಗಿದ್ದರು. ಬಾಲ್ಯದ ಯಕ್ಷಗಾನ, ಬಯಲಾಟಗಳು ಹಾಗೂ ಕುಮಾರವ್ಯಾಸ, ಪುರಂದರ, ಲಕ್ಷ್ಮೀಶರಂತಹ ಹಿರಿಯ ಕವಿಗಳ ಕೃತಿಗಳು ಅವರನ್ನು ಸಾಹಿತ್ಯದತ್ತ ಹೊರಳಲು ಪ್ರೇರೇಪಿಸಿದವು.ಕಾವ್ಯ, ನಾಟಕ, ಕಾದಂಬರಿ, ವಿಮರ್ಶೆ, ಮಕ್ಕಳ ಸಾಹಿತ್ಯ, ಗೀತರಚನೆ ಹೀಗೆ ವಿವಿಧ ಪ್ರಕಾರಗಳಲ್ಲಿ 100ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದರು.

ಕನ್ನಡದ ಸಾರಸ್ವತ ಲೋಕದ ಸುಪ್ರಸಿದ್ಧ ಕವಿಗಳಾದ ಎಚ್.ಎಸ್. ವೆಂಕಟೇಶ ಮೂರ್ತಿ ಅವರ ನಿಧನದ ವಾರ್ತೆ ಕೇಳಿ ಬಹಳ ದುಃಖವಾಯಿತು. ಅಕ್ಷರ ಜಗತ್ತಿಗೆ ಅನೇಕ ಕೊಡುಗೆ ನೀಡಿರುವ ಎಚ್ ಅವರ ಅಗಲಿಕೆ ಬಹುದೊಡ್ಡ ನಷ್ಟ.

ಎಚ್.ಡಿ.ಕುಮಾರಸ್ವಾಮಿ
ಕೇಂದ್ರ ಸಚಿವ

ತಮ್ಮ ಕಾವ್ಯದ ಮೂಲಕ ನಾಡನ್ನು ಚೇತನಗೊಳಿಸಿದ್ದ ಅವರು ಅಂತಃಕರಣದ ಕಡಲಿನಂತಿದ್ದರು. ಅವರ ಒಡನಾಟದ ಆಪ್ತತೆಯನ್ನು ಹಲವು ಕಾಲ ಪಡೆದಿದ್ದ ನನಗೆ ಖಾಲಿತನದ ಭಾವ ಕಾಡುತ್ತಿದೆ. ಎಚ್ಚೆಸ್ವಿ ಕಸಾಪ ಕುರಿತು ಅಪಾರ ವಿಶ್ವಾಸ ಇಟ್ಟುಕೊಂಡವರು.

ಡಾ.ಮಹೇಶ್ ಜೋಶಿ
ಅಧ್ಯಕ್ಷರು, ಕಸಾಪ

ಪ್ರೊ. ಎಚ್.ಎಸ್. ವೆಂಕಟೇಶಮೂರ್ತಿ ತಮ್ಮ ಸಾಹಿತ್ಯಿಕ ಕೃತಿಗಳ ಮೂಲಕ ಕನ್ನಡ ಭಾಷೆ ಹಾಗೂ ಸಂಸ್ಕೃತಿಗೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ನಿಧನದಿಂದ ನಮ್ಮ ಸಾಹಿತ್ಯ ವಲಯಕ್ಕೆ, ಚಿತ್ರರಂಗಕ್ಕೆ ತುಂಬಲಾರದ ನಷ್ಟ ಉಂಟಾಗಿದೆ .

ಎಂ.ಬಿ. ಪಾಟೀಲ್
ಕೈಗಾರಿಕೆ ಸಚಿವ

ಎಚ್.ಎಸ್. ವೆಂಕಟೇಶ ಮೂರ್ತಿ ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದ ಅವರು ತಮ್ಮ ಕವನಗಳ ಮೂಲಕ ನಾಡಿನ ಜನಮಾನಸದಲ್ಲಿ ಚಿರಸ್ಥಾಯಿಯಾಗಿದ್ದಾರೆ. ಅವರ ಅಗಲಿಕೆಯಿಂದ ಕನ್ನಡ ಸಾಹಿತ್ಯ ಲೋಕ ಬಡವಾದಂತಾಗಿದೆ.

ಬಸವರಾಜ ಬೊಮ್ಮಾಯಿ
ಸಂಸದ

ಕನ್ನಡ ಸಾರಸ್ವತ ಲೋಕಕ್ಕೆ ಎಚ್.ಎಸ್.ವೆಂಕಟೇಶ ಮೂರ್ತಿ ಅವರು ನೀಡಿರುವ ಕೊಡುಗೆಗಳು ಅತ್ಯಮೂಲ್ಯ. ಲೇಖಕ ರಾಗಿ, ಚಿಂತಕರಾಗಿ ಅವರು ನಮ್ಮ ಮನಸ್ಸಿನಲ್ಲಿ ಅನಂತವಾಗಿ ಉಳಿಯುತ್ತಾರೆ.

ಶಿವಾನಂದ ಪಾಟೀಲ
ಕೃಷಿ ಮಾರುಕಟ್ಟೆ ಸಚಿವ

ಕನ್ನಡ ಭಾವಗೀತೆಗಳ ಭವ್ಯ ಪರಂಪರೆಯ ಪ್ರತಿನಿಧಿ ಡಾ. ಎಚ್.ಎಸ್. ವೆಂಕಟೇಶ ಮೂರ್ತಿ ಅವರ ನಿಧನ ಕನ್ನಡ ಕಾವ್ಯ ಲೋಕಕ್ಕೆ ಅತಿ ದೊಡ್ಡ ಆಘಾತ ತಂದಿದೆ. ಎಚ್‌ಎಸ್‌ವಿ ಅವರ ನಿಧನದ ಸುದ್ದಿ ಬಂದ ಕೂಡಲೇ ದಿಗ್ಭ್ರಮೆ ಆಯಿತು.

ಶಿವರಾಜ್ ತಂಗಡಗಿ
ಕನ್ನಡ, ಸಂಸ್ಕೃತಿ ಇಲಾಖೆ ಸಚಿವ

ತೂಗುಮಂಚದ ಕವಿ

ಕನ್ನಡ ಜನಮಾನಸದ ಪ್ರಿಯ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅವರು ತೂಗುಮಂಚದಲ್ಲಿ ಕೂತು ಇವರ ಇತ್ತೀಚಿನ ಜನಪ್ರಿಯ ಗೀತೆಯಾಗಿದೆ. ಎಚ್ಚೆಸ್ವಿ ಅವರು ಪರಂಪರೆ ಹಾಗೂ ಆಧುನಿಕತೆಯೊಂದಿಗೆ ನಡೆಸಿದ ನಿರಂತರವಾದ ಅನುಸಂಧಾನದೊಂದಿಗೆ ಕನ್ನಡ ಕಾವ್ಯದಲ್ಲಿ ಚಿರಸ್ಥಾಯಿಯಾಗಿದ್ದಾರೆ. ಮೊದಲಿಗೆ ನವೋದಯ ಕಾವ್ಯ ಪರಂಪರೆಯಲ್ಲಿ ತಮ್ಮ ಕೃಷಿ ಆರಂಭಿ ಸಿದ ಅವರು ನಂತರ ಗೋಪಾಲಕೃಷ್ಣ ಅಡಿಗರ ಪ್ರಭಾವದಿಂದ ನವ್ಯ ಕಾವ್ಯದ ಹುದ್ದರಿಯಾದರು. ನವ್ಯದ ಕಾಲದ ಕಳೆದ ನಂತರ ಭಾವಗೀತೆಗಳ ಕೃಷಿ ಆರಂಭಿಸಿದರು. ಚಲನಚಿತ್ರಗಳು, ಟೆಲಿ ಸೀರಿಯಲ್‌ಗಳಿಗೆ ಗೀತೆಗಳನ್ನು ಬರೆದರು. ನಂತರ ಕುಮಾರವ್ಯಾಸ, ಪಂಪ, ಲಕ್ಷ್ಮೀಶ, ವಾಲ್ಮೀಕಿ ಮೊದಲಾದವರ ಕೃತಿಗಳನ್ನು ತಿಳಿಗನ್ನಡದಲ್ಲಿ ಕಾವ್ಯದಲ್ಲಿ ಬರೆಯುವ ಕೆಲಸ ಮಾಡಿ ಮೇಲ್ಪಂಕ್ತಿ ಹಾಕಿಕೊಟ್ಟರು.

ಪ್ರಶಸ್ತಿಗಳು

1977: ಸಿಂದಬಾದನ ಆತ್ಮಕಥೆ- ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ
1986: ಅಗ್ನಿಮುಖಿ - ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ
1988: ಋತುವಿಲಾಸ - ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪುರಸ್ಕಾರ
1990: ಎಷ್ಟೊಂದು ಮುಗಿಲು - ಬಿ. ಎಚ್. ಶ್ರೀಧರ ಪ್ರಶಸ್ತಿ
1993: ಒಂದು ಸೈನಿಕ ವೃತ್ತಾಂತ - ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ
1997: ಹೂವಿನ ಶಾಲೆ- ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ
2013: ಬಾಲ ಸಾಹಿತ್ಯ ಪುರಸ್ಕಾರ - ಕೇಂದ್ರ ಸಾಹಿತ್ಯ ಅಕಾಡೆಮಿ
2014: ಅನಕೃ ನಿರ್ಮಾಣ್ ಪ್ರಶಸ್ತಿ

ಮಕ್ಕಳಿಗಾಗಿ ಬರೆಯುವುದೆಂದರೆ

ಮಕ್ಕಳಿಗಾಗಿ ಬರೆಯುವುದೆಂದರೆ ಎಚ್ಚೆಸ್ವಿಗೆ ಮಹಾ ಪ್ರೀತಿ. ನನಗೆ ಮಕ್ಕಳ ಸಾಹಿತ್ಯ ತುಂಬಾ ಇಷ್ಟವಾದ ಸಾಹಿತ್ಯ ಪ್ರಕಾರ. ಯಾಕೆಂದರೆ ನನಗೆ ಮಕ್ಕಳೆಂದರೆ ಇಷ್ಟ. ಹಾಗಾಗಿ ಅವರಿಗೆ ಅಗತ್ಯವಾದ ಸಾಹಿತ್ಯವೂ ನನಗೆ ಇಷ್ಟ. ಹೀಗೆ ಅವರು ಮಕ್ಕಳಿಗೆ ಬರೆಯಲು ಕಾರಣವಿದೆ ಎಂದು ಎಚ್ಚೆಸ್ವಿ ನುಡಿದಿದ್ದರು. ನವೋದಯದ ಕಾಲದಲ್ಲಿ ಎಷ್ಟೊಂದು ಜನ ಮುಖ್ಯ ಕವಿಗಳು, ಸಾಹಿತಿಗಳು ಹಿರಿಯರಿಗೆ ಬರೆಯುವುದರೊಂದಿಗೆ ಮಕ್ಕಳಿಗಾಗಿಯೂ ಅವರು ಬರೆಯುತ್ತಿದ್ದರು. ಕುವೆಂಪು, ರಾಜರತ್ನಂ, ಪಂಜೆ ಮಂಗೇಶರಾಯರು, ಸಿದ್ದಯ್ಯ ಪುರಾಣಿಕ ಎಲ್ಲರೂ ಮಕ್ಕಳಿಗಾಗಿ ಬರೆಯುತ್ತಿದ್ದರು. ಈಗೀಗ ಮಕ್ಕಳಿಗೆ ಬರೆಯುವವರೇ ಇಲ್ಲವಾಗಿದೆ. ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಪರಂಪರೆ ಮುಗಿದೇ ಹೋಯಿತೇ? ಎಂದಿದ್ದರು. ಕುವೆಂಪು, ರಾಜರತ್ನಂ, ಪಂಜೆ ಮಂಗೇಶರಾಯರು, ಸಿದ್ದಯ್ಯ ಪುರಾಣಿಕ, ಎಲ್ ಗುಂಡಪ್ಪ, ಹೋಯಿಸಳ, ಮುಂತಾದ ಹಿರಿಯರೆಲ್ಲ, ನಾವು ಮಕ್ಕಳಾಗಿದ್ದಾಗ ಎಂತೆಂಥ ಪದ್ಯಗಳನ್ನು ನಮಗಾಗಿ ಬರೆದರು. ಪಂಜೆ ಅವರ ತೆಂಕಣ ಗಾಳಿಯಾಟ, ಕುವೆಂಪು ಅವರ ಕಿಂದರಜೋಗಿ ಜಿ.ಪಿ. ರಾಜರತ್ನಂ ಅವರ ಪದ್ಯಗಳು ನನ್ನನ್ನು ಮರಳು ಮಾಡಿದ್ದವು. ನಾವು ಆ ಪರಂಪರೆಯನ್ನು ಮುಂದುವರಿಸಲಿಲ್ಲವಲ್ಲ. ನಾನು ಇವತ್ತಿನ ಮಕ್ಕಳಿಗೆ ಓದಬಹುದಾದ, ರುಚಿಯಾದ ಪದ್ಯ-ಗದ್ಯ ಬರೆಯುವುದು ಬೇಡವೇ? ಈ ಪ್ರಶ್ನೆ ಕೇಳಿಕೊಂಡು ನಾನು ಮಕ್ಕಳಿಗಾಗಿ ಪದ್ಯ-ಗದ್ಯ ಬರೆಯ ತೊಡಗಿದೆ ಎಂದಿದ್ದರು ಎಚ್ಚೆಸ್ವಿ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಅಧಿಕಾರಿಗಳಿಗೆ ಸಿಎಂ ಕ್ಲಾಸ್

← ಮೊದಲಪುಟದಿಂದ

ಕೆರೆ ಒತ್ತುವರಿ ತೆರವುಗೊಳಿಸದಿದ್ದಕ್ಕೆ ಸಿಡಿಮಿಡಿ

ಒಂದೂ ಕೆರೆ ಒತ್ತುವರಿ ತೆರವುಗೊಳಿಸದ ಜಿಲ್ಲಾಧಿಕಾರಿ, ಸಿಇಓಗಳ ವಿರುದ್ಧ ಸೂಕ್ತ ಕ್ರಮಕ್ಕೆ ರಾಜ್ಯ ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಿದ ಸಿಎಂ, ಸಭೆಯ ವೇಳೆ ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಕೆರೆಗಳ ಒತ್ತುವರಿ ತೆರವುಗೊಳಿಸಲಾಗಿದೆ ಎನ್ನುವುದನ್ನು ಪರಿಶೀಲನೆ ನಡೆಸಿದರು. ಎರಡು ಮೂರು ಜಿಲ್ಲೆಗಳಲ್ಲಿ ಒಂದೂ ಕೆರೆ ಒತ್ತುವರಿ ತೆರವು ಮಾಡದಿರುವುದನ್ನು ಗಮನಿಸಿ ಗರಂ ಆದ ಮುಖ್ಯಮಂತ್ರಿಗಳು, ಆ ಬಗ್ಗೆ ವರದಿ ತರಿಸಿಕೊಂಡು ಅಗತ್ಯ ಕ್ರಮ ಕೈಗೊಳ್ಳುವಂತೆ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸಭೆಯಲ್ಲೇ ಸೂಚನೆ ನೀಡಿದರು.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡಿಸಿ, ಎಸಿ, ತಹಸೀಲ್ದಾರ್ ಕೋರ್ಟ್‌ಗಳಲ್ಲಿ ಬಾಕಿ ಕೇಸುಗಳು ಶೀಘ್ರ ವಿಲೇವಾರಿ ಆಗುತ್ತಿರುವುದಕ್ಕೆ ಮೆಚ್ಚುಗೆ ಸೂಚಿಸಿದ ಮುಖ್ಯಮಂತ್ರಿಗಳು ಬೆಂಗಳೂರು ಗ್ರಾಮಾಂತರ ಮತ್ತು ಎರಡು ಜಿಲ್ಲೆಗಳಲ್ಲಿ ಮಾತ್ರ ಡಿಸಿ ಮತ್ತು ಸಿಎಇ ಕೋರ್ಟ್‌ಗಳಲ್ಲಿ ಐದು ವರ್ಷಕ್ಕೂ ಹಳೆಯದಾದ ಪ್ರಕರಣಗಳು ಬಾಕಿ ಇರುವುದಕ್ಕೆ ಅಸಮಾಧಾನಗೊಂಡು, ತರಾಟೆಗೆ ತೆಗೆದುಕೊಂಡರು. ಜಸ್ಟೀಸ್ ಡಿಲೇಡ್ ಇಸ್ ಜಸ್ಟೀಸ್ ಡಿನೈಡ್ ಎನ್ನುವ ಮಾತನ್ನು ನೆನಪಿಡಿ. ಇದನ್ನು ಸಹಿಸಲು ಸಾಧ್ಯವಿಲ್ಲ. ಉಳಿದ ಜಿಲ್ಲೆಗಳಲ್ಲಿ ಪ್ರಗತಿ ಕಾಣುವಾಗ ಕೆಲವು ಮಾತ್ರ ಆಗುತ್ತಿಲ್ಲ ಎಂದರೆ ಸಹಿಸಲು ಸಾಧ್ಯವಿಲ್ಲ ಎಂದರಲ್ಲದೆ, ಈ ಬಗ್ಗೆ ನೋಟಿಸ್ ನೀಡಿ ಕ್ರಮ ಕೈಗೊಳ್ಳಿ ಎಂದು ಸರಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಿಎಂ ಸೂಚಿಸಿದರು. ಅಗತ್ಯವಿದ್ದರೆ ಹೇಳಿ ಹೆಚ್ಚುವರಿ ಡಿಸಿ, ಎಸಿಗಳನ್ನು ಕೊಡಬಹುದು ಎಂದರು.

ವಿಳಂಬ ಪ್ರವೃತ್ತಿ ಸಹಿಸಲು ಸಾಧ್ಯವಿಲ್ಲ :

ರಾಜ್ಯದಲ್ಲಿ 10,931 ಕೆರೆಗಳು ಒತ್ತುವರಿಯಾಗಿವೆ. ಇದುವರೆಗೆ 6,065 ಕೆರೆಗಳ ಒತ್ತುವರಿ ತೆರವು ಮಾಡಲಾಗಿದೆ. ಎಲ್ಲ ಕೆರೆಗಳ ಸಮೀಕ್ಷೆ ನಡೆಸಿ ಒತ್ತುವರಿ ತೆರವುಗೊಳಿಸಲು ಕಳೆದ ಸಭೆಯಲ್ಲಿ ತಿಳಿಸಿದ್ದರೂ ನಿರೀಕ್ಷಿತ ಪ್ರಗತಿಯಾಗಿಲ್ಲ. ಕೂಡಲೇ ಇದರ ಬಗ್ಗೆ ಗಮನಹರಿಸಿ, ಎಲ್ಲ ಕೆರೆಗಳ ಸಮೀಕ್ಷೆ ನಡೆಸಿ, ಒತ್ತುವರಿ ತೆರವುಗೊಳಿಸಿ, ಮಳೆ ನೀರು ಸರಾಗವಾಗಿ ಕೆರೆಗೆ ಹರಿದು ಬರುವಂತೆ ವ್ಯವಸ್ಥೆ ಮಾಡಬೇಕು.

ಕೆರೆಗಳ ಒತ್ತುವರಿ ವಿಷಯದಲ್ಲಿ ಸರಿಯಾಗಿ ಕಾರ್ಯನಿರ್ವಹಿಸದ ಜಿಲ್ಲಾಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು. ರಾಜ್ಯದಲ್ಲಿ ಈ ವರ್ಷ 1,395 ಪೋಕ್ಸೋ ಪ್ರಕರಣಗಳು ದಾಖಲಾಗಿವೆ. ಪೋಕ್ಸೋ ಪ್ರಕರಣಗಳಲ್ಲಿ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗುವಂತೆ ನೋಡಿಕೊಳ್ಳಬೇಕು.

ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಸರಿಯಾದ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಸಿಂಧುತ್ವ ಪ್ರಮಾಣ ಪತ್ರವನ್ನು ನಿಗದಿತವಾಗಿ ಒಂದು ತಿಂಗಳ ಒಳಗಾಗಿ ನೀಡಬೇಕಿದ್ದರೂ, ಅದನ್ನು ಕೆಲವು ಜಿಲ್ಲೆಗಳಲ್ಲಿ ತಿಂಗಳುಗಟ್ಟಲೇ ವಿಲೇವಾರಿ ಮಾಡದೆ ಸತಾಯಿಸುವ ಬಗ್ಗೆ ದೂರುಗಳು ಬರುತ್ತಿವೆ. ಅಂತಹ ವಿಳಂಬ ಪ್ರವೃತ್ತಿ ಸಹಿಸಲು ಸಾಧ್ಯವಿಲ್ಲ ಎಂದು ಎಚ್ಚರಿಸಿದ್ದಾರೆ.

ಅನರ್ಹ ಪಡಿತರ ಚೀಟಿಗಳು ಇನ್ನೂ ಹೇಗೆ ಉಳಿದುಕೊಂಡಿವೆ?:

ಅನರ್ಹ ಪಡಿತರ ಚೀಟಿಗಳನ್ನು ರದ್ದುಗೊಳಿಸಲು ಈಗಾಗಲೇ ಕಟ್ಟುನಿಟ್ಟಿನ ಸೂಚನೆ ನೀಡಲಾಗಿತ್ತು. ಆದರೆ ಇದರಲ್ಲಿ ನಿರೀಕ್ಷಿತ ಪ್ರಗತಿ ಯಾಕೆ ಸಾಧ್ಯವಾಗಿಲ್ಲ. ರಾಜ್ಯದಲ್ಲಿ ಸುಮಾರು ಶೇ.74ರಷ್ಟು ಬಿಪಿಎಲ್ ಕಾರ್ಡುಗಳಿದ್ದು, ಅನರ್ಹರನ್ನು ಗುರುತಿಸಿ ತೆಗೆದುಹಾಕುವ ಮೂಲಕ ಅರ್ಹರಿಗೆ ಸವಲತ್ತು ಒದಗಿಸುವ ಕಾರ್ಯ ನಡೆಯಬೇಕಿದೆ ಎಂದು ಸೂಚನೆ ನೀಡಿಯಾಗಿತ್ತು. ಆದರೂ ಇದರಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಪ್ರಗತಿ ಆಗಿಲ್ಲ ಏಕೆ ಎಂದು ಸಿಎಂ ಪ್ರಶ್ನಿಸಿದರು.

ಇಂದಿರಾ ಕ್ಯಾಂಟೀನ್ ಕಾರ್ಯ ಪೂರ್ಣಗೊಳಿಸಿ:

ನಮ್ಮ ಸರಕಾರ ಹೊಸದಾಗಿ ಘೋಷಣೆ ಮಾಡಿರುವ ಎಲ್ಲ ಇಂದಿರಾ ಕ್ಯಾಂಟೀನ್‌ಗಳು ಕಾರ್ಯಾರಂಭ ಮಾಡಲು ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಇಂದಿರಾ ಕ್ಯಾಂಟೀನ್‌ಗಳಿಗೆ ಇನ್ನೂ 5 ಕಡೆ ಸ್ಥಳ ಗುರುತಿಸಬೇಕಾಗಿದೆ. ತಕ್ಷಣ ನಿವೇಶನ ಗುರುತಿಸಬೇಕು. ಹೊಸದಾಗಿ ಘೋಷಣೆ ಮಾಡಲಾಗಿರುವ 186 ಇಂದಿರಾ ಕ್ಯಾಂಟೀನ್‌ಗಳ ಪೈಕಿ ಕೇವಲ 103 ನಿರ್ಮಾಣ ಕಾರ್ಯ ಪೂರ್ಣಗೊಂಡಿವೆ. ಆಹಾರ ವಿತರಣೆ 43 ಇಂದಿರಾ ಕ್ಯಾಂಟೀನ್‌ನಲ್ಲಿ ಮಾತ್ರ ಪ್ರಾರಂಭವಾಗಿದೆ. ಎಲ್ಲ ಕಡೆ ಆಹಾರ ವಿತರಣೆ ಪ್ರಾರಂಭಿಸಲು ಜಿಲ್ಲಾಧಿಕಾರಿಗಳು ಕ್ರಮಕೈಗೊಳ್ಳಬೇಕು ಎಂದು ಸಿಎಂ ಸೂಚಿಸಿದರು.

ಸರಿಯಾಗಿ 30 ನಿಮಿಷಕ್ಕೆ ಸಿಎಂ ಖಡಕ್ ಎಂಟ್ರಿ

ಡಿಸಿ ಮತ್ತು ಸಿಇಒ ಗಳ ಸಭೆಗೆ ಮಧ್ಯಾಹ್ನ ಊಟದ ಬಿಡುವು 30 ನಿಮಿಷ ನೀಡಲಾಗಿತ್ತು. ಅಧಿಕಾರಿ ವರ್ಗಕ್ಕೆ ಮತ್ತು ಸಚಿವರುಗಳಿಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಮುಖ್ಯಮಂತ್ರಿಗಳು ಊಟಕ್ಕೆಂದು ಮನೆಗೆ ತೆರಳಿದರು. ಸಿಎಂ ಮನೆಗೆ ಹೋಗಿದ್ದರಿಂದ ಅವರು ಊಟ ಮುಗಿಸಿ ಬರುವುದು ಲೇಟಾಗಬಹುದು ಎಂದು ಅಧಿಕಾರಿಗಳು ರಿಲಾಕ್ಸ್ ಮೂಡ್‌ನಲ್ಲಿ ಊಟ ಮಾಡುತ್ತಿದ್ದರು. ಆದರೆ, ಮುಖ್ಯಮಂತ್ರಿಗಳು ಊಟ ಮುಗಿಸಿ ಸರಿಯಾಗಿ 30 ನಿಮಿಷಕ್ಕೆ ಸಮ್ಮೇಳನ ಸಭಾಂಗಣಕ್ಕೆ ಬಂದರು. ಈ ವೇಳೆ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಮುಖ್ಯಮಂತ್ರಿಗಳನ್ನು ಬರಮಾಡಿಕೊಂಡು, 'ಸರ್ ಅಧಿಕಾರಿಗಳು ಇನ್ನೂ ಊಟಕ್ಕೆ ಹೋಗಿದ್ದಾರೆ ಸರ್, ಬರುತ್ತಾರೆ' ಎಂದರು. ಮುಖ್ಯಮಂತ್ರಿಗಳು ಸರಿಯಾದ ಸಮಯಕ್ಕೆ ಬಂದ ಸುದ್ದಿ ಕೇಳಿ ಬ್ಯಾಂಕ್ವೆಂಟ್ ಹಾಲ್‌ನಲ್ಲಿದ್ದ ಅಧಿಕಾರಿಗಳು, ಸಚಿವರು ತಡಬಡಾಯಿಸಿ ದೌಡಾಯಿಸಿದರು. ಊಟಕ್ಕೆ ಬಿಡುವು ಕೊಡುವಾಗಲೇ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು 45 ನಿಮಿಷ ಬಿಡುವು ಕೊಡೋಣ ಎಂದಿದ್ದರು. ಮುಖ್ಯಮಂತ್ರಿಗಳು ಅರ್ಧ ಗಂಟೆ ಸಾಕು ಎಂದು ಹೇಳಿದ್ದರು. ತಮ್ಮ ಸೂಚನೆಯಂತೆ ಮುಖ್ಯಮಂತ್ರಿಗಳು ಸರಿಯಾಗಿ 30 ನಿಮಿಷಕ್ಕೆ ಬಂದಿದ್ದು ಅಧಿಕಾರಿಗಳು, ಸಚಿವರನ್ನು ಕಕ್ಕಾಬಿಕ್ಕಿಯಾಗಿಸಿತು.

ಪ್ರತ್ಯೇಕ ಅಪಘಾತ: ಐವರು ಸಾವು

ಧಾರವಾಡ/ಶಿವಮೊಗ್ಗ: ನಿಂತಿದ್ದ ಲಾರಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಮೂವರು ಸಾವನ್ನಪ್ಪಿದ ಘಟನೆ ಧಾರವಾಡ ಜಿಲ್ಲೆಯ ಅಣ್ಣಿಗೇರಿ ಬಳಿಯ ರಾಷ್ಟ್ರೀಯ ಹೆದ್ದಾರಿಯ ಭದ್ರಾಪುರ ಗ್ರಾಮದ ಬಳಿ ನಡೆದಿದೆ.

ಅಪಘಾತದಲ್ಲಿ ಸಾವನ್ನಪ್ಪಿದ ಮೂವರನ್ನು ಮದನ್, ಸುರೇಶ್, ಹಾಗೂ ಎಲ್.ಎನ್ ವೇಣುಗೋಪಾಲ್ ಎಂದು ಗುರುತಿಸಲಾಗಿದೆ. ಮೂವರು ಗದಗ ಜಿಲ್ಲೆಯ ಮುಂಡರಗಿಯಿಂದ ಬೆಂಗಳೂರು ಕಡೆಗೆ ಹೊರಟಾಗ ಈ ಘಟನೆ ಸಂಭವಿಸಿದೆ. ಗದಗ ಮುಂಡರಗಿಯಲ್ಲಿ ತೋಟ ಖರೀದಿ ಮಾಡಲು ಮೂವರು ಕಾರಿನಲ್ಲಿ ತೆರಳಿದ್ದರು. ತೋಟ ನೋಡಿಕೊಂಡು ಮರಳಿ ಬೆಂಗಳೂರಿಗೆ ಹೋಗುವಾಗ ಈ ಘಟನೆ ನಡೆದಿದೆ. ಅಣ್ಣಿಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅದೇ ರೀತಿ ಎರಡು ಕಾರುಗಳ ನಡುವೆ ಮುಖಾಮುಖಿ ಡಿಕ್ಕಿಯಾಗಿ ಇಬ್ಬರು ಅಸುನೀಗಿರುವ ಘಟನೆ ಹಾಸನ ಜಿಲ್ಲೆಯ ಸವಳಂಗ ಶಿಕಾರಿಪುರ ರಸ್ತೆಯಲ್ಲಿ ಗುರುವಾರ ತಡರಾತ್ರಿ ಸಂಭವಿಸಿದೆ. ಶಿಕಾರಿಪುರ ನಗರದ ರುದ್ರಮ್ಮ(79) ಹಾಗೂ ಶಿವಮೊಗ್ಗದ ಅನ್ವರ್ ಅಹ್ಮದ್ ಎಂಬ ಇಬ್ಬರು ಸಾವನ್ನಪ್ಪಿದ್ದಾರೆ. ರುದ್ರಮ್ಮ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಶಿಕಾರಿಪುರಕ್ಕೆ ವಾಪಸ್ ಬರುವಾಗ ಅಪಘಾತ ಸಂಭವಿಸಿದೆ.

ಕಾವ್ಯ ತಪಸ್ವಿ ಎಚ್ಚೆಸ್ವಿ ಅಸ್ತಂಗತ

← ಮೊದಲಪುಟದಿಂದ

ಪ್ರಾರಂಭದಲ್ಲಿ ಯಕ್ಷಗಾನ, ಬಯಲಾಟದಂಥ ರಂಗಪ್ರದರ್ಶನಗಳು ಇವರ ಮೇಲೆ ಗಾಢ ಪ್ರಭಾವ ಬೀರಿದವು. ಬಾಲ್ಯದಲ್ಲೇ 'ಕುಮಾರವ್ಯಾಸ', 'ಪುರಂದರ, ಲಕ್ಷ್ಮೀಶ' ಮೊದಲಾದವರ ಕೃತಿಗಳ ನಿಕಟ ಸಂಪರ್ಕ ದೊರೆಯಿತು. ಕನ್ನಡ, ಸಂಸ್ಕೃತ, ಇಂಗ್ಲಿಷ್ ಸಾಹಿತ್ಯ ಪರಂಪರೆಯೊಂದಿಗೆ ನಡೆಸಲಾದ ನಿರಂತರವಾದ ಅನುಸಂಧಾನ ಎಚ್ಚೆಸ್ವಿ ಅವರ ಭಾವಕೋಶ ಮತ್ತು ಕಾವ್ಯವ್ಯಕ್ತಿತ್ವವನ್ನು ನಿರ್ಮಿಸಲು ಕಾರಣವಾದವು. ಹಾಗಾಗಿ ಇವರ ಬರವಣಿಗೆಯಲ್ಲಿ ಕಾಣುವ ಆಧುನಿಕತೆಯು ಪರಂಪರೆಯೊಂದಿಗೆ ನಡೆಸಿದ ನಿರಂತರ ಹೊಕ್ಕಾಟ ಮತ್ತು ಸಂಘರ್ಷದ ಫಲವಾಗಿ ನಿಷ್ಪನ್ನವಾದಂಥದ್ದು. ಸಮಕಾಲೀನ ಸಂದರ್ಭದ ಮಹತ್ವದ ಕವಿ ಮತ್ತು ಪ್ರಯೋಗಶೀಲ ನಾಟಕಕಾರ ಎಂದು ಗುರುತಿಸಲ್ಪಟ್ಟಿರುವ ವೆಂಕಟೇಶಮೂರ್ತಿ, ಮಕ್ಕಳಿಗಾಗಿ ಕವಿತೆ ನಾಟಕ ಕಥೆಗಳನ್ನೂ ಬರೆದಿದ್ದಾರೆ. ಇವರು ಅನುವಾದಿಸಿದ 'ಕಾಳಿದಾಸನ ಋತುಸಂಹಾರ ಕಾವ್ಯಕೃತಿ' ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪುರಸ್ಕಾರ ಪಡೆದಿದೆ.

'ಕ್ರಿಯಾಪರ್ವ', 'ಒಣಮರದ ಗಿಳಿಗಳು', 'ಎಷ್ಟೊಂದು ಮುಗಿಲು', 'ಅಮೆರಿಕಾದಲ್ಲಿ ಬಿಲ್ಲುಹಬ್ಬ', 'ನದಿ ತೀರದಲ್ಲಿ', 'ಉತ್ತರಾಯಣ', 'ಕನ್ನಡಿಯ ಸೂರ್ಯ', 'ವೈದೇಹಿ ಮತ್ತು ಇತರ ಕವನಗಳು' ಎಚ್‌ಎಸ್‌ವಿ ಅವರ ಮುಖ್ಯ ಕಾವ್ಯಕೃತಿಗಳಾಗಿವೆ. 'ಅಗ್ನಿವರ್ಣ', 'ಚಿತ್ರಪಟ', 'ಉರಿಯ ಉಯ್ಯಾಲೆ', 'ಮಂಥರೆ' ಮೊದಲಾದವು ಮುಖ್ಯ ನಾಟಕಗಳಾಗಿವೆ. 'ಅಳಿಲು ರಾಮಾಯಣ', 'ಹಕ್ಕಿಸಾಲು', 'ಚಿನ್ನಾರಿಮುತ್ತ', 'ಅಜ್ಜಿ ಕತೆ ಹೇಳು' ಮುಖ್ಯ ಮಕ್ಕಳ ಕೃತಿಗಳನ್ನು ರಚಿಸಿದ್ದಾರೆ. ಈ ಮೂಲಕ ಇವರ ವೈಚಾರಿಕ ಪ್ರಬಂಧಗಳ ಸಂಪುಟ, 'ಅನಾತ್ಮಕಥನ', 'ಅಕ್ಕಚ್ಚುವಿನ ಅರಣ್ಯಪರ್ವ', ಆತ್ಮಕಥನಾತ್ಮಕ ಪ್ರಬಂಧಗಳನ್ನು ಬರೆದಿದ್ದಾರೆ. ಐದು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಆಕಾಶವಾಣಿ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದ ಕೆಲವು ಮುಖ್ಯ ಗೌರವ ಪುರಸ್ಕಾರಗಳು ಲಭಿಸಿವೆ.

ಕವನ ಸಂಕಲನಗಳು:

'ಪರಿವೃತ್ತ', 'ಬಾಗಿಲು ಬಡಿವ ಜನ', 'ಮೊಖ್ತಾ', 'ಸಿಂದಾಬಾದನ ಆತ್ಮಕಥೆ', 'ಕ್ರಿಯಾಪರ್ವ', 'ಒಣಮರದ ಗಿಳಿಗಳು', 'ಸೌಗಂಧಿಕ', 'ಇಂದುಮುಖಿ', 'ವಿಸರ್ಗ', 'ಎಲೆಗಳು ನೂರಾರು', 'ಅಗ್ನಿಸ್ತಂಭ', 'ಎಷ್ಟೊಂದು ಮುಗಿಲು', 'ಅಮೆರಿಕದಲ್ಲಿ ಬಿಲ್ಲುಹಬ್ಬ', 'ವಿಮುಕ್ತಿ', 'ಭೂಮಿಯೂ ಒಂದು ಆಕಾಶ', 'ಮೂವತ್ತು ಮಳೆಗಾಲ', 'ನದಿ ತೀರದಲ್ಲಿ', 'ಉತ್ತರಾಯಣ ಮತ್ತು ರಾಮಕೃಷ್ಣ ಮನೆಗೆ ಬಂದರೆ' (ಆಯ್ದ ಪದಗಳು), 'ಕನ್ನಡಿಯ ಸೂರ್ಯ', 'ವೈದೇಹಿ ಮತ್ತು ಇತರ ಕವನಗಳು', 'ಶಂಖದೊಳಗಿನ ಮೌನ', 'ಶಫೀಲ್ಡ್ ಕವಿತೆಗಳು', 'ಆಕಾಶ ಸೇತುವೆ' (ಅನುವಾದಿತ), 'ಆಯ್ದ ಕವಿತೆಗಳು', ಎಚ್ಚೆಸ್ವಿ ಸಮಗ್ರ ಕವಿತೆಗಳು' ಇತ್ಯಾದಿ.

ಕವಿತೆ, ನಾಟಕ, ಮಕ್ಕಳ ಸಾಹಿತ್ಯ, ಅನುವಾದ, ಪ್ರಬಂಧ, ಕಾದಂಬರಿ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತೊಡಗಿಸಿಕೊಂಡು, ಅಪಾರ ಓದುಗ ಬಳಗ ಹೊಂದಿದ್ದ ವಿಶಿಷ್ಟ ಬರಹಗಾರ ವೆಂಕಟೇಶ ಮೂರ್ತಿಯವರ ಅಗಲಿಕೆಯಿಂದ ಸಾರಸ್ವತ ಲೋಕ ಬಡವಾಗಿದೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲೆಂದು ಪ್ರಾರ್ಥಿಸುತ್ತೇನೆ.

– ಸಿದ್ದರಾಮಯ್ಯ, ಮುಖ್ಯಮಂತ್ರಿ

ಕನ್ನಡದಲ್ಲಿ ಕಾದಂಬರಿ, ಕತೆ, ವಿಮರ್ಶೆ, ಕವನ, ಮಕ್ಕಳ ಸಾಹಿತ್ಯ, ಸಿನಿಮಾ ಸಾಹಿತ್ಯ, ರಂಗಭೂಮಿ ಹೀಗೆ ಎಲ್ಲ ಸಾಹಿತ್ಯ ಪ್ರಕಾರಗಳಲ್ಲೂ ಎಚ್ಚೆಸ್ವಿ ತಮ್ಮ ಪ್ರತಿಭೆ ಪ್ರದರ್ಶಿಸಿದ್ದರು. ಮೃತರ ಆತ್ಮಕ್ಕೆ ಸದ್ಗತಿ ದೊರಕಲಿ. ಅವರ ಅಪಾರ ಅಭಿಮಾನಿ ವರ್ಗಕ್ಕೆ, ಕುಟುಂಬಕ್ಕೆ, ಆಪ್ತರಿಗೆ ಈ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ.

–ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಚಿತ್ರರಂಗಕ್ಕೂ ಎಚ್ಚೆಸ್ವಿ ಕೊಡುಗೆ ಅಪಾರ

ರಾಷ್ಟ್ರಪ್ರಶಸ್ತಿ ವಿಜೇತ ಚಿತ್ರ 'ಚಿನ್ನಾರಿ ಮುತ್ತ'ಗೆ ಕವಿ ಎಚ್.ಎಸ್.ವೆಂಕಟೇಶ ಮೂರ್ತಿ ಅವರು ಕಥೆ, ಸಂಭಾಷಣೆ ಹಾಗೂ ಎಲ್ಲ ಹಾಡುಗಳನ್ನು ಬರೆದಿದ್ದರು. 'ಅಮೆರಿಕ ಅಮೆರಿಕ' ಚಿತ್ರದ 'ಬಾನಲ್ಲಿ ಓಡೋ ಮೋಡ' ಹಾಡು ಇವರ ಬರಹದಲ್ಲೇ ಮೂಡಿ ಬಂದಿದೆ. ಪುನೀತ್ ನಟನೆಯ 'ಮೈತ್ರಿ' ಚಿತ್ರಕ್ಕೆ ಹಾಡು ಬರೆದಿದ್ದರು. ಕಿರಿಕ್ ಪಾರ್ಟಿ ಚಿತ್ರದಲ್ಲಿ ಬಳಕೆ ಆದ 'ತೂಗು ಮಂಚದಲ್ಲಿ ಕೂತು' ಇವರು ಬರೆದ ಹಾಡು. ಮಕ್ಕಳು, ಯುವಕರು ಮತ್ತು ಮಹಿಳೆಯರಿಗೆ ಬೇಕಾದ ಗೀತೆಗಳನ್ನು ರಚಿಸಿ, ಕವಿಯಾಗಿ ಗುರುತಿಸಿಕೊಂಡಿದ್ದಾರೆ. ಧಾರಾವಾಹಿಯ ಟೈಟಲ್ ಸಾಂಗ್ ಸಾಕಷ್ಟು ಜನಪ್ರಿಯತೆ ಪಡೆದಿದೆ. ಇದನ್ನು ವೆಂಕಟೇಶಮೂರ್ತಿ ಅವರೇ ರಚಿಸಿದ್ದಾರೆ.

ಪತ್ನಿಯ ಕಾಟಕ್ಕೆ ಬೇಸತ್ತು ಪತಿ ಸುನೀಲ್ ಆತ್ಮಹತ್ಯೆ

ಬೆಳಗಾವಿ: ಮದುವೆಯಾಗಿ ಸಂಸಾರ ನಡೆಸಬೇಕಿದ್ದ ಹೆಂಡತಿಯ ಕಾಟಕ್ಕೆ ಪತಿರಾಯೊಬ್ಬ ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಬೆಳಗಾವಿಯ ಅನಗೋಳದ ಶಿವ ಶಕ್ತಿ ಕಾಲೋನಿಯಲ್ಲಿ ಶುಕ್ರವಾರ ನಡೆದಿದೆ. ಸುನೀಲ್ ಮೂಲಿಮನಿ (33) ಆತ್ಮ ಹತ್ಯೆ ಮಾಡಿಕೊಂಡ ಪತಿ. ಮೈ ವೈಫ್ ಇಸ್ ರೀಸನ್ ಫಾರ್ ಮೈ ಸೂಸೈಡ್ ಎಂದು ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿ ಕೊಂಡಿದ್ದಾನೆ. ಸುನೀಲ್ ಮೂಲಿಮನಿ ಬೆಳಗಾವಿಯ ಅನಗೋಳದ ಶ್ರೀರಾಮ ಕಾಲೋನಿ ನಿವಾಸಿಯಾಗಿದ್ದ ಆತ, ಪತ್ನಿ – ಪುತ್ರಿ ಜತೆಗೆ ಪ್ರತ್ಯೇಕವಾಗಿ ವಾಸವಿದ್ದು, ಕಂಪ್ಯೂಟರ್ ರಿಪೇರಿ ಕೆಲಸ ಮಾಡು ತ್ತಿದ್ದ. ಶಿವಶಕ್ತಿ ನಗರದ ಬಾಡಿಗೆ ಅಂಗಡಿ ಪಡೆದು ಕಂಪ್ಯೂಟರ್ ರಿಪೇರಿ ಮಾಡುತ್ತಿದ್ದ ಸುನೀಲ್ ತನ್ನ ಅಂಗಡಿಯಲ್ಲೇ ವೈರ್‌ನಿಂದ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಬೆಳಗಾವಿಯ ಉದ್ಯಮಭಾಗ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕ ಸರ್ಕಾರ
ಆಡಳಿತ ವೈದ್ಯಾಧಿಕಾರಿಗಳ ಕಛೇರಿ
ಸಾರ್ವಜನಿಕ ಆಸ್ಪತ್ರೆ ನಂಜನಗೂಡು ಮೈಸೂರು ಜಿಲ್ಲೆ.–571301
ದೂ.ಸಂ.: 08221–295156. ಇಮೇಲ್: ghngud@gmail.com
ಸಂಖ್ಯೆ: ಸಾ.ಆ.ನಂ/ಟೆಂಡರ್/01/2024–25 ದಿನಾಂಕ: 27.05.2025

ಟೆಂಡರ್ ಅಧಿಸೂಚನೆ

2025–26ನೇ ಸಾಲಿಗೆ ಈ ಆಸ್ಪತ್ರೆಗೆ ಹೊರಗುತ್ತಿಗೆ ಗ್ರೂಪ್–ಡಿ ಹಾಗೂ ಅರೆ ವೈದ್ಯಕೀಯ ಹಾಗೂ ಸ್ವಚ್ಛತಾ ಕರ್ಮಚಾರಿ (ನಾನ್–ಕ್ಲಿನಿಕಲ್) ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999/2000 ರಂತೆ ವಿದ್ಯುನ್ಮಾನ ವೇದಿಕೆ ಮೂಲಕ https://kppp.karnataka.gov.inನಲ್ಲಿ ದ್ವಿ–ಲಕೋಟೆ ಪದ್ಧತಿ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣ ವಿಳಾಸದೊಂದಿಗೆ ವಿದ್ಯುನ್ಮಾನ ವೇದಿಕೆ ಮೂಲಕ ಇಚ್ಛೆಯುಳ್ಳ ಟೆಂಡರ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. 1) ಟೆಂಡರ್ ಮೌಲ್ಯ ಅಂದಾಜು ರೂ.57,93,406=90 2) ಇ.ಎಂ.ಡಿ ಮೊತ್ತ ರೂ.1,44,835=00 3) ಟೆಂಡರ್‌ನಲ್ಲಿ ಅಪ್‌ಲೋಡ್ ಮಾಡುವ ದಿ: 27.06.2025 ಸಂಜೆ:05:00ರವರೆಗೆ 4) ತಾಂತ್ರಿಕ ದಾಖಲೆಗಳನ್ನು ತೆರೆಯುವ ದಿ: 30.06.2025 ಸಂಜೆ:05:00 5) ಆರ್ಥಿಕ ಲಕೋಟೆ ತೆರೆಯುವ ದಿ: 07.07.2025 ಅಥವಾ ನಂತರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಟೆಂಡರ್ ತೆರೆಯುವ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನವನ್ನು ಕೊನೆಯ ದಿನಾಂಕವೆಂದು ಪರಿಗಣಿಸಲಾಗುವುದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ. ಟೆಂಡರ್ ಅನುಮೋದನಾ ಸಮಿತಿ ಅದ್ಯಕ್ಷರು:– ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ, ಮೈಸೂರು. ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗೆ ಈ ಕಛೇರಿಯ ಸಂಪರ್ಕದ ವಿಳಾಸದ ಮುಖಾಂತರ ಪಡೆದುಕೊಳ್ಳುವಂತೆ ತಿಳಿಸಿದೆ.

DIPR/DDMYS/272/KSMCA/225/2025-26 ಸಹಿ/– ಆಡಳಿತ ವೈದ್ಯಾಧಿಕಾರಿಗಳು

ಶಿವಮೊಗ್ಗ–ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ.
ವಾಣಿಜ್ಯ ಸಂಕೀರ್ಣ, 100 ಅಡಿ ರಸ್ತೆ, ವಿನೋಬನಗರ, ಶಿವಮೊಗ್ಗ–577204.
Ph: 08182-249867, 249280
ವೆಬ್‌ಸೈಟ್ : www.shivamogga.uda.gov.in
ನಂ.ಶಿಭನಪ್ರಾ/ತಾಂ.ಶಾ/ಟೆಂಡರ್/06/2025–26 ದಿನಾಂಕ:30–05–2025

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಸಿ–8 ರ ಕಲಂಗಳ ಷರತ್ತಿನನ್ವಯ ಪಿ.ಎಂ.ಸಿ ಮತ್ತು ಮೂರನೇ ವ್ಯಕ್ತಿ ತಪಾಸಣಾ ಸಂಸ್ಥೆ ಎಂದು ನೊಂದಾಯಿತರಾಗಿರುವ ಹಾಗೂ ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಸಂಸ್ಥೆಗಳಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಈ ಕೆಳಗಡೆ ಸಹಿಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಸಂಸ್ಥೆಯವರು ಕೆಪಿಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಈ ಕೆಳಕಂಡ ಸೇವಾ ಟೆಂಡರ್‌ಗಾಗಿ ಭಾಗವಹಿಸಬಹುದು. ಭಾಗವಹಿಸುವ ಸಂಸ್ಥೆಯವರಿಗೆ ಅರ್ಹತಾ ವಿವರಗಳನ್ನು ಹಾಗೂ ವೇಳಾಪಟ್ಟಿಯನ್ನು KPPP ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. KPPP ಪೋರ್ಟಲ್‌ಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಹೆಲ್ಪ್ ಡೆಸ್ಕ್ ನಂ.080–8046010000 & 80689487775 ನ್ನು ಸಂಪರ್ಕಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಚೇರಿ ಕೆಲಸದ ದಿನದಂದು ಸಂಜೆ 3–30 ರಿಂದ 5–30 ರ ವೇಳೆಯಲ್ಲಿ ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– (ವಿಶ್ವನಾಥ ಪಿ ಮುದಜ್ಜಿ) ಆಯುಕ್ತರು, ಸಹಿ/– (ಹೆಚ್.ಎಸ್.ಸುಂದರೇಶ್ ಬಿ.ಇ) ಅಧ್ಯಕ್ಷರು
ಶಿವಮೊಗ್ಗ–ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/177/05/343

ಕರ್ನಾಟಕ ಸರ್ಕಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ,
ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು – 560024.
ಇ–ಮೇಲ್: commissionerahvs@gmail.com ಫೋನ್: 080–23412767
ಸಂಖ್ಯೆ: ಆಪಸಂ/ವಿಎಂಎಸ್/ವಿವ– 11/ಔ.ರಾ.ಜಂ.ಫೀ/ಮರು ಟೆಂಡರ್/2025–26 ದಿನಾಂಕ : 30.05.2025

ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

2025–26 ನೇ ಸಾಲಿನಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪಶುವೈದ್ಯಕೀಯ ಸಂಸ್ಥೆಗಳಿಗೆ ಅವಶ್ಯವಿರುವ ಔಷಧಿ ರಾಸಾಯನಿಕ ಮತ್ತು ಫೀಡ್ ಸಪ್ಲಿಮೆಂಟ್ ಗಳನ್ನು ಸರಬರಾಜು ಮಾಡಲು ಅಲ್ಪಾವದಿ ಮರು ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಸಂಬಂಧ ಟೆಂಡರ್ ಕೆಪಿಪಿ ಪೋರ್ಟಲ್‌ನ ಮೂಲಕ ಒಂದು ವರ್ಷದ ಅವಧಿಗೆ ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್‌ಗೆ ನಿಗದಿಪಡಿದ ಮೊತ್ತ ರೂ. 484.95 ಲಕ್ಷಗಳು.
ಪೂರ್ಣ ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ ಅಂತರ್ಜಾಲ htpp//kpp.karnataka.gov.in ವಿಳಾಸದಲ್ಲಿ ದಿನಾಂಕ:30.05.2025 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ:30.05.2025 ರಿಂದ 09.06.2025 ರವರೆಗೆ 17.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.
ಹೆಚ್ಚಿನ ವಿವರಗಳಿಗಾಗಿ ಕೆಪಿಪಿ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಉಪನಿರ್ದೇಶಕರು ಪಶುವೈದ್ಯಕೀಯ ಔಷಧಿ ಭಂಡಾರ,
ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
DIPR/CP/927/Zen/2025-26

ಕರ್ನಾಟಕ ಸರ್ಕಾರ
ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ,
ಉಪವಿಭಾಗ ಆಸ್ಪತ್ರೆ, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ.
ದೂರವಾಣಿ ಸಂಖ್ಯೆ:08224–200393 ಇಮ್ಮೇಲ್:kglgovthospital@gmail.com
ಸಂಖ್ಯೆ:ಉವಿಆಕೊ/ಪಥ್ಯಾಹಾರ/ಟೆಂಡರ್//01/2025–26 E-OFFICE No.:26555 ದಿ: 28–05–2025

-: ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ :-

2025–26ನೇ ಸಾಲಿನ ಉಪವಿಭಾಗ ಆಸ್ಪತ್ರೆ, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ ಇಲ್ಲಿನ ಒಳರೋಗಿಗಳಿಗೆ ದ್ದಪಡಿಸಿದ ಪಥ್ಯಾಹಾರ (2 ಹೊತ್ತಿನ ಊಟ), ಕಾಯಿಸಿದ ಟೀ/ಕಾಫಿ, ಬೇಯಿಸಿದ ಕೋಳಿಮೊಟ್ಟೆ, ಬಾಳೆಹಣ್ಣು ಹಾಗೂ ಉತ್ತಮ ದರ್ಜೆಯ ಬ್ರೆಡ್ ಪದಾರ್ಥಗಳನ್ನು ಸರಬರಾಜು ಮಾಡಲು ಕೆಪಿಪಿಪಿ ಪ್ಲಾಟ್‌ಫಾರ್ಮ್‌ನಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕದಿಂದ 31–03–2026 ರ ವರೆಗೆ ಮಾತ್ರ ಇರುತ್ತದೆ. ಒಟ್ಟು ಟೆಂಡರಿನ ಅಂದಾಜು ಮೌಲ್ಯ ವರ್ಷಕ್ಕೆ ರೂ.49,80,000/- ಟೆಂಡರು ವಿವರಗಳ ಈ ಕೆಳಗಿನಂತಿರುತ್ತದೆ. ದ್ವಿ–ಲಕೋಟೆ ಪದ್ಧತಿಯಲ್ಲಿ ಸಿದ್ಧಪಡಿಸಿದ ಪಥ್ಯಾಹಾರ/ಊಟ ಹಾಗೂ ಉತ್ತಮ ದರ್ಜೆಯ ಬ್ರೆಡ್ ಪೂರೈಕೆಗಾಗಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1	ಟೆಂಡರ್ ಪ್ರಕಟಣೆ ಸಂಖ್ಯೆ ದಿನಾಂಕ	ಸಂಖ್ಯೆ: ಉವಿಆಕೊ/ಪಥ್ಯಾಹಾರ/ ಟೆಂಡರ್/01/25–26 ದಿನಾಂಕ:28–05–2025		
2	ಟೆಂಡರ್‌ನ ಅಂದಾಜು ಮೊತ್ತ	ಕ್ರ ಸಂ	ವಿವರ	ಟೆಂಡರ್ ಬಿಡ್ ಮೊತ್ತ
		1	Group A:	ರೂ. 45,00,000/-
		2	Group B:	ರೂ.4,80,000/-
3	E&Portelಮೂಲಕ ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ	ದಿನಾಂಕ:29–05–2025		
4	E&Portelಟೆಂಡರ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ.	ದಿನಾಂಕ:12–06–2025 ರ ಸಂಜೆ 4.30 ಗಂಟೆ		
5	Sample Submit ದಿನಾಂಕ	ದಿನಾಂಕ: 05–06–2025 ರ ಬೆಳಗ್ಗೆ 11:00 ಗಂಟೆ		
6	E&Portelನ ಟೆಂಡರ್ ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ	ದಿನಾಂಕ: 13–06–2025 ರ ಸಂಜೆ 05:00 ಗಂಟೆ		
7	E&Portelಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ	ದಿನಾಂಕ: 18–06–2025 ರ ಬೆಳಗ್ಗೆ 12:00 ಗಂಟೆ		
8	ಇ.ಎಂ.ಡಿ (2.5%)	ಪಥ್ಯಾಹಾರ ರೂ. 1,12,500–00 ಬ್ರೆಡ್ ರೂ. 12,000–00 ಒಟ್ಟು ರೂ. 1,24,500–00 ಅನುಬಂಧ–1 ರ ನಮೂನೆಯಲ್ಲಿ EMD Declaration ಸಹಿಯೊಂದಿಗೆ ಸಲ್ಲಿಸುವುದು.		
9	ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ. ದೂರವಾಣಿ ಸಂಖ್ಯೆ:	ಮುಖ್ಯ ವೈದ್ಯಾಧಿಕಾರಿಗಳು ಉಪವಿಭಾಗ ಆಸ್ಪತ್ರೆ, ಕೊಳ್ಳೇಗಾಲ. email: kglgovthospital@gmail.com ದೂರವಾಣಿ ಸಂಖ್ಯೆ:08224–200393 www.kppp.karnataka.gov.in		

ಜಿಲ್ಲಾ ಪಂಚಾಯತ್, ತುಮಕೂರು.
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ
ಕೆ.ಪಿ.ಪಿ ಪೋರ್ಟಲ್ ಟೆಂಡರ್ ಪ್ರಕಟಣೆ ಸಂಖ್ಯೆ:02/2025–26 ದಿನಾಂಕ:19–05–2025

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ ವ್ಯಾಪ್ತಿಯ ಕಾಮಗಾರಿಗಳಿಗೆ ಕೆ.ಪಿ.ಪಿ ಪೋರ್ಟಲ್ ಟೆಂಡರ್ ಅನ್ನು ಕರೆಯಲಾಗಿದ್ದು, ಕೆ.ಪಿ.ಪಿ ಪೋರ್ಟಲ್ ಟೆಂಡರ್‌ಗಾಗಿ ಕೆ.ಪಿ.ಪಿ ಪೋರ್ಟಲ್ ಟೆಂಡರ್‌ಗಾಗಿ ಅರ್ಹ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಕೆ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿಸಲ್ಲಿಸಲು ಹಾಗೂ ಭರ್ತಿಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ದಿನಾಂಕ: 19–05–2025 ರಿಂದ 05–06–2025 ರಂದು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 080–25501216, 080–25501227 ರಲ್ಲಿ ಸಂಪರ್ಕಿಸಲು ಹಾಗೂ ವೆಬ್‌ಸೈಟ್ http://www.eproc.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ.ವಿಭಾಗ,ಮಧುಗಿರಿ.
DIPR/TUM/RO-34/25-26/Oysters

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ವಿಶ್ವೇಶ್ವರಯ್ಯ ನಾಲಾ ವಿಭಾಗ, ಮಂಡ್ಯ
ದೂ : 08232–225046,
ಇ–ಮೇಲ್ : vcdnmndya@gmail.com

ಟೆಂಡರ್ ಪ್ರಕಟಣೆ ಸಂಖ್ಯೆ :02/2025–26 ದಿ:26.05.2025
ದ್ವಿ–ಲಕೋಟೆ ಪದ್ಧತಿ

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಕಾಮಗಾರಿಗೆ ಐಟಂವಾರು ದರದ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ–04, ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ. 40.05 ಲಕ್ಷಗಳಿಂದ ಗರಿಷ್ಠ ಮೊತ್ತ ರೂ. 79.78 ಲಕ್ಷಗಳು, ಕೆಲಸ ಪೂರ್ಣಗೊಳಿಸಲು ನಿಗಧಿ ಪಡಿಸಿರುವ ಅವಧಿ 180 ದಿನಗಳು (ಮಳೆಗಾಲ ಸೇರಿ) ಇ.ಎಂ.ಡಿ ಶುಲ್ಕವನ್ನು ಟೆಂಡರಿಗಿಟ್ಟ ಮೊತ್ತಕ್ಕೆ ಶೇ 2.0% ರಷ್ಟು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, Date of access in e-portal : As per e-portal, ಆನ್ ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: As per e-portal, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: As per e-portal, ಆರ್ಥಿಕ ಬಿಡ್ ತೆರೆಯುವ ದಿನಾಂಕ : As per e-portal. ಹೆಚ್ಚಿನ ವಿವರಗಳಿಗೆ kppp.karnataka.gov.in ನಲ್ಲಿ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ 08232 225046 ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಕಾವೇರಿ ನೀರಾವರಿ ನಿಗಮ(ನಿ), ವಿ.ಸಿ.ವಿಭಾಗ, ಮಂಡ್ಯ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/132/2025–26

ಬೆಳಗಾವಿ ಮಹಾನಗರ ಪಾಲಿಕೆ
ಸಿಟಿಎಸ್.ನಂ.4821/26, 4821/27, ಆರ್.ಎಸ್.ನಂ.1005,
ಸುಭಾಷನಗರ, ಬೆಳಗಾವಿ. ದೂರವಾಣಿ : 0831–2405304,
Email : itstaff_ulb_belgaum@yahoo.com, Website : www.belgaumcity.mrc.gov.in
ಸಂಖ್ಯೆ : ಮ.ನ.ಪಾ./ಕಂ.ಶಾ./ಬೀ.ಬ.ವ್ಯಾ. ಭೂ.ಬಾ/
ಇ–ಹರಾಜು–05/2025–26 ದಿನಾಂಕ : 29–05–2025

ಇ-ಹರಾಜು ಪ್ರಕಟಣೆ

ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ಈ ಕೆಳಗಿನಂತೆ ವಿವರಿಸಲಾದ ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿಯ ಬೀದಿ ಬದಿ ವ್ಯಾಪಾರಿಗಳಿಂದ ಭೂಬಾಡಿಗೆ ವಸೂಲು ಮಾಡಲು ಹರಾಜನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಅಹ್ವಾನಿಸಲಾಗಿದೆ.

1) ಕಾಮಗಾರಿ ಹೆಸರು : ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಾಯಿಪಲ್ಲೆ, ಹಣ್ಣು ಹಂಪಲು ಮತ್ತು ತಳ್ಳುವ ಗಾಡಿಯ ಮೇಲೆ ಮಾರುವವರಿಂದ ಭೂಬಾಡಿಗೆ ವಸೂಲಾತಿ ಕುರಿತು (Auction for Collection of Ground Rent Fees from Vegetable, Fruit Venders & Hawkers in the Belagavi City Corporation Limit) Auction No. : DMA/2025-26/Auction-3324. ಕನಿಷ್ಠ ಹರಾಜು ಮೊತ್ತ : 1,23,64,000/–, (ಜಿ.ಎಸ್.ಟಿ. ಹೊರತುಪಡಿಸಿ), ಇ.ಎಂ.ಡಿ. ಹಣ (ರೂ. ಗಳಲ್ಲಿ) : 10,00,000/–, ನಿರ್ವಹಿಸುವ ಕಾಲಾವಧಿ : 12 ತಿಂಗಳು.

1) ಹರಾಜು ಕುರಿತು ವಿವರಣೆಗಾಗಿ ಕೊನೆಯ ದಿನಾಂಕ ಮತ್ತು ವೇಳೆ : 02–06–2025 ರ ಸಂಜೆ 5.00 ಘಂಟೆಯವರೆಗೆ, 2) ಹರಾಜಿನಲ್ಲಿ ಭಾಗವಹಿಸುವ ಕೊನೆಯ ದಿನಾಂಕ ಮತ್ತು ವೇಳೆ : 09–06–2025 ರ ಸಂಜೆ 5.00 ಘಂಟೆಯವರೆಗೆ, 3) ಹರಾಜಿನ ಆರಂಭದ ದಿನಾಂಕ ಮತ್ತು ವೇಳೆ : 10–06–2025 ರ ಬೆಳಿಗ್ಗೆ 11.00 ರಿಂದ ಸಂಜೆ 5.00 ಘಂಟೆಯವರೆಗೆ.

ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ : https://kppp.karnataka.gov.in ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಹರಾಜಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಉಪ ಆಯುಕ್ತರು (ಕಂದಾಯ) ಮಹಾನಗರ ಪಾಲಿಕೆ, ಬೆಳಗಾವಿ.
ಸಹಿ/– ಮುಖ್ಯ ಲೆಕ್ಕಾಧಿಕಾರಿಗಳು, ಮಹಾನಗರ ಪಾಲಿಕೆ, ಬೆಳಗಾವಿ.
ಸಹಿ/– ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ.
ಡಿಐಪಿಆರ್/ಬೆಳಗಾವಿ/358/ಮಣಿಪಾಲ್/2025–26

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ ಇಂಡಿ
Website: www.inditown.mrc.gov.in E-Mail ID : itstaff_ulb_indb@yahoo.co.in
ಜಿಲ್ಲೆ: ವಿಜಯಪೂರ. Phone/Fax (08359,225025) ರಾಜ್ಯ: ಕರ್ನಾಟಕ
ಕ್ರಸಂ:ಪು.ಸ.ಇಂ/ತಾ.ವಿ/ಪು.ನಿ/2025–26 ದಿನಾಂಕ:29–05–2025

ಅಲ್ಪಾವದಿ ಟೆಂಡರ ಪ್ರಕಟಣೆ
(ಇ–ಪ್ರಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

ಲೋಕೋಪಯೋಗಿಇಲಾಖೆಯಲ್ಲಿ ನೊಂದಾಯಿತಅರ್ಹಗುತ್ತಿಗೆದಾರರಿಗೆ, ಈ ಮೂಲಕ ತಿಳಿಯಪಡಿಸುವದೆನಂದರೆ, ಇಂಡಿ ಪುರಸಭೆ ವ್ಯಾಪ್ತಿಯಲ್ಲಿ ಕಾಮಗಾರಿಗಳು ಮತ್ತು ಹೊರಗುತ್ತಿಗೆಆದರದ ಮೇಲೆ ಸಿಬ್ಬಂದಿ ಕೈಕೊಳ್ಳಲು ಇ–ಪ್ರಕ್ಯೂರಮೆಂಟ್ ಪೋರ್ಟಲ್ ಮುಖಾಂತರಟೆಂಡರಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರಿಂದಟೆಂಡರಆಹ್ವಾನಿಸಲಾಗಿದ್ದುಅದರಂತೆ ಆಸಕ್ತಿಯುಳ್ಳವರು, ತಮ್ಮ ದರವಾರುಗಳನ್ನು http://kppp.karnataka,gov.inಮೂಲಕ ಸಲ್ಲಸಬಹುದಾಗಿದೆ.

ಅ.ನಂ	ಕಾಮಗಾರಿ ಹೆಸರು
01	DMA/2025-26/WS/WORK_INDENT41135
02	DMA/2025-26/SE5419
03	DMA/2025-26/SE5416
04	DMA/2025-26/SE5417
05	DMA/2025-26/SE5418

1. ಟೆಂಡರ ಸಲ್ಲಿಸಲುಕೊನೆಯ ದಿನಾಂಕ:05–06–2025 ರಂದು ಸಂಜೆ 5:00 ಘಂಟೆಯವರೆಗೆ.
2.ಟೆಂಡರತೆರೆಯುವದಿನಾಂಕ:06–06–2025 ರಂದು ಸಂಜೆ 5:30 ಘಂಟೆ ನಂತರ.
ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳನ್ನು ವೆಬ್ ಸೈಟ್http://kppp.karnataka,gov.in ನಲ್ಲಿ ಪಡೆಯಬಹುದು ಹಾಗೂ ಕಾರ್ಯಾಲಯದತಾಂತ್ರಿಕ ಶಾಖೆಯಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/–ಸಹಿ/–
ಮುಖ್ಯಾಧಿಕಾರಿ ಅಧ್ಯಕ್ಷರು
ಪುರಸಭೆ, ಇಂಡಿಪುರಸಭೆ, ಇಂಡಿ

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಆಸ್ತಿ ವಿಭಾಗ, ಕೃಷಿ ನಗರ,
ಧಾರವಾಡ – 580 005. ದೂ.: 91–836–2214332/216,444.
ಮಿಂಚಂಚೆ : estateofficer@rediffmail.com
ಸಂಖ್ಯೆ : ಆ.ಅ./ಡಿ.ಬಿ./ಟಿಎನ್./ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್–127/2025–26
ದಿನಾಂಕ : 26–05–2025

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ತೃತೀಯ ಕರೆ)

ಕೃಷಿ ವಿಶ್ವವಿದ್ಯಾಲಯ ಧಾರವಾಡದ ಮುಖ್ಯ ಆವರಣದಲ್ಲಿ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರುಗಳಿಂದ ಟೆಂಡರುಗಳನ್ನು ಮರು ಅಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿಯಂತೆ http://kppp.karnataka.gov.in ಆನ್‌ಲೈನ್ ಮುಖಾಂತರ ಸಲ್ಲಿಸತಕ್ಕದ್ದು.

ಟೆಂಡರ್ ವೇಳಾ ಪಟ್ಟಿ

1) ವಿಚಾರಣೆಗಳಿಗಾಗಿ ಕೊನೆಯ ದಿನಾಂಕ : 06–06–2025 ರ ಅಪರಾಹ್ನ 4.00 ಗಂಟೆಗೆ, 2) ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ ಹಾಗೂ ವೇಳೆ : 09–06–2025 ರ ಬೆಳಿಗ್ಗೆ 11.00 ಗಂಟೆಗೆ, 3) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 12–06–2025 ರ ಅಪರಾಹ್ನ 4.00 ಗಂಟೆಗೆ, 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ : 13–06–2025 ರ ಅಪರಾಹ್ನ 4.15 ಗಂಟೆಗೆ, 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ : 14–06–2025 ರ ಅಪರಾಹ್ನ 4.00 ಗಂಟೆಗೆ.

ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ : 0836 – 2214332 ಸಂಪರ್ಕಿಸಬಹುದು. ಇ–ಪ್ರೊಕ್ಯೂರ್‌ಮೆಂಟ್ ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 080 – 4601 0000.
ಸೂಚನೆ : ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ–ಪ್ರೊಕ್ಯೂರಮೆಂಟ್ ವೇದಿಕೆಯಲ್ಲಿ ಪ್ರವಹಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು.
ಸಹಿ/– ಆಸ್ತಿ ಅಧಿಕಾರಿಗಳು,
ಕೃ.ವಿ.ವಿ., ಧಾರವಾಡ.
ಡಿಐಪಿಆರ್/ಧಾರವಾಡ/228/ಮಣಿಪಾಲ್/2025–26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಸಾಮಿತ್ವದಲ್ಲಿ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಮುಏನೀ ವಿಭಾಗ ನಂ–1, ಮಟ್ಟಿಹಾಳ, ತಾ: ಕೋಲ್ಹಾರ,
ಜಿ: ವಿಜಯಪುರ. ದೂರವಾಣಿ ಸಂ: 08426–286126,
ಇ–ಮೇಲ್: kbjnleemli@gmail.com
ಸಂ:ಕೃಭಾಜನಿ(ನಿ)/ಮುಏನೀ/ವಿ–1ಮ/ಯೋ.ಶಾ/ಇ.ಹ.ಪ್ರ/2025–26/192
ದಿನಾಂಕ:28.05.2025

ಸಂಕ್ಷಿಪ್ತ ಇ–ಹರಾಜು ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಬೆಂಗಳೂರು, ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಇ–ಹಾರಜಿನ ಇಂಡೆಂಟ್ ಸಂಖ್ಯೆ: KBJNL/2025-26/AUCTION3 ಹರಾಜನ್ನು ಕರೆಯಲಾಗಿದ್ದು. ಹರಾಜಿಗಿಟ್ಟ ಮೊತ್ತರೂ. 29.83 ಲಕ್ಷಗಳು ಇರುತ್ತವೆ. ನಿಗದಿಪಡಿಸಿದ ಇ.ಎಮ್.ಡಿ ಮೊತ್ತ/ ಗುತ್ತಿಗೆದಾರರ ದರ್ಜೆ/ ಹರಾಜು ನಿಯಮ/ ಹರಾಜು ಪ್ರೊಸೆಸಿಂಗ ಶುಲ್ಕ, ಇತ್ಯಾದಿ ವಿವರಗಳನ್ನು https://kppp.karnataka.gov.in ಅಥವಾ ಕೆಳಗೆ ಸಹಿ ಮಾಡಿದವರನ್ನು ಕಛೇರಿಯ ಸಮಯದಲ್ಲಿ ದಿನಾಂಕ: 04.06.2025 ಸಮಯ ಸಾಯಂಕಾಲ 05.00 ಗಂಟೆವರೆಗೆ ಸಂಪರ್ಕಿಸಬಹುದು. ದೂರವಾಣಿ 08426–286126.
ಹರಾಜು ಅಧಿಸೂಚನೆಯ ಪ್ರಕಾರ ದಿನಾಂಕವಾರು ಘಟನಾವಳಿಗಳು ಈ ಕೆಳಗಿನಂತಿವೆ.
1.1 Auction published date and time: 29.05.2025, 13:00:00
1.2 Last date and time for submit the query : 04.06.2025 17:00:00
1.3 Date and time to confirm participation of interest in Auction: 04.06.2025, 17:00:00
1.4 Online Bidding date and time : 06.06.2025, 11:00:00 to 17:00:00
ವಾಸಾಸಂಇ/ವಿಜಯಪುರ/101/ಕೆಎಸ್‌ಎಂಸಿಎ/2025–26 ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಮುಏನೀ ವಿಭಾಗ ನಂ.1, ಮಟ್ಟಿಹಾಳ

ಸಮಾಚಾರ ಸಣ್ಣದಲ್ಲ

ದ.ಕನ್ನಡದಲ್ಲಿ ಶಾಲಾ, ಕಾಲೇಜುಗಳಿಗೆ ರಜೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಶನಿವಾರ (ಮೇ 31) ಜಿಲ್ಲೆಯ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಿ ದ.ಕ ಪ್ರಭಾರ ಜಿಲ್ಲಾಧಿಕಾರಿ ಆನಂದ್ ಆದೇಶಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ, ಪ್ರಾಥಮಿಕ, ಪ್ರೌಢಶಾಲೆ, (ಸಿಬಿಎಸ್‌ಸಿ, ಐಸಿಎಸ್‌ಇ ಸೇರಿದಂತೆ), ಪದವಿ ಪೂರ್ವ ಸರಕಾರಿ ಅನುದಾನಿತ ಮತ್ತು ಖಾಸಗಿ ವಿದ್ಯಾಸಂಸ್ಥೆಗಳಿಗೆ ರಜೆ ಘೋಷಿಸಲಾಗಿರುತ್ತದೆ. ಕಳೆದ 24 ಗಂಟೆಗಳಲ್ಲಿ ಅತೀ ಹೆಚ್ಚಿನ ಮಳೆ ದಾಖಲಾಗಿರುತ್ತದೆ. ಇದೇ ಹವಾಮಾನ ಪರಿಸ್ಥಿತಿಯು ಮುಂದುವರಿಯುವ ಮುನ್ಸೂಚನೆ ಇರುತ್ತದೆ. ಮೇ 31 ರಂದು ಜಿಲ್ಲೆಯಲ್ಲಿ ರೆಡ್ ಅಲರ್ಟ್ ಇರುತ್ತದೆ. ಈ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮವಾಗಿ ದಕ್ಷಿಣ ಕನ್ನಡ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಈ ಆದೇಶ ಮಾಡಿದೆ.

ಚಿಕ್ಕಬಳ್ಳಾಪುರದಲ್ಲಿ ನಾಲ್ವರಿಗೆ ಕರೋನಾ

ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ ಇಬ್ಬರು ಗರ್ಭಿಣಿಯರು, ಮತ್ತೋರ್ವ ಮಹಿಳೆ ಹಾಗೂ ಪುರಷ ಸೇರಿ 4 ಮಂದಿಗೆ ಕೋವಿಡ್ ಪಾಸಿಟಿವ್ ಧೃಡವಾಗಿದೆ ಅಂತ ಜಿಲ್ಲಾ ಆರೋಗ್ಯಾಧಿಕಾರಿ ಮಹೇಶ್ ಕುಮಾರ್ ತಿಳಿಸಿದ್ದಾರೆ. ಗೌರಿಬಿದನೂರಿನ ಹಾಗೂ ಬಾಗೇಪಲ್ಲಿಯಲ್ಲಿ ತಲಾ ಒಬ್ಬರು ಗರ್ಭಿಣಿಯರು, ಚಿಂತಾಮಣಿಯಲ್ಲಿ 1 ಪ್ರಕರಣ, ಚಿಕ್ಕಬಳ್ಳಾಪುರ ನಗರದಲ್ಲಿ 1 ಪ್ರಕರಣ ಕಂಡುಬಂದಿದೆ. ಗೌರಿಬಿದನೂರಿನ ಗರ್ಭಿಣಿ ಮಹಿಳೆ ಆಸ್ಪತ್ರೆಗೆ ದಾಖಲಾಗಿದ್ದು, ಉಳಿದ ಮೂವರು ಮನೆಯಲ್ಲೇ ಆರೋಗ್ಯವಾಗಿದ್ದಾರೆ ಅಂತ ಡಿಎಚ್‌ಒ ಮಾಹಿತಿ ನೀಡಿದ್ದಾರೆ.

ಅಬ್ದುಲ್ ರಹಿಮಾನ್ ಹತ್ಯೆ:ಮತ್ತಿಬ್ಬರು ಸೆರೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದಲ್ಲಿ ನಡೆದ ರಹಿಮಾನ್ ಹತ್ಯೆ ಪ್ರಕರಣದಲ್ಲಿ ಒಟ್ಟು ಐವರು ಆರೋಪಿಗಳ ಬಂಧನವಾಗಿದೆ. ದ್ವೇಷದ ಹಿನ್ನೆಲೆ ಹತ್ಯೆ ನಡೆದಿದೆ ಅನ್ನೋದು ತನಿಖೆಯಿಂದ ಗೊತ್ತಾಗಿದ್ರೂ, ಹತ್ಯೆ ನಡೆದಿರೋ ನಿಖರ ಕಾರಣ ಏನು ಅನ್ನೋ ಬಗ್ಗೆ ತನಿಖೆ ಮುಂದುವರಿದಿದೆ. ಬಂಟ್ವಾಳದ ಕುರಿಯಾಳ ನಿವಾಸಿ ದೀಪಕ್ (21), ಅಮ್ಮುಂಜೆ ನಿವಾಸಿ ಪೃಥ್ವಿರಾಜ್ (21), ಅಮ್ಮುಂಜೆ ನಿವಾಸಿ ಚಿಂತನ್ (19), ಸುಮಿತ್, ರವಿರಾಜ್ ಬಂಧಿತ ಆರೋಪಿಗಳು. ಹಳೇ ದ್ವೇಷದ ಹಿನ್ನೆಲೆ ಈ ಹತ್ಯೆ ನಡೆಸಿದ್ದಾರೆ ಅನ್ನೋದು ಪೊಲೀಸರ ಪ್ರಾಥಮಿಕ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಆದ್ರೆ ನಿಖರ ಕಾರಣ ಇನ್ನೂ ನಿಗೂಢವಾಗಿಯೇ ಉಳಿದಿದೆ. ಪೂರ್ವದ್ವೇಷದ ಹತ್ಯೆಯೋ, ಕೋಮು ದ್ವೇಷದ ಹತ್ಯೆಯೋ, ಸುಹಾಸ್ ಶೆಟ್ಟಿ ಹತ್ಯೆಗೆ ಪ್ರತಿಕಾರದ ಹತ್ಯೆಯೋ ಅನ್ನೋದು ಖಚಿತ ಗೊಂಡಿಲ್ಲ. ಬಂಟ್ವಾಳ ಡಿವೈಎಸ್ಪಿ ವಿಜಯ್ ಪ್ರಸಾದ್ ನೇತೃತ್ವದಲ್ಲಿ 5 ವಿಶೇಷ ತಂಡಗಳನ್ನ ಮಾಡಿ ತನಿಖೆ ನಡೆಸುತ್ತಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಆ ಮೇರುನಟ ನನ್ನನ್ನು ತಬ್ಬಿಕೊಂಡ್ರು, ನಾನು ಮೂರು ದಿನ ಸ್ನಾನ ಮಾಡ್ಲಿಲ್ಲ – ನಟ
ಸುದ್ದಿ



ಟ್ವೀಟೂ-ಖಾರಾ

ಬಿಜೆಪಿ ಕರ್ನಾಟಕ

ಕರ್ನಾಟಕದಲ್ಲಿ INCKarnataka ಸರಕಾರ ಅಧಿಕಾರಕ್ಕೆ ಬಂದಿದ್ದು ಮುಸ್ಲಿಮ್ ವೋಟುಗಳಿಂದಂತೆ. ಸಿಎಂ siddaramaiah ಅವರೆ, ಡಿಸಿಎಂ DKShivakumar ಅವರೆ, ಹಾಗಿದ್ದರೆ ನಿಮಗೆ ಯಾವ ಹಿಂದೂಗಳು ವೋಟು ಹಾಕಿಲ್ಲವಾ.

ಸುನೀಲ್ ಪೂಜಾರಿ

ಅನುಮಾನವೇ ಇಲ್ಲ.ಕರ್ನಾಟಕದಲ್ಲಿ ಕಾಂಗ್ರೆಸ್ ಗೆದ್ದಿರೋದು ಮುಸ್ಲಿಮರಿಂದ. ಸುಮಾರು ಬೆಂಗಳೂರಿನಲ್ಲೇ ಎರಡುವರೆಯಿಂದ ಮೂರು ಲಕ್ಷ ರೊಹಿಂಗ್ಯಾ ಮುಸ್ಲಿಮರು ನೆಲೆಸಿದ್ದಾರೆ. ವೋಟಿಗಾಗಿ ಇವರನ್ನು ಸಾಕಿಕೊಂಡಿದ್ದಾರೆ. ಇತ್ತೀಚೆಗೆ ಸಿದ್ದು ರವರು ಜಾತಿಗಣತಿಯಲ್ಲಿ ಮುಸ್ಲಿಮರ ಹೆಚ್ಚುವರಿ ಜನ ಅನುಮಾನಕ್ಕೆ ದಾರಿ. ನಗರತ್ ಪೇಟೆ ಗಲಾಟೆ ಮಾಡಿದವರು ಇವರೇ.

ಮನೆ ಮೇಲೆ ಗುಡ್ಡ ಕುಸಿದು ಅಜ್ಜಿ ,ಮೊಮ್ಮಕ್ಕಳು ಸಾವು | ಇಬ್ಬರು ಸಮುದ್ರಪಾಲು | ಪವರ್‌ಮ್ಯಾನ್, ಬಾಲಕಿ, ಕಾರ್ಮಿಕ ಸೇರಿ 8 ಸಾವು

ದಕ್ಷಿಣ ಕನ್ನಡದಲ್ಲಿ ಮಳೆ ಮರಣ ಮೃದಂಗ

ಬೆಂಗಳೂರು: ಕರಾವಳಿಯಲ್ಲಿ ಸುರಿಯುತ್ತಿರುವ ಮಹಾಮಳೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶುಕ್ರವಾರ 7 ಮಂದಿ ಮೃತಪಟ್ಟಿದ್ದಾರೆ. ಗುಡ್ಡ ಕುಸಿತದಲ್ಲಿ ಮೂವರು, ಸಮುದ್ರಪಾಲಾಗಿ ಇಬ್ಬರು, ಕರೆಂಟ್ ಶಾಕ್‌ಗೆ ಲೈನ್‌ಮ್ಯಾನ್, ಲಾರಿ ಪಲ್ಟಿಯಾಗಿ ಓರ್ವ ಹಾಗೂ ಕಾಂಪೌಂಡ್ ಕುಸಿದು ಬಾಲಕಿ ಮೃತಪಟ್ಟಿರುವ ಘಟನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿದೆ.

ಒಂದೇ ಕುಟುಂಬದ ಮೂವರು ಸಾವು: ಗುಡ್ಡ ಕುಸಿತ ಪ್ರಕರಣದಲ್ಲಿ ಒಂದೇ ಕುಟುಂಬದ ಮೂವರು ಸಾವನ್ನಪ್ಪಿರುವ ಹೃದಯ ವಿದ್ರಾವಕ ಘಟನೆ ಮಂಗಳೂರಿನ ದೇರಳ ಕಟ್ಟೆ ಸಮೀಪದ ಮೊಂಟೆಪದವು ಕೋಡಿಯಲ್ಲಿ ನಡೆದಿದೆ. ಗುರುವಾರ ರಾತ್ರಿಯಿಡೀ ಸುರಿದ ಭಾರೀ ಮಳೆಯಿಂದ ದೇರಳಕಟ್ಟೆ ಸಮೀಪದ ಮೊಂಟೆಪದವು ಕೋಡಿ ಎಂಬಲ್ಲಿ ಬೆಳಗಿನ ಜಾವ ಕಾಂತಪ್ಪ ಪೂಜಾರಿ ಎಂಬುವವರ ಮನೆ ಮೇಲೆ ಏಕಾಏಕಿ ಗುಡ್ಡ ಕುಸಿದಿದೆ. ಈ ವೇಳೆ ಮನೆಯಲ್ಲಿ ಮಲಗಿದ್ದ 6 ಮಂದಿ ಪೈಕಿ ಮಣ್ಣಿನಡಿ ಸಿಲುಕಿ ಅಜ್ಜಿ ,ಮೊಮ್ಮಕ್ಕಳು ಸೇರಿ ಮೂವರು ಮೃತಪಟ್ಟಿದ್ದಾರೆ. ಗುಡ್ಡ ಕುಸಿತದ ಶಬ್ದ ಕೇಳಿ ಹೊರಗೆ ಓಡಿ ಬಂದು ಕಾಂತಪ್ಪ ಪೂಜಾರಿ ಅವರ ಮಗ ಸೀತಾರಾಮ್ ಅಪಾಯದಿಂದ ಬಚಾವ್ ಆಗಿದ್ದಾರೆ. ಇನ್ನು ಕಾಂತಪ್ಪ ಪೂಜಾರಿ ಹಾಗೂ ಸೊಸೆ ಅಶ್ವಿನಿ ಅವರನ್ನು ರಕ್ಷಣೆ ಮಾಡಲಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಜ್ಜಿ ಪ್ರೇಮಾ ಪೂಜಾರಿ (54), ಮೊಮ್ಮಕ್ಕಳಾದ ಮೂರುವರೆ ವರ್ಷದ ಆರ್ಯನ್ ಮತ್ತು 2 ವರ್ಷದ ಆರುಷ್ ದುರ್ಮರಣಕ್ಕೀಡಾಗಿದ್ದಾರೆ.

ನಾಡದೋಣಿ ಮಗುಚಿ ಇಬ್ಬರು ನೀರುಪಾಲು: ನಾಡದೋಣಿ ಮಗುಚಿ ಇಬ್ಬರು ಮೀನುಗಾರರು ನೀರುಪಾಲಾದ ಘಟನೆ ಮಂಗಳೂರು ಕಡಲತೀರದ ತೋಟಬೆಂಗ್ರೆ, ಅಳಿವೆ ಬಾಗಿಲು ಸಮೀಪ ನಡೆದಿದೆ. ತೋಟಬೆಂಗ್ರೆ ನಿವಾಸಿಗಳಾದ ಯಶವಂತ, ಕಮಲಾಕ್ಷ ನೀರುಪಾಲಾದ ಮೀನುಗಾರರು. ಮೀನುಗಾರಿಕೆಗೆ ತೆರಳಿದ್ದಾಗ ಕಡಲ ಅಲೆಗಳ ಅಬ್ಬರಕ್ಕೆ ನಾಡದೋಣಿ ಪಲ್ಟಿಯಾಗಿದೆ. ಈ ವೇಳೆ ಮೀನುಗಾರರಾದ ಯಶವಂತ, ಕಮಲಾಕ್ಷ ಕಣ್ಮರೆಯಾಗಿದ್ದಾರೆ. ನಾಡದೋಣಿಯ ಅವಶೇಷಗಳು ಕಡಲತೀರಕ್ಕೆ ಬಂದು ಬಿದ್ದಿದೆ. ಕಣ್ಮರೆಯಾದ ಮೀನುಗಾರರಿಗಾಗಿ ಶೋಧ ಕಾರ್ಯ ನಡೆಯುತ್ತಿದೆ.

ಲೈನ್‌ಮ್ಯಾನ್ ಸಾವು: ಲೈನ್ ಸರಿಪಡಿಸುವ ವೇಳೆ ವಿದ್ಯುತ್ ಪ್ರವಹಿಸಿ ಲೈನ್‌ಮ್ಯಾನ್ ಮೃತಪಟ್ಟ ಘಟನೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಕುವೆಟ್ಟು ಅಮರ್ ಜಾಲು ಎಂಬಲ್ಲಿ ನಡೆದಿದೆ. ಲೈನ್‌ಮ್ಯಾನ್ ವಿಜೇಶ್ ಜೈನ್ (27) ಮೃತ ದುರ್ದೈವಿ. ಭಾರೀ ಮಳೆಯಿಂದ ಕೈಕೊಟ್ಟಿದ್ದ ವಿದ್ಯುತ್ ಲೈನ್ ಸರಿಪಡಿಸುವ ವೇಳೆ ಕರೆಂಟ್ ಶಾಕ್ ಹೊಡೆದಿದೆ. ವಿದ್ಯುತ್ ಟ್ರಾನ್ಸ್‌ಫಾರ್ಮರ್ ಬಳಿ ಲೈನ್ ಸರಿಪಡಿಸುವ ವೇಳೆ ದುರಂತ ನಡೆದಿದೆ. ಟಿಸಿಯ 2 ಕಂಬಗಳ ನಡುವೆ ಸಿಕ್ಕಿ ಬಿದ್ದು ಲೈನ್‌ಮ್ಯಾನ್ ಉಸಿರು ಚೆಲ್ಲಿದ್ದಾರೆ. ಸ್ಥಳಕ್ಕೆ ಮೆಸ್ಕಾಂ ಹಾಗೂ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕಂದಕಕ್ಕೆ ಉರುಳಿದ ಲಾರಿ,ಕಾರ್ಮಿಕ ಸಾವು: ಭಾರೀ ಮಳೆಯ ಪರಿಣಾಮ ಚಾಲಕನ ನಿಯಂತ್ರಣ ತಪ್ಪಿ ಲಾರಿಯೊಂದು ಕಂದಕ್ಕೆ ಉರುಳಿ ಕಾರ್ಮಿಕ ಸಾವನ್ನಪ್ಪಿರುವ ಘಟನೆ ಬಂಟ್ವಾಳ ಸಮೀಪದ ಹೆಬ್ರಿ ಬಳಿ ನಡೆದಿದೆ. ಇಳಿಜಾರು ರಸ್ತೆಯಲ್ಲಿ ವಿದ್ಯುತ್ ಪರಿವರ್ತಕಕ್ಕೆ ಡಿಕ್ಕಿ ಹೊಡೆದು ಕಂದಕಕ್ಕೆ ಉರುಳಿ ಬಿದ್ದಿದೆ. ಪರಿಣಾಮ ಲಾರಿಯಲ್ಲಿದ್ದ ಜಾರ್ಖಂಡ್‌ನ ಕಾರ್ಮಿಕ ನಿರ್ಮಲ್ ಅನುಸ್ತ್ (32) ಸ್ಥಳದಲ್ಲೇ ಸಾವಿಗೀಡಾಗಿದ್ದು, ಚಾಲಕ ಮತ್ತು ಕ್ಲೀನರ್ ಹಾಗೂ ಇನ್ನೊಬ್ಬ ಕಾರ್ಮಿಕ ಪಾರಾಗಿದ್ದಾರೆ.

ದೇರಳ ಕಟ್ಟೆ ಸಮೀಪದ ಮೊಂಟೆಪದವು ಕೋಡಿಯಲ್ಲಿ ಮಣ್ಣಿನಡಿ ಸಿಲುಕಿಕೊಂಡಿದ್ದವರ ರಕ್ಷಣಾ ಕಾರ್ಯ

ಬದುಕಿ ಬರಲೇ ಇಲ್ಲ ಕಂದ

ಶುಕ್ರವಾರ ಬೆಳಗಿನ ಜಾವ ಸಂಭವಿಸಿದ ಗುಡ್ಡ ಕುಸಿದು 30 ಅಡಿಗೂ ಮೇಲ್ಪಟ್ಟ ಮಣ್ಣು ಹಾಗೂ ಮರಗಳು ಮನೆ ಕಾಂತಪ್ಪ ಪೂಜಾರಿ ಮನೆ ಮೇಲೆ ಬಿದ್ದಿದ್ದವು, ಕೂಡಲೇ ರಕ್ಷಣೆಗೆ ಧಾವಿಸಿದ ಸ್ಥಳೀಯರು ಹಾಗೂ ಎನ್‌ಡಿಆರ್ ಎಫ್-ಎಸ್‌ಡಿಆರ್‌ಎಫ್ ರಕ್ಷಣಾ ತಂಡಗಳು ಸತತ ಕಾರ್ಯಾಚರಣೆ ಬಳಿಕ ಅವಶೇಷಗಳಡಿ ಸಿಲುಕಿದ್ದ ಐವರನ್ನು ಪತ್ತೆ ಮಾಡಿದರು. ದುರಾದೃಷ್ಟವಶಾತ್ ಇಬ್ಬರು ಮೊಮ್ಮಕ್ಕಳು ಹಾಗೂ ಅಜ್ಜಿ ಮೃತಪಟ್ಟಿದ್ದಾರೆ.. ಅವಶೇಷಗಳಡಿ ಸಿಲುಕಿ ನಿತ್ರಾಣ ಗೊಂಡಿದ್ದ ಅಮ್ಮನ ತೆಕ್ಕೆಯನ್ನು ಬಿಗಿದಪ್ಪಿದ 2 ವರ್ಷದ ಮಗು ಆರುಷ್‌ನನ್ನು ಹರಸಾಹಸ ಪಟ್ಟು ರಕ್ಷಣೆ ಮಾಡಲಾಯಿತು. ಆರುಷ್ ಆಸ್ಪತ್ರೆಗೆ ಸಾಗಿಸುವ ದಾರಿ ಮಧ್ಯೆ ಉಸಿರು ಚೆಲ್ಲಿದನು. ಇನ್ನು ಅವಶೇಷಗಳಡಿ ಸಿಲುಕಿದ್ದ ಮೃತಪಟ್ಟ ಮಕ್ಕಳ ತಾಯಿ ಅಶ್ವಿನಿ ಹಾಗೂ ಮನೆ ಯಜಮಾನ ಕಾಂತಪ್ಪ ಪೂಜಾರಿಗೆ ಚಿಕಿತ್ಸೆ ಮುಂದುವರಿದಿದೆ.

9 ಗಂಟೆಗಳ ಕಾರ್ಯಾಚರಣೆ

ದುರಂತದ ಸುದ್ದಿ ತಿಳಿದು ಕೂಡಲೇ ಸ್ಥಳಕ್ಕೆ ಆಗಮಿಸಿದ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ತಂಡಗಳು ಸ್ಥಳೀಯರ ಸಹಕಾರದಿಂದ ರಕ್ಷಣೆ ಕಾರ್ಯ ನಡೆಸಿದರು. ಎಡೆಬಿಡದೇ ಸುರಿಯುತ್ತಿರುವ ಮಳೆ ನಡುವೆ ಸತತ 9 ಗಂಟೆಗಳ ಕಾಲ ಮಣ್ಣು ತೆರವು ಕಾರ್ಯ ನಡೆಯಿತು. ಮನೆ ಮೇಲೆ ಬಿದ್ದಿದ್ದ ಬೃಹತ್ ಮರಗಳು ಹಾಗೂ ಮಣ್ಣನ್ನು ತೆರವು ಹರಸಾಹಸ ಪಟ್ಟು ಅವೇಶಗಳಡಿ ಸಿಲುಕಿದವರನ್ನು ರಕ್ಷಣೆ ಮಾಡಲಾಯಿತು. ಆದರೆ ಮೂವರು ಮೃತಪ ಟ್ಟರೇ, ಇಬ್ಬರು ಗಂಭೀರ ಸ್ಥಿತಿಯಲ್ಲಿದ್ದಾರೆ. 2 ವರ್ಷದ ಮಗು ಆರುಷ್‌ನ ಬದುಕಿಸಲು ಹರಸಾಹಸ ಪಟ್ಟರು ಪ್ರಯತ್ನ ಫಲಿಸಲಿಲ್ಲ.

ಸಚಿವರಿಂದ ಮೃತರ ಕುಟುಂಬಕ್ಕೆ 5 ಲಕ್ಷ ಪರಿಹಾರ

ಮಂಗಳೂರು: ಎಡೆಬಿಡದೆ ಸುರಿದ ಭಾರೀ ಮಳೆಗೆ ಗುಡ್ಡ ಜರಿದು ಬಿದ್ದ ಪರಿಣಾಮ ನಾಲ್ವರು ಮೃತಪಟ್ಟ ಘಟನೆ ನಡೆದ ಮಂಜನಾಡಿ ಗ್ರಾಮದ ಮೊಂಟೆಪದವು ಮತ್ತು ಬೆಳ್ಮ ಗ್ರಾಮದ ಕಾನಕೆರೆಗೆ ಶುಕ್ರವಾರ ದ.ಕ.ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಭೇಟಿ ನೀಡಿ ಪರಿಶೀಲಿಸಿದರು. ಕಾಂತಪ್ಪ ಪೂಜಾರಿಯ ಮನೆಯಲ್ಲಿ ಮೂವರು ಹಾಗೂ ನೌಶಾದ್‌ರ ಮನೆಯಲ್ಲಿ ಒಬ್ಬ ಬಾಲಕಿ ಮೃತಪಟ್ಟಿದ್ದು, ಈ ಸಂದರ್ಭ ಕುಟುಂಬಕ್ಕೆ ತಲಾ 5 ಲಕ್ಷ ರು.ನ ಚೆಕ್ ಹಸ್ತಾಂತರಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ದಿನೇಶ್ ಗುಂಡೂರಾವ್, ವಿಪರೀತ ಮಳೆಯಿಂದ ಗುಡ್ಡ ಜರಿದು ಬಿದ್ದ ಪರಿಣಾಮ ನಾಲ್ಕು ಮಂದಿ ಮೃತಪಟ್ಟಿದ್ದು ಮತ್ತು ಇಬ್ಬರು ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ಮಾಹಿತಿ ಲಭಿಸಿದೆ. ತೀವ್ರ ಹಾಗೂ ಭಾಗಶಃ ಹಾನಿಯಾದ, ನೀರು ನುಗ್ಗಿದ ಮನೆಗಳಿಗೆ ಸರಕಾರದಿಂದ ಸೂಕ್ತ ಪರಿಹಾರ ಒದಗಿಸುವ ಬಗ್ಗೆ ವ್ಯವಸ್ಥೆ ಮಾಡಲಾಗುವುದು. ಪುನರ್ವಸತಿ ಕಲ್ಪಿಸುವ ಯೋಜನೆಯೂ ಸರಕಾರದ ಮುಂದಿದೆ ಎಂದರು.

ಕಾಂಪೌಂಡ್ ಕುಸಿದು ಬಾಲಕಿ ಸಾವು: ಧಾರಾಕಾರ ಮಳೆಯಿಂದಾಗಿ ಕಾನಕೆರೆ ಎಂಬಲ್ಲಿ ನೌಶಾದ್ ಎಂಬುವವರ ಮನೆಯ ಹಿಂಬದಿಯ ಕಾಂಪೌಂಡ್ ಕುಸಿದಿದೆ. ಮನೆ ಮೇಲೆ ಮಣ್ಣು ಬಿದ್ದ ಪರಿಣಾಮ ಬಾಲಕಿ ನಯೀಮ ಮೇಲೆ ಕಿಟಕಿ ಬಿದ್ದಿದೆ. ಈ ವೇಳೆ ಗಂಭೀರವಾಗಿ ಗಾಯಗೊಂಡಿದ್ದ ಬಾಲಕಿಯನ್ನು ಆಸ್ಪತ್ರೆಗೆ ಸಾಗಿಸಿದ್ದು, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾಳೆ.

ರಸ್ತೆ, ಮನೆಗಳು ಜಲಾವೃತ: ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಮಳೆ ಅಬ್ಬರಿಸುತ್ತಿದೆ. ಜೆಪ್ಪಿನಮೊಗರು ಸೇರಿದಂತೆ ಹಲವೆಡೆ ಕೃತಕ ನೆರೆಯಿಂದ ಮನೆಗಳು ಜಲಾವೃತವಾಗಿದ್ದು, ಸಾಮಗ್ರಿಗೆ ಹಾನಿಯಾಗಿದೆ. ರಾಷ್ಟ್ರೀಯ ಹೆದ್ದಾರಿಯಾದ ಪಡೀಲ್‌ನ ರಸ್ತೆಯಲ್ಲಿ ನೀರು ತುಂಬಿ ವಾಹನಗಳ ಓಡಾಟಕ್ಕೆ ಅಡಚಣೆಯುಂಟಾದರೆ, ಪಡೀಲ್ ಬಜಾಲ್‌ನ ರೈಲ್ವೆ ಅಂಡರ್ ಪಾಸ್‌ನಲ್ಲಿ ನೀರು ತುಂಬಿ ವಾಹನಗಳು, ಜನರ ಓಡಾಟಕ್ಕೆ ತೊಂದರೆಯಾಗಿದೆ. ಜೋಕಟ್ಟೆ, ಹಂಪನಕಟ್ಟೆಯಲ್ಲಿ ಗುಡ್ಡ ಜರಿದು ಸಮಸ್ಯೆಯಾಗಿದ್ದರೆ, ಉಡುಪಿ ಜಿಲ್ಲೆಯ ಕಾರ್ಕಳದಲ್ಲಿಯೂ ಹಲವೆಡೆ ಕೃತಕ ನೆರೆಯಿಂದ ಮನೆಗಳು ಜಲಾವೃತವಾಗಿವೆ.

ಮಧೂರು ದೇವಸ್ಥಾನದ ಪ್ರಾಂಗಣ ಜಲಾವೃತ: ಶುಕ್ರವಾರ ಧಾರಾಕಾರ ಮಳೆ ಸುರಿಯುತ್ತಿದ್ದ ಪರಿಣಾಮ, ಮಧುವಾಹಿನಿ ಸಹಿತ ಕಾಸರಗೋಡು ಜಿಲ್ಲೆಯ ಹಲವು ನದಿಗಳು ತುಂಬಿ ಹರಿಯುತ್ತಿದೆ. ಮಧುವಾಹಿನಿ ಹೊಳೆ ತುಂಬಿ ಹರಿಯುತ್ತಿರುವುದರಿಂದ ಇತಿಹಾಸ ಪ್ರಸಿದ್ಧ ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನದ ಪ್ರಾಂಗಣದೊಳಗೆ ಮಳೆ ನೀರು ತುಂಬಿದೆ.

ಕಡಲಕೊರೆತದ ಆತಂಕದಲ್ಲಿ ಗ್ರಾಮಸ್ಥರು

ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ ಐದಾರು ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆ ಮತ್ತು ಪ್ರಕ್ಷುಬ್ಧಗೊಂಡಿರುವ ಸಮುದ್ರ ಕರಾವಳಿ ಜನರ ಪಾಲಿಗೆ ಸಂಕಷ್ಟದ ಸುಳಿಯಾಗಿ ಪರಿಣಮಿಸಿದೆ. ರಕ್ಕಸ ಅಲೆಗಳ ಅಬ್ಬರಕ್ಕೆ ಕಡಲಕೊರೆತ ತೀವ್ರಗೊಂಡಿದ್ದು, ನೂರಾರು ಕುಟುಂಬಗಳ ಬದುಕು ಮೂರಾಬಟ್ಟೆಯಾಗುವ ಭೀತಿಯಲ್ಲಿದೆ. ಅದರಲ್ಲಿಯೂ ಅಂಕೋಲಾ ತಾಲೂಕಿನ ಹಾರವಾಡ ಗ್ರಾಮದಲ್ಲಿ ಪರಿಸ್ಥಿತಿ ಅತಿ ಗಂಭೀರವಾಗಿದ್ದು, ಎರಡು ಮನೆಗಳು ಸಮುದ್ರ ಪಾಲಾಗುವ ಹಂತಕ್ಕೆ ತಲುಪಿವೆ. ಉತ್ತರ ಕನ್ನಡ ಜಿಲ್ಲೆಯ ಕರಾವಳಿಯು ಮಳೆಯ ಅಬ್ಬರ ಒಂದೆಡೆಯಾದರೆ, ಇನ್ನೊಂದೆಡೆ ಸಮುದ್ರದ ರೌದ್ರಾವತಾರಕ್ಕೆ ಸಿಲುಕಿ ನಲುಗಿದೆ. ಕಡಲಕೊರೆತದಿಂದಾಗಿ ಹಲವು ಕಡೆಗಳಲ್ಲಿ ಕಡಲತೀರ ಕುಸಿದಿದೆ. ಅಂಕೋಲಾ ತಾಲೂಕಿನ ಹಾರವಾಡ ಗ್ರಾಮದಲ್ಲಿ ಸಮುದ್ರವು ಬರೋಬ್ಬರಿ ಐದಾರು ಮೀಟರ್ ಭೂಪ್ರದೇಶವನ್ನು ಆಪೋಷನ ಮಾಡಿದೆ.

ಸಕಲೇಶಪುರದ ಬಳಿ ಭೂ ಕುಸಿತದ ಆತಂಕ

ಹಾಸನ ಜಿಲ್ಲೆಯ ಶಿರಾಡಿಘಾಟ್ ರಸ್ತೆ 75ರಲ್ಲಿ ಮತ್ತೆ ಭೂಕುಸಿತ ಉಂಟಾಗಿದೆ. ಸಕಲೇಶಪುರ ತಾಲೂಕಿನ ಮಾರನಹಳ್ಳಿ ಸಮೀಪ ಭೂಕುಸಿತದ ಪರಿಣಾಮ ರಸ್ತೆ ಕಾಮಗಾರಿ ಸ್ಥಗಿತಗೊಳಿಸಲಾಗಿದೆ. ಭಾರೀ ಪ್ರಮಾಣ ದಲ್ಲಿ ಭೂಕುಸಿತ ಉಂಟಾಗುತ್ತಿದ್ದು, ಅಧಿಕಾರಿಗಳು ಇಟಾಚಿ, ಲಾರಿ ಮೂಲಕ ಮಣ್ಣು ತೆರವು ಕಾರ್ಯ ಮಾಡಿದ್ದಾರೆ. ಮಣ್ಣು ಕುಸಿದ ಕೂಡಲೇ ಇಟಾಚಿ ಮೂಲಕ ಮಣ್ಣು ತೆರವು ಕಾರ್ಯಕ್ಕೆ ಅಧಿಕಾರಿಗಳು ವ್ಯವಸ್ಥೆ ಮಾಡಿದ್ದು, ನಿರಂತರ ಸುರಿಯುತ್ತಿರುವ ಮಳೆಗೆ ಹೆಚ್ಚಿನ ಪ್ರಮಾಣದಲ್ಲಿ ಭೂಮಿ ಕುಸಿಯುವ ಆತಂಕ ಎದುರಾಗಿದೆ.

ಉಳ್ಳಾಲ ಕಲ್ಲಾಪು ಪರಿಸರದಲ್ಲಿ ಮನೆಗಳಿಗೆ ನೀರು ನುಗ್ಗಿರುವುದು.

ಮಗುಚಿ ಬಿದ್ದ ಕಾರು: ತಪ್ಪಿದ ಭಾರೀ ಅನಾಹುತ

ಧಾರಾಕಾರ ಮಳೆಗೆ ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಮಗುಚಿ ಬಿದ್ದ ಘಟನೆ ಆಗುಂಬೆ ಘಾಟಿಯ 6ನೇ ತಿರುವಿನಲ್ಲಿ ನಡೆದಿದೆ. ಕಾರಿನಲ್ಲಿದ್ದವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪ್ರಾಣ ಹಾನಿಯಿಂದ ಬಚಾವ್ ಆಗಿದ್ದಾರೆ. ಕಾರು ಬಿದ್ದ ಕೂಡಲೇ ಸ್ಥಳೀಯರು ಕಾರಿನಲ್ಲಿದ್ದ ತಾಯಿ-ಮಗುವನ್ನು ರಕ್ಷಣೆ ಮಾಡಿದ್ದಾರೆ. ಈ ಬಗ್ಗೆ ಹೆಬ್ರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಲಿಕಲ್ ಘಾಟ್‌ನಲ್ಲಿ ಸಂಚಾರ ಅಸ್ತವ್ಯಸ್ತ

ಕರಾವಳಿ ಮಧ್ಯ ಕರ್ನಾಟಕದ ಅಗತ್ಯ ಉತ್ಪನ್ನಗಳ ಪ್ರಮುಖ ಸಂಪರ್ಕ ಕೊಂಡಿ ಹುಲಿಕಲ್ ಘಾಟ್ ಮಾರ್ಗದಲ್ಲಿ ಭಾರೀ ಪ್ರಮಾಣದಲ್ಲಿ ಮಣ್ಣು ಕುಸಿತ ಕಂಡು ಬಂದಿದ್ದು, ಸಂಚಾರಕ್ಕೆ ಆತಂಕ ತಂದೊಡ್ಡಿದೆ. ಹುಲಿಕಲ್ ಘಾಟ್ ಮಾರ್ಗದ ಚಂಡಿಕಾಂಬ ದೇವಸ್ಥಾನದ ಕೆಳಭಾಗದಲ್ಲಿ ಬರುವ ಹೇರ್ ಪಿನ್ ತಿರುವಿನಲ್ಲಿ ಭಾರಿ ಪ್ರಮಾಣದಲ್ಲಿ ಮಣ್ಣು ಕುಸಿತ ಕಂಡು ಬಂದಿದೆ. ಈ ಹಿಂದೆ ತಡೆಗೋಡೆ ಕಾಮಗಾರಿ ನಡೆದಿದೆಯಾದರೂ. ಕಳೆದ ಒಂದು ವಾರದಿಂದ ಸುರಿಯುತ್ತಿರುವ ಮಳೆಯಿಂದಾಗಿ ತಡೆಗೋಡೆಗೆ ಹಾಕಿದ ಮಣ್ಣು ಸೇರಿದಂತೆ ಕೆಳಭಾಗದವರೆಗೂ ಮಣ್ಣು ಕುಸಿದಿದ್ದು ಭಯದ ವಾತಾವರಣ ಸೃಷ್ಟಿಸಿದೆ.

ಅಂಕೋಲಾ ತಾಲೂಕಿನ ಹಾರವಾಡ ಗ್ರಾಮದಲ್ಲಿ ಕಡಲಕೊರೆತ.



ಇತಿಹಾಸ ಪ್ರಸಿದ್ಧ ಪೆರುವಾಜೆ ಶ್ರೀ ಜಲದುರ್ಗಾದೇವಿ ದೇವಾಲಯ ಅಂಗಣ, ಗರ್ಭಗುಡಿ ಸುತ್ತ ಜಲಾವೃತಗೊಂಡಿರುವುದು.

ರಕ್ಷಣಾ ಕಾರ್ಯಕ್ಕೆ ಸ್ಪೀಕರ್ ಯು.ಟಿ ಖಾದರ್ ಸೂಚನೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಪರೀತ ಮಳೆಯಿಂದಾಗಿ ಉಳ್ಳಾಲ ತಾಲೂಕಿನ ವಿವಿಧೆಡೆ ಗುಡ್ಡ ಕುಸಿತದಿಂದಾಗಿ ಪ್ರಾಣ ಹಾನಿ ಸಂಭವಿಸಿದ್ದು,ಮದೀನದಿಂದ ಮಾಹಿತಿ ಪಡೆದಿರುವ ಸಭಾಧ್ಯಕ್ಷ ಯು.ಟಿ.ಖಾದರ್, ರಕ್ಷಣಾ ಕಾರ್ಯಾಚರಣೆಗಾಗಿ ಅಗತ್ಯ ಕ್ರಮ ಕೈ ಗೊಳ್ಳಲು ಜಿಲಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕ ಮಳೆಯಾಗುತ್ತಿದ್ದು,ಉಳ್ಳಾಲ ತಾಲೂಕಿನ ಬೆಳ್ಮ ಹಾಗೂ ಮಂಜನಾಡಿ ಗ್ರಾಮದಲ್ಲಿ ಗುಡ್ಡ ಕುಸಿದು ಪ್ರಾಣ ಹಾನಿ ಸಂಭವಿಸಿದ್ದು ಹಾಗೂ ಉಳ್ಳಾಲ ನಗರಸಭೆ ವ್ಯಾಪ್ತಿಯ ಉಳ್ಳಾಲ ಬೈಲು, ಅಕ್ಕರೆಕೆರೆ, ಮಿಲ್ಲತ್ ನಗರ, ಉಳಿಯ, ಅಲೇಕಳ, ಸುಂದರಿಬಾಗ್, ಕಲ್ಲಾಪು ಸೋಮೇಶ್ವರ ಕೋಟೆಕಾರು ವ್ಯಾಪ್ತಿಯ ಕುಂಪಲ,ಕನೀರ್ ತೋಟ,ಉಚ್ಚಿಲ ಮುಂತಾದ ನದಿ ತಗ್ಗು ಪ್ರದೇಶಗಳಿಗೆ ಕೃತಕ ನೆರೆಯಿಂದ ಮನೆಗಳಿಗೆ ನೀರು ನುಗ್ಗಿ ಆಸ್ತಿ ಪಾಸ್ತಿಗಳಿಗೆ ನಷ್ಟ ಉಂಟಾಗಿದ್ದು ಮುಂಜಾಗ್ರತಾ ಕ್ರಮ ಹಾಗೂ ಅಗತ್ಯ ರಕ್ಷಣಾ ಕಾರ್ಯದ ಕುರಿತಾಗಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿದ್ದಾರೆ.

ಕಾನೂನು ಸುವ್ಯವಸ್ಥೆ ಹದಗೆಟ್ಟರೆ ರಾಜ್ಯದ ಅಭಿವೃದ್ಧಿ ಸಾಧ್ಯವಿಲ್ಲ | ಡಿಸಿ, ಸಿಇಒಗಳ ಸಭೆಯಲ್ಲಿ ಸಿದ್ದರಾಮಯ್ಯ ಹೇಳಿಕೆ

ಜನ ವಿರೋಧಿ ಶಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸಿಎಂ ಆದೇಶ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಂವಿಧಾನ ವಿರೋಧಿ, ಜನವಿರೋಧಿ ದುಷ್ಟ ಶಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಿ. ಇಲ್ಲವಾದರೆ ನಾವು ನಿಮ್ಮ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದು ಸಿಎಂ ಸಿದ್ದರಾಮಯ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಸಿಇಒಗಳಿಗೆ ಎಚ್ಚರಿಕೆ ನೀಡಿದರು.

ವಿಧಾನಸೌಧದಲ್ಲಿ ನಡೆದ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳ ಜತೆಗಿನ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಸಿಎಂ, ಸಂವಿಧಾನ ವಿರೋಧಿ, ಜನವಿರೋಧಿ ದುಷ್ಟ ಶಕ್ತಿಗಳು ಕೆಲವು ಕಡೆ ಬಾಲ ಬಿಚ್ಚುತ್ತಿವೆ. ಅವರು ಎಷ್ಟೇ ಪ್ರಭಾವಿ ಆಗಿರಲಿ, ಕಾನೂನು ಹಾಳು ಮಾಡಿದರೆ ಅಂಥವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ನಿಮ್ಮ ವಿರುದ್ಧ ನಾವು ಕ್ರಮ ಕೈಗೊಳ್ಳುತ್ತೇವೆ ಎಂದು ಎಚ್ಚರಿಕೆಯ ಸಂದೇಶ ರವಾನಿಸಿದರು.

ಕಾನೂನು ಸುವ್ಯವಸ್ಥೆ ಹದಗೆಟ್ಟರೆ ರಾಜ್ಯದ ಅಭಿವೃದ್ಧಿ ಸಾಧ್ಯವಿಲ್ಲ. ಇವೆರಡಕ್ಕೂ ನೇರಾನೇರ ಸಂಬಂಧವಿದೆ. ಕಾನೂನು ಸುವ್ಯವಸ್ಥೆ ಹದಗೆಟ್ಟರೆ, ಅಭಿವೃದ್ಧಿ ಕುಂಠಿತವಾದಂತೆ. ಇದಕ್ಕೆ ಜಿಲ್ಲಾಧಿಕಾರಿಗಳು, ಜಿಲ್ಲಾ ರಕ್ಷಣಾಧಿಕಾರಿಗಳು ನೇರ ಹೊಣೆ. ಸಂವಿಧಾನದ ಆಶಯ ಮತ್ತು ಧ್ಯೇಯೋದ್ದೇಶಗಳಿಗೆ ಯಾರೂ ವಿರುದ್ಧವಾಗಿ ಕಾರ್ಯನಿರ್ವಹಿಸಬಾರದು. ಅಂತಹ ಶಕ್ತಿಗಳು ಬೆಳೆಯಲು ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು. ಇತ್ತೀಚಿನ ದಿನಗಳಲ್ಲಿ ಇಂತಹ ಶಕ್ತಿಗಳು ತಲೆ ಎತ್ತುತ್ತಿದ್ದು, ಅಂತಹ ಶಕ್ತಿಗಳನ್ನು ಮೊಳಕೆಯಲ್ಲೇ ಚಿವುಟಿ ಹಾಕಬೇಕು. ಅಂತಹ ವ್ಯಕ್ತಿಗಳೂ ಯಾರೇ ಆಗಿದ್ದರೂ, ಅವರನ್ನು ಮಟ್ಟ ಹಾಕುವುದು, ಅಂತಹ ಶಕ್ತಿಗಳು ಬೆಳೆಯದಂತೆ ನೋಡಿಕೊಳ್ಳಬೇಕಾದುದು ಡಿಸಿ, ಸಿಇಒ, ಎಸ್‌ಪಿಗಳ ಜವಾಬ್ದಾರಿ ತಾನೇ? ಎಂದು ಮುಖ್ಯಮಂತ್ರಿಗಳು ಖಾರವಾಗಿ ಪ್ರಶ್ನಿಸಿದರು.

ನೀವೆಲ್ಲಾ ಸಂವಿಧಾನ ಓದಿದ್ದೀರಿ. ಅದರ ಆಶಯಗಳಿಗೆ, ಧ್ಯೇಯೋದ್ದೇಶಗಳಿಗೆ ಬದ್ಧರಾಗಿದ್ದೀರಿ ಎಂದು ನಂಬಿದ್ದೇನೆ. ಇದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ವಿಫಲರಾದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲು ನಿರ್ಧರಿಸಿದ್ದೇನೆ. ನಾವು ಜನರ ತೆರಿಗೆ ದುಡ್ಡಿನಲ್ಲಿ ಆಡಳಿತ ನಡೆಸುತ್ತಿದ್ದೇವೆ. ನಾವು ಮತ್ತು ನೀವು ಎಲ್ಲಾ ಸವಲತ್ತು ಅನುಭವಿಸುತ್ತಿರುವುದು ಜನರ ತೆರಿಗೆ ಹಣದಿಂದ ಎನ್ನುವುದನ್ನು ಮರೆಯಬಾರದು. ಕಾರು, ಮನೆ ಸೇರಿ ಎಲ್ಲಾ ಸವಲತ್ತುಗಳನ್ನು ನಾವು ಕೊಟ್ಟಿರುವುದು ತೆರಿಗೆ ಹಣದಲ್ಲಿ. ಆದ್ದರಿಂದ ಜನಪರ ಧೋರಣೆಯಲ್ಲಿ ಕೆಲಸ ಮಾಡಬೇಕು. ಇದೇ ಪ್ರಜಾಪ್ರಭುತ್ವದ ಮೂಲ ಆಶಯ. ಜಿಲ್ಲಾ ಮಟ್ಟದ ಶಾಂತಿ ಸಮಿತಿ ಅಧ್ಯಕ್ಷರು ಜಿಲ್ಲಾಧಿಕಾರಿಗಳೇ ಆಗಿರ್ತಾರೆ. ಶಾಂತಿ ಕಾಪಾಡಲು ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಶಾಂತಿಭಂಗ ಆದ ಮೇಲೆ ಪೋಸ್ಟ್ ಮಾರ್ಟಂ ಮಾಡುತ್ತಾ ಕೂರಬಾರದು. ಮೊದಲೇ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಲು ಏನು ಸಮಸ್ಯೆ ನಿಮಗೆ? ಎಂದು ಪ್ರಶ್ನಿಸಿದರು.

ವಿಧಾನಸೌಧದಲ್ಲಿ ನಡೆದ ಡಿಸಿ ಹಾಗೂ ಸಿಇಒಗಳ ಜತೆಗಿನ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

> ಹಿಂದಿನ ಸಭೆಯಲ್ಲಿ ನೀಡಿದ ಸೂಚನೆಗಳು, ತೆಗೆದುಕೊಂಡ ನಿರ್ಣಯಗಳಲ್ಲಿ ಕೆಲವು ಇಲಾಖೆಗಳು ಶೇ.100ರಷ್ಟು ಪ್ರಗತಿ ತೋರಿಸಿಲ್ಲ. ಇದನ್ನು ಸಹಿಸಲು ಸಾಧ್ಯವಿಲ್ಲ. ಈ ವಿಚಾರದಲ್ಲಿ ರಾಜಿ ಇಲ್ಲ. ಜನರ ಸಮಸ್ಯೆಗಳಿಗೆ ಸ್ಪಂದಿಸದ ಅಧಿಕಾರಿಗಳ ಮೇಲೆ ನಿಷ್ಠುರವಾಗಿ ಕ್ರಮ ಕೈಗೊಳ್ಳುವುದು ನಮಗೆ ಅನಿವಾರ್ಯ ಆಗುತ್ತದೆ. ಜಿಲ್ಲಾಧಿಕಾರಿ, ಜಿಲ್ಲಾ ರಕ್ಷಣಾಧಿಕಾರಿಗಳು ಮತ್ತು ಸಿಇಒಗಳು ತಮ್ಮ ಅಹಂ ಬದಿಗೊತ್ತಿ ಸಮನ್ವಯದಿಂದ ಕೆಲಸ ಮಾಡಿದರೆ ಮಾತ್ರ ರಾಜ್ಯದ ಸಮಗ್ರ ಅಭಿವೃದ್ಧಿ ಸಾಧ್ಯ. ಈ ಉದ್ದೇಶಕ್ಕೆ ನೀವುಗಳು ಐಎಎಸ್ ಮಾಡಿರುವುದು. ಇದನ್ನು ಅರ್ಥ ಮಾಡಿಕೊಳ್ಳಬೇಕು.
>
> ಸಿದ್ದರಾಮಯ್ಯ, ಮುಖ್ಯಮಂತ್ರಿ

ಬಾಲ್ಯವಿವಾಹ ತಡೆಗಟ್ಟಲು ಕ್ರಮಗಳೇನು?

ಬಾಲ್ಯ ವಿವಾಹ ಆಗುವುದು ಜಿಲ್ಲಾಧಿಕಾರಿಗಳ ಗಮನಕ್ಕೆ ಏಕೆ ಬರುವುದಿಲ್ಲ?. ನಿಮ್ಮ ಕೆಳಗಿನವರು ನಿಮಗೆ ವರದಿ ಮಾಡುವುದಿಲ್ಲವೇ?. ಕೆಳಗಿನವರು ನಿಮಗೆ ಹೇಳದಿದ್ದರೆ ನಿಮಗೆ ದಕ್ಷತೆ ಇಲ್ಲ ಎಂದು ಅರ್ಥ. ನಿಮಗೆ ಅಧಿಕಾರಿಗಳ ಮೇಲೆ ನಿಯಂತ್ರಣ ಇಲ್ಲ, ನಿಮ್ಮ ಬಗ್ಗೆ ಅವರಿಗೆ ಭಯ ಇಲ್ಲ ಎಂದೇ ಅರ್ಥ ಎಂದು ತರಾಟೆಗೆ ತೆಗೆದುಕೊಂಡರು. ಈ ವರ್ಷ 700 ಬಾಲ್ಯ ವಿವಾಹ ನಡೆದಿದೆ. ಬಾಲ್ಯ ದಲ್ಲೇ ತಾಯಂದಿರಾದ ಘಟನೆಗಳೂ ವರದಿಗಳಾ ಗಿವೆ. ಈ ಬಗ್ಗೆ ಹಲವು ಕಡೆ ಎಫ್‌ಐಆರ್ ಕೂಡ ದಾಖಲಾಗಿಲ್ಲ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಸ್ವಾತಂತ್ರ್ಯ ಬಂದು ಇಷ್ಟ ವರ್ಷಗಳಾ ದರೂ 700 ಬಾಲ್ಯ ವಿವಾಹ ನಡೆಯುತ್ತಿದೆ ಎಂದರೆ ಹೇಗೆ? ಬಾಲ್ಯವಿವಾಹ ತಡೆಗೆ ಕಾಯ್ದೆ, ಕಾನೂನುಗಳಿವೆ. ಆದರೂ ಇದನ್ನು ಪರಿಣಾಮಕಾರಿಯಾಗಿ ಕೆಲವು ಕಡೆ ಬಳಸಿಲ್ಲ. ಇದು ತಪ್ಪಲ್ಲವೇ? ಎಂದು ಸಿಎಂ ಪ್ರಶ್ನಿಸಿದರು.

ಸಿಎಂ ಡ್ಯಾಶ್‌ಬೋರ್ಡ್ ಲೋಕಾರ್ಪಣೆ

ಕರ್ನಾಟಕದಾದ್ಯಂತ ಪ್ರಮುಖ ಅಭಿವೃದ್ಧಿ ಕಾರ್ಯಗಳ ಮೇಲ್ವಿಚಾರಣೆಗಾಗಿ ರಿಯಲ್- ಟೈಮ್, ಸಂಯೋಜಿತ ಒಳನೋಟಗಳನ್ನು ಒದಗಿಸುವ ವೇದಿಕೆಯಾದ ಮುಖ್ಯಮಂತ್ರಿಗಳ ಡ್ಯಾಶ್‌ಬೋರ್ಡ್(ಸಿಎಂ ಡ್ಯಾಶ್ ಬೋರ್ಡ್) ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಬಿಡುಗಡೆ ಮಾಡಿದರು.

ಪರಿಶೀಲನಾ ಸಭೆಯಲ್ಲಿ ಸಿಎಂ ಡ್ಯಾಶ್‌ಬೋರ್ಡ್‌ಗೆ ಚಾಲನೆ ನೀಡಲಾಯಿತು. ಇ-ಆಡಳಿತ ಕೇಂದ್ರ(ಸಿಇಜಿ) ಆಂತರಿಕವಾಗಿ ಅಭಿವೃದ್ಧಿಪಡಿಸಿದ ಈ ಡ್ಯಾಶ್‌ಬೋರ್ಡ್ ಈಗ ಕ್ರಿಯಾತ್ಮಕವಾಗಿ ಪೂರ್ಣಗೊಂಡಿದೆ ಮತ್ತು cmdashboard.karnataka.gov.in ಡೊಮೇನ್ ಅಡಿಯಲ್ಲಿ ಹೋಸ್ಟ್ ಮಾಡಲಾಗಿದೆ. ಈ ಡ್ಯಾಶ್‌ಬೋರ್ಡ್ ಕರ್ನಾಟಕದಾದ್ಯಂತ ಪ್ರಮುಖ ಅಭಿವೃದ್ಧಿ ಕಾರ್ಯಗಳ ನೈಜ ಸ್ಥಿತಿ, ಸಂಯೋಜಿತ ಒಳನೋಟಗಳನ್ನು ಒದಗಿಸುತ್ತದೆ. ಇದು ಉನ್ನತ ಮಟ್ಟದಲ್ಲಿ ಡೇಟಾ-ಚಾಲಿತ ಆಡಳಿತ ಮತ್ತು ನಿರ್ಧಾರ ತೆಗೆದುಕೊಳ್ಳುವಿಕೆ ಸಕ್ರಿಯಗೊಳಿಸುತ್ತದೆ. ಈ ಪೋರ್ಟಲ್ ಮೂಲಕ ರಾಜ್ಯದ ಜನತೆಗೆ ಪಾರದರ್ಶಕವಾಗಿ ಪ್ರತಿ ಕ್ಷಣ ಪ್ರಗತಿ ಸೂಚ್ಯಂಕಗಳನ್ನು ಪ್ರದರ್ಶಿಸಲಾಗಿದೆ. ಜನಸ್ನೇಹಿ ಆಡಳಿತವನ್ನು ಒದಗಿಸಲು ಸಮಯ ಬದ್ಧ ಸೇವೆಗಳು, ಸಾರ್ವಜನಿಕ ಕುಂದು-ಕೊರತೆಗಳ ನಿರ್ವಹಣೆ, ಮಾಹಿತಿ ಹಕ್ಕು ಅಧಿನಿಯಮದಡಿ ಮಾಹಿತಿ ನೀಡಲಾಗುತ್ತಿರುವುದರೊಂದಿಗೆ ಉದ್ಯೋಗ ಸೃಷ್ಟಿ, ವಿವಿಧ ಕಲ್ಯಾಣ ಕಾರ್ಯಕ್ರಮಗಳ ಕೋಟ್ಯಾಂತರ ಫಲಾನುಭವಿಗಳ ಪೈಕಿ ವಿಶೇಷವಾಗಿ 5 ಗ್ಯಾರಂಟಿ ಯೋಜನೆಗಳ ಆರ್ಥಿಕ ಭೌತಿಕ ವಿವರವನ್ನು ಈ ತಂತ್ರಾಂಶದ ಮೂಲಕ ಒಂದೇ ವೇದಿಕೆಯಲ್ಲಿ ಲೋಕಾರ್ಪಣೆ ಮಾಡಲಾಗಿದೆ.

ವಿಶ್ವವಾಣಿ

ಸಂಪಾದಕೀಯ

ಕಾವ್ಯ ಚೇತನ ಎಚ್ಚೆಸ್ವಿ

ಕನ್ನಡ ಸಾಹಿತ್ಯ ಲೋಕದ ಶ್ರೀಮಂತಿಕೆಯನ್ನು ಭಾವಗೀತೆಗಳ ಮೂಲಕ ಹೆಚ್ಚಿಸಿದ ಹಿರಿಯ ಕವಿ ಎಚ್.ಎಸ್. ವೆಂಕಟೇಶ್ ಮೂರ್ತಿ ಅವರ ಅಗಲಿಕೆ ಕನ್ನಡ ಸಾರಸ್ವತ ಲೋಕಕ್ಕೆ ದೊಡ್ಡ ಆಘಾತ ನೀಡಿದೆ. ಕಾದಂಬರಿ, ಕತೆ, ವಿಮರ್ಶೆ, ಮಕ್ಕಳ ಸಾಹಿತ್ಯ, ಸಿನಿಮಾ ಸಾಹಿತ್ಯ, ರಂಗಭೂಮಿ, ಅನುವಾದ ಹೀಗೆ ಎಲ್ಲ ಸಾಹಿತ್ಯ ಪ್ರಕಾರಗಳಲ್ಲೂ ಎಚೆಸ್ವಿ ಅವರ ಕೊಡುಗೆ ಅನನ್ಯವಾದರೂ ಅವರನ್ನು ಕನ್ನಡಿಗರು ಗುರುತಿಸುವುದು ಕಾವ್ಯ ಚೇತನ ಎಂದೇ. ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದ ಎಚ್ಎಸ್ವಿ ಅವರು ಕನ್ನಡ ಭಾವಗೀತೆಗಳ ಭವ್ಯ ಪರಂಪರೆಯ ಪ್ರತಿನಿಧಿ ಎಂದರೆ ತಪ್ಪಾಗಲಾರದು. ಅವರು ತಮ್ಮ ಕವನಗಳ ಮೂಲಕ ನಾಡಿನ ಜನಮಾನಸದಲ್ಲಿ ಚಿರಸ್ಥಾಯಿಯಾಗಿದ್ದಾರೆ. ಕನ್ನಡ ಸಾಹಿತ್ಯದ ಕಾವ್ಯ ಪರಂಪರೆಗೆ ಹೊಸ ಭಾಷ್ಯ ಬರೆದ ಎಚ್ಎಸ್ವಿ ಅವರ ಗೀತೆಗಳು ನಮ್ಮನ್ನು ಬೇರೊಂದು ಲೋಕದ ಭಾವಲಹರಿಗೆ ಕೊಂಡೊಯ್ಯುತ್ತವೆ. 'ತೂಗು ಮಂಚದಲ್ಲಿ', 'ಅಮ್ಮ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ ಎಲ್ಲ ಸೇರಿ ನನ್ನ ಬಾಯಿಗೆ ಬೆಣ್ಣೆ ಮೆತ್ತಿದರಮ್ಮ', 'ಲೋಕದ ಕಣ್ಣಿಗೆ ರಾಧೆಯು ಕೂಡ ಎಲ್ಲರಂತೆ ಹೆಣ್ಣು', 'ಹುಚ್ಚು ಕೋಡಿ ಮನಸು ಅದು ಹದಿನಾರರ ವಯಸ್ಸು', ಗೀತೆಗಳು ಸದಾ ನಮ್ಮ ಕಿವಿಗಳಲ್ಲಿ ಅನುರಣಿಸುತ್ತಲೇ ಇವೆ. ಎಚ್ಚೆಸ್ವಿ ಅವರ ಪ್ರತಿ ಸಾಹಿತ್ಯವು ಭಾವನಾತ್ಮಕತೆ, ಗ್ರಾಮೀಣ ಜೀವನದ ಚಿತ್ರಣ, ಭಾಷೆಯ ಸರಳತೆ ಮತ್ತು ಆಳವಾದ ಅರ್ಥವನ್ನೊಳಗೊಂಡಿವೆ. ಗ್ರಾಮೀಣ ಪ್ರದೇಶದಲ್ಲಿ ಬೆಳೆದ ಅವರು ಯಕ್ಷಗಾನ, ಬಯಲಾಟ ಹಾಗೂ ಕುಮಾರವ್ಯಾಸ, ಪುರಂದರ, ಲಕ್ಷ್ಮೀಶರಂತಹ ಹಿರಿಯ ಕವಿಗಳ ಕೃತಿಗಳಿಂದ ಪ್ರೇರಿಪಿತರಾಗಿ ಕನ್ನಡದಲ್ಲಿ 100ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸುವ ಮೂಲಕ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.ಬುದ್ಧ ಚರಣ ಮಹಾ ಕಾವ್ಯದ ಮೂಲಕ ಅವರು ಸಾಹಿತ್ಯದ ಮತ್ತೊಂದು ಮಜಲನ್ನು ಸ್ಪರ್ಶಿಸಿದ್ದರು. ಅವರ ಅಲಿಕೆಯಿಂದ ಕನ್ನಡ ಸಾರಸ್ವತ ಲೋಕ ನಿಜಕ್ಕೂ ಬಡವಾಗಿದೆ. ಎಚ್ಎಸ್ವಿ ಅವರು ಇನ್ಮುಂದೆ ನಮ್ಮೊಂದಿಗೆ ಇಲ್ಲದಿದ್ದರೂ ಅವರ ಕವನಗಳು ನಮ್ಮ ಮನದಲ್ಲಿ ಅಚ್ಚಳಿಯದೇ ಉಳಿದಿವೆ. ಹೋಗಿ ಬನ್ನಿ...

ಸೊಂಪಾದಕೀಯ

ದಿಗ್ವೇಶ್ ಧಿಮಾಕು

ಕ್ರಿಕೆಟ್ ಅಂದ್ರೆ ನಮ್ಮ ದೇಶದಲ್ಲಿ ಅದೊಂಥರಾ ವಿಶೇಷವಾದ ಎಮೋಶನ್. ಆಡುವವರಲ್ಲೂ ನೋಡುವವರಲ್ಲೂ ಜೋಶ್ ತುಂಬುವ ಆಟ. ಹಾಗಾಗಿ ಕ್ರಿಕೆಟ್ ಅನ್ನು ಇನ್ನಿಲ್ಲದ ಉತ್ಸಾಹದಿಂದ ನೋಡೋ ಅಭಿಮಾನಿಗಳ ಸಂಖ್ಯೆ ನಮ್ಮ ದೇಶದಲ್ಲಿ ಕಮ್ಮಿ ಇಲ್ಲ. ಹಾಗೆಯೇ ಆಡುವ ಆಟಗಾರರೂ ಕೂಡಾ ಅದನ್ನು ಸಿಕ್ಕಾಪಟ್ಟೆ ಎಂಜಾಯ್ ಮಾಡುತ್ತಾರೆ. ಅದಕ್ಕೆ ಬೆಸ್ಟ್ ಉದಾಹರಣೆ ಅಂದ್ರೆ ನಮ್ಮ ಭಾರತ ಮತ್ತು ಆರ್‌ಸಿಬಿ ತಂಡಕ್ಕೆ ಆಡುವ ಕ್ರಿಕೆಟಿಗ ವಿರಾಟ್ ಕೊಹ್ಲಿ. ನೋಡುವ ಪ್ರೇಕ್ಷಕರಿಗಿಂತ ಒಂದು ಕೈ ಹೆಚ್ಚೇ ಎನ್ನುವಂತೆ ಮೈದಾನದಲ್ಲಿ ಅವರ ಅಗ್ರೆಷನ್ ನಮಗೆ ಕಾಣುತ್ತದೆ. ಆದರೆ ಅವರ ಅಗ್ರೆಷನ್ ಇತರ ಆಟಗಾರರನ್ನು ಅವಮಾನಿಸುವಂತೆ ಇರದೇ ತಮ್ಮ ಆಟವನ್ನು ಎಂಜಾಯ್ ಮಾಡುವಂತೆ ಇರುತ್ತದೆ. ಆದರೆ ಕೆಲವೊಂದು ಆಟಗಾರರು ಅದರಲ್ಲೂ ಬೌಲರ್ ಗಳು ವಿಕೆಟ್ ಪಡೆದಾಗ ಬ್ಯಾಟ್ಸ್‌ಮನ್ ಅನ್ನು ಅವಮಾನಿಸುವಂತೆ ಸೆಲಬ್ರೇಟ್ ಮಾಡ್ತಾರೆ. ಅದಕ್ಕೆ ತಕ್ಕಂತೆ ಅವರು ಮುಂದಿನ ಪಂದ್ಯಗಳಲ್ಲಿ ಕಜ್ಜಾಯ ತಿಂದಿದ್ದೂ ಉಂಟು. ಹಾಗಾಗಿ ಕರ್ಮ ಬಿಟ್ರೂ ಕ್ರಿಕೆಟ್ ಬಿಡಲ್ಲ ಎನ್ನುವಂತೆ ಮುಖಕ್ಕೆ ಮಂಗಳಾರತಿ ಎತ್ತಿಸಿಕೊಳ್ಳುತ್ತಾರೆ. ಅಂತಹ ಆಟಗಾರರ ಪೈಕಿ ಈಗೀಗ ಕಣ್ಣು ಬಿಡುತ್ತಿರೋ ದಿಗ್ವೇಶ್ ರಾಠಿ ಕೂಡಾ ಒಬ್ಬ. ಸದ್ಯಕ್ಕೆ ಎಲ್ ಎಸ್ ಜಿ ತಂಡಕ್ಕೆ ಆಡುತ್ತಿರುವ ದಿಗ್ವೇಶ್ ಈ ಬಾರಿಯ ಐಪಿಎಲ್ ನಲ್ಲಿ ವಿಕೆಟ್ ತೆಗೆದು ಹೆಸರು ಮಾಡಿದ್ದಕ್ಕಿಂತ ಫೈನ್ ಹಾಕಿಸಿಕೊಂಡು ಹೆಸರು ಮಾಡಿದ್ದೇ ಹೆಚ್ಚು. ಆದರೆ ಈತ ಬುದ್ಧಿ ಕಲಿಯುತ್ತಿಲ್ಲ ಅನ್ನೋದು ಆಶ್ಚರ್ಯ. ಈತನ ದುರ್ವರ್ತನೆ ನೋಡಿ ಬಿಸಿಸಿಐ ಈತನಿಗೆ ಹಲವಾರು ಬಾರಿ ದಂಡ ಹಾಕಿ, ಲಾಠಿ ಬೀಸಿದ್ದರೂ ಅದೆಲ್ಲ ದಂಡ ಎನ್ನುವಂತೆ ರಾಠಿ ತನ್ನ ದುರಹಂಕಾರ ಮುಂದುವರಿಸಿದ್ದಾನೆ. ಅದು ಆತನ ಕೊನೆಯ ಪಂದ್ಯದಲ್ಲೂ ಸಾಬೀತಾಗಿದೆ. ಐಪಿಎಲ್ ನಲ್ಲಿ ಅವರ ತಂಡ ನೆಲ ಕಚ್ಚಿದ್ದರೂ ಮತ್ತೆ ನೆಲದ ಮೇಲೆ ಬರೆಯುವ ಕೆಲಸ ಮಾಡಿ ವಿಕೆಟ್ ಸೆಲಬ್ರೇಟ್ ಮಾಡಿದ್ದಾನೆ ದಿಗ್ವೇಶ್. ಹೋಗ್ಲಿ ಅಂದ್ರೆ ಈತ ಕೋಟಿ ಕೋಟಿ ಮೊತ್ತಕ್ಕೆ ಸೇಲ್ ಆಗಿಲ್ಲ. ಈತನಿಗೆ ಐಪಿಎಲ್ ನಲ್ಲಿ ಸಿಕ್ಕಿರೋದು 30 ಲಕ್ಷ ಅಷ್ಟೇ. ಜೊತೆಗೆ ಈತ ಬಡ ಕುಟುಂಬದಿಂದ ಬಂದವನಂತೆ. ಈತನ ದಂಡವನ್ನು ಆತನ ತಂಡ ಕಟ್ಟೋದ್ರಿಂದ ಬಚಾವ್ ಆಗಿದ್ದಾನೆ. ಅವನೇ ಕಟ್ಟಬೇಕು ಅಂದಿದ್ರೆ ಈತ ವಿಜಯ್ ಮಲ್ಯಗಿಂತ ದೊಡ್ಡ ಸಾಲಗಾರ ಆಗಿರ್ತಿದ್ದ ಅನ್ನೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಶಬ್ದಬ್ರಹ್ಮ ತಿ.ತಾ.ಶರ್ಮ

ಸುದ್ದಿಮನೆಯನ್ನು 'ಪದ ಟಂಕಸಾಲೆ' ಅಂತಾನೂ ಕರೆಯುತ್ತಾರೆ. ಕಾರಣ ಸುದ್ದಿಮನೆಯ ಮುಖ್ಯಧಾತುವೇ ಪದಗಳು. ಎಲ್ಲರಿಗೂ ಪರಿಚಿತ ಪದಗಳನ್ನು ಬಳಸಬೇಕು ಎನ್ನುವುದು ಸುದ್ದಿಮನೆ ಧರ್ಮ. ಆದರೆ ಎಲ್ಲಾ ಸಂದರ್ಭಗಳಲ್ಲೂ ಇದು ಸಾಧ್ಯವಾಗಲಿಕ್ಕಿಲ್ಲ. ಅದಕ್ಕಿಂತ ಮುಖ್ಯವಾಗಿ, ಆಗಾಗ ಹೊಸ ಪದಗಳನ್ನು ಟಂಕಿಸಬೇಕಾದ ಸನ್ನಿವೇಶಗಳು ಪ್ರತಿದಿನವೂ ಬರುತ್ತವೆ.

ಬೆಂಗಳೂರು ನಗರದಲ್ಲಿ ಕಾರು ಚಾಲಕರು ದ್ವಿಚಕ್ರ ವಾಹನ ಸವಾರರಿಗೆ ತಾಕಿಸಿ, ಅಪಘಾತ ಮಾಡಿ ಪರಾರಿಯಾಗುವ ಘಟನೆಗಳು ಹೆಚ್ಚಾದಾಗ Hit and run ಎಂಬ ಪದಪುಂಜ ಮೇಲಿಂದ ಮೇಲೆ ಬಳಕೆಯಾಗಲಾರಂಭಿಸಿದಾಗ, ಅದನ್ನು ಕನ್ನಡಕ್ಕೆ 'ಗುದ್ದೋಡು' ಎಂದು ಟಂಕಿಸಲಾಯಿತು. ಅದು ಎಲ್ಲರಿಗೂ ಸುಲಭವಾಗಿ ಅರ್ಥವಾಗುವ ಪದ. ಪ್ರತಿದಿನವೂ ಸುದ್ದಿಮನೆಯಲ್ಲಿ ಹೊಸ ಹೊಸ ಪದಗಳನ್ನು ಟಂಕಿಸಬೇಕಾಗುತ್ತದೆ. ಇದೊಂದು ವಿಶೇಷ ಪರಿಣತಿ. ಮೊದಲ ಬಾರಿಗೆ 'ವ್ಯಾಕ್ಯೂಮ್ ಕ್ಲೀನರ್' ಮಾರುಕಟ್ಟೆಗೆ ಬಂದಾಗ, ಅದಕ್ಕೆ ಕನ್ನಡದಲ್ಲಿ ಏನನ್ನೋದು ಎಂಬ ಪ್ರಶ್ನೆ ಎದುರಾದಾಗ, ಹೀರು ಪೊರಕೆ ಎಂದು ಅನುವಾದ ಮಾಡಲಾಯಿತು. ಅದು 'ವ್ಯಾಕ್ಯೂಮ್ ಕ್ಲೀನರ್'ನ ಕಾರ್ಯವನ್ನು ಸಹ ತಿಳಿಸಿಕೊಡುವುದರಿಂದ ಉತ್ತಮ ಅನುವಾದ ಎನಿಸಿಕೊಂಡಿತು. ಅಷ್ಟೇ ಅಲ್ಲ, ಅದು ಕನ್ನಡಕ್ಕೆ ಸಿಕ್ಕ ಹೊಸ ಪದ.

ಟಿವಿ ಮಾರುಕಟ್ಟೆಗೆ ಬಂದಾಗ ಕನ್ನಡದಲ್ಲಿ ಅದನ್ನು ಏನೆಂದು ಕರೆಯುವುದು ಎಂಬ ಜಿಜ್ಞಾಸೆ ಕನ್ನಡದ ಸುದ್ದಿಮನೆಗಳಲ್ಲಿ ಮೂಡಿತ್ತು. ಆಗ ಪತ್ರಕರ್ತ ವೈಎನ್ಕೆ, ಶ್ರವಣ ಸಾಧನವನ್ನು 'ರೇಡಿಯೋ' ಎಂದು ಕರೆಯಬಹುದಾದರೆ, ಟಿವಿಯನ್ನು 'ನೋಡಿಯೋ' ಎಂದು ಏಕೆ ಕರೆಯಬಾರದು ಎಂದು ಹೇಳಿದ್ದರು. ಆದರೆ ಟಿವಿ ಅತ್ಯಂತ ಚಿಕ್ಕ ಪದವಾಗಿರುವುದರಿಂದ, ಹೆಡ್‌ಲೈನ್ ನಲ್ಲಿ ; 'ನೋಡಿಯೋ' ಬಳಕೆಯಾಗಲಿಲ್ಲ ಎನ್ನುವುದು ಬೇರೆ ಮಾತು. ಇಂದು ನಾವು ಬಳಸುವ ಅವೆಷ್ಟೋ ಪದಗಳನ್ನು ಸುಮಾರು ಅರವತ್ತು-ಎಪ್ಪತ್ತು ವರ್ಷಗಳ ಹಿಂದೆ, ಕನ್ನಡದ ಸುದ್ದಿಮನೆಗಳಲ್ಲಿ ಟಂಕಿಸಿದವುಗಳೇ. ಮೊಟ್ಟ ಮೊದಲ ಬಾರಿಗೆ ಲಂಡನ್‌ನಲ್ಲಿ 1930 ರಲ್ಲಿ 'ರೌಂಡ್ ಟೇಬಲ್ ಕಾನ್ಫರೆನ್ಸ್' ನಡೆದಾಗ, ಅದರಲ್ಲಿ ಗಾಂಧೀಜಿ ಭಾಗವಹಿಸಿದಾಗ, ಆ ಪದಕ್ಕೆ ಕನ್ನಡದಲ್ಲಿ ಏನೆಂದು ಕರೆಯುವುದು ಎಂಬ ಪ್ರಶ್ನೆ ತಲೆದೋರಿತು. ಅದಕ್ಕಿಂತ ಮುಂಚೆ ಆ ಪದವನ್ನು ಸುದ್ದಿಮನೆಯಲ್ಲಿ ಯಾರೂ ಕೇಳಿರಲಿಲ್ಲ. ಇಂಥ ಸಂದರ್ಭದಲ್ಲಿ ಸುದ್ದಿಮನೆಯಲ್ಲಿರುವ 'ಶಬ್ದಬ್ರಹ್ಮ'ರು ಒದಗಿ ಬರುತ್ತಾರೆ.

'ರೌಂಡ್ ಟೇಬಲ್ ಕಾನ್ಫರೆನ್ಸ್ 'ಗೆ ಕನ್ನಡದ ಬೇರೆ ಬೇರೆ ಪತ್ರಿಕೆಗಳು ಒಂದೊಂದು ರೀತಿಯಲ್ಲಿ ಬರೆದಿದ್ದವು. ವಿಜಯಪುರದ 'ಕರ್ನಾಟಕ ವೈಭವ'ದಲ್ಲಿ ದುಂಡು ಮೇಜಿನ ಪರಿಷತ್ತು, ವರ್ತುಲ ಪರಿಷತ್ತು, ಗದಗಿನ 'ಕರ್ನಾಟಕ ಬಂದೂರ್'ನಲ್ಲಿ ತಿಗರಿ ಪರಿಷತ್, ಬಂಡಿ ಗಾಲಿ ಪರಿಷತ್ತು, ಹುಬ್ಬಳ್ಳಿಯ 'ವಿಶ್ವಕರ್ನಾಟಕ'ದಲ್ಲಿ ಚಕ್ರಗೋಷ್ಠಿ, ಧಾರವಾಡದ 'ರಾಜಹಂಸ' ಪತ್ರಿಕೆಯಲ್ಲಿ ಮಂಡಲಾಕಾರದ ಪರಿಷತ್ತು ಎಂಬ ಪದಗಳನ್ನು ಬಳಸಲಾಗಿತ್ತು ಎಂದು ಪತ್ರಕರ್ತ ಡಾ.ಎಸ್.ಆರ್. ರಾಮಸ್ವಾಮಿ ಅವರು ತಿ.ತಾ.ಶರ್ಮ ಅವರ ಬಗ್ಗೆ ಬರೆದ ಲೇಖನವೊಂದರಲ್ಲಿ ಹೇಳಿದ್ದಾರೆ.

'ಥಿಯರಿ ಆಫ್ ರಿಲೇಟಿವಿಟಿ' ಯನ್ನು ಸಾಪೇಕ್ಷವಾದ ಎಂದು ಟಂಕಿಸಿದವರೂ ತಿ.ತಾ.ಶರ್ಮರೇ. ಸುಗ್ರೀವಾಜ್ಞೆ, ಭರತವಾಕ್ಯ, ಚಕ್ರಗೋಷ್ಠಿ, ಕ್ರಿಯಾಲೋಪ (ಪಾಯಿಂಟ್ ಆಫ್ ಆರ್ಡರ್), ಗೊತ್ತುವಳಿ (ಮೋಷನ್), ಕಂಠಕೌಪೀನ (ಟೈ), ಬಡ ಬೋರೇಗೌಡ, ಮಾತಿನ ಮಲ್ಲ ಮುಂತಾದ ಪದಗಳು ಶರ್ಮರಿಂದ ಟಂಕಿಸಲಾದವುಗಳು. ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹ ಕುರಿತ ವರದಿಗೆ ತಿ.ತಾ.ಶರ್ಮರು, 'ಧರ್ಮ ಸಂಗ್ರಾಮ : ಲವಣಾಸುರ ವಧೆ' ಎಂಬ ಶೀರ್ಷಿಕೆ ನೀಡಿದ್ದು ಆ ದಿನಗಳಲ್ಲಿ ಗಮನ ಸೆಳೆದಿತ್ತು. ಸಿದ್ದವನಹಳ್ಳಿ ಕೃಷ್ಣ ಶರ್ಮ ಅವರೂ ಈ ನಿಟ್ಟಿನಲ್ಲಿ ಗಣನೀಯ ಕೆಲಸ ಮಾಡಿದ್ದಾರೆ. ಆ ದಿನಗಳಲ್ಲಿ ಇಂಥ ಶಬ್ದಬ್ರಹ್ಮರು ಟಂಕಿಸಿದ ಅನೇಕ ಪದಗಳನ್ನು ನಾವು ಇಂದಿಗೂ ಬಳಸುತ್ತಿದ್ದೇವೆ. ವಿಧಾನ ಮಂಡಲದ ಕಾರ್ಯಕಲಾಪಗಳ ಹೆಚ್ಚಿನ ಪದಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಇವರಿಬ್ಬರು ಅನುವಾದಿಸಿದ್ದು ಎಂಬುದು ಗಮನಾರ್ಹ.

ಭಾರತ ಜಪಾನ್ ಮೀರಿಸಿದರೆ ಎಡಚರರಿಗೆ ಉರಿ

ಕರೊನಾದಂತಹ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿ ಕಳೆದ ಹತ್ತು ವರ್ಷದಲ್ಲಿ ಭಾರತದ ಆರ್ಥಿಕತೆ ನಾಲ್ಕನೇ ಸ್ಥಾನಕ್ಕೆ ತಲುಪಿರುವುದು, ಎಡಚರರ ಬುಡಕ್ಕೆ ಬೆಂಕಿ ಇಟ್ಟಂತಾಗಿದೆ. 2014 ರಲ್ಲಿ ಭಾರತದ ತಲಾದಾಯ ಅಂದಾಜು 1100 ಅಮೆರಿಕನ್ ಡಾಲರ್ ನಷ್ಟಿತ್ತು. 2025 ರಲ್ಲಿ ತಲಾದಾಯ 2800 ಅಮೆರಿಕನ್ ಡಾಲರ್ ನಷ್ಟಿದೆ. ಮೋದಿ ಅವಧಿಯ ತಲಾದಾಯದ ಬಗ್ಗೆ ಮಾತನಾಡುವ ಕಾಂಗ್ರೆಸ್ ಮತ್ತು ಎಡಚರ ಪಟಾಲಂ, 1991 ರಲ್ಲಿ ಭಾರತದ ತಲಾದಾಯ ಕೇವಲ 300 ಅಮೆರಿಕನ್ ಡಾಲರ್‌ನಷ್ಟಿದ್ದ ಬಗ್ಗೆ ಮಾತನಾಡುವುದಿಲ್ಲ.

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ

camohanbn@gmail.com

ಒಂದು ಕಾಲದಲ್ಲಿ ಅಭಿವೃದ್ಧಿ ಎಂದರೆ 'ಜಪಾನ್' ದೇಶದ ಹೆಸರು ಚರ್ಚೆಗೆ ಬರುತ್ತಿತ್ತು. ಜಗತ್ತಿನ ದೊಡ್ಡ ಆರ್ಥಿಕ ಶಕ್ತಿ,ಬುಲೆಟ್ ರೈಲು, ಶಿಸ್ತು, ಇಲೆಕ್ಟ್ರಾನಿಕ್ ಉಪಕರಣಗಳ ಉತ್ಪಾದನೆ. ಅಭಿವೃದ್ಧಿಯೆಂದರೆ ಜಪಾನ್ ದೇಶದ ಮಾದರಿಯಂತಿರಬೇಕೆಂಬ ಮಾತುಗಳು ಸರ್ವೇ ಸಾಮಾನ್ಯವಾಗಿತ್ತು. ಶಾಲೆಗಳಲ್ಲಿ ಶಿಕ್ಷಕರು ಜಪಾನ್ ದೇಶದ ಉದಾಹರಣೆ ನೀಡಿ ಪಾಠ ಮಾಡುತ್ತಿದ್ದರು. ಕಾರ್ಖಾನೆಗಳಲ್ಲಿ ಜಪಾನ್ ದೇಶದ ಕೆಲಸಗಾರರ ಉದಾಹರಣೆ ನೀಡಿ ಕೆಲಸ ಮಾಡಿಸಲಾಗುತ್ತಿತ್ತು. ಜಪಾನ್ ದೇಶದಿಂದ ಆಮದು ಮಾಡಿಕೊಳ್ಳುವ ವಸ್ತುಗಳಿಗೆ ಎಲ್ಲಿಲ್ಲದ ಬೇಡಿಕೆ ಇತ್ತು. ಎರಡನೇ ಮಹಾಯುದ್ಧದಲ್ಲಿ ಅಮೆರಿಕ ನಡೆಸಿದ ಅಣುಬಾಂಬ್ ದಾಳಿಗೆ ಸರ್ವನಾಶವಾಗಿದ್ದ ಜಪಾನ್ ದೇಶದ ಆರ್ಥಿಕತೆ ಕೆಲವೇ ದಶಕಗಳಲ್ಲಿ ಜಗತ್ತು ತನ್ನೆಡೆಗೆ ನೋಡುವಂತೆ ಅಭಿವೃದ್ಧಿಯನ್ನು ಕಂಡಿತ್ತು. ಜಪಾನ್ ದೇಶದ ಜನರ ಸತತ ಪರಿಶ್ರಮದ ಫಲ ದೊಡ್ಡಣ್ಣ ಅಮೆರಿಕಾದ ತಂತ್ರಜ್ಞಾನದೊಂದಿಗೆ ಸ್ಪರ್ಧೆಗೆ ಇಳಿಯುವ ಮಟ್ಟಕ್ಕೆ ಬೆಳೆಯುವಂತೆ ಮಾಡಿತ್ತು.

2014 ರಲ್ಲಿ ನರೇಂದ್ರ ಮೋದಿ ಪ್ರಧಾನಮಂತ್ರಿಯಾಗುವ ಸಮಯದಲ್ಲಿ ಭಾರತ ಜಗತ್ತಿನ ಆರ್ಥಿಕತೆಯಲ್ಲಿ 10ನೇ ಸ್ಥಾನದಲ್ಲಿತ್ತು, ಭಾರತ ಹೆಚ್ಚಾಗಿ ವಿದೇಶಿ ವಸ್ತುಗಳ ಆಮದಿನ ಮೇಲೆ ಅವಲಂಬಿತವಾಗಿತ್ತು. ಭಾರತದಲ್ಲಿ ಬಳಸುತ್ತಿದ್ದಂತಹ ಮೊಬೈಲ್ ಫೋನುಗಳು ಹೆಚ್ಚಾಗಿ ವಿದೇಶದಿಂದ ಆಮದಾಗುತ್ತಿದ್ದವು. ಒಂದು ಜಿ.ಬಿ ಇಂಟರ್ ನೆಟ್ ಬೆಲೆ 300 ರು. ಇತ್ತು. ಕಾರುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಬೆಂಗಳೂರು ಮೈಸೂರಿನ ನಡುವೆ ಪ್ರಯಾಣ ಮಾಡಲು ನಾಲ್ಕು ಗಂಟೆ ಸಮಯ ಬೇಕಿತ್ತು. ಭಾರತೀಯ ರೈಲ್ವೆಯಲ್ಲಿ ಅವ್ಯವಸ್ಥೆ ಎದ್ದು ಕಾಣುತ್ತಿತ್ತು. ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗುತ್ತಿರಲಿಲ್ಲ. ಭಾರತದ ಆರ್ಥಿಕತೆಯನ್ನು ಜಗತ್ತಿನ ದುರ್ಬಲ ಆರ್ಥಿಕತೆ ಎಂದು ಕರೆಯಲಾಗುತ್ತಿತ್ತು. 2004 ರಿಂದ 2014 ರ ನಡುವೆ ಹತ್ತು ವರ್ಷಗಳ ಕಾಲ ಆಡಳಿತ ನಡೆಸಿದ 56 ಪುಟಗಳ 'ಬಯೋ ಡೇಟಾ'ಹೊಂದಿದ್ದ ಮನಮೋಹನ್ ಸಿಂಗ್ ಅವಧಿಯಲ್ಲಿ ಹಗರಣಗಳ ಸರಮಾಲೆಗಳು ನಡೆದವು. ಭಾರತದಲ್ಲಿ ಹೂಡಿಕೆ ಮಾಡಲು ವಿದೇಶಿ ಬಂಡವಾಳಶಾಹಿಗಳು ಆಸಕ್ತಿಯನ್ನು ತೋರುತ್ತಿರಲಿಲ್ಲ,ಬಂಡವಾಳ ಹೂಡಲು ಬೇಕಿದ್ದಂತಹ ಉತ್ತಮ ವಾತಾವರಣವನ್ನು ಸೃಷ್ಟಿಸುವಲ್ಲಿ ಕಾಂಗ್ರೆಸ್ ವಿಫಲವಾಗಿತ್ತು.

2025 ರಲ್ಲಿ ಭಾರತ, ಜಪಾನ್ ದೇಶವನ್ನು ಹಿಂದಿಕ್ಕಿ ಜಗತ್ತಿನ ನಾಲ್ಕನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ. ಭಾರತದ ಆರ್ಥಿಕತೆ ನಾಲ್ಕು ಟ್ರಿಲಿಯನ್ ಅಮೆರಿಕನ್ ಡಾಲರ್ ದಾಟಿದೆ. ಕಳೆದ ಹತ್ತು ವರ್ಷಗಳಲ್ಲಿ ಬ್ರೆಜಿಲ್, ಬ್ರಿಟನ್, ಫ್ರಾನ್ಸ್, ಜಪಾನ್ ದೇಶಗಳನ್ನು ಹಿಂದಿಕ್ಕುವಲ್ಲಿ ಭಾರತ ಯಶಸ್ವಿಯಾಗಿದೆ. ನೋಟು ಅಮಾನ್ಯೀಕರಣ, ಜಿ.ಎಸ್‌ಟಿ, ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ ರೀತಿಯ ಉಪಕ್ರಮಗಳ ಮೂಲಕ ಭಾರತದ 'ಜಿ.ಡಿ.ಪಿ'ಯಲ್ಲಿ ಪಾರದರ್ಶಕತೆ ಎದ್ದು ಕಾಣುತ್ತದೆ. 2025 ರಲ್ಲಿ ಒಂದು ಜಿ.ಬಿ. ಇಂಟರ್ ನೆಟ್ ಬೆಲೆ ಕೇವಲ ಹತ್ತು ರೂಪಾಯಿಗೆ ಇಳಿದಿದೆ. ಭಾರತದೊಳಗೆ 2 ಲಕ್ಷ ಕೋಟಿಗೂ ಅಧಿಕ ಮೌಲ್ಯದ ಮೊಬೈಲ್ ಉತ್ಪಾದನೆಯಾಗುತ್ತಿದೆ. ಆ್ಯಪಲ್ ಮೊಬೈಲ್ ಗಳನ್ನು ಕರ್ನಾಟಕದಲ್ಲಿ ಉತ್ಪಾದಿಸಲಾಗುತ್ತಿದೆ. ಸ್ಯಾಮ್ ಸಂಗ್ ಉತ್ತರ ಪ್ರದೇಶದಲ್ಲಿ ತನ್ನ ದೊಡ್ಡ ಉತ್ಪಾದನಾ ಘಟಕವನ್ನು ಸ್ಥಾಪಿಸಿದೆ. ರೇಂಜ್ ರೋವರ್, ಜಾಗ್ವಾರ್ ಕಾರುಗಳು ಭಾರತದಲ್ಲಿ ಮಾರಾಟವಾಗುತ್ತಿವೆ. ಹುಂಡಾಯ್ ಕಂಪೆನಿ ಆಂಧ್ರಪ್ರದೇಶದ ಪೆನುಕೊಂಡದ ಸಮೀಪ ದೊಡ್ಡ ಉತ್ಪಾದನಾ ಘಟಕವನ್ನು ಹೊಂದಿದೆ. ಗುಜರಾತಿನಲ್ಲಿ ಟಾಟಾ ಸಂಸ್ಥೆಯ ಕಾರುಗಳು ಉತ್ಪಾದನೆಯಾಗುತ್ತಿವೆ. ಮುಂಬೈ ಷೇರು ಮಾರುಕಟ್ಟೆ 85000 ಸೂಚ್ಯಂಕ ಕ್ಕೆ ತಲುಪಿದೆ. ಮೈಕ್ರೋಸಾಫ್ಟ್ ಹೈದರಾಬಾದಿನಲ್ಲಿ ಅತೀದೊಡ್ಡ ಸಂಶೋಧನಾ ಘಟಕವನ್ನು ನಿರ್ಮಿಸಿದೆ. ಗೂಗಲ್ ಸಂಸ್ಥೆ ಹೈದರಾಬಾದಿನಲ್ಲಿ ತನ್ನ ಎರಡನೇ ಅತೀ ದೊಡ್ಡ ಕ್ಯಾಂಪಸ್ ನಿರ್ಮಿಸುತ್ತಿದೆ. ಬಡ ಮಧ್ಯಮ ವರ್ಗದವರು ಹೆಚ್ಚಾಗಿ ಬಳಸುವ ಎಲೆಕ್ಟ್ರಿಕ್ ದ್ವಿಚಕ್ರವಾಹನ ಉತ್ಪಾದನೆ ಭಾರತದ ಒಳಗೆ ಆಗುತ್ತಿದೆ. ಆಪರೇಷನ್ ಸಿಂಧೂರ ಮೂಲಕ ಮೇಕ್ ಇನ್ ಇಂಡಿಯಾ ಅಡಿಯಲ್ಲಿ ನಿರ್ಮಾಣವಾಗಿರುವ ಬ್ರಹ್ಮೋಸ್, ಆಕಾಶ್ ಡಿ-4 ಕ್ಷಿಪಣಿಗಳು ಜಗತ್ತಿಗೆ ಪರಿಚಯವಾಗಿವೆ. ಜಗತ್ತಿನ ದೊಡ್ಡ ದೇಶಗಳು ಭಾರತದಲ್ಲಿ ನಿರ್ಮಾಣವಾದ ಡಿಫೆನ್ಸ್ ಉಪಕರಣಗಳ ಖರೀದಿಗೆ ಮುಂದಾಗಿವೆ. ಬೋಯಿಂಗ್ ಮತ್ತು ಏರ್ ಬಸ್ ಸಂಸ್ಥೆಗಳು ಭಾರತದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಕಂಪೆನಿಗಳ ಹೆಸರನ್ನು ಭಾರತದಲ್ಲಿ ಕೇಳುತ್ತೇವೆಂದು ಯಾರೂ ಸಹ ಊಹಿಸಿರಲಿಲ್ಲ. ಭಾರತದ 'ಜಿ.ಡಿ.ಪಿ' ಜಪಾನ್ ದೇಶದ ಜಿ.ಡಿ.ಪಿ ಯನ್ನು ಹಿಂದಿಕ್ಕಿದಾಗ, ಕೊಂಕು ಹುಡುಕುವ ಎಡಚರ ಪಟಾಲಂ ತಮ್ಮ ಕಣ್ಣ ಮುಂದೆ ಇಷ್ಟೆಲ್ಲಾ ಉದಾಹರಣೆಗಳಿದ್ದರೂ ಸಹ ಜಟ್ಟಿ ಕೆಳಗೆ ಬಿದ್ದರೂ ಮೀಸೆ ಮಣ್ಣಾಗದ ರೀತಿ ನಡೆದುಕೊಳ್ಳುತ್ತಾರೆ. ಜಗತ್ತಿನಲ್ಲಿ ಸತ್ತು ಹೋಗಿರುವ ಕಮ್ಯುನಿಸ್ಟ್ ಸಿದ್ಧಾಂತವನ್ನು ಮುನ್ನೆಲೆಗೆ ತಂದು ಹಳೆಯ ಪುಂಗಿಯನ್ನು ಇಂದಿಗೂ ಊದುತ್ತಿರುತ್ತಾರೆ. ವ್ಯವಹಾರದಲ್ಲಿ 10 ರೂಪಾಯಿಯನ್ನು 20 ರೂಪಾಯಿ ಮಾಡುವುದು ಸುಲಭ. 100 ರೂಪಾಯಿಯನ್ನು 200 ಮಾಡುವುದು ತುಸು ಕಷ್ಟ, 1000 ರೂಪಾಯಿಯನ್ನು 2000 ರೂಪಾಯಿ ಮಾಡುವುದು ಕಷ್ಟ. ದೇಶಗಳ ಆರ್ಥಿಕ ಬೆಳವಣಿಗೆ ವಿಚಾರದಲ್ಲಿಯೂ ಈ ನಿಯಮ ಚಾಚೂ ತಪ್ಪದೆ ಅನ್ವಯವಾಗುತ್ತದೆ. ಭಾರತ ಈಗ ತಲುಪಿರುವ ನಾಲ್ಕು ಟ್ರಿಲಿಯನ್ ಆರ್ಥಿಕತೆಯನ್ನು ಎಂಟು ಟ್ರಿಲಿಯನ್ ಮಾಡಲು ಸ್ವಲ್ಪ ಸಮಯ ಬೇಕು. ಮನಮೋಹನ್ ಸಿಂಗ್ ಅವಧಿಯಲ್ಲಿ ಕರೋನ ಇರಲಿಲ್ಲ, ರಷ್ಯಾ ಉಕ್ರೇನ್ ಯುದ್ಧ ಇರಲಿಲ್ಲ, ಆದರೂ ಸಹ ಭಾರತದ ಆರ್ಥಿಕತೆ 10 ನೇ ಸ್ಥಾನಕ್ಕೆ ತಳ್ಳಲ್ಪಟ್ಟಿತ್ತು. ಮಾತೆತ್ತಿದ್ದರೆ 1991 ರ ಆರ್ಥಿಕ ಬಿಕ್ಕಟ್ಟನ್ನು ಸರಿಪಡಿಸಿದ್ದು ಕಾಂಗ್ರೆಸ್ ಪಕ್ಷದ ಮನಮೋಹನ್ ಸಿಂಗ್ ಎಂದು ಹೇಳುವವರು, 1947 ರಿಂದ 1991 ರ ವರೆಗಿನ 40 ವರ್ಷಗಳಲ್ಲಿ ಆರ್ಥಿಕ ಬಿಕ್ಕಟ್ಟನ್ನು ಸೃಷ್ಟಿ ಮಾಡಿದ್ದು ಕಾಂಗ್ರೆಸ್ ಪಕ್ಷವೆಂದು ಹೇಳುವುದಿಲ್ಲ. ದೇಶದ ಜೊತೆಗೆ ರಾಜ್ಯಗಳಿಗೂ ಸರಿಯಾದ ಸೂಚನೆಗಳಿಲ್ಲದೆ ಹಲವು ರಾಜ್ಯಗಳೂ ಸಹ ದೂರದೃಷ್ಟಿಯ ಅಭಿವೃದ್ಧಿ ಪೂರಕ ನೀತಿಗಳನ್ನು ರೂಪಿಸುವಲ್ಲಿ ಕಾಂಗ್ರೆಸ್ ವಿಫಲವಾಗಿತ್ತು.

1991 ರಲ್ಲಿ ಭಾರತದ ಆರ್ಥಿಕ ವ್ಯವಸ್ಥೆ ಯಾವ ಮಟ್ಟಕ್ಕೆ ಹದಗೆಟ್ಟಿತ್ತೆಂದರೆ, ದೇಶದ ವಿದೇಶಿ ವಿನಿಮಯ ಮೀಸಲು ಕೇವಲ ಎರಡು ವಾರಗಳಿಗೆ ಸಾಕಾಗುವಷ್ಟಿತ್ತು. ಪಂಜರದೊಳಗಿನ ಗಿಳಿಯಂತೆ ಭಾರತದ ಆರ್ಥಿಕತೆಯನ್ನು ಒಂದೆಡೆ ಬಂಧಿಸಿ ಹೊರ ಜಗತ್ತಿನ ಜೊತೆಗೆ ಅನಾಯಾಸವಾಗಿ ವ್ಯಾಪಾರ ವಿನಿಮಯ ಮಾಡುವ ನೀತಿಗಳ ಬಗ್ಗೆ ಚಿಂತಿಸದೆ, ಸುಮಾರು 40 ವರ್ಷಗಳ ಕಾಲ ಕಾಂಗ್ರೆಸ್ ಆಡಳಿತ ನಡೆಸಿತ್ತು. ಸ್ವಾತಂತ್ರ್ಯ ನಂತರ ಅಧಿಕಾರ ವಹಿಸಿಕೊಂಡ ಕಾಂಗ್ರೆಸ್ ಪಕ್ಷ ದೂರದೃಷ್ಟಿಯ ಕೊರತೆಯಿಂದ ದೇಶದ ಭವಿಷ್ಯಕ್ಕೆ ಭದ್ರ ಬುನಾದಿ ಹಾಕದೆ ಸ್ವಾರ್ಥ ರಾಜಕೀಯಕ್ಕಿಳಿದು ಕೇವಲ ತನ್ನ ಸ್ವಂತ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನ ಹರಿಸಿತ್ತು. 40 ವರ್ಷಗಳ ಆಡಳಿತಾವಧಿಯಲ್ಲಿ ದೇಶದ ಮೂಲಭೂತ ಸೌಕರ್ಯಗಳ ಬಗ್ಗೆ ಗಮನ ಹರಿಸಿರಲಿಲ್ಲ, ನಗರ ಪ್ರದೇಶದ ಜನರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ನೀಡಿರಲಿಲ್ಲ, ಹಳ್ಳಿಗಾಡಿನ ಜನರ ಪರಿಸ್ಥಿಯನ್ನು ಹೇಳಬೇಕಿಲ್ಲ, ಒಂದು ವರದಿಯ ಪ್ರಕಾರ 1997 ರ ಹೊತ್ತಿಗೆ ಭಾರತದಲ್ಲಿ ಕೇವಲ 337 ಕಿಲೋಮೀಟರು ಚತುಷ್ಪಥ ಹೆದ್ದಾರಿಗಳಿದ್ದವಂತೆ. 1971 ರಲ್ಲಿ ಚುನಾವಣೆ ಎದುರಿಸಿದ ಇಂದಿರಾಗಾಂಧಿ 'ಗರೀಬಿ ಹಠಾವೋ' ಎನ್ನುವ ಮೂಲಕ ಜನರಿಂದ ಮತ ಕೇಳಿದ್ದರು. ತನ್ನ ತಂದೆ ನೆಹರು ಸುಮಾರು 20 ವರ್ಷಗಳ ಕಾಲ ಭಾರತದ ಪ್ರಧಾನಿಯಾಗಿದ್ದರೂ ಸಹ ಬಡತನ ನಿರ್ಮೂಲನೆ ಮಾಡಲು ವಿಫಲರಾಗಿರುವುದನ್ನು ಅಂದು ಅವರು ಒಪ್ಪಿಕೊಂಡಂತಾಗಿತ್ತು. ತದನಂತರ ಸರ್ವಾಧಿಕಾರ ಧೋರಣೆಯಿಂದ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಲಾಗಿತ್ತು. ಇಂದಿರಾ ಗಾಂಧಿ ನಿಧನದ ನಂತರ ಅವರ ಮಗ ರಾಜೀವ್ ಗಾಂಧಿ ದೇಶದ ಪ್ರಧಾನಮಂತ್ರಿಯಾದರು. ರಾಜೀವ್ ಗಾಂಧಿ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ದೆಹಲಿಯಿಂದ ನೂರು ರೂಪಾಯಿ ಹಣವನ್ನು ಜನರಿಗೆ ತಲುಪಿಸಲು ಹೇಳಿದರೆ,ಕೇವಲ 15 ರೂಪಾಯಿ ಮಾತ್ರ ಸಿಗುತ್ತಿದೆಯೆಂದು ತಮ್ಮ ವಂಶಪಾರಂಪರಿಕ ಆಡಳಿತದಲ್ಲಿ ದಶಕಗಳಿಂದ ನಡೆದುಕೊಂಡು ಬರುತ್ತಿದ್ದಂತಹ ಭ್ರಷ್ಟಾಚಾರದ ಬಗ್ಗೆ ಬಹಿರಂಗವಾಗಿ ಹೇಳಿಕೊಂಡಿದ್ದರು. ಮಿತಿಮೀರಿದ ಭ್ರಷ್ಟಾಚಾರ, ಅತಿಯಾದ ಮುಸಲ್ಮಾನರ ಓಲೈಕೆ, ಭಾರತದ ಭವಿಷ್ಯದ ಚಿಂತನೆಯಿಲ್ಲದ ನೀತಿಗಳು,ಬಡವರನ್ನು ಬಡವರನ್ನಾಗಿಸಿ ಆಳುವ ನೀತಿಗಳು,ಅಂತಾರಾಷ್ಟ್ರೀಯ ಮಟ್ಟದ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾದದ್ದು, ಭಾರತದ ಮೇಲಿನ ರಷ್ಯಾ ಅಮೇರಿಕಾ ನಡುವಣ ಶೀತಲ ಸಮರದ ಪರಿಣಾಮವನ್ನು ಎದುರಿಸುವಲ್ಲಿ ವಿಫಲರಾದದ್ದು, ಜಾಗತಿಕ ಮಟ್ಟದಲ್ಲಿ ಭಾರತ ವ್ಯವಹರಿಸಲು ಇದ್ದಂತಹ ನಿರ್ಬಂಧಗಳು, ಒಟ್ಟಾರೆ ತಪ್ಪುಗಳ ಪರಿಣಾಮ ಭಾರತದ ಆರ್ಥಿಕತೆಯನ್ನು 1991ರ ಹೊತ್ತಿಗೆ ಹದಗೆಡಿಸಿತ್ತು.ಅಂದು ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿದ್ದ ಚಿನ್ನವನ್ನು ಲಂಡನ್ನಿನಲ್ಲಿ ಅಡವಿಟ್ಟು ಸಾಲ ತಂದು ದೇಶ ನಡೆಸುವ ಪರಿಸ್ಥಿತಿ ಎದುರಾಗಿತ್ತು.

ಸಮಾಜವಾದದಡಿಯಲ್ಲಿ ಸಂಪತ್ತನ್ನು ಹಂಚಬೇಕಾದರೆ ಸಂಪತ್ತು ಸೃಷ್ಟಿಯಾಗಬೇಕು,ಇರುವ ಸಂಪತ್ತನ್ನು ಸಂಪೂರ್ಣವಾಗಿ ಹಂಚಿ,ಜೊತೆಗೆ ಸಂಪತ್ತನ್ನು ಸೃಷ್ಟಿ ಮಾಡದೆ ಹೋದರೆ ದೀವಾಳಿಯಾಗುವುದು ಖಚಿತ. ಬಂಡವಾಳವಿಲ್ಲದೆ ಸಮಾಜವಾದವಿಲ್ಲವೆಂಬ ಆರ್ಥಿಕ ಚಿಂತನೆಯನ್ನು ಮುಂದುವರೆದ ದೇಶಗಳು ಅಳವಡಿಸಿಕೊಂಡಿವೆ.'ವೆನೆಜುವೆಲಾ' ದೇಶ ಜಗತ್ತಿನಲ್ಲಿ ಅತೀ ಹೆಚ್ಚು ಕಚ್ಚಾ ತೈಲ ನಿಕ್ಷೇಪ ಹೊಂದಿದ್ದ ಶ್ರೀಮಂತ ರಾಷ್ಟ್ರ. ಆದರೆ ಕಮ್ಯುನಿಸ್ಟರ ಆಡಳಿತಕ್ಕೆ ಸಿಕ್ಕ ನಂತರ, ತೈಲ ಮಾರಾಟದಿಂದ ಬರುತ್ತಿದ್ದಂತಹ ಹಣವನ್ನು ಬೇಕಾ ಬಿಟ್ಟಿ ಬಳಸಿದ್ದರ ಪರಿಣಾಮ ಕೊನೆಗೆ ದೀವಾಳಿ ಆಯಿತು. ಭಾರತದ ಕೆಲವು ರಾಜ್ಯಗಳ ಆರ್ಥಿಕ ಪರಿಸ್ಥಿತಿಯೂ ಇದಕ್ಕೆ ಹೊರತಲ್ಲ. ಪಶ್ಚಿಮ ಬಂಗಾಳವನ್ನು 30 ವರ್ಷಗಳ ಕಾಲ ಆಳಿದ ಜ್ಯೋತಿ ಬಸು ನೇತೃತ್ವದ ಕಮ್ಯುನಿಸ್ಟ್ ಸರ್ಕಾರ ಇಡೀ ರಾಜ್ಯವನ್ನೇ ಗುಡಿಸಿ ಗುಂಡಾಂತರ ಮಾಡಿತ್ತು. ಇಂದಿಗೂ ಪಶ್ಚಿಮ ಬಂಗಾಳದಲ್ಲಿ ಬಂಡವಾಳ ಹೂಡಲು ನೂತನ ಕಂಪೆನಿಗಳು ಹೆದರುತ್ತವೆ. ಅಲ್ಲಿನ ಸಾರ್ವಜನಿಕ ಸಾರಿಗೆಯಲ್ಲಿ ಕೂರಲು ಸಾಧ್ಯವಿಲ್ಲ. ಮತ್ತೊಂದೆಡೆ ಕೇರಳವನ್ನು ದಶಕಗಳ ಕಾಲ ಆಳಿದ ಕಮ್ಯುನಿಸ್ಟರು ರಾಜ್ಯದ ಸಾಲವನ್ನು ಉತ್ತುಂಗಕ್ಕೇರಿಸಿದ್ದಾರೆ. ಕೇರಳ ರಾಜ್ಯ ಸರ್ಕಾರ 'ಬಾಂಡ್'ಗಳನ್ನು ನೀಡಿ ಜನರಿಂದ ಹಣ ಸಂಗ್ರಹಿಸಿ ಸಾಲದ ಹೊರೆಯನ್ನು ಇಳಿಸಬೇಕೆಂಬ ಪರಿಸ್ಥಿತಿ ಎದುರಾಗಿತ್ತು.

ಮೋದಿಯವರು ತಮ್ಮ ಅವಧಿಯಲ್ಲಿ ಹಲವು ಸವಾಲುಗಳನ್ನು ಎದುರಿಸಬೇಕಾಯಿತು. ಕರೋನ ಸಂದರ್ಭದಲ್ಲಿ ಭಾರತದ ಆರ್ಥಿಕತೆ ಎರಡು ವರ್ಷಗಳ ಕಾಲ ಸಂಕಷ್ಟದಲ್ಲಿತ್ತು. ತಿಂಗಳುಗಳ ಕಾಲ ಇಡೀ ದೇಶದ ವ್ಯವಹಾರವನ್ನು ಬಂದ್ ಮಾಡಿ 140 ಕೋಟಿ ಭಾರತೀಯರನ್ನು ಸಾಕುವುದು ಸುಲಭವಾಗಿರಲಿಲ್ಲ, ಜಗತ್ತಿನ ದೊಡ್ಡಣ್ಣ ಅಮೆರಿಕಾದ ಆರ್ಥಿಕತೆ ಇಂದಿಗೂ ಸಂಪೂರ್ಣವಾಗಿ ಸರಿಹೋಗಿಲ್ಲ. ಕರೊನಾದಂತಹ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿ ಕಳೆದ ಹತ್ತು ವರ್ಷದಲ್ಲಿ ಭಾರತದ ಆರ್ಥಿಕತೆ ನಾಲ್ಕನೇ ಸ್ಥಾನಕ್ಕೆ ತಲುಪಿರುವುದು, ಎಡಚರರ ಬುಡಕ್ಕೆ ಬೆಂಕಿ ಇಟ್ಟಂತಾಗಿದೆ. 2014 ರಲ್ಲಿ ಭಾರತದ ತಲಾದಾಯ ಅಂದಾಜು 1100 ಅಮೆರಿಕನ್ ಡಾಲರ್ ನಷ್ಟಿತ್ತು. 2025 ರಲ್ಲಿ ತಲಾದಾಯ 2800 ಅಮೆರಿಕನ್ ಡಾಲರ್ ನಷ್ಟಿದೆ. ಮೋದಿ ಅವಧಿಯ ತಲಾದಾಯದ ಬಗ್ಗೆ ಮಾತನಾಡುವ ಕಾಂಗ್ರೆಸ್ ಮತ್ತು ಎಡಚರ ಪಟಾಲಂ, 1991 ರಲ್ಲಿ ಭಾರತದ ತಲಾದಾಯ ಕೇವಲ 300 ಅಮೆರಿಕನ್ ಡಾಲರ್‌ನಷ್ಟಿದ್ದ ಬಗ್ಗೆ ಮಾತನಾಡುವುದಿಲ್ಲ, ಭಾರತ ಆರ್ಥಿಕತೆಯಲ್ಲಿ ಜಪಾನ್ ದೇಶವನ್ನು ಹಿಂದಿಕ್ಕಿ ಮುಂದುವರಿದರೆ ಕಮ್ಯುನಿಸ್ಟರ ಬುಡಕ್ಕೆ ಬೆಂಕಿ ಬಿದ್ದಿದೆ. ಆದರೆ ಕಣ್ಣ ಮುಂದಿರುವ ಅಭಿವೃದ್ಧಿಯ ಸತ್ಯವನ್ನು ಮರೆಮಾಚಲು ಸಾಧ್ಯವಿಲ್ಲ. ಸೀಮೆಎಣ್ಣೆಗಾಗಿ ಬಡವರು ಬೆಳಗಿನ ಜಾವ ಕ್ಯೂನಲ್ಲಿ ನಿಲ್ಲುವ ಕಾಲ ಈಗಿಲ್ಲ. ನೀರಿಗಾಗಿ ರಸ್ತೆಯ ಕೊನೆಯ ನಲ್ಲಿಯ ಮುಂದೆ ಕ್ಯೂ ನಿಲ್ಲುವ ಕಾಲ ಈಗಿಲ್ಲ. ಕರೆಂಟ್ ಬಿಲ್ ಪಾವತಿಸಲು ಸಾಲಿನಲ್ಲಿ ನಿಲ್ಲುವ ಕಾಲ ಈಗಿಲ್ಲ. ಹಳ್ಳಿ ಹಳ್ಳಿಗೂ ತಲುಪಿರುವ ಇಂಟರ್‌ನೆಟ್ ಎಡಚರರ ಸುಳ್ಳು ನಿರೂಪಣೆಗಳನ್ನು ಅನಾಯಾಸವಾಗಿ ಬೆತ್ತಲು ಮಾಡುತ್ತದೆ.

ಹಣೆಮೇಲೆ ಬೋರ್ಡ್ ಹಾಕ್ಕೊಂಡ್ ಓಡಾಡಬೇಕಾ?

ಕೆಲವರು ಸಾಕಷ್ಟು ನೋವಿನ ಮಧ್ಯೆಯೂ ಹೊರಗೆ ನಗುತ್ತ ಆರಾಮಾಗಿರುವ ಹಾಗೆ ನಟಿಸುತ್ತಿರುತ್ತಾರೆ. ಅಂಥವರನ್ನೂ ನಾವು ಒಳಹೊಕ್ಕು ನಿಜ ಅರಿಯಬೇಕು ಅಂತೇನಿಲ್ಲ. ಅದು ಆತ್ಮೀಯರ ನಡುವೆ ಆಗುವಂಥದ್ದು. ಆದರೆ ದೈನಂದಿನ ಜೀವನದಲ್ಲಿ ನಾವು ವ್ಯವಹರಿಸುವ ಜನ ಮತ್ತು ನಮ್ಮ ಬದುಕಿನಲ್ಲಿ ಹಾದುಹೋಗುವ ಅಪರಿಚಿತರನ್ನು ನಾವು ಆ ಪರಿ ಒಳಹೊಕ್ಕು ಅರಿಯೋ ಅಗತ್ಯ ಇಲ್ಲದಿದ್ದರೂ, ಸ್ಟಿಕರ್/ಬೋರ್ಡ್ ಇಲ್ಲದೆಯೂ ಅವರ ಪರಿಸ್ಥಿತಿ ಏನಿದೆಯೋ ಏನೋ ಪಾಪ ಎಂಬಷ್ಟು ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿಬಿಟ್ಟರೆ, ಬದುಕು ಸುಂದರವಾಗಿಬಿಡುತ್ತದೆ.

ಪದಸಾಗರ

ನವೀನ್ ಸಾಗರ್

vveditoped@gmail.com

ಅದೊಂದು ಚಿಕ್ಕ ಇಂಟರ್‌ನೆಟ್ ಪೋಸ್ಟ್. ಬಹಳ ವರ್ಷಗಳ ಹಿಂದೆ ಓದಿದ್ದು. ಆದರೆ ದಿನಕ್ಕೊಮ್ಮೆ ಅಥವಾ ಪದೇಪದೆ ನೆನಪಾಗುತ್ತಲೇ ಇರುತ್ತದೆ. ಯಾಕಂದ್ರೆ ಪ್ರತಿದಿನವೂ ಆ ಪೋಸ್ಟ್ ನೆನಪಾಗುವಂಥದ್ದೇನೋ ಒಂದು ಘಟನೆ ನನ್ನ ಸುತ್ತ ನಡೆದೇ ಇರುತ್ತದೆ. ಒಂದರ್ಥದಲ್ಲಿ ಅದು ಪ್ರತಿ ಬಾರಿ ನನ್ನನ್ನು ನೀಚನಾಗದಂತೆ ತಡೆದು ಮನುಷ್ಯನನ್ನಾಗಿಸುತ್ತಾ ಇರುವಲ್ಲಿ ಸಫಲವಾಗಿರುವ ಬರಹ. ಸದಾ ನನ್ನನ್ನು ಆತ್ಮಾವಲೋಕನಕ್ಕೀಡು ಮಾಡುವ ಮೆಸೇಜು. ಜಗತ್ತಿನಲ್ಲಿ ಎಲ್ಲರೂ ಈ ಪೋಸ್ಟ್‌ನ್ನೊಮ್ಮೆ ಓದಿ ಮನಸಲ್ಲಿ ಅದನ್ನು ಗಟ್ಟಿಯಾಗಿ ಸ್ಥಾಪಿಸಿಕೊಂಡುಬಿಟ್ಟರೆ ಈ ಪ್ರಪಂಚ ಎಷ್ಟು ಸುಂದರ ಮತ್ತು ಮಾನವೀಯ ಆಗಿಬಿಡುತ್ತಲ್ಲ ಎಂದು ಆಸೆ ಹುಟ್ಟಿಸುವ ಚಿಕ್ಕ ಬರವಣಿಗೆ ಅದು. ಅದೇ ಹೊತ್ತಲ್ಲಿ ಮತ್ತಷ್ಟು ಜಿಜ್ಞಾಸೆ ಹಾಗೂ ಪ್ರಶ್ನೆಗಳಿಗೂ ಆಸ್ಪದ ಕೊಡುವ ಶಕ್ತಿ ಆ ಪುಟ್ಟಬರಹಕ್ಕಿತ್ತು. ವಾಟ್ಸಾಪ್, ಫೇಸ್‌ಬುಕ್ ಯೂನಿವರ್ಸಿಟಿಗಳಲ್ಲಿ ನಾವು ಇತಿಹಾಸ ರಾಜಕೀಯ ವಿಜ್ಞಾನ ಇತ್ಯಾದಿ ವಿಷಯಗಳನ್ನು ಕಲಿಯದೇ ಹೋದರೆ ಅದು ಒಳ್ಳೆಯದೇ. ಆದರೆ ಇಂಥ ವಿಷಯಗಳನ್ನು ಹೆಕ್ಕಿ ಮನಸಿನಲ್ಲಿ ಹಾಕಿಕೊಳ್ಳಬೇಕು. ಕಡೇ ಪಕ್ಷ ಇಂಥ ವಿಷಯಗಳು ನಮ್ಮ ಮನಸಿನಲ್ಲಿ ಹರಿದಾಡುತ್ತಾ, ನಮ್ಮೊಳಗೇ ಪ್ರಶ್ನೆಗಳನ್ನು ಹುಟ್ಟುಹಾಕುತ್ತಾ, ಉತ್ತರಗಳನ್ನು ಪಡೆದುಕೊಳ್ಳುತ್ತಾ, ಸಂವಾದಿಸುತ್ತಾ ಇದ್ದರೆ, ತಂತಾನೇ ನಾವು ಚೂರುಚೂರೇ ಒಳ್ಳೆಯವರಾಗಿ ಬದಲಾಗುತ್ತಿರುತ್ತೇವೆ.

ಪೀಠಿಕೆ ಜಾಸ್ತಿ ಆಯ್ತು.. ಅದ್ಯಾವ ಪೋಸ್ಟ್ ನಿನ್ನನ್ನು ಅಷ್ಟು ಪ್ರಭಾವಿಸಿಬಿಟ್ಟಿದೆ ಹೇಳು ಮಾರಾಯಾ ಅಂತಿದೀರಾ? ನಿಮಗದು ನನಗನಿಸಿದಷ್ಟು ಗಾಢ ಅನಿಸಲೂಬಹುದು ಅನಿಸದೆಯೂ ಇರಬಹುದು. ಆ ಬರಹವನ್ನು ಯಥಾವತ್ ಇಲ್ಲಿ ನೀಡುತ್ತೇನೆ.

'ಆಫೀಸಿಗೆ ಲೇಟಾಗಿತ್ತು. ಇನ್ ಫ್ಯಾಕ್ಟ್ ನಾನೇ ತಡಮಾಡಿಕೊಂಡು ಹೊರಟಿದ್ದು. ಬೆಳಗ್ಗೆ ಹತ್ತುಗಂಟೆ. ಟ್ರಾಫಿಕ್ ವಿಪರೀತ ಎಂಬಷ್ಟಿತ್ತು. ಈ ಟ್ರಾಫಿಕ್ಕಲ್ಲಿ ಕಾರು ಓಡಿಸೋದು ನಿಜವಾಗಲೂ ಯಮಹಿಂಸೆ. ಕಾರು ಹತ್ತಿ ಹೊರಟೆ. ಅರ್ಧಗಂಟೇಲಿ ಆಫೀಸು ತಲುಪಬೇಕು ಅಂತ ಜೋರಾಗಿ ಓಡಿಸುತ್ತಿದ್ದೆ. ಎದುರಲ್ಲಿ ಒಂದು ಕಾರ್ ಹೋಗ್ತಾ ಇದೆ. ಆ ಕಾರ್ ಸೈಡ್ ಕೂಡ ಕೊಡ್ತಾ ಇಲ್ಲ. ವೇಗವಾಗಿಯೂ ಹೋಗ್ತಾ ಇಲ್ಲ. ಆಮೆಗತಿಯಲ್ಲಿ, ಎಮ್ಮೆಗತಿಯಲ್ಲಿ ಮೆಲ್ಲಗೆ ಹೋಗ್ತಾ ಇದೆ. ನಾನು ದಾರಿಗಾಗಿ ಮತ್ತೆ ಮತ್ತೆ ಹಾರ್ನ್ ಮಾಡಿದರೂ ಜಾಗ ಬಿಡ್ತಾ ಇಲ್ಲ. ವೇಗ ಹೆಚ್ಚಿಸುತ್ತಲೂ ಇಲ್ಲ. ನನಗೆ ಸಿಟ್ಟು, ಇರಿಟೇಷನ್ ಎಲ್ಲವೂ ಹೆಚ್ಚಾಗ್ತಾ ಇದೆ. ಗ್ಲಾಸ್ ಏರಿಸಿದ ಕಾರೊಳಗೆ ಕೂತು ಬಾಯಿಗೆ ಬಂದ ಬಯ್ಗುಳವನ್ನೆಲ್ಲ ಬಳಸುತ್ತಾ, ಇನ್ನೂ ಜೋರಾಗಿ ಹಾರ್ನ್ ಮಾಡಿದೆ. ಉಹೂಂ. ನನ್ನ ಹಾಂಕಿಂಗಿಗೆ, ನನ್ನ ಅರ್ಜೆನ್ಸಿಗೆ ಮರ್ಯಾದೆಯೇ ಸಿಕ್ತಾ ಇಲ್ಲ. ಮೊದಲೇ ತಡವಾಗಿದೆ. ನನ್ನ ಸಿಟ್ಟು ನೆತ್ತಿಗೇರಿತು. ಸ್ಥಿಮಿತ ಕಳೆದುಕೊಂಡೆ. ಹಿಂದಿಂದ ಕಾರಿಗೆ ಗುದ್ದಿಬಿಡೋಣ ಅನಿಸುವಷ್ಟು ಕೋಪ ಬಂತು. ಕಾರಿಗೆ ಪೂರ್ತಿ ಹತ್ತಿರ ಹೋಗಿ ನನಗ ಕರ್ಕಶವೆನಿಸುವಷ್ಟು ಜೋರಾಗಿ ಹಾರ್ನ್ ಕೂಗಿಸತೊಡಗಿದೆ. ಹಾಗೆ ಮಾಡ್ತಾ ಇರುವಾಗ ಕಾರಿನ ಹಿಂಬದಿಯಲ್ಲಿ ಅಂಟಿಸಿದ್ದ ಒಂದು ಸಣ್ಣ ಸ್ಟಿಕರ್ ಕಾಣಿಸಿತು. ಅದರ ಮೇಲೆ ಹೀಗೆ ಬರೆದಿತ್ತು. 'Physically Challenged; please be patient' ಒಳಗಡೆ ಅಂಗವಿಕಲ ವ್ಯಕ್ತಿ ಇದ್ದಾರೆ. ದಯವಿಟ್ಟು ತಾಳ್ಮೆವಹಿಸಿ'. ಅಂತ. ಆ ಕ್ಷಣದ ತನಕ ಇದ್ದ ಕೋಪ ಜರ್ನನೆ ಜಾರಿ ಇಳಿದೋಯ್ತು. ಅಷ್ಟೊಂದು ಹಾರ್ನ್ ಮಾಡಿದ ನನ್ನ ಬಗ್ಗೆ ನನಗೇ ಬೇಸರವಾಯ್ತು. ಬಾಯಿಗೆ ಬಂದ ಬಯ್ಗುಳಗಳನ್ನೆಲ್ಲ ಬಳಸಿದ ನನಗೇ ನನ್ನ ಮೇಲೆ ಅಸಹ್ಯವಾಯ್ತು. ನನ್ನ ಅಸಹನೆ ಕೋಪ ಎಲ್ಲವೂ ಆ ಕಾರಿನವನ ಮೇಲಿನ ಕನಕರ ಕಾಳಜಿಯಾಗಿ ಬದಲಾಯ್ತು. ಕೊಂಚ ಮುಂದೆ ಸಾಗಿದಂತೆ, ಪಕ್ಕಕ್ಕೆ ದಾರಿ ಹಿರಿದಾಯ್ತು. ಆ ಕಾರಿನೆಡೆ ನೋಡಿ ಕ್ಷಮಿಸಿ ಎಂಬಂತೆ ಸನ್ನೆಯಲ್ಲೇ ಹೇಳಿ ಪಾಸ್ ಆದೆ. ಆ ಕಾರಿನಲ್ಲಿರುವವರ ಒಳಿತಿಗೆ ಪ್ರಾರ್ಥಿಸುತ್ತಾ ಆಫೀಸ್ ಸೇರಿಕೊಂಡೆ. ತಮ್ಮ ಆಫೀಸ್ ತಲುಪಿದರೂ ಒಂದು ಸಣ್ಣ ಗಿಲ್ಟ್. ಆ ಘಟನೆಯ ಬಗ್ಗೆಯೇ ಯೋಚನೆ. ಆಫೀಸ್ ತಲುಪಿದಾಗ ಒಂದೈದೋ ಹತ್ತೋ ನಿಮಿಷ ಲೇಟ್ ಆಗಿತ್ತು. ಅದು ಜಗತ್ತು ಮುಳುಗೋ ವಿಚಾರವೇನಲ್ಲ ಅನಿಸಿತು. ಆ ಸಮಯದಲ್ಲಿ ನನ್ನನ್ನು ಕಾಡಿದ್ದು ಏನು ಗೊತ್ತಾ? ಆ ಸ್ಟಿಕರ್ ಮೇಲಿನ ಬರಹ ಓದದೇ ಹೋಗಿದ್ದರೆ ನಾನು ಈ ರೀತಿ ಶಾಂತವಾಗಿ ಇರುತ್ತಿದ್ದೇನಾ? ಇನ್ನೊಬ್ಬರ ವಿಚಾರದಲ್ಲಿ ತಾಳ್ಮೆಯಿಂದ ವರ್ತಿಸೋದಕ್ಕೆ, ಇನ್ನೊಬ್ಬರನ್ನು ಅರ್ಥಮಾಡಿಕೊಳ್ಳೋದಕ್ಕೆ ನಮಗೆ ಸದಾ ಇಂಥದ್ದೊಂದು ಸ್ಟಿಕರ್ ಬೇಕೇ ಬೇಕಾ? ನಾವು ನಾವು ಇನ್ನೊಬ್ಬರನ್ನು ಅರ್ಥ ಮಾಡಿಕೊಳ್ಳಲು ಸದಾ ಅವರು ನಮಗಾಗಿ ಹಣೆ ಮೇಲೆ ಅವರ ಪರಿಸ್ಥಿತಿ/ಮನಸ್ಥಿತಿಯ ಸ್ಟಿಕರ್ ಅಂಟಿಸಿಕೊಂಡೇ ಓಡಾಡಬೇಕಾ? ನಾವು ಇನ್ನೊಬ್ಬರಿಗೆ ಅರ್ಥವಾಗಲು ಸದಾ ನಮ್ಮ ಮೈಗೊಂದು ಬೋರ್ಡ್ ಹಾಕಿಕೊಂಡೇ ಇರಬೇಕಾ?

ಮನೆಯಲ್ಲಿ ಸಾವಾಗಿದೆ, ನೋವಲ್ಲಿದ್ದೇನೆ. ಕೆಲಸ ಕಳೆದು ದಿಕ್ಕುತೋಚದಂತಾಗಿದ್ದೇನೆ. ಪ್ರೇಯಸಿಯಿಂದ ಮೋಸವಾಗಿದೆ, ಡಿವೋರ್ಸ್ ಬಡಿದಾಟದಲ್ಲಿ ಹೈರಾಣಾಗಿದ್ದೇನೆ. ಕ್ಯಾನ್ಸರ್ ಬಾಧಿಸುತ್ತಾ ಇದೆ. ತುಂಬಾ ಪ್ರೀತಿಯಿಂದ ಸಾಕಿದ್ದ ನಾಯಿ ಕಾಯಿಲೆ ಬಿದ್ದಿದೆ. ವ್ಯವಹಾರದಲ್ಲಿ ದೊಡ್ಡ ನಷ್ಟ ಅನುಭವಿಸಿ ಕಂಗಾಲಾಗಿದ್ದೇನೆ. ಬಾಸ್‌ನ ಟಾರ್ಚರ್‌ನಿಂದ ನೆಮ್ಮದಿ ಕಳ್ಕೊಂಡಿದೀನಿ. ಮಕ್ಕಳ ಫೀಸ್ ಕಟ್ಟೋಕೆ ನಾಳೆ ಲಾಸ್ಟ್ ಡೇಟ್, ಇಎಂಐ ಕಟ್ಟಬೇಕು, ಬಾಡಿಗೆ ಕಟ್ಟಬೇಕು ಸಂಬಳ ಬಂದಿಲ್ಲ, ವಯಸ್ಸು ಮೀರುತ್ತಿದೆ, ಮದುವೆ ಫಿಕ್ಸ್ ಆಗ್ತಿಲ್ಲ. ಭವಿಷ್ಯದ ಚಿಂತೆಯಲ್ಲಿ ಗೊಂದಲಕ್ಕೀಡಾಗಿದ್ದೇನೆ. ಗಂಡ ಹಾದಿ ತಪ್ಪಿದ್ದಾನೆ. ಪ್ರಿಯತಮ ಡಂಪ್ ಮಾಡಿದ್ದಾನೆ. ಲವ್ ಫೇಲಾಗಿದೆ. .... ಹೀಗೆ ಪ್ರತಿಯೊಂದನ್ನೂ ಜನ ತಮ್ಮ ಹಣೆಗೆ ಬೆನ್ನಿಗೆ ಅಂಟಿಸಿಕೊಂಡು ಓಡಾಡಬೇಕಾ? ಇಲ್ಲವಾದರೆ ನಮಗೆ ಅವರನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವೇ ಇಲ್ಲವಾ? ಇಂಥ ಸ್ಟಿಕರ್ ಇಲ್ಲದೆಯೂ ಒಬ್ಬ ವ್ಯಕ್ತಿಯನ್ನು ಇನ್ನೊಬ್ಬ ವ್ಯಕ್ತಿ ಅರ್ಥ ಮಾಡಿಕೊಳ್ಳೋದು ಅಷ್ಟು ಕಷ್ಟವಾ?

ಆಫೀಸಿನಲ್ಲಿ ಪಕ್ಕದಲ್ಲಿ ಕೂತು ಕೆಲಸ ಮಾಡುವ ಯುವತಿ ದಿನವೂ ನಗುನಗುತ್ತಾ ಮಾತಾಡುತ್ತಾ ಚಕಚಕನೆ ಕೆಲಸ ಮಾಡುವವಳು, ಅಂದ್ಯಾಕೋ ಗುಮ್ಮನಂತಿದ್ದಾಳೆ, ಸಿಡುಕುತ್ತಿದ್ದಾಳೆ. ಓರ್ವ ರಿಯಾಕ್ಟ್ ಮಾಡುತ್ತಿದ್ದಾಳೆ ಅಂದರೆ ಆಕೆ ಮುಟ್ಟಿನ ಅವಧಿಯಲ್ಲಿದ್ದಾಳೆ. ಮೂಡ್ ಸ್ವಿಂಗ್ಸ್ ಬಾಧಿಸುತ್ತಿದೆ, ದೈಹಿಕವಾಗಿ, ಮಾನಸಿಕವಾಗಿ ಮತ್ತು ಎಮೋಷನಲಿ ಆಕೆ ಸೆನ್ಸಿಟಿವ್ ಇದ್ದಾಳೆ ಅನ್ನೋದನ್ನು ಅರ್ಥ ಮಾಡಿಕೊಳ್ಳದಷ್ಟು ನಾವು ಅಸೂಕ್ಷ್ಮರಾಗಬಹುದಾ? ಆ ಯುವತಿ ಇಂದಿನಿಂದ ಮೂರು ದಿನ ನನ್ನ ಪೀರಿಯಡ್ಸ್ ಇರುತ್ತೆ. ಅರ್ಥ ಮಾಡಿಕೊಳ್ಳಿ, ಅಂತ ಬೋರ್ಡ್ ಹಾಕ್ಕೋಬೇಕಾ?

ಮನೆಯಲ್ಲಿ ಎಂದೂ ಮಗುವನ್ನು ಗದರದ ತಂದೆ, ಅಂದು ಪ್ರೀತಿಯ ಮಗುವಿಗೆ ಒಂದು ಪೆಟ್ಟು ಕೊಟ್ಟಿರುತ್ತಾನೆ. ಅವತ್ತಿಡೀ ಅವನು ಅವನಾಗಿ ಇರೋದಿಲ್ಲ. ದಿನವೂ ಎಲ್ಲರೊಂದಿಗೆ ನಗುನಗುತ್ತಾ ವರ್ತಿಸುವವ, ಕೆಲಸದಲ್ಲಿ ಚುರುಕಿರುವವ ಅಂದು ಕೆಲಸದಲ್ಲಿ ಕಾನ್ಸಂಟ್ರೇಟ್ ಮಾಡೋಕಾಗದೇ ಒದ್ದಾಡುತ್ತಿರುತ್ತಾನೆ. ಆತ ಬೋರ್ಡ್ ಅಂಟಿಸ್ಕೋಬೇಕಾ? ಪ್ರತಿ ದಿನ ಹೀಗಿರೋದಿಲ್ಲ ಇವತ್ತು ಹೀಗಿದ್ದಾನೆ ಅಂದರೆ ಅವನು ಇಂಥದ್ದೇನೋ ಒಂದು ನೋವಿನಲ್ಲಿದ್ದಾನೆ.. ಅವನು

ಸರಿಯಾಗೋಕೆ ಸಮಯ ಕೊಡೋಣ, ಅಥವಾ ಅವನನ್ನು ಚಿಯರ್ ಅಪ್ ಮಾಡೋಣ ಅಂತ ನಮಗ್ಯಾಕೆ ಅನಿಸೋದಿಲ್ಲ.

ಟ್ರಾಫಿಕ್ಕಲ್ಲಿ ಏನೋ ಕಿರಿಕಿರಿ ಅನುಭವಿಸಿ ಆಫೀಸಿಗೆ ಅದೇ ಮೂಡಲ್ಲಿ ಬಂದಿರ್ತಾನೆ. ಅವನು ಸೆಟ್ಲ್ ಆಗಿ ಶಾಂತವಾಗೋದಕ್ಕೆ ಕೆಲನಿಮಿಷಗಳ ಅಗತ್ಯ ಇರುತ್ತದೆ.ಹಾಗಂತ ಅವನು ಅದನ್ನು ಹಣೆಮೇಲೆ ಬರೆದುಕೊಂಡು ಎಲ್ಲರಿಗೂ ತಿಳಿಸಬೇಕಾ? ಬಂದಕೂಡ್ಲೆ ಅವ್ನು ಗುಡ್ ಮಾರ್ನಿಂಗ್ ಹೇಳಲಿಲ್ಲ, ನಗಿಸಲಿಲ್ಲ, ದುರಹಂಕಾರ ಅಂತ ಜಡ್ಜ್ ಮಾಡಿಬಿಡಬಹುದಾ? ಸಮಯ ಕೊಡಬಹುದಲ್ವಾ?

ದಿನವೂ ಟೈಮಿಗೆ ಸರಿಯಾಗಿ ತಿಂಡಿ ರೆಡಿಮಾಡುವ ಅಮ್ಮ ಇಂದ್ಯಾಕೋ ಹತ್ತು ನಿಮಿಷ ತಡ ಮಾಡಿದ್ದಾಳೆಂದರೆ ಅಥವಾ ತಿಂಡಿ ತಯಾರು ಮಾಡಿಲ್ಲವೆಂದರೆ ಸಡನ್ನಾಗಿ ಆಕೆಯ ಮೇಲೆ ರೇಗಿಬಿಡಬಹುದಾ? ತಿಂಡಿಗೆ ಬೇಕಾದ ಪರಿಕರ ಇಲ್ಲದಿರಬಹುದು. ಏನು ಮಾಡಬೇಕು ಅಂತ ತೋಚಿಲ್ಲದಿರಬಹುದು. ಹಿಂದಿನ ದಿನದ ಕೆಲಸದ ಸುಸ್ತಲ್ಲಿ ನಿದ್ದೆಯಿಂದೇಳೋದು ತಡವಾಗಿರಬಹುದು. ಪ್ರತಿದಿನವೂ ಮಾಡಿ ಮಾಡಿ ಕೆಲವೊಮ್ಮೆ ಬೇಸರವೂ ಕಾಡಬಹುದು. ಇದನ್ನೆಲ್ಲ ಅಮ್ಮ ಹಣೆಮೇಲೆ ಅಂಟಿಸಿಕೊಂಡು ಓಡಾಡಲಾಗುತ್ತಾ? ಅಮ್ಮನನ್ನು ಅರ್ಥ ಮಾಡಿಕೊಳ್ಳಲೂ ನಮಗೆ ಸ್ಟಿಕರ್ ಬೇಕಾಗುತ್ತಾ?

ನಿತ್ಯ ಜೀವನದಲ್ಲಿ ಎದುರಾಗುವ ಪ್ರತಿಯೊಬ್ಬರೂ ಹೊರ ನೋಟಕ್ಕೆ ನಮಗೆ ಕಾಣಿಸದ ಯಾವುದೋ ಒಂದು ಒದ್ದಾಟ, ತೊಳಲಾಟ, ತೊಂದರೆ, ದೈಹಿಕ, ಮಾನಸಿಕ, ಆರ್ಥಿಕ ಸಂಕಷ್ಟ ಅನುಭವಿಸುತ್ತಾ ಇರುತ್ತಾರೆ. ಎಲ್ಲವನ್ನೂ ಅವರು ಹೇಳಿಯೇ ವ್ಯಕ್ತಪಡಿಸಬೇಕಾ? ನಮ್ಮೊಂದಿಗೆ ದಯವಿಟ್ಟು ಸ್ವಲ್ಪ ಸಮಾಧಾನ ಸಂಯಮದಿಂದ ವರ್ತಿಸಿ ಅಂತ ಗೋಗರೆಯಬೇಕಾ?

ಕೆಲವರು ಸಾಕಷ್ಟು ನೋವಿನ ಮಧ್ಯೆಯೂ ಹೊರಗೆ ನಗುತ್ತ ಆರಾಮಾಗಿರುವ ಹಾಗೆ ನಟಿಸುತ್ತಿರುತ್ತಾರೆ. ಅಂಥವರನ್ನೂ ನಾವು ಒಳಹೊಕ್ಕು ನಿಜ ಅರಿಯಬೇಕು ಅಂತೇನಿಲ್ಲ. ಅದು ಆತ್ಮೀಯರ ನಡುವೆ ಆಗುವಂಥದ್ದು. ಆದರೆ ದೈನಂದಿನ ಜೀವನದಲ್ಲಿ ನಾವು ವ್ಯವಹರಿಸುವ ಜನ ಮತ್ತು ನಮ್ಮ ಬದುಕಿನಲ್ಲಿ ಹಾದುಹೋಗುವ ಅಪರಿಚಿತರನ್ನು ನಾವು ಆ ಪರಿ ಒಳಹೊಕ್ಕು ಅರಿಯೋ ಅಗತ್ಯ ಇಲ್ಲದಿದ್ದರೂ, ಸ್ಟಿಕರ್/ಬೋರ್ಡ್ ಇಲ್ಲದೆಯೂ ಅವರ ಪರಿಸ್ಥಿತಿ ಏನಿದೆಯೋ ಏನೋ ಪಾಪ ಎಂಬಷ್ಟು ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿಬಿಟ್ಟರೆ, ಬದುಕು ಸುಂದರವಾಗಿಬಿಡುತ್ತದೆ. ಇಲ್ಲಿ ನಾವೇ ಪ್ರತಿಯೊಬ್ಬರನ್ನೂ ಅರ್ಥ ಮಾಡಿಕೊಳ್ಳಬೇಕು ಅಂದ್ರೆ ಅವರಿಗೆ ನಾವು ಅರ್ಥ ಆಗೋದ್ಯಾವಾಗ ಅನ್ನೋ ಪ್ರಶ್ನೆ ಉದ್ಭವ ಆಗಕೂಡದು. ಇಲ್ಲಿ ನಾವು ಕೂಡ ಅವರಿಗೆ ಇನ್ನೊಬ್ಬ ವ್ಯಕ್ತಿಯೇ ಆಗಿರುತ್ತೇವೆ. ಅವರಿಗೂ ಇದೇ ಸೂತ್ರ ಅಪ್ಲೈ ಆಗಿರುತ್ತದೆ. ಕನ್ನಡಿಯಂತೆ, ಪ್ರತಿಧ್ವನಿಯಂತೆ ನಮ್ಮ ವರ್ತನೆಗಳು ನಮಗೆ ಪ್ರತಿಫಲಿಸುತ್ತವೆ, ಪ್ರತಿಧ್ವನಿಸುತ್ತವೆ.

ಈ ನಡುವೆ ಇನ್ನೂ ಒಂದು ಪ್ರಶ್ನೆ ಹುಟ್ಟಬಹುದು. ಪ್ರತಿಯೊಂದನ್ನೂ ನಾವು ಅವರು ಹೇಳದೆಯೇ ಅರ್ಥ ಮಾಡ್ಕೋಳೋದು ಅಥವಾ ನಾವು ಹೇಳದೆಯೇ ಅವರು ಅರ್ಥ ಮಾಡ್ಕೊಳ್ಲಿ ಅಂತ ಬಯಸೋದು ತಪ್ಪಲ್ಲವಾ? ಅದು ಅತಿಯಾದ ನಿರೀಕ್ಷೆ ಅಲ್ಲವಾ? ಅದರ ಬದಲು ಹೇಳಿಕೊಂಡು ಬಿಟ್ಟರೆ ಅರ್ಥ ಮಾಡಿಕೊಳ್ಳುವುದು ಸುಲಭ ಅಲ್ಲವಾ? ಕಮ್ಯುನಿಕೇಶನ್ ಚೆಂದವಿದ್ದಷ್ಟೂ ಅಂಡರ್ ಸ್ಟ್ಯಾಂಡಿಂಗ್ ಚೆನ್ನಾಗಿರುತ್ತದಲ್ಲವಾ ಅಂತ ಕೇಳಬಹುದು. ಖಂಡಿತ ಹೌದು. ಆದರೆ ಎಲ್ಲವನ್ನೂ ಹೇಳಿಯೇ ಅರ್ಥ ಮಾಡಿಸಲಾಗುವುದಿಲ್ಲ. ಅದೇ ರೀತಿ ಎಲ್ಲ ಸಮಸ್ಯೆಗಳೂ, ನೋವುಗಳೂ ನಮಗೆ ವಿವರವಾಗಿ ಅರ್ಥವಾಗಬೇಕಾಗಿಯೂ ಇಲ್ಲ. ಸ್ಟೆಪಿಂಗ್ ಇನ್ ಟು ಅದರ್ಸ್ ಶೂಸ್ ಅಂತಾರಲ್ವಾ? ಅವರ ಜಾಗದಲ್ಲಿ ನಿಂತು ಒಮ್ಮೆ ನೋಡೋದು ಅಂತ. ಹಾಗೆ ನಾವೂ ಅಂಥ ಪರಿಸ್ಥಿತಿಗಳಲ್ಲಿ ತೊಳಲಾಡಿ ಬಂದಿರ್ತೀವಿ ಅಥವಾ ನಮ್ಮನ್ನು ನಾವು ಆ ಜಾಗದಲ್ಲೊಮ್ಮೆ ನಿಂತು ಯೋಚಿಸಿಬಿಟ್ಟರೆ ಸಾಕು ಅರ್ಥವಾಗಿಬಿಡುತ್ತದೆ. ನಮ್ಮ ರಿಯಾಕ್ಷನ್ ಗಳು ತಾನಾಗಿ ಸಂಯಮಯುತವಾಗಿಬಿಡುತ್ತವೆ.

ಆ ಮನಸ್ಥಿತಿ ಮತ್ತು ಪ್ರಬುದ್ಧತೆ ಗಳಿಸಿಕೊಳ್ಳಬೇಕಷ್ಟೆ. ಕಷ್ಟವೇನಲ್ಲ, ಅಲ್ವಾ?

ಭಟ್ಟರ್ ಸ್ಕಾಚ್

- ಶ್ರೀನಿಧಿ ಕಾಮತ, ಬೆಂಗಳೂರು
ಭಟ್ರೇ, ಕನ್ನಡಿಗರ ಗಮನವನ್ನು ಬೇರೆಡೆ ಸೆಳೆಯುವುದು ಸುಲಭ ಅಂತಾರಲ್ಲ ?
– **ಹೂಂ.. ಅಪ್ರಮುಖ ವ್ಯಕ್ತಿಗಳು ಹೇಳಿದ ಕ್ಷುಲ್ಲಕ ವಿಷಯಗಳ ಬಗ್ಗೆ ವಾರಗಟ್ಟಲೆ ಚರ್ಚಿಸುತ್ತಾರೆ!**

- ಗೀತಾ ನಾಗಭೂಷಣ, (ಇಮೇಲ್ ಮೂಲಕ)
ಭಟ್ರೇ, ಹೆಂಡತಿಯನ್ನು ಯಾಮಾರಿಸುವ ಗಂಡನಿಗೆ ಏನು ಮಾಡಬೇಕು ?
– **ಏನು ಮಾಡಲಿ ಎಂದು ಒಮ್ಮೆ ನಾಗಭೂಷಣ್ ಅವರನ್ನು ಕೇಳಬೇಕಿತ್ತು !**

- ವಿದ್ಯಾ, ಅರಸೀಕೆರೆ
ಭಟ್ರೇ, ಹೆಣ್ಣಿಗೆ ತಲೆಗೂದಲೇ ಭೂಷಣ ಅಂತಾರಲ್ಲ?
– **ಆಗ ಎಲ್ಲರೂ ಬ್ಯೂಟಿ ಪಾರ್ಲರ್‌ಗೆ 'ಅಕ್ಕಮಹಾದೇವಿ' ಹೆಸರನ್ನೇ ಇಡ್ತಾ ಇದ್ರು!**

- ಕೇಶವ ಭೀಮನಕಟ್ಟೆ, ಸಾಗರ
ಭಟ್ರೇ, ಬರೀ ಪ್ರವಾಸ ಮಾಡಿದರೆ ಕೆಲಸ ಮಾಡೋದು ಯಾವಾಗ?
– **ಪ್ರವಾಸವನ್ನೇ ಕೆಲಸ ಮಾಡಿಕೊಳ್ಳಬೇಕು!**

- ಹ.ಭ.ಗೌಡ, ಮಂಡ್ಯ
ಭಟ್ರೇ, ಕುಮಾರಸ್ವಾಮಿ ಅವರಿಂದ ಯಾವ ಸ್ಫೋಟಕ ಹೇಳಿಕೆಯೂ ಬರುತ್ತಿಲ್ಲವಲ್ಲ?
– **ಕೋಳಿ ಮೊಟ್ಟೆಗೆ ಕಾವು ಕೊಡುತ್ತಿರಬೇಕು!**

- ರಮೇಶ ಗೌಡ, ಮಳವಳ್ಳಿ
ಭಟ್ರೇ, ಡಿಕೆಶಿ ಮುಖ್ಯಮಂತ್ರಿ ಆಗುವುದು ಯಾವಾಗ?
– **ಸಿದ್ದರಾಮಯ್ಯನವರು ನಿರ್ಧರಿಸಿದಾಗ!**

- ಮಹೇಶ ಸೀತಾಳೆ, ಕುಂದಾಪುರ
ಭಟ್ರೇ, ಫ್ರಾನ್ಸ್ ಅಧ್ಯಕ್ಷರ ಪತ್ನಿಯೇ ನನಗೆ ಸ್ಫೂರ್ತಿ ಅಂತ ನನ್ನ ಪತ್ನಿ ಹೇಳುತ್ತಿದ್ದಾಳಲ್ಲ?
– **ಅದು ಬಂದೆರಗಲಿರುವ ಕಪಾಳಮೋಕ್ಷದ ಮುನ್ಸೂಚನೆ!**

- ರಾಜು ಭೂತನಹಳ್ಳಿ, ಬೀರೂರು
ಭಟ್ರೇ, ಕೆಲಸವಿಲ್ಲದ ಬಡಗಿ ಮಂಗನ ಅಂಡು ಕೆತ್ತಿದ, ಕೈಯಲ್ಲಿ ಮೊಬೈಲ್ ಹಿಡಿದವ?
– **ವಾಟ್ಸಾಪ್ ನಲ್ಲಿ ತನ್ನ ಹೆಂಡತಿ ಜತೆ ಲವ್ ಚಾಟ್ ಮಾಡಿದ!**

- ನಿರಂಜನ ಉಪಾಧ್ಯಾಯ, ತುಮಕೂರು
ಭಟ್ರೇ, ಯತ್ನಾಳ್ ಮೌನಕ್ಕೆ ಕಾರಣವೇನು?
– **ಸುಮ್ಮಿರು, ಮಲಗಿದವರನ್ನು ಎಬ್ಬಿಸಬೇಡ!**

- ಸೌಮ್ಯ, ಬೆಂಗಳೂರು
ಭಟ್ರೇ, ವಿಶ್ವವಾಣಿ, ಲೋಕಧ್ವನಿ, ಪ್ರವಾಸಿ ಪ್ರಪಂಚ ಆಯ್ತು... ಮುಂದೆ?
– **ವಾಣಿ ಪ್ರಪಂಚ!**

ಪಂಚಕರ್ಮವು ಆಗದಿರಲಿ ನಿಮ್ಮ ಜೀವನದ ಅಯ್ಯೋ, ನನ್ನ ಕರ್ಮ!

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ಒಬ್ಬ ಮಹಿಳೆಯು ಒಮ್ಮೆ ಯಾವುದೋ ರೆಸಾರ್ಟ್‌ಗೆ ತನ್ನ ಕುಟುಂಬದ ಜತೆಗೆ ರಜೆಯ ಸಮಯದಲ್ಲಿ ಹೋಗಿದ್ದರು. ಬೇಸಿಗೆಯ ಕಾಲವದು, ರೆಸಾರ್ಟ್‌ನಲ್ಲಿ 'ಆಯುರ್ವೇದಿಕ್ ಸ್ಪಾ' ಎಂಬ ವಿಶೇಷತೆಯನ್ನು ನೋಡಿ ತಾವು ಒಂದು ಬಾರಿಯಾದರೂ ಆಯುರ್ವೇದ ಚಿಕಿತ್ಸೆಯನ್ನು ಪಡೆಯಬೇಕೆಂಬ ಆಸೆಯಿಂದ ಅಲ್ಲಿ ಟ್ರೀಟ್ಮೆಂಟ್ ತೆಗೆದುಕೊಳ್ಳಲು ನಿರ್ಧರಿಸಿದರು. ರಾತ್ರಿ ಪ್ರಯಾಣ ಮಾಡಿ ಬಂದ ಮರುದಿನವೇ ಟ್ರೀಟ್ಮೆಂಟ್‌ಗಾಗಿ ಹಾಜರಾದರು. ರೆಸಾರ್ಟ್‌ನಲ್ಲಿ ಕೇಳಬೇಕೇ? ಬಫೆಟ್ ಬ್ರೇಕ್‌ಫಾಸ್ಟ್, ಬಗೆಬಗೆಯ ತಿಂಡಿಗಳು. ಬೆಳಗ್ಗಿನ ಈ ವೈಭೋಗದ ಬ್ರೇಕ್‌ಫಾಸ್ಟ್ ಮುಗಿಸಿಕೊಂಡು ಒಂದು ಗಂಟೆಯ ನಂತರ ಟ್ರೀಟ್ಮೆಂಟ್‌ಗೆ ಹೋದರು. ಫೈವ್ ಸ್ಟಾರ್ ರೆಸಾರ್ಟ್‌ನ ವ್ಯವಸ್ಥೆಯು ಅದ್ಭುತವಾಗಿತ್ತು. ಸುಮಾರು ಎರಡು ಗಂಟೆಗಳ ಕಾಲದ 'ಆಯುರ್ವೇದಿಕ್ ಸ್ಪಾ' ಟ್ರೀಟ್ಮೆಂಟ್ ಮುಗಿಸಿಕೊಂಡು ಬಂದರು. ನಂತರ ಕೆಲದಿನಗಳ ಕಾಲ ಕುಟುಂಬದ ಜತೆ ಸುಂದರವಾದ ಸಮಯವನ್ನು ಕಳೆದು ಬೆಂಗಳೂರಿಗೆ ವಾಪಸ್ ಬಂದರು. ಬಂದ ಕೆಲವೇ ದಿನಗಳಲ್ಲಿ ಆರೋಗ್ಯದಲ್ಲಿ ಏರುಪೇರು ಗಮನಿಸಿದರು.

ಇನ್ನೊರ್ವ ಮಹಿಳೆಯು ದೇಹದ ಹೆಚ್ಚಿನ ತೂಕವನ್ನು ಕಡಿಮೆ ಮಾಡಿಕೊಳ್ಳಲು ಯಾವುದೋ ಒಂದು ಆನ್‌ಲೈನ್ 'ಆಯುರ್ವೇದಿಕ್ ವೇಟ್ ಲಾಸ್ ಸೆಂಟರ್' ಮೂಲಕ ಪಂಚಕರ್ಮ ಟ್ರೀಟ್ಮೆಂಟ್ ಅನ್ನು ತೆಗೆದುಕೊಂಡ ಒಂದು ಸನ್ನಿವೇಶ. ಟ್ರೀಟ್ಮೆಂಟ್ ಮುಗಿಯುವಷ್ಟರಲ್ಲಿ ಆರರಿಂದ ಏಳು ಕೆ.ಜಿಗಳಷ್ಟು ತೂಕ ಕಡಿಮೆಯಾಗಿದ್ದೇನೋ ನಿಜ. ಆದರೆ, ಟ್ರೀಟ್ಮೆಂಟ್ ಆದ ಸ್ವಲ್ಪ ದಿನಗಳಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಯಿತು.

ಸ್ನೇಹಿತರೇ, ಈ ರೀತಿಯಾದ ಎಷ್ಟೋ ಉದಾಹರಣೆಗಳನ್ನು ಸರ್ವೇಸಾಮಾನ್ಯವಾಗಿ ಕಾಣಬಹುದು. ನಾವು ದಿನನಿತ್ಯ ಆಯುರ್ವೇದ ಕ್ಲಿನಿಕ್‌ನಲ್ಲಿ ಪೇಷಂಟ್‌ಗಳನ್ನು ನೋಡುವಾಗ ಇಂತಹ ಅನಾಹುತಗಳನ್ನು ಕೇಳುತ್ತೇವೆ. ಆಯುರ್ವೇದ ಚಿಕಿತ್ಸೆಗಳು ಹಾಗೂ ಸ್ಪಾ ಟ್ರೀಟ್ಮೆಂಟ್‌ಗಳು ಒಂದೇ ತರಹ ಎಂಬುದು ಜನರ ನಂಬಿಕೆ. ಮನಸ್ಸಿಗೆ ಬಂದಾಗಲೆಲ್ಲಾ ಅಥವಾ ಬಿಡುವಿನ ಸಮಯ ಸಿಕ್ಕಾಗಲೆಲ್ಲಾ ಹೋಗಿ ಒಂದು ಆಯುರ್ವೇದಿಕ್ ಬಾಡಿ ಮಸಾಜ್ ಮಾಡಿಸಿಕೊಂಡು ಬರುವುದು ಹಾವಳಿಯಾಗಿ ಬಿಟ್ಟಿದೆ. ಕ್ಲಿನಿಕ್ಕಿಗೆ ಹಲವಾರು ಜನ ಕರೆಯನ್ನು ಮಾಡಿ, 'ನನಗೆ ಸೊಂಟ ನೋವಿದೆ. ಒಂದು ದಿನದ ಆಯುರ್ವೇದಿಕ್ ಸ್ಪಾ ಮಸಾಜ್ ನಿಮ್ಮಲ್ಲಿ ಸಿಗುತ್ತದೆಯಾ?' ಎಂಬ ಹಾಸ್ಯಾಸ್ಪದವಾದ ಪ್ರಶ್ನೆಗಳನ್ನು ಕೇಳುವವರಿದ್ದಾರೆ. 'ನನಗೆ ಮೂರು ದಿನಗಳ ಬಿಡುವಿನ ಸಮಯವಿದೆ, ಆಯುರ್ವೇದಿಕ್ ಡಿಟಾಕ್ಸ್ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬಹುದಾ?' ಎನ್ನುವ ಬೇಜವಾಬ್ದಾರಿ ಪ್ರಶ್ನೆಗಳು ಬರುವುದು ಉಂಟು. 'ವಾರಕ್ಕೊಮ್ಮೆ ಔಷಧಿಯನ್ನು ಸೇವಿಸಿ ಬಾಡಿಯನ್ನು ಕ್ಲೀನ್ ಮಾಡಿಕೊಳ್ಳುವ ವಿಧಾನವನ್ನು ಸಜೆಸ್ಟ್ ಮಾಡುತ್ತೀರಾ' ಎಂದು ಕೇಳುವವರಿದ್ದಾರೆ. ಆಯುರ್ವೇದವೆಂದರೆ ಕೇವಲ ಬಾಡಿ ಮಸಾಜ್‌ಗಳನ್ನು ಮಾಡುವ ಒಂದು ವ್ಯವಸ್ಥೆ ಎಂದು ನಂಬಿದವರು ಕೆಲವರಿದ್ದಾರೆ. ಹಾಗಾದರೆ ಆಯುರ್ವೇದದ ಪಂಚಕರ್ಮ ಎಂದರೇನು? ಅದು ಮತ್ತು ಸ್ಪಾ ನಲ್ಲಿ ಮಾಡುವ ಚಿಕಿತ್ಸೆಗಳು ಒಂದೇನಾ? ಪಂಚಕರ್ಮ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬೇಕಾದಾಗ ನೆನಪಿನಲ್ಲಿಡಬೇಕಾದ ಅಂಶಗಳೇನು? ಎಂಬ ವಿಷಯಗಳ ಬಗ್ಗೆ ಇಂದಿನ ಲೇಖನದಲ್ಲಿ ಸ್ವಲ್ಪ ಗಮನಹರಿಸೋಣ.

ಮೊಟ್ಟ ಮೊದಲ ಪ್ರಶ್ನೆ–ಪಂಚಕರ್ಮ ಎಂದರೇನು? ಸ್ನೇಹಿತರೇ ಸಾಮಾನ್ಯವಾಗಿ ನಾವೆಲ್ಲರೂ ಕೇಳಿಯೇ ಇರುತ್ತೇವೆ, 'ಆಯುರ್ವೇದವು ರೋಗಗಳನ್ನು ಬೇರಿನಿಂದ ಕಿತ್ತೊಗೆಯುತ್ತದೆ' ಎಂದು. ಇದರ ವಿಶ್ಲೇಷಣೆಯನ್ನು ಮಾಡೋಣ. ನಮ್ಮ ದೇಹದಲ್ಲಿ ತ್ರಿದೋಷಗಳು, ಅಂದರೆ ವಾತ–ಪಿತ್ತ–ಕಫಗಳ ಒಂದು ಜೈವಿಕ ವ್ಯವಸ್ಥೆಯನ್ನು ಕಾಣಬಹುದು. ದೇಹ–ಇಂದ್ರಿಯ–ಮನಸ್ಸುಗಳ ಕ್ರಿಯೆ ನಿರ್ದೇಶಿಸುವ, ನಿಯಂತ್ರಿಸುವ ಸಂಚಾಲಕ ವರ್ಗವೇ ಈ ತ್ರಿದೋಷಗಳು. ಕಣ್ಣು ಮಿಟುಕಿಸುವುದರಿಂದ ಹಿಡಿದು ಪ್ರಸವದಲ್ಲಿ ಮಗುವಿನ ಜನನವಾಗುವ ಕ್ರಿಯೆಯ ತನಕ ಎಲ್ಲವೂ ನಡೆಯುವುದಕ್ಕೆ ಈ ತ್ರಿದೋಷಗಳೇ ಕಾರಣ. ನಮ್ಮ ದಿನನಿತ್ಯದ ಎಲ್ಲ ಚಟುವಟಿಕೆಗಳು ಸುಸೂತ್ರವಾಗಿ ನಡೆಯಲು ಹೇಗೆ ಈ ತ್ರಿದೋಷಗಳು ಸೂತ್ರಧಾರಿಗಳೋ, ಹಾಗೆಯೇ ರೋಗ ಬರುವುದಕ್ಕೂ ಈ ದೋಷಗಳೇ ಕಾರಣ. ಆಯುರ್ವೇದದಲ್ಲಿ 'ರೋಗಸ್ತು ದೋಷವೈಷಮ್ಯಮ್' ಅಂತ ಹೇಳಲಾಗಿದೆ. ಅಂದರೆ, ನಮ್ಮ ಆಹಾರ–ವಿಹಾರ–ವ್ಯವಹಾರಗಳು ಕೆಟ್ಟಾಗ ಅದರ ಪರಿಣಾಮವಾಗಿ ಈ ದೋಷಗಳ ಸಹಜ ಕ್ರಿಯೆಗಳು ಹಾಳಾಗುತ್ತವೆ. ಈ ದೋಷಗಳು ತಮ್ಮ ಪ್ರಾಕೃತಾವಸ್ಥೆಯಿಂದ ವಿಕೃತವಾದಾಗ ದೇಹದಲ್ಲಿ ರೋಗಗಳು ಪ್ರಾರಂಭವಾಗುತ್ತದೆ. ಆಯುರ್ವೇದದಲ್ಲಿ ಚಿಕಿತ್ಸೆಯ ಪ್ರಪ್ರಥಮ ಉದ್ದೇಶವೆಂದರೆ ಈ ವಿಕೃತವಾದ ದೋಷವನ್ನು ಪುನಃ ಪ್ರಾಕೃತಾವಸ್ಥೆಗೆ ತರುವುದು. 'ದೋಷಸಾಮ್ಯಂ ಅರೋಗತಾ' ಅಂದರೆ ಈ ದೋಷಗಳ ಸಮತೆಗೆ ಮರಳಿದರೆ ಅದೇ ಆರೋಗ್ಯದ ಸ್ಥಿತಿ. ಹಾಗಾಗಿ ಬೇರೆ ಬೇರೆ ಔಷಧಿ–ಉಪಚಾರಗಳ ಮೂಲಕ ಈ ದೋಷಗಳನ್ನು ಮತ್ತೆ ಪ್ರಾಕೃತ ಸ್ಥಿತಿಗೆ ತರುವುದು ಆಯುರ್ವೇದ ಚಿಕಿತ್ಸೆಗಳ ಉದ್ದೇಶ. ಅಂತಹ ವಿವಿಧ ಉಪಾಯಗಳಲ್ಲಿ ಒಂದು ಈ ಪಂಚಕರ್ಮ ಅಥವಾ ಶೋಧನ ಕರ್ಮ.

ಪಂಚಕರ್ಮ ಅಥವಾ ಶೋಧನ ಎಂದರೆ ಶರೀರದಲ್ಲಿ ಉತ್ಕಟವಾದ, ವಿಕೃತವಾದ ದೋಷಗಳನ್ನು ದೇಹದಿಂದ ಹೊರಹಾಕಿ ದೇಹವನ್ನು ಶುದ್ಧಗೊಳಿಸುವ ಒಂದು ಕ್ರಮ. ರೋಗಕಾರಕ ದೋಷಗಳನ್ನು ದೇಹದಿಂದ ಹೊರಹಾಕಿದಾಗ ಬಹಳ ಸಹಜವಾಗಿಯೇ ಸ್ವಾಸ್ಥ್ಯ

ಮರಳುತ್ತದೆ. ಇದು ಪಂಚಕರ್ಮದ ಮೂಲ ಉದ್ದೇಶ. ಆಯುರ್ವೇದ ವೈದ್ಯರ ಬಳಿ ಹೋದಾಗ ಅವರು, ಹಲವಾರು ಪ್ರಶ್ನೆಗಳ ಮೂಲಕ ನಿಮ್ಮ ದೇಹದಲ್ಲಿನ ದೋಷಗಳ ಅವಸ್ಥೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಪಡುತ್ತಾರೆ. ಈ ದೋಷಗಳು ದೇಹದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಹಾಳಾಗಿದ್ದರೆ ಕೇವಲ ಶಮನೌಷಧ ಮತ್ತು ಪಥ್ಯದಿಂದ ಅದನ್ನು ಸರಿದೂಗಿಸಬಹುದು. ಆದರೆ, ಗುಣದಲ್ಲಿ ಅಥವಾ ಪ್ರಮಾಣದಲ್ಲಿ ಈ ದೋಷಗಳು ಅತಿಯಾಗಿ ವಿಕೃತಗೊಂಡಾಗ, ಹಾಳಾದಾಗ ಅವುಗಳನ್ನು ಕೇವಲ ಔಷಧಗಳಿಂದ ಅಥವಾ ಶಮನ ಚಿಕಿತ್ಸೆಯಿಂದ ಸರಿ ಮಾಡಲು ಸಾಧ್ಯವಿಲ್ಲ, ಬೇಡದ ದೋಷಗಳನ್ನು ದೇಹದಿಂದ ಹೊರಗೆ ಹಾಕಲೇಬೇಕಾದಂತಹ ಪರಿಸ್ಥಿತಿಯಲ್ಲಿ ದೇಹಕ್ಕೆ ತೊಂದರೆಯಾಗದ ಹಾಗೆ ಬಹಳ ನಾಜೂಕಾಗಿ ದೇಹವನ್ನು ಶುದ್ಧಿಗೊಳಿಸುವ ಪ್ರಕ್ರಿಯೆಗೆ ಪಂಚಕರ್ಮ ಎಂದು ಕರೆಯಬಹುದು. ಪಂಚಕರ್ಮ ಅಂದರೆ ಐದು ಕರ್ಮಗಳು. ಸಾಮಾನ್ಯವಾಗಿ ಪ್ರಮುಖವಾದ ಐದು ಕರ್ಮಗಳ ಮೂಲಕ ನಾವು ದೇಹವನ್ನು ಶುದ್ಧಗೊಳಿಸುತ್ತೇವೆ. ಹಾಗಾಗಿ ಇದನ್ನು ಪಂಚಕರ್ಮ ಎಂದು ಕರೆಯಬಹುದು. ಪಂಚಕರ್ಮಗಳು– ವಮನ, ವಿರೇಚನ, ಬಸ್ತಿ, ನಸ್ಯ ಮತ್ತು ರಕ್ತಮೋಕ್ಷಣ.

ಇವುಗಳಲ್ಲದೆ, ಇನ್ನೂ ಹಲವಾರು ಚಿಕಿತ್ಸಾ ಕ್ರಮಗಳ ಮೂಲಕ ದೇಹವನ್ನು ಶುದ್ಧಿಗೊಳಿಸಲು ಸಾಧ್ಯವಿದ್ದರೂ ಈ ಐದನ್ನೇ ಪಂಚಕರ್ಮಗಳೆಂದು ಕರೆಯಲು ಬಹಳ ಮುಖ್ಯ ಕಾರಣವೆಂದರೆ, ಇವುಗಳು ದೋಷಗಳನ್ನು ಬಹುಪ್ರಮಾಣದಲ್ಲಿ ದೇಹದಿಂದ ಹೊರಹಾಕುವ ಸಾಮರ್ಥ್ಯ ಹೊಂದಿವೆ. ದೇಹವನ್ನು ಶುದ್ಧಿಗೊಳಿಸುವುದು ಪಂಚಕರ್ಮದ ಬಹಳ ಮುಖ್ಯವಾದ ಕೆಲಸವಾದರೂ ಒಬ್ಬ ಆಯುರ್ವೇದ ವೈದ್ಯನು ಇವುಗಳನ್ನು ಹಲವಾರು ರೀತಿಗಳಲ್ಲಿ ಉಪಯೋಗಿಸಿಕೊಳ್ಳಬಹುದು. ಉದಾಹರಣೆಗೆ ಶೋಧನವನ್ನು ದೇಹ ತೆಳ್ಳಗಾಗಿಸಲೂ ಉಪಯೋಗಿಸಬಹುದು, ಅಂತೆಯೇ ದೇಹವನ್ನು ಪುಷ್ಟಿಗೊಳಿಸಲೂ ಬಳಸಬಹುದು. ರಸಾಯನ ಚಿಕಿತ್ಸೆಯಲ್ಲೂ ಇದನ್ನು ಬಳಸಲಾಗುತ್ತದೆ.

ಪಂಚಕರ್ಮದ ಐದು ಪ್ರಮುಖ ಕರ್ಮಗಳ ಬಗ್ಗೆ ಸ್ವಲ್ಪ ತಿಳಿದುಕೊಳ್ಳೋಣ,

1. **ವಮನ ಕರ್ಮ:** ಸಾಮಾನ್ಯವಾಗಿ ದೇಹದಲ್ಲಿನ ಕಫ ದೋಷವು ವಿಕೃತಗೊಂಡಾಗ, ಸಹಜಾವಸ್ಥೆಗಿಂತ ಅತಿಯಾಗಿ ಉಲ್ಬಣಗೊಂಡಾಗ ಔಷಧಿಗಳನ್ನು ನೀಡಿ ವಾಂತಿ ಮಾಡಿಸುವ ಮೂಲಕ ಈ ವಿಕೃತವಾದ ಕಫ ದೋಷವನ್ನು ದೇಹದಿಂದ ಹೊರಹಾಕಿ ಶುದ್ಧಿ ಮಾಡಲಾಗುತ್ತದೆ. ಈ ಚಿಕಿತ್ಸಾ ಪ್ರಕಾರವಾದ ವಾಂತಿಯನ್ನು ಮಾಡಿಸುವ ಕ್ರಮವನ್ನು ವಮನ ಎಂದು ಕರೆಯಲಾಗುತ್ತದೆ.
2. **ವಿರೇಚನ ಕರ್ಮ:** ನಾನು ಆಗಲೇ ಹೇಳಿದ ಹಾಗೆ, ದೇಹದಲ್ಲಿ ಮೂರು ದೋಷಗಳು ಎಲ್ಲ ಕರ್ಮಗಳನ್ನು ನಿಭಾಯಿಸುತ್ತವೆ. ಅದರಲ್ಲಿ ಎರಡನೇ ದೋಷವು ಪಿತ್ತ ದೋಷ. ದೇಹದಲ್ಲಿನ ಈ ಪಿತ್ತ ದೋಷವು ಕೆರಳಿದಾಗ ಔಷಧಿಗಳನ್ನು ನೀಡಿ ಭೇದಿಯ ಮೂಲಕ ಹೆಚ್ಚಾದ ಪಿತ್ತವನ್ನು ದೇಹದಿಂದ ಹೊರಹಾಕಲಾಗುತ್ತದೆ. ಈ ರೀತಿಯಾಗಿ ಚಿಕಿತ್ಸೆಯಂತೆ ನೀಡುವ ಭೇದಿಯನ್ನು ವಿರೇಚನ ಎಂದು ಕರೆಯಬಹುದು.
3. **ಬಸ್ತಿ ಕರ್ಮ:** ದೇಹದಲ್ಲಿನ ಮತ್ತೊಂದು ಬಹಳ ಮುಖ್ಯವಾದಂತಹ ದೋಷವೆಂದರೆ ವಾತದೋಷ. ವಿವಿಧ ರೀತಿಯ ಕಷಾಯಗಳನ್ನು ಅಥವಾ ಸ್ನೇಹಗಳನ್ನು ಗುದದ್ವಾರದ ಮೂಲಕ ನೀಡಿ ತನ್ಮೂಲಕ ಕೆರಳಿದ ವಾತ ದೋಷವನ್ನು ದೇಹದಿಂದ ಹೊರಕ್ಕೆ ಹಾಕಿ ದೇಹವನ್ನು ಶುದ್ಧಿಗೊಳಿಸುವ ಪಂಚಕರ್ಮಕ್ಕೆ ಬಸ್ತಿ ಎಂದು ಕರೆಯಬಹುದು.
4. **ನಸ್ಯ ಕರ್ಮ:** ಮೂಗಿನ ಮೂಲಕ ಔಷಧ ಪ್ರಯೋಗವನ್ನು ಮಾಡಿ, ತಲೆಯ ಮತ್ತು ಕತ್ತಿನ ಭಾಗಗಳಲ್ಲಿ ಸಂಚಿತಗೊಂಡ ದೋಷಗಳನ್ನು ಹೊರಹಾಕಿ ಶುದ್ಧಿ ಮಾಡುವ ಕರ್ಮವನ್ನು ನಸ್ಯ ಎಂದು ಕರೆಯಬಹುದು.
5. **ರಕ್ತ ಮೋಕ್ಷಣ ಕರ್ಮ:** ವಿಕೃತವಾದ ರಕ್ತವನ್ನು, ರೋಗಕಾರಕವಾದ ಅಂಶಗಳುಳ್ಳ ದೋಷಪೂರಿತ ರಕ್ತವನ್ನು ದೇಹದಿಂದ ಹೊರಹಾಕುವ ಚಿಕಿತ್ಸಾ ಕ್ರಮವನ್ನು ರಕ್ತ ಮೋಕ್ಷಣ ಎಂದು ಕರೆಯುತ್ತೇವೆ.

ಈ ಪಂಚ ಕರ್ಮಗಳನ್ನು ನಾವು ಮತ್ತೊಂದು ರೀತಿಯಾಗಿ ನಾವು ವಿಂಗಡಿಸಬಹುದು.

1. ಸ್ವಸ್ಥರಲ್ಲಿ, ಆರೋಗ್ಯವಂತರಲ್ಲಿ ಮಾಡಬಹುದಾದ ಪಂಚಕರ್ಮಗಳು. ಇವು ಸಾಮಾನ್ಯವಾಗಿ ಎರಡು ವಿಧ.

ದಿನಚರ್ಯೆಯಲ್ಲಿ ಪಂಚಕರ್ಮ: ನಿತ್ಯವೂ ಹಲವಾರು ಕಾರಣಗಳಿಂದ ವಿಕೃತಗೊಳ್ಳುವ ದೋಷಗಳನ್ನು ನಿತ್ಯ ಮಾಡುವ ಸ್ವಾಸ್ಥ್ಯ ರಕ್ಷಣಾ ಕರ್ಮಗಳ ಮೂಲಕ ದೇಹದಿಂದ ಹೊರಗೆ ಹಾಕಿ ಆ ದೋಷಗಳನ್ನು ಸರಿದೂಗಿಸಬಹುದು. ಉದಾಹರಣೆಗೆ, ಅಭ್ಯಂಗ, ಶಿರೋಭ್ಯಂಗ, ನಸ್ಯ, ಶಿರೋಪಿಚು, ಉದ್ವರ್ತನ, ಮಾತ್ರಾಬಸ್ತಿ. ಇವುಗಳನ್ನು ನಾವು ನಮ್ಮ ದಿನಚರ್ಯೆಯಲ್ಲಿ ನಿತ್ಯವೂ ಅಭ್ಯಾಸ ಮಾಡಿದಾಗ ವರ್ಷವಿಡೀ ಸ್ವಸ್ಥರಾಗಿರಲು ಸಾಧ್ಯವಾಗುತ್ತದೆ.

ಋತುಚರ್ಯೆಯಲ್ಲಿ ಪಂಚಕರ್ಮ: ಋತುವಿನ ವೈಪರೀತ್ಯದಿಂದ ದೇಹದಲ್ಲಿರುವ ದೋಷಗಳು ವಿಕೃತಗೊಳ್ಳುವುದು ಸಹಜ. ಈ ರೀತಿ ನೈಸರ್ಗಿಕವಾಗಿಯೇ ವಿಕೃತಗೊಂಡ ದೋಷಗಳನ್ನು ಸರಿದೂಗಿಸಲು ಸ್ವಸ್ಥರಿಗೂ ಪಂಚಕರ್ಮದ ಅವಶ್ಯಕತೆ ಇರುತ್ತದೆ. ಹಾಗಾಗಿ, ಸಾಮಾನ್ಯವಾಗಿ ವಸಂತ ಋತುವಿನಲ್ಲಿ ವಿಕೃತಗೊಂಡ ಕಫ ದೋಷವನ್ನು ಶಮನ ಮಾಡಲು ವಮನ ಕರ್ಮವನ್ನು ಮಾಡಲಾಗುತ್ತದೆ. ಇನ್ನು, ವರ್ಷ ಋತುವಿನಲ್ಲಿ ವಿಕೃತಗೊಂಡ ವಾತವನ್ನು ಸರಿದೂಗಿಸಲು ಬಸ್ತಿ ಕರ್ಮ ಮತ್ತು ಶರತ್ ಋತುವಿನಲ್ಲಿ ಕುಪಿತಗೊಂಡ ಪಿತ್ತವನ್ನು ಶಮನ ಮಾಡಲು ವಿರೇಚನ ಕರ್ಮವನ್ನು ಮಾಡಲಾಗುತ್ತದೆ.

ಇದಲ್ಲದೆ, ರಸಾಯನ ಚಿಕಿತ್ಸೆಯಲ್ಲೂ ಪಂಚಕರ್ಮವನ್ನು ಮಾಡಲಾಗುತ್ತದೆ. ದೇಹದಲ್ಲಿನ ಮುಪ್ಪಿನ ಲಕ್ಷಣಗಳನ್ನು ತಡೆಗಟ್ಟಿ, ಶರೀರ–ಇಂದ್ರಿಯ–ಮನಸ್ಸುಗಳ ವಿಶೇಷ ಶಕ್ತಿಗಳನ್ನು ಹೆಚ್ಚಿಸಲು ರಾಸಾಯನ ಚಿಕಿತ್ಸೆಗಳನ್ನು ಆಯುರ್ವೇದದಲ್ಲಿ ಮಾಡಲಾಗುತ್ತದೆ. ಯಾವುದೇ ರಸಾಯನ ಚಿಕಿತ್ಸೆಯನ್ನು ಮಾಡುವ ಮುನ್ನ ಪಂಚಕರ್ಮದ ಶೋಧನೆಯು ಅತ್ಯವಶ್ಯಕ.

ಅಂತೆಯೇ, ಗರ್ಭ ಧರಿಸುವ ಮುನ್ನ ಗಂಡ ಮತ್ತು ಹೆಂಡತಿ ಇಬ್ಬರೂ ಈ ಪಂಚಕರ್ಮಗಳನ್ನು ವೈದ್ಯರ ಸಲಹೆಯಂತೆ ತೆಗೆದುಕೊಂಡು, ನಂತರ ಗರ್ಭ ಧರಿಸಿದರೆ ಹುಟ್ಟುವ ಮಗು ಬಹಳ ಆರೋಗ್ಯಕರವಾಗಿದ್ದು, ಹಲವಾರು ಅನುವಂಶಿಕ ಕಾಯಿಲೆಗಳನ್ನು ತಡೆಗಟ್ಟಲು ಇದು ಸಹಕರಿಸುತ್ತದೆ.

2. **ರೋಗಿಗಳಲ್ಲಿ ಪಂಚ ಕರ್ಮ:** ಪ್ರತಿಯೊಂದು ರೋಗದಲ್ಲಿಯೂ ಚಿಕಿತ್ಸೆಯನ್ನು ವಿವರಿಸುವಾಗ ಆಯುರ್ವೇದ ಆಚಾರ್ಯರು ಶಮನ ಚಿಕಿತ್ಸೆಯ ಜತೆಗೆ ಶೋಧನಾ ಚಿಕಿತ್ಸೆಯನ್ನು ಸಹ ವಿವರಿಸಿದ್ದಾರೆ. ಆಯುರ್ವೇದ ವೈದ್ಯರು ರೋಗ ಮತ್ತು ರೋಗಿ ಪರೀಕ್ಷೆಯನ್ನು ಮಾಡಿದ ನಂತರ ಆ ರೋಗಿಗೆ ಸೂಕ್ತವಾದ ಪಂಚಕರ್ಮ ಚಿಕಿತ್ಸೆಯನ್ನು ನಿರ್ಧರಿಸಿ ಮಾಡಲಾಗುತ್ತದೆ. ಸಾಮಾನ್ಯವಾಗಿ ವಾತ ದೋಷದಿಂದ ಉಂಟಾದ ರೋಗಗಳಲ್ಲಿ ಬಸ್ತಿ ಕರ್ಮ, ಪಿತ್ತ ದೋಷದಿಂದ ಉಂಟಾದ ವಿಕಾರಗಳಲ್ಲಿ ವಿರೇಚನ ಕರ್ಮ ಹಾಗೂ ಕಫ ದೋಷದಿಂದ ಉಂಟಾದ ವ್ಯಾಧಿಗಳಲ್ಲಿ ವಮನ ಕರ್ಮಗಳನ್ನು ವೈದ್ಯರು ಮಾಡುತ್ತಾರೆ.

ಸ್ನೇಹಿತರೇ, ಪಂಚ ಕರ್ಮವೆಂಬುದು ಯಾವುದೋ ಒಂದೆರಡು ದಿನಗಳಲ್ಲಿ ರಿಲ್ಯಾಕ್ಸೇಶನ್‌ಗೋಸ್ಕರ ಮಾಡಿಸಿಕೊಳ್ಳುವ ಟೈಮ್ ಪಾಸ್ ಟ್ರೀಟ್ಮೆಂಟ್ ಅಲ್ಲ, ಇದೊಂದು ಬಹಳ ಗಂಭೀರವಾದಂತಹ ಚಿಕಿತ್ಸಾ ಪದ್ಧತಿ. ಇದರಲ್ಲಿ ಆಯುರ್ವೇದ ವೈದ್ಯರು ಬಹಳ ಕಟ್ಟುನಿಟ್ಟಾದ ತ್ರಿವಿಧ ಕರ್ಮಗಳನ್ನು ಅನುಸರಿಸುತ್ತಾರೆ. ಪೂರ್ವ ಕರ್ಮ, ಪ್ರಧಾನ ಕರ್ಮ ಮತ್ತು ಪಶ್ಚಾತ್ ಕರ್ಮ.

ಪೂರ್ವ ಕರ್ಮದಲ್ಲಿ ಮೊಟ್ಟ ಮೊದಲು ನೀವು ಈ ಶೋಧನಾಕರ್ಮವನ್ನು ಮಾಡಿಸಿಕೊಳ್ಳಲು ಅರ್ಹರೇ ಎಂದು ಪರೀಕ್ಷಿಸಿ ನಂತರ 'ಅಗ್ನಿ' ಅಂದರೆ ಹಸಿವು ಮತ್ತು ಜೀರ್ಣಶಕ್ತಿಯನ್ನು ಸರಿಪಡಿಸುತ್ತಾರೆ. ನಂತರ ಸ್ನೇಹನ ಮತ್ತು ಸ್ವೇದನ ಎಂಬ ಎರಡು ಬಹಳ ಮುಖ್ಯವಾದ ಕರ್ಮಗಳನ್ನು ಮಾಡುತ್ತಾರೆ. ಇದರ ಉದ್ದೇಶವೆಂದರೆ ದೇಹದಲ್ಲಿ ಎಲ್ಲ ಕಡೆ ಹರಡಿರುವ ವಿಕೃತ ದೋಷವನ್ನು ಪಾಕ ಮಾಡಿ, ಕರಗಿಸಿ ಬೇರೆ ಬೇರೆ ಪ್ರದೇಶಗಳಿಂದ ನಮ್ಮ ಜೀರ್ಣಾಂಗ ವ್ಯೂಹಕ್ಕೆ ತರುವುದು. ಈ ಪೂರ್ವ ಕರ್ಮ ಬಹಳ ಮುಖ್ಯವಾದಂತಹ ಒಂದು ಹಂತ. ಕಾರಣ, ದೋಷಗಳನ್ನು ಪಾಕ ಮಾಡಿ ನಮ್ಮ ಹೊಟ್ಟೆಯ ಭಾಗಕ್ಕೆ ಅದನ್ನು ತರದಿದ್ದರೆ, ನಂತರ ಕೊಡುವ ವಾಂತಿಯಾಗಲಿ, ಭೇದಿಯಾಗಲಿ ನಿಷ್ಪ್ರಯೋಜಕ. ಈ ಪೂರ್ವಕರ್ಮ ಮಾಡುವ ಮುನ್ನ ವೈದ್ಯರು ರೋಗಿಯ ಮತ್ತು ರೋಗದ ಸ್ಥಿತಿಗತಿಗಳನ್ನು ಬಹಳ ಸೂಕ್ಷ್ಮವಾಗಿ ಪರೀಕ್ಷಿಸಿ ನಂತರದ ಇಡೀ ಪಂಚಕರ್ಮವನ್ನು ಸಂಯೋಜಿಸುತ್ತಾರೆ..

ನಂತರ ಬರುವುದು ಪ್ರಧಾನ ಕರ್ಮ. ಇದರಲ್ಲಿ ರೋಗಿಗೆ ಮತ್ತು ರೋಗಕ್ಕೆ ಸರಿದೂಗುವ ಔಷಧಗಳನ್ನು ನೀಡಿ ವಾಂತಿ ಅಥವಾ ಭೇದಿ ಇತ್ಯಾದಿಗಳನ್ನು ಮಾಡಲಾಗುತ್ತದೆ.

ಪ್ರಧಾನ ಕರ್ಮದ ನಂತರ ಬರುವ ಮತ್ತೊಂದು ಮುಖ್ಯ ಘಟಕವೆಂದರೆ ಪಶ್ಚಾತ್ ಕರ್ಮ. ಪಂಚಕರ್ಮದ ನಂತರ ದೇಹ ಇಂದ್ರಿಯ ಮನಸ್ಸುಗಳು ಬಹಳ ಸೂಕ್ಷ್ಮದ ಸ್ಥಿತಿಯಲ್ಲಿರುತ್ತದೆ. ಬಹಳ ಕಾಳಜಿಯಿಂದ ಅಗ್ನಿಯ ಬಲ ಮತ್ತು ದೇಹದ ಬಲವನ್ನು ಪ್ರಾಕೃತ ಅವಸ್ಥೆಗೆ ತರಬೇಕಾಗುತ್ತದೆ. ಪಥ್ಯ, ಆಹಾರ ಕ್ರಮ ಮತ್ತು ವಿಶ್ರಾಂತಿಯ ಅವಶ್ಯಕತೆ ಇರುತ್ತದೆ. ಬಹಳಷ್ಟು ಜನಕ್ಕೆ ಪ್ರಧಾನ ಕರ್ಮವು ಬಹಳ ಉತ್ತಮವಾದ ರೀತಿ ಸಾಗಿದ್ದರೂ ಪಶ್ಚಾತ್ ಕರ್ಮವನ್ನು ಸರಿಯಾಗಿ ಪಾಲಿಸದೆ ತೊಂದರೆಯಾಗುತ್ತದೆ. ಇದು ಸಹ ವೈದ್ಯರ ಸಲಹೆಯಂತೆಯೇ ಮಾಡತಕ್ಕದ್ದು. ಪ್ರಧಾನ ಕರ್ಮಕ್ಕಿಂತಲೂ ಮುಖ್ಯವಾದ ಭಾಗ ಪಶ್ಚಾತ್ಕರ್ಮ ಎಂಬುದನ್ನು ನಾವು ನೆನಪಿನಲ್ಲಿಡಬೇಕು.

ಈ ರೀತಿಯಾಗಿ ಆಯುರ್ವೇದ ಸಂಹಿತೆಗಳಲ್ಲಿ ವಿವರಿಸಿರುವ ಪೂರ್ವ ಕರ್ಮ, ಪ್ರಧಾನ ಕರ್ಮ ಮತ್ತು ಪಶ್ಚಾತ್ ಕರ್ಮ–ಈ ಮೂರನ್ನು ಸರಿಯಾಗಿ, ನುರಿತ ವೈದ್ಯರ ಉಪಸ್ಥಿತಿಯಲ್ಲಿ ಚಿಕಿತ್ಸೆಯನ್ನು ತೆಗೆದುಕೊಂಡಾಗ ಮಾತ್ರ ಅದು ಆಯುರ್ವೇದದ ಪಂಚಕರ್ಮವೆನಿಸಿಕೊಳ್ಳುತ್ತದೆ. ಇವೆಲ್ಲ ಇರದ ಒಂದು 'ಸ್ಪಾ ಟ್ರೀಟ್ಮೆಂಟ್' ಎಂದಿಗೂ ಆಯುರ್ವೇದದ ಪಂಚಕರ್ಮವಾಗಲು ಸಾಧ್ಯವಿಲ್ಲ .ನೀವು ಅದನ್ನು ಕೇವಲ 'ಬಾಡಿ ಮಸಾಜ್' ಎಂದು ಬೇಕಾದರೆ ಕರೆದುಕೊಳ್ಳಿ, ಆದರೆ ಅದಕ್ಕೆ ಆಯುರ್ವೇದ ಎಂಬ ಒಂದು ಸ್ಥಾನವನ್ನು ನೀಡಿ ನಮ್ಮ ಶಾಸ್ತ್ರಕ್ಕೆ ಅವಮಾನ ಮಾಡಬೇಡಿ ಎಂಬುದೇ ನನ್ನ ಸವಿನಯ ಕೋರಿಕೆ.

ಪಂಚಕರ್ಮ ಎಂಬುದು ಒಂದು ದೊಡ್ಡ ವಿಜ್ಞಾನ. ಒಂದು ಚಿಕ್ಕ ಅಭ್ಯಂಗ ಮಾಡುವುದರ ಹಿಂದೆಯೂ ಒಂದು ವಿಜ್ಞಾನವಿದೆ, ಒಂದು ಕ್ರಮವಿದೆ. ಮನಸ್ಸಿಗೆ ಬೇಕಾದಾಗ ಹೋಗಿ ಮಸಾಜ್ ಮಾಡಿಸಿಕೊಂಡು ಬಂದು ನಂತರ ಬೇಕಾಬಿಟ್ಟಿ ವ್ಯವಹರಿಸುವುದರಿಂದ ದೇಹಕ್ಕೆ ಒಳ್ಳೆಯದಾಗುತ್ತದೆ ಎಂಬ ಭ್ರಮೆ ಬೇಡ. ಕಾರಣ, ರೋಗಿಯ ಸ್ಥಿತಿ, ಶಾರೀರಿಕ ಬಲ, ಅಗ್ನಿಯ ಬಲ, ರೋಗದ ಬಲ, ಸೇವಿಸುವ ಆಹಾರ, ವಾತಾವರಣ, ಮಾನಸಿಕ ಸ್ಥಿತಿ, ವಯಸ್ಸು, ಮಾಡುವ ಕೆಲಸ–ಈ ಎಲ್ಲ ವಿಷಯಗಳನ್ನು ಪರೀಕ್ಷಿಸದೆ ಮಾಡುವ ಚಿಕಿತ್ಸೆಗಳಿರಬಹುದು ಅಥವಾ ಒಂದು ಚಿಕ್ಕ ಸ್ಪಾ ಟ್ರೀಟ್ಮೆಂಟ್ ಇರಬಹುದು ದೇಹಕ್ಕೆ ತೊಂದರೆಯನ್ನು ತರುವುದು ಖಚಿತ. ಹಾಗಾಗಿ, ತೊಂದರೆ ಇಲ್ಲದೆ ಪಂಚಕರ್ಮಗಳನ್ನು ಮಾಡಿಸಿಕೊಂಡು, ಚಿಕಿತ್ಸೆಯ ನಂತರ ಅದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಂಡು ಆರೋಗ್ಯವಂತರಾಗಿರಬೇಕಾದರೆ ಇದನ್ನು ಶಾಸ್ತ್ರೋಕ್ತವಾಗಿ ವೈದ್ಯರ ಸಲಹೆಯಂತೆಯೇ ಮಾಡತಕ್ಕದ್ದು.

ಸರಿಯಾಗಿ ಮಾಡಿಸಿಕೊಂಡ ಪಂಚಕರ್ಮದಿಂದಾಗುವ ಪ್ರಯೋಜನಕ್ಕೆ ನಮ್ಮ ಶಾಸ್ತ್ರವು ಈ ರೀತಿಯಾಗಿ ಗ್ಯಾರಂಟಿಯನ್ನು ನೀಡುತ್ತದೆ. 'ಜಿತಾ ಸಂಶೋಧನ್ಯೆರ್ಯೆ ತು ನ ತೇಷಾಂ ಪುನರುದ್ಭವಃ' ಒಂದು ಸಲ ಮಾಡಿಸಿಕೊಂಡ ಸಂಶೋಧನದಿಂದ ಜಿತವಾದ ದೋಷಗಳು ಮತ್ತೆ ಎಂದಿಗೂ ಉದ್ಭವಗೊಂಡು ಪುನಃ ಕಾಯಿಲೆಗಳನ್ನು ಉಂಟುಮಾಡುವುದಿಲ್ಲ! ಆದರೆ ಮೇಲೆ ಹೇಳಿದ ಕಂಡಿಷನ್ಸ್ ಅಪ್ಲೈ!

ವರುಣ ಕರುಣಿಸಿದ್ದಾನೆ, ಬಾಗಿಲುಗಳು ಭದ್ರವಾಗಿವೆಯೇ?!

ವರುಣರಾಗ
ಮಿರ್ಲೆ ಚಂದ್ರಶೇಖರ
vveditoped@gmail.com

ಮಳೆಗಾಲ ನಿರೀಕ್ಷೆಗಿಂತ ಮುಂಚೆಯೇ ರಾಜ್ಯದಲ್ಲಿ ಪ್ರಾರಂಭವಾಗಿದೆ, ಒಂದೇ ಮಳೆಗೆ ಬೆಂಗಳೂರು ಮುಳುಗೇಳಿದ್ದು ಆಯಿತು. ರಾಜಕಾಲುವೆ ಹಾಗೂ ಮಳೆನೀರಿನ ಚರಂಡಿ ವ್ಯವಸ್ಥೆ ಸರಿ ಇಲ್ಲದಿರುವುದು ಹಾಗೂ ನಗರದ ಮೇಲ್ಮೈ ಪೂರಾ ಕಾಂಕ್ರೀಟ್, ಡಾಂಬರು, ಚಪ್ಪಡಿ, ಟೈಲ್ಸ್‌ಗಳಂತಹ ಗಟ್ಟಿ ಪದರದಿಂದ ಆವರಿಸಿಕೊಂಡು ಅಂತರ್ಜಲಕ್ಕೆ ನೀರು ಇಳಿಯದಿರುವ ಕಾರಣ ನೀರಿನ ಮೇಲ್ಮೈ ಹರಿಯುವಿಕೆಯು (ಖಣಾಟಿ ಔಜಿಜಿ) ಹೆಚ್ಚಾಗಿ ರಸ್ತೆಗಳು ನದಿಗಳಾದವು, ಕೆಲವಡೆ ಹಳ್ಳಕ್ಕೆ ಹರಿಯದೆ ಮನೆಯೊಳಕ್ಕೆ ಹರಿದು ಅವಾಂತರ ಸೃಷ್ಟಿಸಿತು. ಸದ್ಯಕ್ಕೆ ಸಚಿವರೇ ಹೇಳಿದಂತೆ ಬ್ರಹ್ಮ ಬಂದರೂ ಸಮಸ್ಯೆ ಬಗೆಹರಿಯುವುದಿಲ್ಲ, ಬ್ರಹ್ಮಾಂಡ ಸಮಸ್ಯೆಯಾಗಿ ಬೆಂಗಳೂರು ನಾಗರಿಕರನ್ನು ಕಾಡುವುದು. ಇಷ್ಟಾಗಿಯೂ ಸಾವಿರಾರು ಕೋಟಿಗಳನ್ನು ವೈಟ್ ಟಾಪಿಂಗ್‌ಗಾಗಿ ವ್ಯಯಿಸಲಾಗುತ್ತಿದೆ. ಬೆಂಗಳೂರಿನ ಅವ್ಯವಸ್ಥೆಯು ಜೋರು ಮಳೆ ಬಿದ್ದು ಎರಡು ದಿನ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಿ ಪ್ರಜ್ವಲಿಸುತ್ತದೆ, ಜನರ ಆಕ್ರೋಶವು ಕೇವಲ ಮೂರುನಾಲ್ಕು ದಿನಗಳಲ್ಲಿ ಟುಸ್ ಪಟಾಕಿ ಆಗಿಬಿಡುತ್ತದೆ, ಎಂದಿನಂತೆ ಮತ್ತದೇ ಜೀವನ ಮರುಕಳಿಸುತ್ತದೆ, ಅದಕ್ಕಾಗಿಯೇ ಜನಪ್ರತಿನಿಧಿಗಳು ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ.

ಮಳೆ ಬಂದು ನಗರಗಳಲ್ಲಿನ ತಗ್ಗು ಪ್ರದೇಶದ ಮನೆಗಳ ನಿವಾಸಿಗಳು ಸ್ವಯಂಕೃತ ತಪ್ಪಿನಿಂದಾಗಿ ಸಂಕಷ್ಟಕ್ಕೆ ಒಳಗಾಗುತ್ತಾರೆ, ನಗರಗಳ ನಿರ್ಮಾಣದಲ್ಲಿ ನಿಯಮಬಾಹಿರ ನಿರ್ಮಾಣವನ್ನು ಕಟ್ಟುನಿಟ್ಟಿನ ಕಾನೂನು ಜರುಗಿಸಿ ತಡೆದರೆ ಸಮಸ್ಯೆ ಬಗೆಹರಿಯದೆ ಇರುವಂತಹದ್ದೇನಲ್ಲ. ಏನ್ಮಾಡೋದು ಬೇಲಿಯೇ ಎದ್ದು ಹೊಲ ಮೇಯುತ್ತಿದ್ದರೆ, ರಕ್ಷಣೆಗೆ ಯಾರು ಬರುತ್ತಾರೆ?. ಬೇಸಿಗೆಯಲ್ಲಿ ಜಲಾಶಯಗಳ ಗೇಟು ಹಾಗೂ ಇತರೆ ಭಾಗಗಳನ್ನು ಪರೀಕ್ಷಿಸಿಕೊಂಡು ದುರಸ್ತಿ ಮಾಡಿಕೊಳ್ಳದೇ ಇದ್ದ ಕಾರಣದಿಂದಾಗಿ 2024 ಆಗಸ್ಟ್ 10ರಂದು ತುಂಗಭದ್ರಾ ಜಲಾಶಯದ ಗೇಟ್ ನಂ.19 ಮುರಿದು ಶೇಖರವಾಗಿದ್ದ ನೀರಿನಲ್ಲಿ 60 ಟಿಎಂಸಿ ಅಮೂಲ್ಯವಾದ ನೀರು (ಕೃಷ್ಣರಾಜಸಾಗರ ಅಣೆಕಟ್ಟೆಯ ಶೇಖರಣಾ ಸಾಮರ್ಥ್ಯ–49.50 ಟಿಎಂಸಿ) ವ್ಯರ್ಥವಾಗಿ ಹರಿದು ಹೋಯಿತು, ಅದೃಷ್ಟವಶಾತ್ ದುರಸ್ತಿಯ ನಂತರ ಸಾಕಷ್ಟು ಮಳೆ ಬಂದಿದ್ದರಿಂದ ಮತ್ತೆ ತುಂಬಿಕೊಂಡಿತು. ವ್ಯವಸ್ಥೆಯಲ್ಲಿನ ಲೋಪಗಳೇ ಹೊರತು, ಇದಕ್ಕೆ ಇಂಜಿನಿಯರ್‌ಗಳಾಗಲಿ ಅಥವಾ ಎಪ್ಪತ್ತು ವರ್ಷದಿಂದ ತನ್ನ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿಕೊಂಡು ಬಂದಿದ್ದ ಗೇಟ್ ನಂ.19 ಕಾರಣವಲ್ಲ.

ಕ್ರೆಸ್ಟ್ ಗೇಟ್‌ಗಳಿಗೆ ಸಮನಾಂತರವಾಗಿ ಸ್ಟಾಪ್‌ಲಾಗ್ ಗೇಟುಗಳು ಇದ್ದಿದ್ದರೆ ನೀರಿನ ನಷ್ಟ ಆಗುತ್ತಿರಲಿಲ್ಲ, ಬಹುತೇಕ ಡ್ಯಾಂಗಳಲ್ಲಿ ಸ್ಟಾಪ್‌ಲಾಗ್ ಗೇಟುಗಳು ಇರುವುದಿಲ್ಲ, ಕಬಿನಿ ಡ್ಯಾಂನಲ್ಲೂ ಅಳವಡಿಸಿರುವುದಿಲ್ಲ. ಅಣೆಕಟ್ಟೆಗಳನ್ನು ಆಧುನಿಕ ಭಾರತದ ದೇವಾಲಯಗಳೆಂದು ಮೊದಲ ಪ್ರಧಾನಿ ಜವಾಹರಲಾಲ್ ನೆಹರುರವರು ಕರೆದರು, ಅವುಗಳ ರಕ್ಷಣೆಯು ಇಂದು ಆದ್ಯ ಕರ್ತವ್ಯವಾಗಬೇಕು. ಕೇಂದ್ರೀಯ ಜಲ ಆಯೋಗದ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ 231 ದೊಡ್ಡ ಅಣೆಕಟ್ಟೆಗಳು ಕಾರ್ಯನಿರ್ವಹಿಸುತ್ತಿವೆ, ಇವುಗಳಲ್ಲಿ 75 ಅಣೆಕಟ್ಟೆಗಳು ಜಲಸಂಪನ್ಮೂಲ ಇಲಾಖೆ, 135 ಅಣೆಕಟ್ಟೆಗಳು ಸಣ್ಣ ನೀರಾವರಿ ಇಲಾಖೆ ಮತ್ತು 21 ಅಣೆಕಟ್ಟೆಗಳನ್ನು ಇಂಧನ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದು. ಅಣೆಕಟ್ಟೆಗಳ ನಿರ್ವಹಣೆಯನ್ನು ಆಯಾ ಇಲಾಖೆಗಳೇ ತಮ್ಮಲ್ಲಿರುವ ಇಂಜಿನಿಯರ್‌ಗಳ ಮೂಲಕ ಮಾಡಿಕೊಂಡು ಬರುತ್ತಿವೆ. ಕಳೆದ ಮಳೆಗಾಲದಲ್ಲಿ ನೀರಿನ ಒತ್ತಡಕ್ಕೆ ಕ್ರೆಸ್ಟ್ ಗೇಟ್ ಮುರಿದು ಸಂಭವಿಸಿದ ಅನಾಹುತದಿಂದ ಜಲಸಂಪನ್ಮೂಲ ಇಲಾಖೆಯು ಪಾಠ ಕಲಿತು ಸೂಕ್ತ ಎಚ್ಚರಿಕೆ ಕ್ರಮ ಕೈಗೊಂಡಿದ್ದರೆ ಒಳ್ಳೆಯದು, ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾಗುವ ಸಂಭವ ಇದೆ, ಈಗಾಗಲೇ ಮಳೆ ಪ್ರಾರಂಭವಾಗಿ ನದಿಗಳು ಜೀವ ಪಡೆದುಕೊಳ್ಳುತ್ತಿವೆ, ಬಹುಶಃ ಜುಲೈಗೇ ಅಣೆಕಟ್ಟೆಗಳು ತುಂಬುವ ಲಕ್ಷಣಗಳು ಕಂಡು ಬರುತ್ತಿದೆ.

ಇಲ್ಲಿ ಪ್ರಶ್ನೆ ಇರುವುದು ಅಣೆಕಟ್ಟೆಗಳ ನಿರ್ವಹಣೆಗೆ ನಿಯೋಜಿಸಿರುವ ಇಂಜಿನಿಯರ್‌ಗಳು ಅಣೆಕಟ್ಟೆಯ ಬಗ್ಗೆ ತಾಂತ್ರಿಕ ಪರಿಣಿತಿ ಹೊಂದಿದ್ದಾರೆಯೇ?, ಹೊಂದಿದ್ದರೂ ಕಾಲಕಾಲಕ್ಕೆ ತರಬೇತಿ ನೀಡಲಾಗುತ್ತಿದೆಯೇ? ಎಂಬುದು. ಈಗಲೂ ಸಮಯವಿದೆ, ರಾಜ್ಯದ ಅಣೆಕಟ್ಟೆಗಳ ಉಸ್ತುವಾರಿಯಲ್ಲಿ ಇರುವ ಇಂಜಿನಿಯರ್‌ಗಳ ಮಾಹಿತಿಯನ್ನು ಕ್ರೋಢೀಕರಿಸಿ ಅರ್ಹತೆ ಇರುವವರನ್ನು ಮಾತ್ರ ಬಿಟ್ಟು ಉಳಿದವರನ್ನು ಅವರಲ್ಲಿರುವ ಪರಿಣಿತಿಗೆ ತಕ್ಕ ಸ್ಥಳಗಳಿಗೆ ವರ್ಗಾಹಿಸುವುದು ಅಣೆಕಟ್ಟೆಗಳ ಸುಭದ್ರತೆ ಹಾಗೂ ನೀರಿನ ಸಂರಕ್ಷಣೆಯ ದೃಷ್ಟಿಯಿಂದ ಸೂಕ್ತ.

ನಾವು ಎಡವುತ್ತಿರುವುದು ಇಲ್ಲಿಯೇ, ವೈದ್ಯರಾದವರು ತಮ್ಮ ಪರಿಣಿತಿಯ ವ್ಯಾಪ್ತಿ ಮೀರಿ ಬೇರೆ ರೋಗಕ್ಕೆ ಚಿಕಿತ್ಸೆ ಕೊಡುವುದಿಲ್ಲ, ಹೃದಯ ತಜ್ಞ ಎಂದಿಗೂ ಮಕ್ಕಳ ಹೆರಿಗೆ ವಿಭಾಗಕ್ಕೆ ಹೋಗುವುದಿಲ್ಲ, ಪ್ರಸೂತಿ ತಜ್ಞೆಯಾದವಳು ಮೂತ್ರಪಿಂಡ ಅಥವಾ ನರರೋಗ ವಿಭಾಗಕ್ಕೆ ಚಿಕಿತ್ಸೆ ನೀಡುವುದಿಲ್ಲ. ದುರಂತವೆಂದರೆ ಇಂಜಿನಿಯರಿಂಗ್ ಇಲಾಖೆಗಳಲ್ಲಿ ಒಬ್ಬ ಇಂಜಿನಿಯರ್ ಸಮಗ್ರವಾದ ಪರಿಣಿತಿ ಇಲ್ಲದಿದ್ದರೂ ಎಲ್ಲಾ ವಿಭಾಗಗಳಲ್ಲೂ ಕೆಲಸ ಮಾಡುತ್ತಾನೆ. ಮುನ್ಸಿಪಾಲಿಟಿ, ಕಾರ್ಪೋರೇಷನ್, ಜಿಲ್ಲಾ ಪಂಚಾಯತ್ ಮುಂತಾದ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನೀರಾವರಿ ಕ್ಷೇತ್ರದಲ್ಲಿ ಗಂಧಗಾಳಿ ಇಲ್ಲದ ಇಂಜಿನಿಯರ್‌ಗಳನ್ನು ಅಣೆಕಟ್ಟೆಯ ನಿರ್ವಹಣೆಯ ವಿಭಾಗಕ್ಕೆ ನಿಯೋಜಿಸುತ್ತಾರೆ, ಪ್ರವಾಹ ಬಂದ ಪರಿಸ್ಥಿತಿಯಲ್ಲಿ ಅಣೆಕಟ್ಟೆಗಳನ್ನು ನಿರ್ವಹಿಸುವ ರೀತಿರಿವಾಜುಗಳ ತಿಳಿಯದವನು ಏನು ಮಾಡಲಿಕ್ಕೆ ಸಾಧ್ಯ?. ರಸ್ತೆ ಮಾಡಿಸುತ್ತಿದ್ದವರು, ಮುನ್ಸಿಪಾಲಿಟಿಯಲ್ಲಿ ಕಸವಿಲೇವಾರಿ ಮಾಡಿಕೊಂಡಿದ್ದವರಿಗೆ ಬಾರಿ ಅಣೆಕಟ್ಟೆಯ ನಿರ್ವಹಣೆಯನ್ನು ಕೊಟ್ಟರೆ ಜಲಾಶಯದ ಸುರಕ್ಷತೆಯನ್ನು ನಿರೀಕ್ಷಿಸಲು ಆದೀತೆ?.

ಆಶ್ಚರ್ಯ ಎನಿಸಬಹುದು ಅಣೆಕಟ್ಟೆಗಳ ಬಗ್ಗೆ ಹೆಚ್ಚಿನ ಮಾಹಿತಿ ಇರುವುದು ಹಾಗೂ ಜಲಾಶಯದಲ್ಲಿ ಶೇಖರವಾಗುವ ನೀರಿನ ಸಾಮರ್ಥ್ಯಕ್ಕೆ ಅನುಸಾರ ಗೇಟ್‌ಗಳನ್ನು ಹೇಗೆ ಆಪರೇಟ್ ಮಾಡಬೇಕು ಎನ್ನುವ ಪೂರ್ಣ ಜ್ಞಾನವನ್ನು ಗೇಟ್ ಆಪರೇಟರ್ ಆದವನು ಹೊಂದಿರುತ್ತಾನೆ, ಅಲ್ಲಿನ ಇಂಜಿನಿಯರ್‌ಗಳಿಗೂ ಅವನಷ್ಟು ಗೊತ್ತಿರುವುದಿಲ್ಲ, ಕಾರಣ ಅಣೆಕಟ್ಟೆಯ ಮಾಹಿತಿಯನ್ನು ತಿಳಿದುಕೊಳ್ಳುವಷ್ಟರಲ್ಲಿ ಎತ್ತಂಗಡಿಯಾಗಿರುತ್ತಾನೆ. ಬೇಕಿರುವ ಸ್ಥಳಕ್ಕೆ ವರ್ಗಾಹಿಸಿಕೊಳ್ಳುವ ಶಕ್ತಿ ಇಲ್ಲದೆ ಕೆಲವೇ ತಿಂಗಳುಗಳ ಹಿಂದೆಯಷ್ಟೇ ಕೆಲಸ ಮಾಡಲು ಯಾರೂ ಇಷ್ಟಪಡದ ಅಣೆಕಟ್ಟೆ ವಿಭಾಗಕ್ಕೆ ಬಂದಿರುವ ಇಂಜಿನಿಯರ್‌ಗಳು ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸುವುದು ಕಷ್ಟವಾಗುವುದಿಲ್ಲವೇ?, ಹುದ್ದೆಗೆ ಬಂದ ಇಂಜಿನಿಯರ್‌ಗಳೆಲ್ಲಾ ಗೇಟ್ ಆಪರೇಟರ್‌ಗಳನ್ನೇ ಅವಲಂಬಿಸಬೇಕಾಗುತ್ತದೆ. ಹಲವು ವರ್ಷಗಳಿಂದ ಬೇರೆ ಎಲ್ಲಿಯೂ ವರ್ಗಾವಣೆಗೊಳ್ಳದೆ ಒಂದೇ ಸ್ಥಳದಲ್ಲಿ ಇರುವುದರಿಂದ ಅವನು ಅಣೆಕಟ್ಟೆಯ ಸೂಕ್ಷ್ಮ ವಿಚಾರಗಳನ್ನು ಬಲ್ಲವನಾಗಿರುತ್ತನೆ..

ರಾಜ್ಯದಲ್ಲಿ ಇರುವ ಅಣೆಕಟ್ಟೆಗಳಲ್ಲಿ ಬಹುತೇಕವುಗಳು 50 ವರ್ಷಗಳನ್ನು ದಾಟಿವೆ. ಕನ್ನಂಬಾಡಿ ಅಣೆಕಟ್ಟೆಯು ನೂರು ವರ್ಷಗಳನ್ನು ಕಾಣುತ್ತಿದೆ. ಮೈಸೂರು ಸಂಸ್ಥಾನದ ಮಹಾರಾಣಿ ಕೆಂಪನಂಜಮ್ಮಣಿಯವರ ದೂರದೃಷ್ಟಿಯ ಫಲವಾಗಿ 1897ರಲ್ಲಿ ವೇದಾವತಿ ನದಿಗೆ ಅಡ್ಡಲಾಗಿ ನಿರ್ಮಾಣಗೊಂಡಿರುವ ವಾಣಿವಿಲಾಸ ಸಾಗರ ಜಲಾಶಯವು 125 ವರ್ಷಗಳನ್ನು ಕಂಡಿದೆ. ಇದು ರಾಜ್ಯದ ಪ್ರಥಮ ಅಣೆಕಟ್ಟೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಇತ್ತೀಚೆಗೆ ನಿರ್ಮಾಣಗೊಂಡಿರುವ ಹೊಸ ಅಣೆಕಟ್ಟೆಗಳು ಬಹುಶಃ ಯಾವೂ ಇದ್ದಂತಿಲ್ಲ.

ಜಲಾಶಯಗಳಿಗೆ ವಯಸ್ಸು ಆದಂತೆ ಅವುಗಳನ್ನು ಬಹಳವೇ ಸೂಕ್ಷ್ಮವಾಗಿ ಶಿಶುವಿನಂತೆ ನೋಡಿಕೊಳ್ಳಬೇಕಾಗುತ್ತದೆ, ಎಚ್ಚರ ತಪ್ಪಿದರೆ ಅನಾಹುತಗಳನ್ನು ಊಹಿಸುವುದಕ್ಕೂ ಸಾಧ್ಯವಾಗದು. ಪರಿಣಾಮಗಳನ್ನು ತಿಳಿದೆ ಕೇಂದ್ರ ಸರ್ಕಾರವು ವಿಶ್ವಬ್ಯಾಂಕಿನ ಆರ್ಥಿಕ ನೆರವಿನೊಂದಿಗೆ 2012ರಲ್ಲಿ ಅಣೆಕಟ್ಟು ಪುನರ್ವಸತಿ ಮತ್ತು ಸುಧಾರಣಾ ಯೋಜನೆಯನ್ನು ಕೈಗೊಂಡಿತು, ಇದರಡಿ ಹಲವು ಅಣೆಕಟ್ಟೆಗಳ ಸುರಕ್ಷತೆ ಮತ್ತು ಕಾರ್ಯಕ್ಷಮತೆಯನ್ನು ಸುಧಾರಿಸುವ ಉದ್ದೇಶದಿಂದ ಯೋಜನೆ ರೂಪಿಸಿ ಅನುಷ್ಠಾನಗೊಳಿಸಿತು, ಈ ಯೋಜನೆಯಡಿ ಬಹಳಷ್ಟು ಅಣೆಕಟ್ಟೆಗಳು ಇನ್ನೂ ಸುಧಾರಣೆಯನ್ನು ಕಾಣಬೇಕಾಗಿದೆ. ಅಣೆಕಟ್ಟೆಗಳ ನಿರ್ವಹಣೆ ಹಾಗೂ ಸಂರಕ್ಷಣೆಗಾಗಿ ಕೇಂದ್ರೀಯ ಜಲ ಆಯೋಗವು ಸರಿಸುಮಾರು 17 ಕೈಪಿಡಿ ಹಾಗೂ ಮಾರ್ಗಸೂಚಿಗಳನ್ನು ಒಳಗೊಂಡ ಪುಸ್ತಕಗಳನ್ನು ಪ್ರಕಟಿಸಿದೆ, ಇವೆಲ್ಲವುಗಳ ಪೂರ್ಣ ಮಾಹಿತಿಯು ಅಣೆಕಟ್ಟೆಗಳ ಸಂರಕ್ಷಣೆ ಹಾಗೂ ನಿರ್ವಹಣೆಯನ್ನು ನೋಡಿಕೊಳ್ಳುವ ಸಹಾಯಕ ಇಂಜಿನಿಯರ್‌ನಿಂದ ಹಿಡಿದು ಮುಖ್ಯ ಇಂಜಿನಿಯರ್‌ರವರೆಗೂ ಇರಬೇಕಾಗುತ್ತದೆ. ಆದರೆ ಪ್ರಶ್ನೆ ಇರುವುದು ಎಷ್ಟು ಜನ ಇಂಜಿನಿಯರ್‌ಗಳು ಈ ಕೈಪಿಡಿಗಳನ್ನು ತಿರುವಿ ಹಾಕಿದ್ದಾರೆ, ಆಗುವುದಿಲ್ಲ ಕಾರಣ ಅದನ್ನು ತಿಳಿದುಕೊಳ್ಳುವಷ್ಟು ಕಾಲಾವಕಾಶವನ್ನು ಸರ್ಕಾರ ಅವರಿಗೆ ಕೊಡುವುದಿಲ್ಲವೇ!.

Guide lines for Safety Inspection of Dams ಕೈಪಿಡಿಯಲ್ಲಿ ಅಣೆಕಟ್ಟೆಗಳ ಪರಿವೀಕ್ಷಣೆಯ ಕುರಿತಾಗಿ ಸ್ಪಷ್ಟವಾಗಿ ವಿವರಿಸಲಾಗಿದೆ. ಕೈಪಿಡಿಯ ಪುಟ 217ರಲ್ಲಿ 45 ಪುಟಗಳ ಚೆಕ್‌ಲಿಸ್ಟನ್ನು ಕೊಡಲಾಗಿದೆ. ಅದರ ಅನುಸಾರ ಕ್ರಮ ತೆಗೆದುಕೊಂಡರೆ ತುಂಗಭದ್ರೆಯ ಮಾದರಿ ಅನಾಹುತಗಳು ಡ್ಯಾಂಗಳಲ್ಲಿ ಆಗುವುದಿಲ್ಲ, ಒಮ್ಮೊಮ್ಮೆ ಪ್ರಕೃತಿಯ ವಿಕೋಪಕ್ಕೆ ಕೈಮೀರಿ ಆಗುವುದನ್ನು ಯಾರೂ ತಡೆಯಲಾಗದು. ಚೆಕ್‌ಲಿಸ್ಟ್ ಅನುಸಾರ ಮಾನ್ಸೂನ್ ಪ್ರಾರಂಭ ಆಗುವುದಕ್ಕೆ ಮೊದಲು ಸರ್ಕಾರ ವಾರ್ಷಿಕ ನಿರ್ವಹಣೆಗಾಗಿ ಚೌಕಾಸಿ ಮಾಡದೆ ಅಗತ್ಯ ಇರುವಷ್ಟು ಅನುದಾನ ನೀಡಬೇಕು, ಅನುದಾನವನ್ನು ಬಳಸಿಕೊಂಡು ಚೆಕ್‌ಲಿಸ್ಟ್‌ನಲ್ಲಿ ನಮೂದಿಸಿರುವ ಅಂಶಗಳನ್ನು ಪರಿಗಣಿಸಿ ಎಲ್ಲವೂ ಮುಖ್ಯವೆಂದು ದುರಸ್ತಿ ಅಥವಾ ನಿರ್ವಹಣೆ ಮಾಡಬೇಕಾಗುತ್ತದೆ, ನಂತರ ನಮೂನೆಯಲ್ಲಿರುವ ಪ್ರತೀ ಐಟಂಗಳನ್ನು ಮೇಲಾಧಿಕಾರಿಗಳು ಕೂಲಂಕಷವಾಗಿ ಪರಿಶೀಲನೆ ನಡೆಸಬೇಕು, ಈ ಹಂತದಲ್ಲೂ ನಮ್ಮ ಮೇಲಾಧಿಕಾರಿಗಳು ನಿರ್ಲಕ್ಷ್ಯ ಮಾಡುವ ಅವಕಾಶಗಳಿವೆ. ಕಂಪ್ಯೂಟರ್ ಬಳಕೆಗೆ ಬಂದನಂತರ ಚೆಕ್‌ಲಿಸ್ಟ್ ಕಾಪಿಪೇಸ್ಟ್ ಮಾಡಿ ಮೇಲಿನ ಕಛೇರಿಗಳಿಗೆ ಸಲ್ಲಿಸುವ ಸಂಭವವೇ ಹೆಚ್ಚು.

ಕೈಪಿಡಿಯ ಅಧ್ಯಾಯ 7 ಪುಟ 145ರಲ್ಲಿ ಸಮಗ್ರವಾಗಿ ಪರಿಶೀಲಿಸುವ ಮಾರ್ಗಸೂಚಿಗಳನ್ನು ಕೊಡಲಾಗಿದೆ. ಇದರಲ್ಲಿ ಜಲಾಶಯದ ಪ್ರದೇಶ, ಮುಳುಗಡೆ ಆಗಬಹುದಾದ ಪ್ರದೇಶಗಳು, ಜಲಾನಯನ ಹಾಗೂ ಉಪನದಿಗಳು, ಯಾಂತ್ರಿಕ ಮತ್ತು ವಿದ್ಯುತ್ ವ್ಯವಸ್ಥೆಗಳು, ಅಣೆಕಟ್ಟೆಯ ಕೆಳಭಾಗದ ಅಪಾಯಗಳು, ಕಾಲುವೆ ಮತ್ತು ನದಿಗಳ ಅಡತಡೆಗಳು, ಅಣೆಕಟ್ಟೆಯ ಎರಡೂ ಬದಿಗಳ ಸ್ಥಿತಿ, ಮಣ್ಣಿನ ಏರಿ, ಸ್ಲೂಯಿಸ್‌ಗಳು ಮುಂತಾದವುಗಳನ್ನು ಮಾನ್ಸೂನ್‌ಗಿಂತ ಮೊದಲು ಮತ್ತು ನಂತರ ಅಧಿಕಾರಿಗಳು ಪರಿವೀಕ್ಷಣೆ ಮಾಡಲೇಬೇಕು.

ಇಂದಿನ ಆಡಳಿತ ವ್ಯವಸ್ಥೆಯಲ್ಲಿ ಅಣೆಕಟ್ಟೆಗಳನ್ನು ಸಮರ್ಪಕವಾಗಿ ನಿರ್ವಹಿಸುವುದು ಸಾಧ್ಯವಿಲ್ಲ, ಇದು ಆಗಬೇಕಾದರೆ ರಾಜ್ಯದ ಎಲ್ಲಾ ಡ್ಯಾಂಗಳಿಗೂ ಒಬ್ಬ ನುರಿತ ಮುಖ್ಯ ಇಂಜಿನಿಯರ್ ನೇಮಿಸಿ ಇವರ ವ್ಯಾಪ್ತಿಯಲ್ಲಿ ಪ್ರತೀ ಅಣೆಕಟ್ಟೆಗೆ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮೆಕ್ಯಾನಿಕಲ್ ಇಂಜಿನಿಯರ್ ಹಾಗೂ ವಿದ್ಯುತ್ ಇಂಜಿನಿಯರ್‌ಗಳನ್ನು ನಿಯೋಜಿಸಿ, ನಿರ್ವಹಿಸುವ ಕರ್ತವ್ಯವನ್ನು ಅಣೆಕಟ್ಟೆ ಕಾರ್ಯವ್ಯಾಪ್ತಿಗೆ ಮಾತ್ರ ಸೀಮಿತಗೊಳಿಸಬೇಕು. ಇಷ್ಟಾದರೆ ಸಾಕಾಗದು ನಿಶ್ಚಿತವಾಗಿ ಅಗತ್ಯವಿರುವ ಅನುದಾನವನ್ನು ಮಾನ್ಸೂನ್ ಪ್ರಾರಂಭ ಆಗುವ ಮೊದಲು ಕಾಮಗಾರಿ ನಿರ್ವಹಿಸಲು ಬೇಕಾಗುವ ಅವದಿಗೆ ಮುಂಚೆ ಕಡ್ಡಾಯವಾಗಿ ನೀಡಬೇಕು. ಕಾಮಗಾರಿಯನ್ನು ನಿರ್ವಹಿಸುವ ಗುತ್ತಿಗೆದಾರರಿಗೆ ಅಣೆಕಟ್ಟೆಗಳ ಕಾಮಗಾರಿಗಳನ್ನು ಮಾಡಿದ ಅನುಭವ ಇರಬೇಕು. ಅನುಭವ ಇಲ್ಲದ ಸ್ಥಳೀಯ ಗುತ್ತಿಗೆದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಅಣೆಕಟ್ಟೆ ಕಾಮಗಾರಿಗಳನ್ನು ನೀಡಕೂಡದು.ತುಂಗಭದ್ರಾ ಅಣೆಕಟ್ಟೆಯ ಗೇಟ್‌ಗೆ ಆಗಿರುವ ದುಸ್ಥಿತಿಯು ಬೆಂಗಳೂರು ನಗರಕ್ಕೆ ಕುಡಿಯುವ ನೀರಿಗೆ ಹಾಗೂ ಲಕ್ಷಾಂತರ ಎಕರೆ ಅಚ್ಚುಕಟ್ಟಿಗೆ ಆದಾರವಾಗಿರುವ ಕಬಿನಿ ಮತ್ತು ಕೃಷ್ಣರಾಜಸಾಗರ ಅಣೆಕಟ್ಟೆಗಳಿಗೆ ಬಾರದಿರಲಿ ಎರಡೂ ಜಲಾಶಯಗಳಿಗೂ ಐವತ್ತು ವರ್ಷ ತುಂಬಿವೆ. ಈಗಲೇ ಎಚ್ಚರಿಕೆ ವಹಿಸಿ ನುರಿತ ಅಣೆಕಟ್ಟೆ ತಜ್ಞರ ಸಲಹೆಗಳನ್ನು ಪಡೆದು ಕಟ್ಟುನಿಟ್ಟಾಗಿ ವಾರ್ಷಿಕ ನಿರ್ವಹಣೆ ಮಾಡಲಿ, ಉದಾಸೀನತೆ ತೋರಿದರೆ ರೈತರು ಹಾಗೂ ಬೆಂಗಳೂರು ಸೇರಿದಂತೆ ಹಲವು ನಗರಗಳು ಬಾರಿ ಸಂಕಷ್ಟ ಎದುರಿಸಬೇಕಾಗುತ್ತದೆ..

ಕಳೆದ ವರ್ಷದಲ್ಲಿ ಸಂಭವಿಸಿದ ತುಂಗಭದ್ರ ದುರ್ಘಟನೆಯ ಪರಿಣಾಮದಿಂದಲೂ ನಾವು ಎಚ್ಚೆತ್ತುಕೊಳ್ಳದಿದ್ದಲ್ಲಿ ಭವಿಷ್ಯದಲ್ಲಿ ಬಾರಿ ಬೆಲೆಯನ್ನು ತೆರಬೇಕಾಗುತ್ತದೆ. ನೀರನ್ನು ಉತ್ಪಾದಿಸಲಾಗದು, ಮಳೆಯ ನೀರೇ ನಮಗೆ ಆದಾರ, ಮಳೆಯೂ ನಮ್ಮೊಂದಿಗೆ ಆಗಾಗ್ಗೆ ಆಟ ಆಡುವುದುಂಟು, ಅದು ಕರುಣಿಸಿದಾಗ ನೀರನ್ನು ಬುದ್ಧಿವಂತಿಕೆಯಿಂದ ಶೇಖರಿಸಿಟ್ಟುಕೊಳ್ಳುವುದು ಒಳಿತು, ಶೇಖರಿಸಿಟ್ಟ ನೀರನ್ನು ಅಷ್ಟೇ ಜೋಪಾನ ಮಾಡುವುದು ಮುಖ್ಯ. 92 ಕೋಟಿ ಖರ್ಚು ಮಾಡಿ ಕಾವೇರಿ ಆರತಿ ಮಾಡಿದರೆ ಕನ್ನಂಬಾಡಿ ಕಟ್ಟೆ ಗಟ್ಟಿಯಾಗುವುದೇ?.

ವಿಶ್ವ ಧೂಮಪಾನ ವಿರೋಧಿ ದಿನ

ಶಿವನಗೌಡ ಪೊಲೀಸ್ ಪಾಟೀಲ

ಕೆಡುಕಿಗೆ ಆಕರ್ಷಣೆ ಹೆಚ್ಚು

ಕೆಡುಕಿಗೆ ಆಕರ್ಷಣೆ ಹೆಚ್ಚು. ಬೀಡಿ, ಸಿಗರೇಟು ಸೇರಿದಂತೆ ತಂಬಾಕನ್ನು ಬೇರೆ ಬೇರೆ ರೂಪಗಳಲ್ಲಿ ಸೇವಿಸುವುದು ಆರೋಗ್ಯಕ್ಕೆ ಹಾನಿಕರ, ಇದು ಕೇವಲ ಜೀವನ ನಷ್ಟವಷ್ಟೇ ಅಲ್ಲ; ಆರ್ಥಿಕ ನಷ್ಟವನ್ನೂ ತರುತ್ತದೆ ಎಂದು ಹೇಳಿದರೂ ಧಮ್ ಹೊಡೆಯುವವರ ಪ್ರಮಾಣವೇನೂ ಕಡಿಮೆಯಾಗಿಲ್ಲ. ತಂಬಾಕು ಉತ್ಪನ್ನಗಳ ಬಳಕೆಯಲ್ಲಿ ಇಡೀ ಪ್ರಪಂಚದಲ್ಲಿ ಚೀನಾ ಮೊದಲ ಸ್ಥಾನದಲ್ಲಿದ್ದರೆ ಭಾರತ ಎರಡನೇ ಸ್ಥಾನದಲ್ಲಿದೆ. ತಂಬಾಕು ಸೇವನೆಯಿಂದ ಜಾಗತಿಕವಾಗಿ ಪ್ರತಿ ವರ್ಷ ಸಾಯುವವರ ಸಂಖ್ಯೆ 70 ಲಕ್ಷಕ್ಕಿಂತ ಅಧಿಕ. ಭಾರತದಲ್ಲಿ 10 ಲಕ್ಷ ಜನರು ಬೀಡಿ, ಸಿಗರೇಟ್, ತಂಬಾಕಿನ ನೇರ ಸೇವನೆಯಿಂದ ಉಂಟಾಗುವ ಕ್ಯಾನ್ಸರ್ ಹಾಗೂ ಇತರೆ ಕಾಯಿಲೆಗಳಿಗೆ ಬಲಿಯಾಗುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಈ ಪ್ರಮಾಣ 8 ಸಾವಿರ. ಈಶಾನ್ಯ ರಾಜ್ಯಗಳಲ್ಲಿ ಶೇ. 70 ರಷ್ಟು ಮಂದಿ ಧೂಮಪಾನಕ್ಕೆ ದಾಸರಾಗಿದ್ದಾರೆ. ಇದು ರಾಷ್ಟ್ರೀಯ ಸರಾಸರಿಗಿಂತ ಶೇ. 15ರಷ್ಟು ಹೆಚ್ಚು. ತಂಬಾಕು ಸೇವನೆಯಿಂದ ಕೇವಲ ಗಂಟಲು, ಶ್ವಾಸಕೋಶ ಮಾತ್ರವಲ್ಲದೆ ಅಡಿಯಿಂದ ಮುಡಿವರೆಗೆ ನಮ್ಮ ದೇಹದ ಪ್ರತಿಯೊಂದು ಜೀವ ಕೋಶದ ಮೇಲೆ ಅದು ಮಾರಕ ಪರಿಣಾಮವನ್ನುಂಟು ಮಾಡುತ್ತದೆ.

ರಾಷ್ಟ್ರೀಯ ಕ್ಯಾನ್ಸರ್ ನೋಂದಣಿ (ನ್ಯಾಷನಲ್ ಕ್ಯಾನ್ಸರ್ ರಿಜಿಸ್ಟ್ರಿ) ಪ್ರಕಾರ ದೇಶದಲ್ಲಿ ಶೇ 60ರಷ್ಟು ಮಂದಿಯ ಕ್ಯಾನ್ಸರ್ ಅನ್ನು ಸುಲಭವಾಗಿ ತಡೆಯಬಹುದು.ಈ ಅಂಶಗಳು ತಂಬಾಕು ಹೇಗೆ ಅಮೂಲ್ಯ ಮಾನವ ಸಂಪತ್ತನ್ನು ನುಂಗಿ ನೊಣೆಯುತ್ತದೆ ಎಂಬುದನ್ನು ತೋರಿಸುತ್ತದೆ. ಚಟಕ್ಕೆ ಜೋತು ಬಿದ್ದು ಬಹುಬೇಗ ಸಾವು ತಂದುಕೊಳ್ಳುವವರು ತಮ್ಮ ಕುಟುಂಬಗಳನ್ನು ಅನಾಥರನ್ನಾಗಿಸಿರುತ್ತಾರೆ ಹಾಗೂ ಚಿಕಿತ್ಸೆಗೆ ಸಾವಿರಾರು ರೂ. ವ್ಯಯ ಮಾಡುವುದರ ಮೂಲಕ ತಮ್ಮ ಕುಟುಂಬಗಳನ್ನು ಚೇತರಿಸಿಕೊಳ್ಳಲಾರದ ಆರ್ಥಿಕ ಸಂಕಷ್ಟಕ್ಕೆ ದೂಡಿರುತ್ತಾರೆ.

ತಂಬಾಕು ಉತ್ಪನ್ನಗಳ ಸೇವನೆಯಿಂದ ಸರಕಾರದ ಬೊಕ್ಕಸಕ್ಕೂ ದೊಡ್ಡ ನಷ್ಟ. ಕೇಂದ್ರ ಸರಕಾರ ತಂಬಾಕು ಸೇವನೆಯಿಂದ ಬರುವ ವಿವಿಧ ರೋಗಗಳ ಚಿಕಿತ್ಸೆಗೆ ವಾರ್ಷಿಕವಾಗಿ 1,04, 500 ಕೋಟಿ ರೂ ಖರ್ಚು ಮಾಡುತ್ತಿದೆ. ರಾಜ್ಯ ಸರಕಾರ ಇದಕ್ಕಾಗಿ ಸಾವಿರಾರು ಕೋಟಿ ವಿನಿಯೋಗಿಸುತ್ತಿದೆ. ಅಚ್ಚರಿಯ ವಿಷಯವೆಂದರೆ ಪ್ರತಿವರ್ಷ ಧೂಮಪಾನದ ಚಟಕ್ಕೆ ಬಹುಬೇಗ ಒಲಿಯುವವರ ವಯಸ್ಸಿನಲ್ಲಿ ತೀವ್ರ ಇಳಿತವಾಗುತ್ತದೆ.ಯುವಕ–ಯುವತಿ ಯರು ವಿದೇಶಿ ಸಿಗರೇಟ್ ಸೇದುವುದು ಸ್ಟೈಲ್ ಎಂದು ಭಾವಿಸಿ ಅವುಗಳಿಗೆ ದಾಸರಾಗುತ್ತಿದ್ದಾರೆ. ತಮ್ಮ ಆರೋಗ್ಯದ ಜೊತೆಗೆ, ಇನ್ನಿತರರ ಆರೋಗ್ಯವನ್ನೂ ಹಾಳು ಮಾಡುತ್ತಿದ್ದಾರೆ.

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸುವುದಕ್ಕೊಸ್ಕರ 2003ರಲ್ಲಿ ಸಿಗರೇಟ್ಸ್ ಮತ್ತು ಇತರೆ ತಂಬಾಕು ಉತ್ಪನ್ನ ಕಾಯಿದೆ '(ಕೋಟ್ಪಾ)ಯನ್ನು ಜಾರಿಗೊಳಿಸಲಾಗಿದೆ. ಈ ಕಾಯಿದೆಯಡಿ ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟ್ ಸೇದುವವರಿಗೆ 200 ರೂಪಾಯಿ ದಂಡ ಹಾಕಲಾಗುತ್ತಿದ್ದು ಅದನ್ನು 1000 ರೂಪಾಯಿಗೇರಿಸುವ ಚಿಂತನೆ ಸರಕಾರದ ಮಟ್ಟದಲ್ಲಿ ನಡೆದಿದೆ. ಇದು ಸ್ವಾಗತಾರ್ಹ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:137

ಸಮಾಚಾರ ಸಣ್ಣದಲ್ಲ

500ರ ನೋಟು ರದ್ದು ಮಾಡಿ: ನಾಯ್ಡು ಆಗ್ರಹ



ದೆಹಲಿ: ಭ್ರಷ್ಟಾಚಾರವನ್ನು ಮಟ್ಟಹಾಕುವ ಪ್ರಯತ್ನವಾಗಿ 500 ರು. ನೋಟುಗಳನ್ನು ಹಿಂಪಡೆಯುವಂತೆ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಬಿಜೆಪಿ ಮಿತ್ರ ಪಕ್ಷವಾದ ತೆಲುಗು ದೇಶಂ ಪಕ್ಷದ (ಟಿಡಿಪಿ) ಅಧ್ಯಕ್ಷರೂ ಆಗಿರುವ ಚಂದ್ರಬಾಬು ನಾಯ್ಡು, ಕಡಪ ಜಿಲ್ಲೆಯಲ್ಲಿ ನಡೆದ ಟಿಡಿಪಿ ಮಹಾನಾಡು ಪಕ್ಷದ ವಾರ್ಷಿಕ ಮೂರು ದಿನಗಳ ಬೃಹತ್ ಸಮಾವೇಶದ ಉದ್ಘಾಟನಾ ಭಾಷಣದಲ್ಲಿ ಮಾತನಾಡಿದ ನಾಯ್ಡು, ಸರಕಾರವು ದೇಶದಲ್ಲಿ ಡಿಜಿಟಲ್ ಕರೆನ್ಸಿಯನ್ನು ಪರಿಚಯಿಸಬೇಕು ಮತ್ತು 500 ಮತ್ತು 2,000 ರು.ನೋಟುಗಳನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

370ನೇ ವಿಧಿ ರದ್ದು: ಖುರ್ಷಿದ್ ಸಮರ್ಥನೆ



ಜಕಾರ್ತ: ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿರುವ ಕೇಂದ್ರ ಸರಕಾರದ ನಿರ್ಧಾರವನ್ನು ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷಿದ್ ಅವರು ಸಮರ್ಥಿಸಿಕೊಂಡಿದ್ದಾರೆ. ಸಂವಿಧಾನದ 370ನೇ ವಿಧಿಯು ಕಾಶ್ಮೀರ ಭಾರತದ ಉಳಿದ ಭಾಗಗಳಿಂದ ಪ್ರತ್ಯೇಕವಾಗಿದೆ ಎಂಬ ಗ್ರಹಿಕೆಯನ್ನು ಬಹಳ ಹಿಂದಿನಿಂದಲೂ ಸೃಷ್ಟಿಸಿತ್ತು ಮತ್ತು ಸರಕಾರವು ಈ ವಿಧಿಯನ್ನು ರದ್ದುಗೊಳಿಸುವುದರೊಂದಿಗೆ ಈ ಗ್ರಹಿಕೆಯನ್ನು ಕೊನೆಗೊಳಿಸಲಾಗಿದೆ ಎಂದು ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷಿದ್ ಇಂಡೋನೇಷ್ಯಾದಲ್ಲಿ ನಿಯೋಗದೊಂದಿಗೆ ಸಂವಾದ ನಡೆಸುತ್ತಾ ಹೇಳಿದರು. ಪ್ರತ್ಯೇಕ ಗುರುತಿನ ಅರ್ಥವನ್ನು ಪ್ರಮುಖ ಸಮಸ್ಯೆ ಎಂದು ಕರೆದ ಖುರ್ಷಿದ್, ರದ್ದತಿಯ ನಂತರದ ಸಕಾರಾತ್ಮಕ ಫಲಿತಾಂಶಗಳು ಕಂಡು ಬಂದಿವೆ. ನಂತರದ ಚುನಾವಣೆಗಳಲ್ಲಿ ಶೇಕಡಾ 65ರಷ್ಟು ಮತದಾರರ ಭಾಗವಹಿಸುವಿಕೆಯೂ ಸೇರಿದೆ. ಇದು ಕಾಶ್ಮೀರದಲ್ಲಿ ಚುನಾಯಿತ ಸರಕಾರವನ್ನು ಸ್ಥಾಪಿಸಲು ಕಾರಣವಾಯಿತು ಎಂದರು.

ಅರ್ಷದ್ ಸೇರಿ 58 ಮಂದಿಗೆ ಸೆಬಿ ನಿಷೇಧ

ಮುಂಬೈ: ಬಾಲಿವುಡ್ ನಟ ಅರ್ಷದ್ ವಾರ್ಸಿ ಮತ್ತು ಅವರ ಪತ್ನಿ ಮಾರಿಯಾ ಗೊರೆಟ್ಟಿ ಅವರನ್ನು ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಒಂದು ವರ್ಷದ ಅವಧಿಗೆ ಸೆಕ್ಯುರಿಟೀಸ್ ಮಾರುಕಟ್ಟೆಯಿಂದ ನಿಷೇಧಿಸಿದೆ. ಸಾಧನಾ ಬ್ರಾಡ್‌ಕಾಸ್ಟ್ ಲಿಮಿಟೆಡ್‌ನ ಷೇರು ಬೆಲೆಯಲ್ಲಿನ ಕುಶಲತೆಯನ್ನು ಒಳಗೊಂಡ ಪ್ರಕರಣದಲ್ಲಿ ಸೆಬಿ ಹೊರಡಿಸಿದ ಆದೇಶದ ಭಾಗವಾಗಿ ಈ ನಿಷೇಧವನ್ನು ಮಾಡಲಾಗಿದೆ. ಸಾಧನಾ ಬ್ರಾಡ್‌ಕಾಸ್ಟ್ ಷೇರುಗಳ ಬೆಲೆಯನ್ನು ಹೆಚ್ಚಿಸಲು ಜನರ ಗುಂಪೊಂದು ಸುಳ್ಳು ಮತ್ತು ದಾರಿತಪ್ಪಿಸುವ ಮಾಹಿತಿಯನ್ನು ನೀಡುತ್ತಿದ್ದರು ಎಂದು ಸೆಬಿಗೆ ದೂರು ನೀಡಲಾಗಿತ್ತು. ಈ ವೀಡಿಯೊಗಳನ್ನು ದಿ ಅಡ್ವೈಸರ್ ಮತ್ತು ಮನಿವೈಸ್‌ನಂತಹ ಜನಪ್ರಿಯ ಯೂಟ್ಯೂಬ್ ಚಾನೆಲ್‌ಗಳಿಗೆ ಅಪ್‌ಲೋಡ್ ಮಾಡಲಾಗಿದೆ ಮತ್ತು ಲಕ್ಷಾಂತರ ಜನರು ವೀಕ್ಷಿಸಿದ್ದಾರೆ. ಆ ವೀಡಿಯೊಗಳು ಕಂಪನಿಯು 5ಜಿ ಪರವಾನಗಿಯನ್ನು ಹೊಂದಿದೆ, ಅದಾನಿ ಗ್ರೂಪ್ ಅದನ್ನು ಸ್ವಾಧೀನಪಡಿಸಿಕೊಳ್ಳಲಿದೆ ಮತ್ತು ಅಮೆರಿಕದ ಕಂಪನಿಯೊಂದಕ್ಕೆ 1,100 ಕೋಟಿ ರು.ಗಳ ಒಪ್ಪಂದಕ್ಕೆ ಸಹಿ ಹಾಕಿದೆ ಎಂಬಂತಹ ಹೇಳಿಕೆಗಳನ್ನು ನೀಡಿವೆ. ಸೆಬಿ ಆದೇಶದ ಪ್ರಕಾರ, ಮೇಲೆ ಹೇಳಿದ ವೀಡಿಯೊಗಳ ವಿಷಯಗಳು ಸುಳ್ಳು ಮತ್ತು ದಾರಿತಪ್ಪಿಸುವಂತಿದ್ದವು ಮತ್ತು ದುರುದ್ದೇಶಪೂರಿತವಾಗಿಯೇ ಈ ವಿಡಿಯೋಗಳನ್ನು ಹಂಚಿಕೊಳ್ಳಲಾಗಿದೆ ಎಂದು ಆರೋಪಿಸಿದೆ.

ಕೇರಳದಲ್ಲಿ ಮಳೆಗೆ ಐವರ ಸಾವು

ತಿರುವನಂತಪುರಂ: ಕೇರಳದಲ್ಲಿ ಶುಕ್ರವಾರವೂ ಭಾರಿ ಮಳೆಯಾಗಿದ್ದು, ರಾಜ್ಯದ ವಿವಿಧೆಡೆ ಐವರು ಮೃತಪಟ್ಟಿದ್ದಾರೆ. ಹಲವು ತಗ್ಗು ಪ್ರದೇಶಗಳು ಮುಳುಗಡೆಯಾಗಿದ್ದು, ಬಿರುಗಾಳಿ, ಸಮುದ್ರದಲ್ಲಿ ಹೆಚ್ಚಿದ ಉಬ್ಬರದಿಂದ ಹಲವು ಮನೆಗಳಿಗೆ ಹಾನಿಯಾಗಿವೆ. ಕೊಟ್ಟಾಯಂನಲ್ಲಿ ಮೀನುಗಾರಿಕೆಯಲ್ಲಿ ತೊಡಗಿದ್ದ ಇಬ್ಬರು ಯುವಕರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ತಿರುವನಂತಪುರಂನಲ್ಲಿ ಭಾರೀ ಅಲೆಗೆ ಸಿಲುಕಿ ದೋಣಿ ಮಗುಚಿಬಿದ್ದು, ಮೀನುಗಾರರೊಬ್ಬರು ಸಾವಿಗೀಡಾಗಿದ್ದರೆ. ಕೊಚ್ಚಿನ್‌ನಲ್ಲಿ 85 ವರ್ಷದ ನರೇಗಾ ಕಾರ್ಮಿಕ ಮಹಿಳೆ ಕುಸಿದು ಮೃತಪಟ್ಟರೆ, ಪಶ್ಚಿಮ ಬಂಗಾಳ ಮೂಲದ ವ್ಯಕ್ತಿಯೊಬ್ಬ ನೀರಿನಲ್ಲಿ ಮುಳುಗಿ ಕೊನೆಯುಸಿರೆಳೆದಿದ್ದಾರೆ. ಪತ್ತನಂತಿಟ್ಟ, ಅಲಪ್ಪುಳ, ಕೊಟ್ಟಾಯಂ, ಇಡುಕ್ಕಿ, ಎರ್ನಾಕುಲಂ, ತ್ರಿಶೂರ್, ಕಣ್ಣೂರು ಹಾಗೂ ಕಾಸರಗೋಡು ಜಿಲ್ಲೆಗಳಿಗೆ ಹವಾಮಾನ ಇಲಾಖೆಯು ರೆಡ್ ಅಲರ್ಟ್ ಹಾಗೂ ಉಳಿದಂತೆ ಆರು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಿದೆ.

ಅಧಿಕಾರಿ ಮನೆ ಮೇಲೆ ದಾಳಿ: 12 ಕೋಟಿ ವಶ

ಭುವನೇಶ್ವರ: ಒಡಿಶಾದ ಗ್ರಾಮೀಣಾಭಿವೃದ್ಧಿ ವಿಭಾಗದ ಮುಖ್ಯ ಎಂಜಿನಿಯರೊಬ್ಬರ ಮನೆ ಮತ್ತು ನಿವಾಸದ ಮೇಲೆ ದಾಳಿ ನಡೆಸಿರುವ ಪೊಲೀಸ್ ಇಲಾಖೆ ಭ್ರಷ್ಟಾಚಾರ ನಿಗ್ರಹ ಪಡೆಯ ಅಧಿಕಾರಿಗಳು 12 ಕೋಟಿ ನಗದು ವಶಕ್ಕೆ ಪಡೆದಿದ್ದಾರೆ. ಆದಾಯ ಮೀರಿದ ಆಸ್ತಿ ಹೊಂದಿರುವ ಮಾಹಿತಿ ಆಧರಿಸಿ ಗುಪ್ತದಳ ಸಿಬ್ಬಂದಿ ಅಧಿಕಾರಿಯ ಮನೆ ಮತ್ತು ಕಚೇರಿಯ ಮೇಲೆ ಏಕಕಾಲದಲ್ಲಿ ದಾಳಿ ನಡೆಸಿದ್ದರು. ಅಧಿಕಾರಿಗೆ ಸೇರಿದ ಭುವನೇಶ್ವರದ ಫ್ಲ್ಯಾಟ್‌ನಲ್ಲಿ ? 1 ಕೋಟಿ ನಗದು, ಅಂಗುಲ್ ಜಿಲ್ಲೆಯ ಸಾರಂಗಿಯ ನಿವಾಸದಲ್ಲಿ 61 ಕೋಟಿ ಪತ್ತೆಯಾಗಿದೆ ಎಂದು ಹೇಳಿಕೆ ತಿಳಿಸಿದೆ.

ಬಿಎಸ್‌ಎಫ್ ಹೊಡೆತದಿಂದ ಚೇತರಿಸಿಕೊಳ್ಳಲು ಶತ್ರು ದೇಶಕ್ಕೆ ವರ್ಷಗಳೇ ಬೇಕು ಎಂದ ಗೃಹಸಚಿವ

ಜಮ್ಮು ಗಡಿಯಲ್ಲಿ 118 ಪಾಕ್ ನೆಲೆ ಧ್ವಂಸ: ಅಮಿತ್

ಶ್ರೀನಗರ: ಪಾಕಿಸ್ತಾನ ಮತ್ತು ಭಾರತದ ಸಂಘರ್ಷದ ವೇಳೆ ಸೂಕ್ತ ಉತ್ತರ ನೀಡಿದ್ದಕ್ಕಾಗಿ ಗಡಿ ಭದ್ರತಾ ಪಡೆಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಶ್ಲಾಘಿಸಿದ್ದಾರೆ. ಜಮ್ಮು ಗಡಿಯಲ್ಲಿ ನಡೆದ ಪ್ರತೀಕಾರದ ಕ್ರಮದಲ್ಲಿ ಮೂರು ದಿನಗಳಲ್ಲಿ ಶತ್ರು ದೇಶದ 118ಕ್ಕೂ ಹೆಚ್ಚು ನೆಲೆಗಳು ನಾಶವಾಗಿವೆ. ಇದು ಒಂದು ದೊಡ್ಡ ಹೊಡೆತವಾಗಿದೆ. ಇದರಿಂದ ಚೇತರಿಸಿಕೊಳ್ಳಲು ಅವರಿಗೆ ವರ್ಷಗಳೇ ಬೇಕಾಗುತ್ತದೆ. ಬಿಎಸ್‌ಎಫ್ ಶತ್ರುಗಳ ಕಣ್ಗಾವಲು ಜಾಲವನ್ನು ನಾಶಪಡಿಸಿದೆ ಎಂದು ಶಾ ಹೇಳಿದರು

ಆಪರೇಷನ್ ಸಿಂಧೂರ್ ನಂತರ ಜಮ್ಮು ಮತ್ತು ಕಾಶ್ಮೀರಕ್ಕೆ ಮೊದಲ ಬಾರಿಗೆ ಭೇಟಿ ನೀಡಿದ ಶಾ, ಎರಡು ದಿನಗಳ ಭೇಟಿ ವೇಳೆ ರಾಜ್ಯದ ಭದ್ರತಾ ಪರಿಸ್ಥಿತಿ, ಅಮರನಾಥ ಯಾತ್ರೆಯ ಸಿದ್ಧತೆಗಳನ್ನು ಪರಿಶೀಲನೆ ನಡೆಸಿದರು. ಇದೇ ವೇಳೆ ಪಾಕಿಸ್ತಾನಿ ಶೆಲ್ ದಾಳಿಯ ಸಂತ್ರಸ್ತರ ಅಹವಾಲು ಸ್ವೀಕರಿಸಿದ ಶಾ, ಸೇನಾ ಕಾರ್ಯಾಚರಣೆ ವೇಲೆ ಗಡಿಯಲ್ಲಿ ಪಾಕ್ ಗುಂಡಿನ ಮೊರೆತವನ್ನು ಎದುರಿಸಿದ ಬಿಎಸ್‌ಎಫ್ ಜವಾನರ ಶೌರ್ಯವನ್ನು ಶ್ಲಾಘಿಸಿದರು.

ಪಾಕಿಸ್ತಾನವು ನಮ್ಮ ಗಡಿಗಳು ಮತ್ತು ನಾಗರಿಕ ಪ್ರದೇಶಗಳ ಮೇಲೆ ದಾಳಿ ಮಾಡಿದ್ದು ಇದಕ್ಕೆ ಪ್ರತಿಯಾಗಿ ಬಿಎಸ್‌ಎಫ್‌ನ ನಮ್ಮ ಯೋಧರು ಜಮ್ಮು ಗಡಿಯಲ್ಲಿ 118ಕ್ಕೂ ಹೆಚ್ಚು ನೆಲೆಗಳನ್ನು ನಾಶಪಡಿಸಿ ಹಾನಿಗೊಳಿಸಿದರು. ಶತ್ರುಗಳ ಸಂಪೂರ್ಣ ಕಣ್ಗಾವಲು ವ್ಯವಸ್ಥೆಯನ್ನು ನಾಶಪಡಿಸಿದರು. ಈ ವ್ಯವಸ್ಥೆಯನ್ನು ಪುನರ್ನಿರ್ಮಿಸಲು ಅವರಿಗೆ ನಾಲ್ಕರಿಂದ ಐದು ವರ್ಷಗಳು ಬೇಕಾಗುತ್ತದೆ ಎಂದು ಅಮಿತ್ ಶಾ ಹೇಳಿದರು. ಬಿಎಸ್‌ಎಫ್ ಮಹಾನಿರ್ದೇಶಕರಿಂದ ಪಡೆದ ಮಾಹಿತಿಯ ಪ್ರಕಾರ, ಪಾಕಿಸ್ತಾನದ ಸಂವಹನ ವ್ಯವಸ್ಥೆ ಮತ್ತು ಕಣ್ಗಾವಲು ಉಪಕರಣಗಳು ದೊಡ್ಡ ಹೊಡೆತವನ್ನು ಅನುಭವಿಸಿವೆ ಎಂದು ಅವರು ಹೇಳಿದರು.

ಬಿಎಸ್‌ಎಫ್‌ನ ಸನ್ನದ್ಧತೆಯನ್ನು ಶ್ಲಾಘಿಸಿದ ಅಮಿತ್ ಶಾ, ಬಿಎಸ್‌ಎಫ್ ಗುಪ್ತಚರ ವಿಭಾಗದ ನಿಖರವಾದ ಮಾಹಿತಿಯಿಂದ ಪೂರ್ವಭಾವಿ ಕ್ರಮ ಸಾಧ್ಯವಾಗಿದೆ. ಕದನ ವಿರಾಮ ಸಮಯದಲ್ಲೂ ನೀವು ಜಾಗರೂಕರಾಗಿರುತ್ತೀರಿ ಎಂದು ಇದು ಸಾಬೀತುಪಡಿಸುತ್ತದೆ. ನಿಮ್ಮ ನಿಖರವಾದ ಗುಪ್ತಚರ ಆಧಾರದ ಮೇಲೆ ನಿಖರವಾದ ಪ್ರತಿ-ತಂತ್ರವನ್ನು ಈಗಾಗಲೇ ಸಿದ್ಧಪಡಿಸಲಾಗಿತ್ತು. ಅವಕಾಶ ಬಂದಾಗ, ನೀವು ಅದನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಿದ್ದೀರಿ ಎಂದರು.

ಈ ಸಾಧನೆಯನ್ನು ಅಪಾರ ದೇಶಭಕ್ತಿ ಮತ್ತು ತ್ಯಾಗದ ಪ್ರತಿಬಿಂಬ ಎಂದು ಬಣ್ಣಿಸಿದ ಶಾ, ರಾಷ್ಟ್ರದ ಬಗ್ಗೆ ಹೆಮ್ಮೆ, ಹೃದಯದಲ್ಲಿ ದೇಶಭಕ್ತಿಯ ಪ್ರಜ್ಞೆ ಮತ್ತು ಸರ್ವೋಚ್ಚ ತ್ಯಾಗದ ಬಗ್ಗೆ ಉತ್ಸಾಹ ಇದ್ದಾಗ ಮಾತ್ರ ಅಂತಹ ಧೈರ್ಯ ಕಂಡುಬರುತ್ತದೆ. ಆಗ ಮಾತ್ರ ಅಂತಹ ಫಲಿತಾಂಶಗಳು ಸಾಧ್ಯ ಎಂದು ಹೇಳಿದರು. ಬಿಎಸ್‌ಎಫ್ ಭಾರತದ ಮೊದಲ ರಕ್ಷಣಾ ಪಡೆಯಾಗಿ ಕಾರ್ಯನಿರ್ವಹಿಸುತ್ತಿದೆ. ಮರುಭೂಮಿಗಳು, ಪರ್ವತಗಳು, ಕಾಡುಗಳು ಮತ್ತು ಒರಟಾದ ಭೂಪ್ರದೇಶಗಳಲ್ಲಿ ಅಚಲ ಸಮರ್ಪಣೆಯೊಂದಿಗೆ ಕಾವಲು ಕಾಯುತ್ತಿದೆ ಎಂದು ಅವರು ಒತ್ತಿ ಹೇಳಿದರು.

ನೌಕಾಪಡೆ ದಾಳಿ ಮಾಡಿದ್ದರೆ ಪಾಕ್ 4 ಹೋಳಾಗುತ್ತಿತ್ತು

ಪಣಜಿ: ಪಾಕಿಸ್ತಾನ ಬೆಂಬಲಿತ ಭಯೋತ್ಪಾದನೆಯನ್ನು ಎದುರಿಸಲು ಭಾರತ ಎಲ್ಲಾ ವಿಧಾನಗಳನ್ನು ಬಳಸುತ್ತದೆ. ಪಾಕ್ ಮುಂದೆ ಯಾವುದೇ ದುಷ್ಟ ಅಥವಾ ಅನೈತಿಕ ಕೃತ್ಯಗಳಲ್ಲಿ ತೊಡಗಿದರೆ, ಅದು ಭಾರತೀಯ ನೌಕಾಪಡೆಯ ಸಂಪೂರ್ಣ ಗುಂಡಿನ ದಾಳಿಯನ್ನು ಎದುರಿಸಬೇಕಾಗುತ್ತದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಶುಕ್ರವಾರ ಎಚ್ಚರಿಕೆ ನೀಡಿದ್ದಾರೆ.



ಗೋವಾ ಕರಾವಳಿಯಲ್ಲಿ ಶುಕ್ರವಾರ ಭಾರತದ ಮೊದಲ ಸ್ವದೇಶಿ ವಿಮಾನವಾಹಕ ನೌಕೆ ಐಎನ್‌ಎಸ್ ವಿಕ್ರಾಂತ್‌ನಲ್ಲಿ ಅಧಿಕಾರಿಗಳು ಮತ್ತು ನಾವಿಕರನ್ನು ಉದ್ದೇಶಿಸಿ ಮಾತನಾಡಿದ ರಾಜನಾಥ್ ಸಿಂಗ್, ಆಪರೇಷನ್ ಸಿಂಧೂರ್ ಸಮಯದಲ್ಲಿ ನೌಕಾಪಡೆಯು, ವಾಯುಪಡೆ ಮತ್ತು ಸೇನೆಯೊಂದಿಗೆ ಸೇರಿಕೊಂಡಿದ್ದರೆ, ಪಾಕಿಸ್ತಾನವು 1971 ಕ್ಕಿಂತ ಕೆಟ್ಟ ಪರಿಣಾಮ ಎದುರಿಸುತ್ತಿತ್ತು. ಶತ್ರುದೇಶ ನಾಲ್ಕು ಹೋಳಾಗುತ್ತಿತ್ತು ಎಂದು ಹೇಳಿದರು.

ಪಾಕಿಸ್ತಾನದ ಜತೆ ಮಾತುಕತೆ ನಡೆಸದಿರುವ ಭಾರತದ ನಿಲುವನ್ನು ದೃಢವಾಗಿ ಪುನರುಚ್ಚರಿಸಿದರು. ಮಾತುಕತೆ ನಡೆಸುವುದಾದರೆ ಅದು ಭಯೋತ್ಪಾದನೆ ಮತ್ತು ಪಾಕ್ ಆಕ್ರಮಿತ ಕಾಶ್ಮೀರ(ಪಿಒಕೆ) ಬಗ್ಗೆ ಮಾತ್ರ ಇರುತ್ತದೆ. ಪಾಕಿಸ್ತಾನ ಮಾತುಕತೆಯ ಬಗ್ಗೆ ಗಂಭೀರವಾಗಿದ್ದರೆ ಹಫೀಜ್ ಸಯೀದ್ ಮತ್ತು ಮಸೂದ್ ಅಜರ್‌ನಂತಹ ಉಗ್ರರನ್ನು ಭಾರತಕ್ಕೆ ಹಸ್ತಾಂತರಿಸಬೇಕು ಎಂದು ಹೇಳಿದರು.

2008ರ ಮುಂಬೈ ದಾಳಿಯ ಆರೋಪಿ ತಹವ್ವೂರ್ ರಾಣಾ ಅವರನ್ನು ಇತ್ತೀಚೆಗೆ ಭಾರತಕ್ಕೆ ಹಸ್ತಾಂತರಿಸಿರುವುದನ್ನು ಎತ್ತಿ ತೋರಿಸಿದ ರಾಜನಾಥ್ ಸಿಂಗ್, ಹಫೀಜ್ ಸಯೀದ್ ಕೂಡ ದಾಳಿಯಲ್ಲಿ ಭಾಗಿಯಾಗಿದ್ದಾನೆ ಎಂದರು. ಎಂದು ಹೇಳಿದರು.

ಭಾರತೀಯ ಸಶಸ್ತ್ರ ಪಡೆಗಳು ನಡೆಸಿದ ಆಪರೇಷನ್ ಸಿಂಧೂರ್, ಪಾಕಿಸ್ತಾನ ಮತ್ತು ಪಿಒಕೆಯಲ್ಲಿನ ಭಯೋತ್ಪಾದಕ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಈ ಕಾರ್ಯಾಚರಣೆಯು ಕೇವಲ ಮಿಲಿಟರಿ ತಂತ್ರವಲ್ಲ, ಬದಲಾಗಿ ಭಯೋತ್ಪಾದನೆಯ ಬಗ್ಗೆ ಭಾರತದ ಶೂನ್ಯ ಸಹಿಷ್ಣುತಾ ನೀತಿಯ ಸ್ಪಷ್ಟ ಘೋಷಣೆಯಾಗಿದೆ ಎಂದು ಸಿಂಗ್ ಒತ್ತಿ ಹೇಳಿದರು.

ಪಾಕ್ ಉಗ್ರರು ಬಿಲದೊಳಗಿನ ವಿಷಸರ್ಪಗಳೆಂದ ಪಿಎಂ

ಹೆಡೆ ಎತ್ತಿದರೆ ಹುಷಾರ್: ಮೋದಿ

ಬಿಹಾರ: ಆಪರೇಷನ್ ಸಿಂಧೂರ್ ಭಾರತದ ಬತ್ತಳಿಕೆಯಲ್ಲಿರುವ ಒಂದು ಬಾಣವಷ್ಟೇ. ಭಯೋತ್ಪಾದನೆಯ ವಿರುದ್ಧದ ಹೋರಾಟ ಮುಗಿದಿಲ್ಲ ಅಥವಾ ನಿಂತಿಲ್ಲ. ಉಗ್ರ ವಿಷಸರ್ಪಗಳು ಹೆಡೆ ಬಿಚ್ಚಿದರೆ ಹುತ್ತದಿಂದ ಹೊರಗೆಳೆದು ಹೊಡೆಯುತ್ತೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಗುಡುಗಿದ್ದಾರೆ.

ಬಿಹಾರದ ಕರಕಟ್‌ನಲ್ಲಿ ಸುಮಾರು 50,000 ಕೋಟಿ ರೂ. ಮೌಲ್ಯದ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿದ ನಂತರ ಮಾತನಾಡಿದ ಮೋದಿ, ಪಹಲ್ಗಾಮ್‌ನಲ್ಲಿ ನಡೆದ ಭೀಕರ ದಾಳಿಯ ಒಂದು ದಿನದ ನಂತರ ನಾನು ಬಿಹಾರಕ್ಕೆ ಬಂದಿದ್ದೆ. ಅಲ್ಲಿ ನಮ್ಮ ಅನೇಕ ಸಹೋದರಿಯರು ತಮ್ಮ ಗಂಡಂದಿರನ್ನು ಕಳೆದುಕೊಂಡರು. ಅಪರಾಧಿಗಳಿಗೆ ಅವರು ಕನಸಿನಲ್ಲಿಯೂ ಕಾಣದ ಶಿಕ್ಷೆಯನ್ನು ನೀಡಲಾಗುವುದು ಎಂದು ನಾನು ಭರವಸೆ ನೀಡಿದ್ದೆ. ಇಂದು, ನಾನು ಭರವಸೆಯನ್ನು ಈಡೇರಿಸಿದ ನಂತರ ಬಿಹಾರಕ್ಕೆ ಮರಳಿದ್ದೇನೆ ಎಂದು ಹೇಳಿದರು.

ಭಾರತದ ಹೆಣ್ಣುಮಕ್ಕಳು ಧರಿಸುವ ಸಿಂದೂರ (ಸಿಂದೂರ)ದ ಶಕ್ತಿಯನ್ನು ಪಾಕಿಸ್ತಾನ ಮತ್ತು ಇಡೀ ಜಗತ್ತು ನೋಡಿದೆ. ಪಾಕಿಸ್ತಾನಿ ಸೈನ್ಯದ ರಕ್ಷಣೆಯಲ್ಲಿ ಭಯೋತ್ಪಾದಕರು ಸುರಕ್ಷಿತ ಭಾವನೆ ಹೊಂದಿದ್ದರು. ಆದರೆ ನಾವು ಅವರನ್ನು ಮೊಣಕಾಲೂರುವಂತೆ ಮಾಡಿದೆವು. ಪಹಲ್ಗಾಮ್ ದಾಳಿಯ ಸೂತ್ರಧಾರಿಗಳಾಗಿದ್ದವರ ಅಡಗುತಾಣಗಳನ್ನು ಭಾರತೀಯ ಸಶಸ್ತ್ರ ಪಡೆಗಳು ಧ್ವಂಸ ಮಾಡಿವೆ. ನಾವು ಪಾಕಿಸ್ತಾನದ ವಾಯುನೆಲೆಗಳು ಮತ್ತು ಅವರ ಮಿಲಿಟರಿ ತಾಣಗಳನ್ನೂ ಸಹ ನಾಶಪಡಿಸಿದ್ದೇವೆ. ಇದು ಹೊಸ ಭಾರತದ ಶಕ್ತಿ ಎಂದು ಪ್ರಧಾನಿ ಹೇಳಿದರು.

ಮುಖವಾಡಗಳನ್ನು ಧರಿಸಿ ಬಂದೂಕುಗಳನ್ನು ಹಿಡಿದು ಬರುತ್ತಿದ್ದ ನಕ್ಸಲರನ್ನು ಯಾವಾಗ ಮತ್ತು ಎಲ್ಲಿ ಎದುರಿಸುತ್ತೇವೆ ಎಂದು ತಿಳಿದಿರದ ಕಾರಣ ಜನರು ಬೀದಿಗಳಿಗೆ ಬರಲು ಹೆದರುತ್ತಿದ್ದರು. ನಕ್ಸಲ್ ಪೀಡಿತ ಹಳ್ಳಿಗಳಲ್ಲಿ ಆಸ್ಪತ್ರೆಗಳು ಅಥವಾ ಮೊಬೈಲ್ ಟವರ್‌ಗಳು ಇರಲಿಲ್ಲ. 2014ರಲ್ಲಿ ಅಧಿಕಾರಕ್ಕೆ ಬಂದ ನಂತರ, ಎನ್‌ಡಿಎ ಸರಕಾರವು ಮಾವೋವಾದಿಗಳನ್ನು ಹತ್ತಿಕ್ಕಿ ಜನರಿಗೆ ಮೂಲಭೂತ ಅವಶ್ಯಕತೆಗಳನ್ನು ಒದಗಿಸಿದ್ದೇವೆ. ನಾವು ಶ್ರಮಿಸುತ್ತಲೇ ಇರುತ್ತೇವೆ ಮತ್ತು ಪ್ರಯೋಜನಗಳು ಉದ್ದೇಶಿತ ಫಲಾನುಭವಿಗಳಲ್ಲಿ ನೂರರಷ್ಟು ಜನರಿಗೆ ತಲುಪುವಂತೆ ನೋಡಿಕೊಳ್ಳುತ್ತೇವೆ ಎಂದು ಪ್ರಧಾನಿ ಹೇಳಿದರು.

ವಿದೇಶಾಂಗ ನೀತಿ ವಿರುದ್ಧ ಕಾಂಗ್ರೆಸ್ ಕಿಡಿ

ದೆಹಲಿ: ಆಪರೇಷನ್ ಸಿಂಧೂರ್ ಪ್ರಾರಂಭಿಸಿದಾಗ ಯಾವುದೇ ದೇಶವು ನಮ್ಮ ಪರವಾಗಿ ಹೇಳಿಕೆ ನೀಡಲಿಲ್ಲ. ಯಾವುದೇ ದೇಶ ಪಾಕಿಸ್ತಾನವನ್ನು ಭಯೋತ್ಪಾದಕ ರಾಷ್ಟ್ರ ಎಂದು ಕರೆಯಲಿಲ್ಲ. ಇದು ನಮ್ಮ ವಿದೇಶಾಂಗ ನೀತಿಯ ವೈಫಲ್ಯ ಎಂದು ಹಿರಿಯ ಕಾಂಗ್ರೆಸ್ ನಾಯಕ ಪವನ್ ಖೇರಾ ಕಿಡಿಕಾರಿದ್ದಾರೆ. ಪಾಕಿಸ್ತಾನದೊಂದಿಗೆ ರಷ್ಯಾ ಒಪ್ಪಂದ: ಆಪರೇಷನ್ ಸಿಂಧೂರ್ ನಂತರ, ಕುವೈತ್ ಪಾಕಿಸ್ತಾನದ ಮೇಲಿನ ವೀಸಾ ನಿರ್ಬಂಧಗಳನ್ನು ರದ್ದುಗೊಳಿಸಿದೆ. ಇರಾನ್, ಯುಎಇ ಮತ್ತು ಗಲ್ಫ್ ರಾಷ್ಟ್ರಗಳು ಪಾಕಿಸ್ತಾನದೊಂದಿಗೆ ಎಂಒಯುಗಳಿಗೆ ಸಹಿ ಹಾಕುತ್ತಿವೆ. ಅತ್ಯಂತ ಆಘಾತಕಾರಿ ವಿಷಯವೆಂದರೆ ರಷ್ಯಾ ತನ್ನ ಹಳೆಯ ಉಕ್ಕಿನ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸಲು ಪಾಕಿಸ್ತಾನದೊಂದಿಗೆ ಎಂಒಯುಗೆ ಸಹಿ ಹಾಕಿದೆ. ಈ ಒಪ್ಪಂದಡಿ ಪಾಕಿಸ್ತಾನವು ರಷ್ಯಾದಿಂದ 2.6 ಬಿಲಿಯನ್ ಪಡೆಯುತ್ತದೆ ಎಂದು ತಿಳಿಸಿದರು.

ಉ. ಪ್ರ., ಬಿಹಾರ ಮೂಲದ ಐವರು ವಲಸೆ ಕಾರ್ಮಿಕರ ಸಾವು

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ

ಚಂಡೀಗಢ: ಪಂಜಾಬ್‌ನ ಮುಕ್ತಸರ್ ಸಾಹಿಬ್ ಜಿಲ್ಲೆಯಲ್ಲಿ ಪಟಾಕಿ ತಯಾರಿಕೆ ಮತ್ತು ಪ್ಯಾಕೇಜಿಂಗ್ ಘಟಕದಲ್ಲಿ ಸಂಭವಿಸಿದ ಸ್ಫೋಟದಲ್ಲಿ ಐವರು ವಲಸೆ ಕಾರ್ಮಿಕರು ಸಾವನ್ನಪ್ಪಿದ್ದಾರೆ ಮತ್ತು ಹಲವರು ಗಾಯಗೊಂಡಿದ್ದಾರೆ.

ಸಿಂಘಾವಲಿ-ಕೋಟ್ಲಿ ರಸ್ತೆಯಲ್ಲಿರುವ ಎರಡು ಅಂತಸ್ತಿನ ಕಾರ್ಖಾನೆ ಘಟಕದಲ್ಲಿ ಶುಕ್ರವಾರ ಮುಂಜಾನೆ ಈ ಘಟನೆ ಸಂಭವಿಸಿದೆ. ಸ್ಫೋಟದ ಹಿಂದಿನ ಕಾರಣ ತನಿಖೆಯಲ್ಲಿದೆ ಎಂದು ಎಂದು ಲಂಬಿಯ ಉಪ ಪೊಲೀಸ್ ವರಿಷ್ಠಾಧಿಕಾರಿ ಜಸ್ಪಾಲ್ ಸಿಂಗ್ ತಿಳಿಸಿದ್ದಾರೆ. ಲಂಬಿ ಕ್ಷೇತ್ರದ ಸಿಂಗ್‌ವಾಲಾ ಗ್ರಾಮದಲ್ಲಿರುವ ತರ್ಸೆಮ್ ಸಿಂಗ್ ಎಂಬವರ ಒಡೆತನದ ಕಾರ್ಖಾನೆ ಸ್ಫೋಟದ ತೀವ್ರತೆಯಿಂದಾಗಿ ಸಂಪೂರ್ಣವಾಗಿ ನಾಶವಾಯಿತು.

'ಮೃತರ ಗುರುತುಗಳನ್ನು ಇನ್ನೂ ದೃಢಪಡಿಸಲಾಗಿಲ್ಲ. ಕಾರ್ಖಾನೆಯ ಕಾರ್ಮಿಕರಲ್ಲಿ ಹೆಚ್ಚಿನವರು ಉತ್ತರ ಪ್ರದೇಶ ಮತ್ತು ಬಿಹಾರದಿಂದ ವಲಸೆ ಬಂದವರು ಎನ್ನಲಾಗುತ್ತಿದೆ. ಅವಶೇಷಗಳಿಂದ ಐದು ಶವಗಳನ್ನು ಹೊರತೆಗೆದಿದ್ದೇವೆ ಮತ್ತು ಬೇರೆ ಯಾರೂ ಸಿಲುಕಿಕೊಂಡಿಲ್ಲ ಎಂದು ಖಚಿತಪಡಿಸಿಕೊಳ್ಳಲು ರಕ್ಷಣಾ ಕಾರ್ಯಾಚರಣೆಗಳು ಇನ್ನೂ ನಡೆಯುತ್ತಿವೆ' ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಹೇಳಿದ್ದಾರೆ. ಘಟನೆಯಲ್ಲಿ ಸುಮಾರು 34 ಜನರು ಗಾಯಗೊಂಡಿದ್ದು, ಕೆಲವರನ್ನು ಬಾದಲ್‌ನ ಸಿವಿಲ್ ಆಸ್ಪತ್ರೆಗೆ ದಾಖಲಿಸಲಾಗಿದೆ, ಇನ್ನು ಕೆಲವರು ಬಟಿಂಡಾದ ಏಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸ್ಫೋಟದ ಕಾರಣದ ಬಗ್ಗೆ ತನಿಖೆ

ಪ್ರಾಥಮಿಕ ತನಿಖೆಯಲ್ಲಿ ಪಟಾಕಿಗಳ ತಯಾರಿಕೆ ಮತ್ತು ಪ್ಯಾಕೇಜಿಂಗ್ ಎರಡನ್ನೂ ಒಂದೇ ಆವರಣದಲ್ಲಿ ನಡೆಸಲಾಗುತ್ತಿತ್ತು ಎಂದು ಹೇಳಲಾಗುತ್ತದೆ. ಇದಲ್ಲದೆ, ಹಲವಾರು ಕಾರ್ಮಿಕರು ಕಾರ್ಖಾನೆ ಕಟ್ಟಡದೊಳಗೆ ವಾಸಿಸುತ್ತಿದ್ದರು ಎಂದು ಪ್ರಾಥಮಿಕ ತನಿಖೆಗಳಿಂದ ತಿಳಿದಿದೆ. ಕಾರ್ಖಾನೆಗಳ ಕಾಯ್ದೆಯಡಿ ಯಾವುದೇ ಉಲ್ಲಂಘನೆಗಳನ್ನು ಪರಿಶೀಲಿಸಲು ವಿಧಿವಿಜ್ಞಾನ ತಂಡವು ಸಂಪೂರ್ಣ ತನಿಖೆ ನಡೆಸುತ್ತಿದ್ದು, ಕಾನೂನಿನ ಪ್ರಕಾರ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

17 ಮಹಿಳಾ ಕೆಡೆಟ್‌ಗಳಿಗೆ ಎನ್‌ಡಿಎ ಪದವಿ

ಪುಣೆ: ಐತಿಹಾಸಿಕ ಮೈಲಿಗಲ್ಲು ಎಂಬಂತೆ ಶುಕ್ರವಾರ ಪುಣೆಯಲ್ಲಿರುವ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಿಂದ (ಎನ್‌ಡಿಎ) 17 ಮಹಿಳಾ ಕೆಡೆಟ್‌ಗಳ ಮೊದಲ ಬ್ಯಾಚ್ ಪದವಿ ಪಡೆದುಕೊಂಡಿದ್ದಾರೆ.

ಮಾಜಿ ಸೇನಾ ಮುಖ್ಯಸ್ಥ ಮತ್ತು ಮಿಜೋರಾಂನ ಪ್ರಸ್ತುತ ಗವರ್ನರ್ ಜನರಲ್ ವಿ.ಕೆ. ಸಿಂಗ್ ಅವರು ಪಾಸಿಂಗ್ ಔಟ್ ಪೆರೇಡ್‌ನ ಪರಿಶೀಲನಾ ಅಧಿಕಾರಿಯಾಗಿದ್ದರು. 2021ರಲ್ಲಿ ಸುಪ್ರಿಂ ಕೋರ್ಟ್ ನಿರ್ದೇಶನದ ನಂತರ ಯುಪಿಎಸ್‌ಸಿ ಮಹಿಳೆಯರು ರಕ್ಷಣಾ ಅಕಾಡೆಮಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಿದ ನಂತರ 2022ರಲ್ಲಿ ಮಹಿಳಾ ಕೆಡೆಟ್‌ಗಳ ಮೊದಲ ಬ್ಯಾಚ್ ಎನ್‌ಡಿಎಯ 148ನೇ ಕೋರ್ಸ್‌ಗೆ ಸೇರಿದ್ದರು.

ಅಕಾಡೆಮಿ ಕೆಡೆಟ್ ಕ್ಯಾಪ್ಟನ್ ಉದಯವೀರ್ ನೇಗಿ ಅವರು 148ನೇ ಕೋರ್ಸ್‌ನ ಪಥಸಂಚಲನವನ್ನು ಮುನ್ನಡೆಸಿದರು. ಸಾಮಾಜಿಕ ಸಬಲೀಕರಣದತ್ತ ಸಾಮೂಹಿಕ ಪ್ರಯಾಣದಲ್ಲಿ ಇದು ಒಂದು ಐತಿಹಾಸಿಕ ಮೈಲಿಗಲ್ಲು ಎಂದು ಜನರಲ್ ಸಿಂಗ್ ಈ ಸಂದರ್ಭದಲ್ಲಿ ಹೇಳಿದರು.ಈ ಯುವತಿಯರು ನಾರಿ ಶಕ್ತಿಯ ಅನಿವಾರ್ಯ ಸಂಕೇತವಾಗಿದ್ದು, ಅವರು ಕೇವಲ ಮಹಿಳಾ ಅಭಿವೃದ್ಧಿಯನ್ನು ಮಾತ್ರವಲ್ಲದೆ ಮಹಿಳಾ ನೇತೃತ್ವದ ಅಭಿವೃದ್ಧಿಯನ್ನು ಸಾಕಾರಗೊಳಿಸುತ್ತಾರೆ ಎಂದರು.

ಜಿಡಿಪಿ ಪ್ರಗತಿ ಶೇ.7.4ಕ್ಕೆ ಏರಿಕೆ

ದೆಹಲಿ: ಮಹತ್ವದ ಬೆಳವಣಿಗೆಯಲ್ಲಿ ಭಾರತದ ಜಿಡಿಪಿ ನಾಲ್ಕು ತ್ರೈಮಾಸಿಕಗಳ ಗರಿಷ್ಠ ಮಟ್ಟಕ್ಕೆ ತಲುಪಿದ್ದು, ಪಾಕಿಸ್ತಾನದೊಂದಿಗಿನ ಸೇನಾ ಸಂಘರ್ಷದ ಹೊರತಾಗಿಯೂ ಭಾರತದ ಜಿಡಿಪಿ ಶೇ.7.4ಕ್ಕೆ ಏರಿಕೆಯಾಗಿದೆ.

2025ನೇ ಆರ್ಥಿಕ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಜಿಡಿಪಿ ಶೇ. 7.4ರಷ್ಟು ಏರಿಕೆಯಾಗಿದೆ ಎಂದು ಶುಕ್ರವಾರ ಬಿಡುಗಡೆಯಾದ ಸರ್ಕಾರದ ಅಂಕಿ-ಅಂಶಗಳು ತಿಳಿಸಿವೆ. 2025ನೇ ಆರ್ಥಿಕ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಭಾರತದ ಜಿಡಿಪಿ ಶೇ. 7.4ರಷ್ಟು ಏರಿಕೆ ಕಂಡಿದ್ದು, ಇದು ಕಳೆದ ನಾಲ್ಕು ತ್ರೈಮಾಸಿಕಗಳಲ್ಲೇ ಗರಿಷ್ಠವಾಗಿದೆ. ಒಟ್ಟಾರೆ ಆರ್ಥಿಕ ವರ್ಷದ ಜಿಡಿಪಿ ಬೆಳವಣಿಗೆ ಶೇ. 6.5ರಷ್ಟು ಇರಲಿದೆ ಎಂದು ಅಂದಾಜಿಸಲಾಗಿದೆ. ಜಾಗತಿಕ ಆರ್ಥಿಕ ಪರಿಸ್ಥಿತಿ ಅನಿಶ್ಚಿತವಾಗಿದ್ದರೂ, ಭಾರತವು ಹೂಡಿಕೆಗೆ ಭರವಸೆಯ ತಾಣವಾಗಿ ಮುಂದುವರಿದಿದೆ ಎಂದು ಹೇಳಲಾಗಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದ ಆರ್ಥಿಕ ಬೆಳವಣಿಗೆ ದರ ಶೇ. 6.3ರಷ್ಟು ಇತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಜಿಡಿಪಿ ಬೆಳವಣಿಗೆ ದರ ದೊಡ್ಡ ಮಟ್ಟಕ್ಕೆ ಏರಿಕೆ ಕಂಡಿದೆ. ಆದರೆ ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಕಡಿಮೆಯಾಗಿದೆ. 2023ನೇ ಆರ್ಥಿಕ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರ ಶೇ. 8.4ರಷ್ಟು ಇತ್ತು ಎಂದು ವರದಿಯಲ್ಲಿ ತಿಳಿಸಲಾಗಿದೆ.

ರಾಷ್ಟ್ರೀಯ ಅಂಕಿಅಂಶ ಕಚೇರಿ(ಎನ್‌ಎಸ್‌ಒ) ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರ, 2023-24ರಲ್ಲಿ ಶೇ 9.2ರಷ್ಟು ಬೆಳವಣಿಗೆ ಕಂಡಿದ್ದ ಆರ್ಥಿಕತೆಯು 2024-25ರಲ್ಲಿ ಶೇ 6.5 ರಷ್ಟಾಗಿದೆ. 2025ರ ಮೊದಲ ಮೂರು ತಿಂಗಳಲ್ಲಿ (ಜನವರಿ-ಮಾರ್ಚ್) ಚೀನಾ ಶೇ 5.4 ರಷ್ಟು ಆರ್ಥಿಕ ಬೆಳವಣಿಗೆಯನ್ನು ದಾಖಲಿಸಿದೆ.

ಆದಾಯ ತೆರಿಗೆ ಮಿತಿ 7 ಲಕ್ಷದಿಂದ 12 ಲಕ್ಷ ರೂ.ಗೆ ಏರಿಕೆ, ಆರ್‌ಬಿಐನಿಂದ ಬಡ್ಡಿ ದರ ಇಳಿಕೆ ಹಾಗೂ ವಿದೇಶಿ ನಿಧಿಯ ಒಳ ಹರಿವಿನಿಂದ ಪ್ರಸಕ್ತ ಹಣಕಾಸು ವರ್ಷ (2025-26)ದಲ್ಲಿ ಆರ್ಥಿಕ ಬೆಳವಣಿಗೆ ದರ ಶೇ.6.8ಕ್ಕೆ ಮುಟ್ಟಬಹುದು ಎಂದು ಸಚಿವಾಲಯ ಅಂದಾಜಿಸಿತ್ತು. ಆದರೆ ಆರ್‌ಬಿಐ ಬೆಳವಣಿಗೆ ದರವನ್ನು ಶೇ. 6.5ರಷ್ಟಿರಬಹುದು ಎಂದು ಹೇಳಿತ್ತು.

2025ರ ಆರ್ಥಿಕ ವರ್ಷದಲ್ಲಿ ನಾಮಮಾತ್ರ ಜಿಡಿಪಿ ಶೇ. 9.8% ರಷ್ಟು ಏರಿಕೆಯಾಗಿ 330 ಲಕ್ಷ ಕೋಟಿ ರು.ಗಳಿಗೆ ತಲುಪಿದೆ. ಡಾಲರ್ ಲೆಕ್ಕಾಚಾರದಲ್ಲಿ ಸುಮಾರು 3.92 ಟ್ರಿಲಿಯನ್ ಆಗುತ್ತದೆ. ನೈಜ ಜಿಡಿಪಿ 187.97 ಲಕ್ಷ ಕೋಟಿ ರು.ಗಳಷ್ಟಿದ್ದು, ಕಳೆದ ಸಾಲಿನಲ್ಲಿ ಇದು 176.51 ಲಕ್ಷ ಕೋಟಿಗಳಷ್ಟಿತ್ತು.

ಬ್ರಹ್ಮೋಸ್ ಮತ್ತಷ್ಟು ಘಾತಕ

ದೆಹಲಿ: ಆಪರೇಷನ್ ಸಿಂಧೂರ್ ಸಂದರ್ಭದಲ್ಲಿ ಪಾಕಿಸ್ತಾನದ ಮೇಲೆ ವಿಧ್ವಂಸಕ ದಾಳಿ ನಡೆಸಲು ಭಾರತ ಪ್ರಯೋಗಿಸಿದ್ದ ಬ್ರಹ್ಮೋಸ್ ಕ್ಷಿಪಣಿಯನ್ನು ಮತ್ತಷ್ಟು ಮೇಲ್ದರ್ಜೆಗೇರಿಸಲು ಭಾರತ ನಿರ್ಧರಿಸಿದೆ.

ವಿಯೆಟ್ನಾಂ, ಏಷ್ಯಾದ ಆಗ್ನೇಯ ರಾಷ್ಟ್ರಗಳು, ಮಧ್ಯಪ್ರಾಚ್ಯ ರಾಷ್ಟ್ರಗಳಿಂದ ಈ ಕ್ಷಿಪಣಿಗೆ ಬೇಡಿಕೆ ಬಂದಿದೆ. ಇದೀಗ ಈ ಕ್ಷಿಪಣಿಯ ಗುರಿಯನ್ನು 400 ಕಿ.ಮೀ.ಗಳಿಂದ 800 ಕಿ.ಮೀ.ಗಳಿಗೆ ಹೆಚ್ಚಿಸಲು ನಿರ್ಧ ರಿಸಲಾಗಿದೆ. ಶಬ್ದದ ವೇಗಕ್ಕಿಂತ ಮೂರು ಪಟ್ಟು ವೇಗದಲ್ಲಿ ಇದು ಹಾರುವ ಕ್ಷಿಪಣಿ ಸದ್ಯ ಗರಿಷ್ಠ 400 ಕಿ.ಮೀ. ದೂರದಲ್ಲಿರುವ ಗುರಿಯನ್ನು ತಲುಪುತ್ತದೆ.

ಇದೇ ವೇಳೆ ಈ ಕ್ಷಿಪಣಿಯನ್ನು ಸಮುದ್ರದಿಂದ ಹಾರಿಸಲು ಸಾಧ್ಯವಾಗುವಂತೆ ಸಬ್ ಮರಿನ್‌ನಿಂದಲೂ ಹಾರಿಸಲು ಅನುಕೂಲವಾಗುವಂತೆ ಅಭಿವೃದ್ಧಿ ಪಡಿಸಲು ನಿರ್ಧರಿಸಲಾಗಿದೆ. ಸದ್ಯ ಬ್ರಹ್ಮೋಸ್ ಕ್ಷಿಪಣಿಯು 8.5 ಮೀಟರ್ ಉದ್ದ, 0.6 ಮೀಟರ್ ಅಗಲ ಇದೆ. ಇದಕ್ಕಿಂತ ಸಣ್ಣದಾದ ಮತ್ತೊಂದು ಬ್ರಹ್ಮೋಸ್ ಮಾದರಿಯನ್ನು ತಯಾರಿಸಲು ಸರಕಾರ ನಿರ್ಧರಿಸಿದೆ. ಇದರಿಂದ ವುಗಳನ್ನು ರಾಫೇಲ್ ಹಾಗೂ ಇನ್ನಿತರ ಫೈಟರ್ ಜೆಟ್‌ಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೊಂಡೊಯ್ಯಲು ಅನುಕೂಲವಾಗಲಿದೆ. ಹೊಸ ಮಾದರಿಯ ಬ್ರಹ್ಮೋಸ್‌ಗಳಲ್ಲಿ ವೇಗವನ್ನು ಇನ್ನಷ್ಟೂ ಹೆಚ್ಚಿಸುವ ಪ್ರಯೋಗವೂ ನಡೆಯುತ್ತಿದೆ.

ಪಾಕಿಸ್ತಾನದ ಪರ ಬೇಹುಗಾರನ ಬಂಧನ

ದೆಹಲಿ: ಬೇಹುಗಾರಿಕೆ ಚಟುವಟಿಕೆಗಳಿಗಾಗಿ ಭಾರತೀಯ ಮೊಬೈಲ್ ಸಿಮ್ ಕಾರ್ಡ್‌ಗಳನ್ನು ಪೂರೈಸುತ್ತಾ, ದೇಶದ ಭದ್ರತೆಗೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿಗಳನ್ನು ಹಂಚಿಕೊಳ್ಳುತ್ತಿದ್ದ ಪಾಕ್ ಪರ ಬೇಹುಗಾರನನ್ನು ದೆಹಲಿ ಪೊಲೀಸರು ಶುಕ್ರವಾರ ಬೆಳಗ್ಗೆ ಬಂಧಿಸಿದ್ದಾರೆ. ರಾಜಸ್ಥಾನದ ದೀಗ್ ಜಿಲ್ಲೆಯ ಗಂಗೋರಾ ಗ್ರಾಮದ ನಿವಾಸಿ ಕಾಸಿಮ್ (34) ಬಂಧಿತ ಬೇಹುಗಾರ. ಪಾಕಿಸ್ತಾನಿ ಗುಪ್ತಚರ ಕಾರ್ಯಾಚರಣೆಗಳಿಗೆ ಸಹಾಯ ಮಾಡಿದ ಆರೋಪದ ಮೇಲೆ ಈತನನ್ನು ಬಂಧಿಸಲಾಗಿದೆ. ಪಾಕಿಸ್ತಾನಕ್ಕೆ 2024ರ ಆಗಸ್ಟ್ ಮತ್ತು 2025ರ ಮಾರ್ಚ್‌ನಲ್ಲಿ 2 ಬಾರಿ ಭೇಟಿ ನೀಡಿದ್ದ ಕಾಸಿಮ್, 90 ದಿನಗಳ ಕಾಲ ಅಲ್ಲಿಯೇ ಉಳಿದುಕೊಂಡಿದ್ದ. ಆ ಸಮಯದಲ್ಲಿ ಪಾಕ್ ಗುಪ್ತಚರ ಸಂಸ್ಥೆ ಐಎಸ್‌ಐ ಅಧಿಕಾರಿಗಳನ್ನೂ ಭೇಟಿ ಮಾಡಿದ್ದ ಎಂದು ಶಂಕಿಸಲಾಗಿದೆ. ಶುಕ್ರವಾರ ಬೆಳಗ್ಗೆ ಕಾಸಿಮ್‌ನನ್ನು ಬಂಧಿಸಿದ್ದು, ಪೊಲೀಸ್ ವಶದಲ್ಲಿ ಇರಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 2024ರ ಸೆಪ್ಟೆಂಬರ್‌ನಲ್ಲಿ ಭಾರತೀಯ ಸೇನೆ ಮತ್ತು ಸರ್ಕಾರಿ ಸಂಸ್ಥೆಗಳಿಗೆ ಸಂಬಂಧಿಸಿದ್ದ ಸೂಕ್ಷ್ಮ ಮಾಹಿತಿಯನ್ನು ಸಂಗ್ರಹಿಸಲು ಪಾಕ್ ಗುಪ್ತಚರ ಅಧಿಕಾರಿಗಳು ಭಾರತೀಯ ಮೊಬೈಲ್ ಸಂಖ್ಯೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂಬ ಮಾಹಿತಿ ಭಾರತೀಯ ಗುಪ್ತಚರ ಅಧಿಕಾರಿಗಳಿಗೆ ಬಂದಿತ್ತು. ಭಾರತದಲ್ಲೇ ಸಿಮ್ ಕಾರ್ಡ್‌ಗಳನ್ನು ಖರೀದಿಸಿ, ಸ್ಥಳೀಯರ ಸಹಾಯದಿಂದಲೇ ಗಡಿಯಾಚೆಗೆ ಪೂರೈಸಲಾಗಿದೆ ಎಂದು ಹೇಳಲಾಗಿತ್ತು.

ಹರಿಯಾಣ ಸಿಎಂ ಸೈನಿ ಮನೆಗೆ ಬಾಂಬ್ ಬೆದರಿಕೆ

ಚಂಡೀಗಢ: ಹರಿಯಾಣದ ನಾಗರಿಕ ಸಚಿವಾಲಯದ ಕಟ್ಟಡ ಮತ್ತು ಮುಖ್ಯಮಂತ್ರಿ ನಯಾಬ್ ಸೈನಿ ಅವರ ಅಧಿಕೃತ ನಿವಾಸಕ್ಕೆ ಶುಕ್ರವಾರ ಬಾಂಬ್ ಬೆದರಿಕೆ ಬಂದಿದೆ. ಇಮೇಲ್ ಮೂಲಕ ಆತ್ಮಾಹುತಿ ಬಾಂಬ್ ದಾಳಿ ನಡೆಸುವುದಾಗಿ ವ್ಯಕ್ತಿಯೊಬ್ಬ ಬೆದರಿಕೆ ಹಾಕಿದ್ದಾನೆ. ಕಚೇರಿ ಕಟ್ಟಡದಲ್ಲಿ ಬಾಂಬ್ ಇರಬಹುದು ಎಂಬ ಮಾಹಿತಿ ಮೇರೆಗೆ ಮಧ್ಯಾಹ್ನ 3:15ರ ಸುಮಾರಿಗೆ ಹರಿಯಾಣ ಸಿಐಡಿ ದಳ ಸಂಪೂರ್ಣ ಪರಿಶೀಲನೆ ನಡೆಸಿದೆ. ಸಿಐಎಸ್‌ಎಫ್ (ಕೇಂದ್ರ ಕೈಗಾರಿಕಾ ಭದ್ರತಾ ಪಡೆ) ಮತ್ತು ಪೊಲೀಸರು ತುರ್ತು ಮತ್ತು ಸೂಕ್ತ ಕ್ರಮಗಳನ್ನು ಕೈಗೊಂಡಿವೆ. ಹರಿಯಾಣ ನಾಗರಿಕ ಸಚಿವಾಲಯವನ್ನು ಸ್ಥಳಾಂತರಿಸಲಾಗಿದ್ದು, ಅಲ್ಲಿ ಸಿಐಎಸ್‌ಎಫ್ ಮತ್ತು ಚಂಡೀಗಢ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪೊಲೀಸರಿಗೆ ಮಾಹಿತಿ ಸಿಕ್ಕ ಕೂಡಲೇ ಬಾಂಬ್ ನಿಷ್ಕ್ರಿಯ ದಳ, ಅಗ್ನಿಶಾಮಕ ದಳ, ಆಂಬ್ಯುಲೆನ್ಸ್, ತ್ವರಿತ ಪ್ರತಿಕ್ರಿಯೆ ತಂಡಗಳು ಮತ್ತು ಶ್ವಾನ ದಳವು ಹೈ ಸೆಕ್ಯುರಿಟಿ ಪ್ರದೇಶದಲ್ಲಿರುವ ಸಚಿವಾಲಯದ ಆವರಣವನ್ನು ತಲುಪಿತು ಮತ್ತು ಎರಡೂ ಸ್ಥಳಗಳಲ್ಲಿ ಭದ್ರತೆಯನ್ನು ಹೆಚ್ಚಿಸಲಾಯಿತು ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಉದಯಪಾಲ್ ಸಿಂಗ್ ಹೇಳಿದರು.

ಕೊಲಂಬಿಯಾ ನಡೆ ಶಶಿತರೂರು ನಿರಾಸೆ

ದೆಹಲಿ: ಆಪರೇಷನ್ ಸಿಂದೂರ್ ವೇಳೆ ಪಾಕಿಸ್ತಾನದಲ್ಲಿ ಉಂಟಾದ ಜೀವ ಹಾನಿಗೆ ಸಂತಾಪ ಸೂಚಿಸಿರುವ ಕೊಲಂಬಿಯಾ ಬಗ್ಗೆ ನಿರಾಶೆಗೊಂಡಿರುವುದಾಗಿ ಕಾಂಗ್ರೆಸ್ ಸಂಸದ ಶಶಿ ತರೂರ್ ಹೇಳಿದ್ದಾರೆ. ಭಯೋತ್ಪಾದಕರನ್ನು ಕಳುಹಿಸುವವರು ಮತ್ತು ತಮ್ಮನ್ನು ತಾವು ರಕ್ಷಿಸಿಕೊಳ್ಳುವವರ ನಡುವೆ ಸಮಾನತೆಯಾಗಲು ಸಾಧ್ಯವಿಲ್ಲ ಎಂದಿರುವ ತರೂರ್, ಭಾರತೀಯ ದಾಳಿಯ ನಂತರ ಪಾಕಿಸ್ತಾನದಲ್ಲಿ ಆದ ಜೀವಹಾನಿಗೆ ಸಂತಾಪ ಸೂಚಿಸಿರುವ ಕೊಲಂಬಿಯಾ ಸರಕಾರದ ಪ್ರತಿಕ್ರಿಯೆಯಿಂದ ನಾವು ಸ್ವಲ್ಪ ನಿರಾಶೆಗೊಂಡಿದ್ದೇವೆ. ಇದರ ಬದಲು ಭಯೋತ್ಪಾದನೆಗೆ ಬಲಿಯಾದವರ ಬಗ್ಗೆ ಸಹಾನುಭೂತಿ ತೋರಿಸಬೇಕಿತ್ತು ಎಂದು ಅವರು ಹೇಳಿದ್ದಾರೆ. ಭಯೋತ್ಪಾದನೆಯ ವಿರುದ್ಧ ಹೋರಾಡುವ ಭಾರತದ ಬಲವಾದ ಸಂಕಲ್ಪವನ್ನು ವಿಶ್ವಕ್ಕೆ ತಿಳಿಸಲು ಸರಕಾರದ ಜಾಗತಿಕ ಸಂಪರ್ಕದ ಭಾಗವಾಗಿ ತರೂರ್ ಅವರನ್ನು ಒಳಗೊಂಡ ಸಂಸದರ ನಿಯೋಗವು ಕೊಲಂಬಿಯಾ ಪ್ರವಾಸದಲ್ಲಿದೆ. ಕಾಶ್ಮೀರದ ಪಹಲ್ಗಾಮ್‌ನ ಬೈಸರನ್ ಕಣಿವೆಯಲ್ಲಿ ಏಪ್ರಿಲ್ 22ರಂದು ನಡೆದ ಭಯೋತ್ಪಾದಕ ದಾಳಿಯಲ್ಲಿ 6 ನಾಗರಿಕರನ್ನು ಹತ್ಯೆಯ ಹಿಂದೆ ಪಾಕಿಸ್ತಾನ ಪೋಷಿಸುತ್ತಿರುವ ಭಯೋತ್ಪಾದಕರ ಕೈವಾಡವಿದೆ ಎಂಬುದಕ್ಕೆ ದೃಢವಾದ ಪುರಾವೆಗಳಿವೆ ಎಂದೂ ಅವರು ತಿಳಿಸಿದ್ದಾರೆ.

ರೇವಂತ್ ಹೇಳಿಕೆ ವಿವಾದಕ್ಕೆ ಗುರಿ

ಹೈದರಾಬಾದ್: ಭಾರತದ ಆಪರೇಷನ್ ಸಿಂದೂರ್ ಸಮಯದಲ್ಲಿ ಪಾಕಿಸ್ತಾನ ಸೇನೆ ಎಷ್ಟು ರಫೇಲ್ ಯುದ್ಧ ವಿಮಾನಗಳನ್ನು ಹೊಡೆದುರುಳಿಸಿದೆ ಎಂಬುದನ್ನು ಪ್ರಧಾನಿ ನರೇಂದ್ರಮೋದಿ ತಿಳಿಸಬೇಕು ಎಂದು ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಒತ್ತಾಯಿಸಿದ್ದು, ಆ ವಿಷಯವು ಭಾರೀ ವಿವಾದವನ್ನು ಸೃಷ್ಟಿಸಿದೆ. ಜೈ ಹಿಂದ್ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ್ದ ರೆಡ್ಡಿ, ಪಾಕಿಸ್ತಾನದ ವಿರುದ್ಧ ಯುದ್ಧಕ್ಕೆ ಹೋಗುವ ಮೊದಲು ಸರ್ವಪಕ್ಷ ಸಭೆಗೆ ಕರೆ ನೀಡಿದ್ದ ಪ್ರಧಾನಿ ನರೇಂದ್ರಮೋದಿ, ನೆರೆಯ ದೇಶದೊಂದಿಗಿನ ಸಶಸ್ತ್ರ ಸಂಘರ್ಷವನ್ನು ನಿಲ್ಲಿಸುವ ಮೊದಲು ಏಕೆ ಹಾಗೆ ಮಾಡಲಿಲ್ಲ? ಪಾಕ್ ಎಷ್ಟು ರಫೇಲ್ ವಿಮಾನಗಳನ್ನು ಹೊಡೆದುರುಳಿಸಿತು ಎಂಬುದರ ಕುರಿತು ಯಾವುದೇ ಚರ್ಚೆಯಾಗಿಲ್ಲ. ಬಲೂಚಿಸ್ತಾನವನ್ನು ಪಾಕಿಸ್ತಾನದಿಂದ ಬೇರ್ಪಡಿಸಲು ಮತ್ತು ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ) ಮೇಲೆ ಹಿಡಿತ ಸಾಧಿಸಲು ಮೋದಿ ವಿಫಲರಾಗಿದ್ದಾರೆ ಎಂದು ಆರೋಪಿಸಿದ್ದರು.

ಬಿಜೆಪಿ ತಿರುಗೇಟು: ರಫೇಲ್ ಮತ್ತು ಆಪರೇಷನ್ ಸಿಂದೂರ್ ಸೇರಿದಂತೆ ಪ್ರಮುಖ ರಕ್ಷಣಾ ವಿಷಯಗಳಲ್ಲಿ ಪಾಕಿಸ್ತಾನದ ನಿಲುವನ್ನು ರೇವಂತ್ ರೆಡ್ಡಿ ಪ್ರತಿಧ್ವನಿಸುತ್ತಿದ್ದಾರೆ ಎಂದು ಆರೋಪಿಸಿ, ತೆಲಂಗಾಣ ಬಿಜೆಪಿ ಘಟಕವು ತೀವ್ರ ವಾಗ್ದಾಳಿ ನಡೆಸಿದೆ.

ಸಮಾಚಾರ ಸಣ್ಣದಲ್ಲ

ಅಂಚೆ ಅದಾಲತ್ ಜೂ.9

ಬೆಂಗಳೂರು: ಬೆಂಗಳೂರು ದಕ್ಷಿಣ ವಿಭಾಗದ ಅಂಚೆ ಅದಾಲತ್ ನ್ನು 2025ನೇ ಜೂನ್ 9ರಂದು ಬೆ.11 ಗಂಟೆಗೆ ಹಿರಿಯ ಅಧೀಕ್ಷಕರ ಕಚೇರಿ ಬೆಂಗಳೂರು ದಕ್ಷಿಣ ವಿಭಾಗ 2ನೇ ಮಹಡಿ, ಜಯನಗರ ಮುಖ್ಯ ಅಂಚೆ ಕಚೇರಿ, 11 ನೇ ಮುಖ್ಯ ರಸ್ತೆ, 4 ನೇ ಟಿ ಬ್ಲಾಕ್ ಬೆಂಗಳೂರು -560041 ಇಲ್ಲಿ ಹಮ್ಮಿಕೊಳ್ಳಲಾಗಿದೆ. ಅಂಚೆ ಕಚೇರಿಯ ಸೇವೆಗಳಾದ ಅಂಚೆ, ಪೋಸ್ಟ್‌ಗಳ ವಿತರಣೆ, ಪಾರ್ಸೆಲ್, ಸ್ಪೀಡ್ ಪೋಸ್ಟ್, ಮನಿ ಆರ್ಡರ್, ನಗದು ಪತ್ರಗಳು, ಅಂಚೆ ಕೌಂಟರ್‌ಗಳ ಇತರೆ ಸೇವೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಯಾವುದಾದರೂ ದೂರು ಅಥವಾ ಕುಂದು-ಕೊರತೆಯಿದ್ದಲ್ಲಿ ಅದನ್ನು ಈ ಕಚೇರಿಗೆ ಪತ್ರದ ಮೂಲಕ ಅಥವಾ ಇ-ಮೇಲ್ ವಿಳಾಸ: dobangaloresouth.kaindiapost.gov.in ಗೆ 2025ನೇ ಜೂನ್ 5 ರ ಸಂಜೆ 4.00 ಗಂಟೆಯೊಳಗೆ ಕಳುಹಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2025-26ನೇ ಸಾಲಿನಲ್ಲಿ ಯುಪಿಎಸ್‌ಸಿ ನಾಗರಿಕ ಸೇವೆ ಮತ್ತು ಬ್ಯಾಂಕಿಂಗ್, ಪಿಡಿಒ ಸ್ಪರ್ಧಾತ್ಮಕ ಪರೀಕ್ಷೆಗೆ ಉಚಿತ ತರಬೇತಿ ನೀಡುತ್ತಿದ್ದು ರಾಜ್ಯದ ಹಿಂದುಳಿದ ವರ್ಗಗಳಿಗೆ ಸೇರಿದ ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1 2(ಎ), 3(ಎ), 3(ಬಿ) ಗಳಿಗೆ ಸೇರಿದ ಅರ್ಹ ಅಭ್ಯರ್ಥಿಗಳು ಇಲಾಖಾ ವೆಬ್‌ಸೈಟ್ https://bcwd.karnataka.gov.in ಅಥವಾ sevasindhuservices.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜೂನ್ 15 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ 8050370006 ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

114 ಮಂದಿಗೆ ಕರೋನಾ: ಒಬ್ಬ ಬಲಿ

ಬೆಂಗಳೂರು: ರಾಜ್ಯದಲ್ಲಿ ಮತ್ತೆ ಕರೋನಾ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಕಳೆದ 24 ಗಂಟೆಯಲ್ಲಿ 114 ಮಂದಿಗೆ ಸೋಂಕು ತಗುಲಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 234ಕ್ಕೆ ಏರಿಕೆಯಾಗಿದೆ. ಇನ್ನೂ ರಾಜ್ಯದಲ್ಲಿ ಮಹಾಮಾರಿ ಕರೋನಾದಿಂದ ಒಬ್ಬರು ಮೃತಪಟ್ಟಿದ್ದು, ಸಾವಿನ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ ಒಂದೇ ದಿನ ಒಟ್ಟು 460 ಜನರನ್ನು ಕರೋನಾ ಪರೀಕ್ಷೆಗೆ ಒಳಪಡಿಸಲಾಗಿದ್ದು, ಆ ಪೈಕಿ 114 ಜನರಿಗೆ ಪಾಸಿಟಿವ್ ದೃಢಪಟ್ಟಿದೆ. ಒಟ್ಟು 234 ಸಕ್ರಿಯ ಪ್ರಕರಣಗಳಿದ್ದು, 223 ಮಂದಿ ಮನೆ ಆರೈಕೆಯಲ್ಲಿದ್ದು, 10 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಒಬ್ಬರು ಕೃತಕ ಆಮ್ಲಜನಕದ ಬೆಂಬಲದಲ್ಲಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ಸಲೂನ್‌ಗೆ ನುಗ್ಗಿ ದಾಂಧಲೆ: ಬಂಧನ



ಬೆಂಗಳೂರು: ನಗರದ ಸ್ಪಾ ವೊಂದರಲ್ಲಿ ಕೆಲಸ ಬಿಟ್ಟು ಸ್ವಂತ ಸಲೂನ್ ಮಾಡಿದ್ದಕ್ಕೆ, ಲೇಡಿ ಗ್ಯಾಂಗ್ ವ್ಯಕ್ತಿಯೊಬ್ಬನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಘಟನೆ ಅಮೃತಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ ನಡೆದಿದೆ. ಸಂಜು ಎನ್ನುವ 40 ವರ್ಷದ ವ್ಯಕ್ತಿ, ಕೊಡಿಗೇಹಳ್ಳಿ ಸಮೀಪದ ಸಾರಾ ಸ್ಪಾನಲ್ಲಿ ಕೆಲಸ ಮಾಡುತ್ತಿದ್ದ. ಅಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿದ್ದರಿಂದ ಅಲ್ಲಿ ಕೆಲಸ ಬಿಟ್ಟು ಸ್ವಂತ ಸಲೂನ್ ಮಾಡಿಕೊಂಡಿದ್ದ. ಇದರಿಂದ ಕೋಪಗೊಂಡ ಸಾರಾ ಸ್ಪಾ ಮಾಲೀಕರಾದ ನಿಶಾ, ಗ್ಯಾಂಗ್ ಕಟ್ಟಿಕೊಂಡು ಬಂದು, ಸಂಜು ನಡೆಸುತ್ತಿದ್ದ ಸಲೂನ್‌ಗೆ ನುಗ್ಗಿ ದಾಂಧಲೆ ನಡೆಸಿದ್ದಾರೆ. 10-15 ನಿಮಿಷಗಳ ಕಾಲ ಮನಸೋಇಚ್ಛೆ ಥಳಿಸಿ ಸಲೂನ್‌ನಿಂದ ನೀಲಿ ಬಣ್ಣದ ಕಾರಿನಲ್ಲಿ ಅಪಹರಿಸಿದ್ದಾರೆ ಎಂದು ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಸಂಜು ದೂರು ನೀಡಿದ್ದಾರೆ. ರೌಡಿ ಗ್ಯಾಂಗ್‌ನಅಟ್ಟಹಾಸದ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿದೆ. ಈ ಗ್ಯಾಂಗ್‌ಗೆ ಸ್ಥಳೀಯ ರಾಜಕೀಯ ಮುಖಂಡ ಹಾಗೂ ರೌಡಿಶೀಟರ್ ಒಬ್ಬನ ಬೆಂಬಲ ಇದೆಯಂತೆ. ಇದೆ ಧೈರ್ಯದಿಂದ ಹಲ್ಲೆಮಾಡಿ ಜೀವ ಬೆದರಿಕೆ ಹಾಕಿದ್ದಾರೆ. ಸಲೂನ್ನ ಸಿಸಿಟಿವಿ ಕೇಬಲ್‌ಗಳನ್ನ ಕಿತ್ತಾಕಿ ಧಾಂಧಲೆ ನಡೆಸಿದ್ದಾರೆ ಎಂದು ದೂರಿದ್ದು, ಪೊಲೀಸರು ಹಲ್ಲೆಕೊರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸಂಜು ದಂಪತಿ ಒತ್ತಾಯಿಸಿದ್ದಾರೆ. ರೌಡಿ ಪಟಾಲಂ ವಿರುದ್ಧ ಅಮೃತಹಳ್ಳಿ ಠಾಣೆಯ ಪೊಲೀಸರು ದೂರು ದಾಖಲಿಸಿಕೊಂಡಿದ್ದು, ಪರಾರಿಯಾದ ಹಲ್ಲೆಕೋರರ ಬಂಧನಕ್ಕೆ ಬಲೆ ಬೀಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ತ್ರಿಪುರ ವಾಸಿನಿಯಲ್ಲಿ ನಡೆದ ಇಂಡಿಯಾ ಎಂಎಸ್‌ಎಂಇ ಸಮಾವೇಶದಲ್ಲಿ ಡಿಸಿಎಂ ಡಿಕೆಶಿ ಅಭಿಮತ

ಎಂಎಸ್‌ಎಂಇ ಸಮಸ್ಯೆ ಬಗೆಹರಿಸಲು ಸರಕಾರ ಬದ್ಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ರಾಜ್ಯ ಹಾಗೂ ಕೇಂದ್ರ ಸರಕಾರದ ಶಕ್ತಿ. ಅವರ ಸಮಸ್ಯೆ ಬಗೆಹರಿಸಿ ಅಗತ್ಯ ನೆರವು ನೀಡುವುದು ಸರಕಾರಗಳ ಜವಾಬ್ದಾರಿಯಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ನಡೆದ ಇಂಡಿಯಾ ಎಂಎಸ್‌ಎಂಇ ಸಮಾವೇಶದಲ್ಲಿ ಮಾತನಾಡಿ, ನಿಮ್ಮ ಸಮಸ್ಯೆಗಳ ಬಗ್ಗೆ ನಮಗೆ ಅರಿವಿದೆ. ನಿಮಗೆ ಅಗತ್ಯವಾಗಿರುವ ವಿದ್ಯುತ್ ಹಾಗೂ ನೀರಿನ ಸೌಲಭ್ಯ ಒದಗಿಸಲು ಸರಕಾರ ಬದ್ಧವಾಗಿದೆ. ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚಾಗಿದೆ. 20 ವರ್ಷಗಳ ಹಿಂದೆ 70 ಲಕ್ಷ ಇದ್ದ ಜನಸಂಖ್ಯೆ ಈಗ 1.50 ಕೋಟಿಗೆ ಏರಿಕೆಯಾಗಿದೆ. ಆದರೆ ರಸ್ತೆಗಳ ಸಾಮರ್ಥ್ಯ ಹಾಗೇ ಇದೆ. ಇದರಿಂದ ಟ್ರಾಫಿಕ್ ಸಮಸ್ಯೆ ಹೆಚ್ಚಾಗಿದೆ. ಹೀಗಾಗಿ ಬೆಂಗಳೂರಿನಲ್ಲಿ ಬದಲಾವಣೆ ತರಲು ಕಳೆದ ಎರಡು ವರ್ಷಗಳಿಂದ ನಾನು ಯೋಜನೆ ರೂಪಿಸುತ್ತಿದ್ದೇನೆ. ಮೆಟ್ರೋ ಯೋಜನೆಗೆ 44 ಸಾವಿರ ಕೋಟಿ, ಟನಲ್ ರಸ್ತೆಗೆ 37 ಸಾವಿರ ಕೋಟಿ ಅದರಲ್ಲಿ ಮೊದಲನೇ ಹಂತಕ್ಕೆ 17 ಸಾವಿರ ಕೋಟಿ ಹಾಗೂ ಎಲಿವೇಟೆಡ್ ಕಾರಿಡಾರ್ ಗಳಿಗೆ 14 ಸಾವಿರ ಕೋಟಿ ಮೊತ್ತದ ಯೋಜನೆ ರೂಪಿಸಲಾಗಿದೆ. ಒಟ್ಟಾರೆಯಾಗಿ ಮುಂದಿನ ನಾಲ್ಕೈದು ವರ್ಷಗಳಲ್ಲಿ ಬೆಂಗಳೂರಿನ ಅಭಿವೃದ್ಧಿಗೆ 1 ಲಕ್ಷ ಕೋಟಿಗೂ ಹೆಚ್ಚು ಹಣ ಹೂಡಿಕೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಪೀಣ್ಯ ಹಾಗೂ ಎಲೆಕ್ಟ್ರಾನಿಕ್ ಸಿಟಿ ಕೈಗಾರಿಕಾ ಪ್ರದೇಶಗಳು ಮೊದಲಿನಿಂದಲೂ ರಾಷ್ಟ್ರ ಮಟ್ಟದಲ್ಲಿ ವಿಶೇಷ ಸ್ಥಾನ ಪಡೆದಿವೆ. ಮೂರು ಸಂಸ್ಥೆಗಳು ಇಂದು ಜತೆಗೂಡಿ ದೇಶದ ಪ್ರಗತಿಗೆ ಒಟ್ಟಾಗಿ ಶ್ರಮಿಸುವ ಸಂದೇಶ ದೇಶಕ್ಕೆ ರವಾನಿಸಿದ್ದೀರಿ. ಎಂಎಸ್ ಎಂಇಗಳು ಸರಕಾರ ಮಾಡಲಾಗದ ಕೆಲಸವನ್ನು ಮಾಡಿ ಜನರಿಗೆ ಉದ್ಯೋಗ ನೀಡುತ್ತಿವೆ. ಆ ಮೂಲಕ ನಿಮ್ಮ ಬದುಕಿನ ಜತೆಗೆ ಕೋಟ್ಯಂತರ ಕುಟುಂಬಗಳಿಗೆ ಆಧಾರವಾಗಿದ್ದೀರಿ. ನಿಮಗೆ ಅಗತ್ಯ ನೆರವು ನೀಡುವುದು ರಾಜ್ಯ ಹಾಗೂ ಕೇಂದ್ರ ಸರಕಾರದ ಜವಾಬ್ದಾರಿ ಎಂದರು.

ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳು ಬಲಿಷ್ಠವಾದಷ್ಟು ಸರಕಾರಗಳು ಬಲಿಷ್ಠವಾಗುತ್ತವೆ, ನೀವುಗಳು ದುರ್ಬಲವಾದರೆ, ಸರಕಾರವೂ ದುರ್ಬಲವಾಗುತ್ತದೆ. ಇಂದಿನ ದಿನಮಾನದಲ್ಲಿ ನೀವೆಲ್ಲರೂ ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ಮಾಡಬೇಕಾಗಿದೆ. ಕೆಲವು ತಿಂಗಳ ಹಿಂದೆ ವಿಮಾನದಲ್ಲಿ ಪ್ರಯಾಣ ಮಾಡುವಾಗ ಸಂಸ್ಥೆಯೊಂದರ ಎಂ.ಡಿ ನನಗೆ ಪರಿಚಯವಾದರು. ಅವರು ಕೆ.ಆರ್.ಪುರಂ ನಲ್ಲಿರುವ ಸಣ್ಣ ಕಾರ್ಖಾನೆಗೆ ಭೇಟಿ ನೀಡಲು ಹೋಗುತ್ತಿರುವುದಾಗಿ ತಿಳಿಸಿದರು. ಆ ಕೈಗಾರಿಕೆ ನಡೆಸುತ್ತಿರುವ ಹುಡುಗ ಈ ಮೊದಲು ಇಸ್ರೇಲ್ ನಲ್ಲಿ ಕೆಲಸ ಮಾಡುತ್ತಿದ್ದ, ಈಗ ಇಲ್ಲಿ ಸಣ್ಣ ಕೈಗಾರಿಕೆ ಆರಂಭಿಸಿದ್ದು, ಅದನ್ನು ನೋಡಲು ತನ್ನ ಕಂಪನಿಯವರು ತಿಳಿಸಿರುವುದಾಗಿ ಹೇಳಿದ. ಎರಡು ದಿನಗಳ ನಂತರ ನಾನು ಮತ್ತೆ ದೆಹಲಿಗೆ ಪ್ರಯಾಣ ಮಾಡುವಾಗ ಆ ವ್ಯಕ್ತಿ ಕೂಡ ದೆಹಲಿಗೆ ವಾಪಸ್ಸಾಗುತ್ತಿದ್ದ. ಆಗ ಆತ ಹೇಳಿದ, ಬೆಂಗಳೂರಿನಲ್ಲಿ ಎಂತಹ ಪ್ರತಿಭೆಗಳಿದ್ದಾರೆ ಎಂದು ಆತ ಹೇಳಿದ. ಇಸ್ರೇಲ್ ಕಂಪನಿಯವರು ಯಂತ್ರೋಪಕರಣಗಳ ಬಿಡಿ ಭಾಗಗಳನ್ನು ತಯಾರಿಸುವ ಜವಾಬ್ದಾರಿ ಈ ಕೈಗಾರಿಕೆಗೆ ನೀಡಿದ್ದಾರೆ ಎಂದು ಆತ ಹೇಳುತ್ತಿದ್ದ ಎಂದರು.

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಸಣ್ಣ ಕೈಗಾರಿಕಾ ಸಚಿವ ಶರಣಬಸಪ್ಪ ದರ್ಶನಾಪುರ, ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ, ಕಾಸಿಯಾ ಅಧ್ಯಕ್ಷ ಎಂ ಜಿ ರಾಜಗೋಪಾಲ್, ಪಿಐಎ ಅಧ್ಯಕ್ಷ ಶಿವಕುಮಾರ್, ಕೆಎಸ್‌ಎಸ್‌ಐಡಿಸಿ ಅಧ್ಯಕ್ಷ ಟಿ. ರಘುಮೂರ್ತಿ, ಎಂಎಸ್‌ಎಂಇ ಇಲಾಖೆಯ ನಿರ್ದೇಶಕ ನಿತೀಶ್ ಪಾಟೀಲ್ ಮುಂತಾದವರು ಭಾಗವಹಿಸಿದ್ದರು.

ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ನಡೆದ ಇಂಡಿಯಾ ಎಂಎಸ್‌ಎಂಇ ಸಮಾವೇಶವನ್ನು ಡಿಸಿಎಂ ಡಿ.ಕೆ.ಶಿವಕುಮಾರ್,ಸಚಿವ ಎಂ.ಬಿ.ಪಾಟೀಲ್ ಉದ್ಘಾಟಿಸಿದರು.

ಟ್ರಿಲಿಯನ್ ಡಾಲರ್ ಆರ್ಥಿಕತೆಗೆ ಎಂಎಸ್‌ಎಂಇ ಬೆನ್ನೆಲುಬು

ರಾಜ್ಯ ಸರಕಾರವು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಎಸ್‌ಎಂಇ ಕನೆಕ್ಟ್ ಮತ್ತು ವೆಂಚುರೈಸ್ ತರಹದ ರಚನಾತ್ಮಕ ಉಪಕ್ರಮ ಕೈಗೊಂಡಿದೆ. ತಯಾರಿಕೆ ವಲಯದಲ್ಲಿ ಶೇ.12ರಷ್ಟು ಬೆಳವಣಿಗೆ ಸಾಧಿಸುವ ಮೂಲಕ 2029ರ ಹೊತ್ತಿಗೆ 20 ಲಕ್ಷ ಉದ್ಯೋಗ ಸೃಷ್ಟಿಸಲಾಗುವುದು. ಜತೆಗೆ 2 ಮತ್ತು 3 ನೇ ಹಂತದ ನಗರಗಳಲ್ಲಿ ಉದ್ಯಮಗಳು ನೆಲೆಯೂರುವಂತೆ ಮಾಡಲು ಮೂಲಸೌಕರ್ಯ ಅಭಿವೃದ್ಧಿ ಮಾಡಲಾಗುತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ರಾಜ್ಯದಲ್ಲಿರುವ ಈ ಉದ್ದಿಮೆಗಳಲ್ಲಿ ಸಾಂಪ್ರದಾಯಿಕ ಉತ್ಪಾದನೆಯಿಂದ ಹಿಡಿದು ಅತ್ಯಾಧುನಿಕ ತಂತ್ರಜ್ಞಾನ ಆಧರಿಸಿದ ಉತ್ಪಾದನೆಯವರೆಗೆ ವ್ಯವಸ್ಥೆ ಇದೆ. ಇಲ್ಲಿ ಗುಂಡುಸೂಜಿಯಿಂದ ಹಿಡಿದು ವಿಮಾನದವರೆಗೆ ಎಲ್ಲವೂ ತಯಾರಾಗುತ್ತಿದೆ. ನಮ್ಮಲ್ಲಿ ಎಂಜಿನಿಯರಿಂಗ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಎರಡೂ ಆಧಾರಸ್ತಂಭಗಳಾಗಿವೆ. ಇದರಿಂದಾಗಿ ಜಾಗತಿಕ ಗುಣಮಟ್ಟದ ತಯಾರಿಕೆ, ರಫ್ತು ವಹಿವಾಟು ಮತ್ತು ಉದ್ಯೋಗಸೃಷ್ಟಿ ಮೂರೂ ಸ್ಥಿರವಾಗಿ ನಡೆಯುತ್ತಿದೆ. ರಾಜ್ಯದ ಹೊಸ ಕೈಗಾರಿಕಾ ನೀತಿಯಲ್ಲಿ ಹಿಂದುಳಿದಿರುವ ಪ್ರದೇಶಗಳಲ್ಲಿ ಉದ್ದಿಮೆಗಳನ್ನು ಬೆಳೆಸಲು ಹಲವು ಸೌಕರ್ಯ ಕೊಡಲಾಗುತ್ತಿದೆ ಎಂದರು.

ಪ್ರತಿಭೆ ಇಲ್ಲಿಯೇ ಉಳಿಯಬೇಕು

ಕೇಂದ್ರ ಸರಕಾರದ ನೀತಿಯಂತೆ ರಾಷ್ಟ್ರೀಕೃತ ಬ್ಯಾಂಕುಗಳ ಸಹಕಾರ ಅಗತ್ಯವಿದೆ. ಆಸಕ್ತಿಯಿಂದ ಪ್ರಾಮಾಣಿಕತೆಯಿಂದ ದುಡಿಯುವವರಿಗೆ ಕೇಂದ್ರ ಹಾಗೂ ರಾಜ್ಯಗಳು ಪ್ರೋತ್ಸಾಹ ನೀಡಿದರೆ ಇಡೀ ದೇಶಕ್ಕೆ ನೆರವಾಗುತ್ತದೆ. ಮೇಕ್ ಇನ್ ಇಂಡಿಯಾ ಚಿಂತನೆಗೆ ಹೆಚ್ಚು ಒತ್ತು ನೀಡಿದಾಗ ನಮ್ಮ ಪ್ರತಿಭೆಗಳು ನಮ್ಮಲ್ಲಿಯೇ ಉಳಿದುಕೊಳ್ಳುತ್ತವೆ. ನಮ್ಮ ರಾಜ್ಯದಲ್ಲಿ 250 ಎಂಜಿನಿಯರಿಂಗ್ ಕಾಲೇಜುಗಳಿವೆ. ಇಲ್ಲಿಂದ ವಿದ್ಯಾಭ್ಯಾಸ ಮಾಡಿದ ಪ್ರತಿಭಾನ್ವಿತರು ಬೇರೆ ದೇಶಕ್ಕೆ ಹೋಗುತ್ತಿದ್ದಾರೆ. ಅವರನ್ನು ಇಲ್ಲಿಯೇ ಬಳಸಿಕೊಳ್ಳಬೇಕು. ನಾವೆಲ್ಲರೂ ಒಟ್ಟಾಗಿ ಸೇರಿ ಮುನ್ನಡೆಯಬೇಕಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ರಾಜ್ಯದಲ್ಲಿ 38 ಲಕ್ಷ ಎಂಎಸ್‌ಎಂಇ ಉದ್ಯಮಗಳಿದ್ದು, ಇವು ಲಕ್ಷಾಂತರ ಜನರಿಗೆ ಉದ್ಯೋಗ ನೀಡುವ ಜತೆಗೆ ಸಾವಿರಾರು ಕೋಟಿ ವಹಿವಾಟು ನಡೆಸುತ್ತಿವೆ. ಭಾರತದ ಜಿಡಿಪಿ ಬೆಳವಣಿಗೆಗೆ ಎಂಎಸ್‌ಎಂಇ ವಲಯವು ಶೇಕಡ 30ರಷ್ಟು ಕೊಡುಗೆ ನೀಡುತ್ತಿದ್ದು, 15 ಕೋಟಿ ಜನರಿಗೆ ಬದುಕು ನೀಡಿವೆ. ಅದರಲ್ಲೂ ಮಹಿಳೆಯರು ಮತ್ತು ಎಸ್‌ಸಿ-ಎಸ್‌ಟಿ ಸಮುದಾಯಗಳಿಂದ ಬಂದ ಉದ್ಯಮಿಗಳು ಇಲ್ಲಿ ಮಹತ್ತರ ಪಾತ್ರ ವಹಿಸುತ್ತಿದ್ದಾರೆ.

-ಎಂ.ಬಿ.ಪಾಟೀಲ್, ಸಚಿವ

ಖಾಸಗಿ ಹೋಟೆಲ್‌ನಲ್ಲಿ ನಡೆದ ಸಂವಾದದಲ್ಲಿ ಶೋಭಾ ಕರಂದ್ಲಾಜೆ ಹೇಳಿಕೆ

ಎಂಎಸ್‌ಎಂಇಗಳಿಂದ 26 ಕೋಟಿ ಜನರಿಗೆ ಉದ್ಯೋಗ

ಬೆಂಗಳೂರು: ದೇಶದ ಸೂಕ್ಷ್ಮ, ಲಘು ಮತ್ತು ಮಧ್ಯಮ ಕೈಗಾರಿಕೆಗಳು (ಎಂಎಸ್‌ಎಂಇ) 26 ಕೋಟಿ ಜನರಿಗೆ ಉದ್ಯೋಗ ನೀಡಿವೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಖಾಸಗಿ ಹೋಟೆಲ್‌ನಲ್ಲಿ ನಡೆದ ಸಂವಾದದಲ್ಲಿ ಪಾಲ್ಗೊಂಡು ಮಾತನಾಡಿ, ಕಳೆದ 11 ವರ್ಷಗಳಲ್ಲಿ ನರೇಂದ್ರ ಮೋದಿ ನೇತೃತ್ವದಲ್ಲಿ ಇವೆರಡೂ ಇಲಾಖೆಗಳು ದೊಡ್ಡ ಪ್ರಮಾಣದ ಪ್ರಗತಿಯನ್ನು ಸಾಧಿಸಿವೆ. ನಮ್ಮ ದೇಶದಲ್ಲಿ ಕೃಷಿ ಇಲಾಖೆ ಅತಿ ಹೆಚ್ಚು ಜನರಿಗೆ ಉದ್ಯೋಗ ನೀಡುತ್ತಿದೆ. ಹಿಂದಿನ ಸರಕಾರದಲ್ಲಿ ನಾನು ಕೃಷಿ ಇಲಾಖೆ ಮತ್ತು ಆಹಾರ ಸಂಸ್ಕರಣೆ ಇಲಾಖೆ ನೋಡಿಕೊಳ್ಳುತ್ತಿದ್ದೆ. ದೇಶದಲ್ಲಿ ಕೃಷಿಯು ಸುಮಾರು 45- 50 ಕೋಟಿ ಜನರಿಗೆ ಉದ್ಯೋಗ ಕೊಡುತ್ತಿದೆ ಎಂದು ವಿವರಿಸಿದರು.

ನಮ್ಮ ದೇಶದಲ್ಲಿ ಎಷ್ಟು ಕೈಗಾರಿಕೆಗಳಿವೆ ಎಂಬ ವಿವರಗಳು ಹಿಂದೆ ನಮ್ಮ ಬಳಿ ಇರಲಿಲ್ಲ. ಇವತ್ತಿಗೂ ಶೇ.100ರಷ್ಟು ವಿವರ ಇಲ್ಲ. ಆದರೂ, ನಮ್ಮ ಸರಕಾರ ಉದ್ಯಮ್ ಪೋರ್ಟಲ್ ಮೂಲಕ ಒಂದು ಪ್ರಯತ್ನ ಮಾಡಿತ್ತು. ಇದರಲ್ಲಿ ಎಂಎಸ್ ಎಂಇಗಳು ನೋಂದಣಿ ಮಾಡಿಕೊಳ್ಳಬೇಕೆಂದು ತಿಳಿಸಲಾಗಿತ್ತು. ಇವತ್ತಿನ ತನಕ 6.36 ಕೋಟಿ ಎಂಎಸ್‌ಎಂಇಗಳು ಉದ್ಯಮ್ ಪೋರ್ಟ್‌ನಲ್ಲಿ ನೋಂದಣಿ ಮಾಡಿವೆ. ಇನ್ನೂ ಇಂಥ ಕೈಗಾರಿಕೆಗಳು ಮಾಹಿತಿ ಇಲ್ಲದೆ, ನೋಂದಣಿಗೆ ಬಾಕಿ ಇವೆ ಎಂಬ ಮಾಹಿತಿ ಇದೆ. ಸುಮಾರು 7 ಕೋಟಿ ಎಂಎಸ್ ಎಂಇಗಳು ಇರಬಹುದು. ಕೃಷಿ ಇಲಾಖೆ ಹೆಚ್ಚು ಜನರಿಗೆ ಉದ್ಯೋಗ ಕೊಡುತ್ತಿದ್ದರೂ, ಆಹಾರ ನೀಡುತ್ತಿದ್ದರೂ, ರಫ್ತು ಮಾಡಿದರೂ ನಮ್ಮ ದೇಶದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಜಿಡಿಪಿ) ಅದರ ಕೊಡುಗೆ ಅಂದಾಜು ಶೇ 18- 19ರಷ್ಟು ಇದೆ. ಅದು ಒಂದು ವರ್ಷ ಸುಮಾರು ಶೇ 22- 23ರಷ್ಟಾಗಿತ್ತು ಎಂದರು.

ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ನಡೆದ ಇಂಡಿಯಾ ಎಂಎಸ್‌ಎಂಇ ಸಮಾವೇಶದಲ್ಲಿ ಸೀರೆಗಳನ್ನು ವೀಕ್ಷಿಸಿದ ಕೇಂದ್ರದ ಸಚಿವೆ ಶೋಭಾ ಕರಂದ್ಲಾಜೆ.

ದೊಡ್ಡ ಪ್ರಮಾಣದಲ್ಲಿ ಬೆಳೆಸಿ

26 ಕೋಟಿ ಜನರಿಗೆ ಉದ್ಯೋಗ ಕೊಡುವ ಎಂಎಸ್‌ಎಂಇ, ಜಿಡಿಪಿಗೆ ಶೇ .30ರಷ್ಟು ಕೊಡುಗೆ ಕೊಡುತ್ತಿದೆ. ದೇಶದ ಒಟ್ಟು ಉತ್ಪಾದನೆಯಲ್ಲಿ ಶೇ.45 ರಷ್ಟು ಎಂಎಸ್‌ಎಂಇಗಳದು. ಎಂಎಸ್ ಎಂಇಗಳು ಒಟ್ಟು ರಫ್ತಿಗೆ ಶೇ 40ರಷ್ಟು ಕೊಡುಗೆ ಕೊಡುತ್ತವೆ. ಎಂಎಸ್‌ಎಂಇಗಳು ನಮ್ಮ ದೇಶದ ಕೊಡುಗೆಯ ಪಾಲುದಾರರು ಎಂದು ಪ್ರಧಾನಿಯವರು ಹೇಳುತ್ತಾರೆ. ಎಂಎಸ್‌ಎಂಇಗಳಿಲ್ಲದೆ ಇದ್ದಲ್ಲಿ ಹಲವಾರು ದೊಡ್ಡದೊಡ್ಡ ಕೈಗಾರಿಕೆಗಳಿಗೆ ಕಚ್ಚಾ ಸಾಮಗ್ರಿಯ ಸಮಸ್ಯೆ ಆಗಲಿದೆ. ಎಚ್ ಎಎಲ್, ಬಿಇಎಲ್, ಬಿಎಚ್‌ಇಎಲ್, ರಕ್ಷಣಾ ಕ್ಷೇತ್ರಗಳ ಕೈಗಾರಿಕೆಗಳಿಗೆ ಎಂಎಸ್‌ಎಂಇಗಳು ಕಚ್ಚಾ ಸಾಮಗ್ರಿ ನೀಡುತ್ತವೆ. ಆಹಾರ ಸಂಸ್ಕರಣೆಯಿಂದ ಚಂದ್ರಯಾನ ತನಕ ಎಂಎಸ್‌ಎಂಇಗಳ ವ್ಯಾಪ್ತಿ ಇದೆ. ಎಂಎಸ್‌ಎಂಇಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸಬೇಕು. ಇವುಗಳಿಗೆ ಆದ್ಯತೆ ಕೊಡಬೇಕು. 2047ಕ್ಕೆ ಭಾರತವು ವಿಕಸಿತ ದೇಶವಾಗಲು, ಕೃಷಿಯ ಬೆಳವಣಿಗೆಯ ಜತೆಗೆ ಎಂಎಸ್‌ಎಂಇ ಬೆಳವಣಿಗೆ ಮತ್ತು ಉದ್ಯೋಗ ಕೊಡುವ ಕಾರ್ಯ ಆಗಬೇಕೆಂಬುದು ನಮ್ಮ ಸರಕಾರದ ದೂರದೃಷ್ಟಿಯ ಇಚ್ಛೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಮಾನ್ಯತಾ ಟೆಕ್ ಪಾರ್ಕ್ ಬಳಿಗೆ ಡಿಸಿಎಂ ಡಿಕೆಶಿ ಭೇಟಿ ಯಾಕೆ?

ರಾಜಕಾಲುವೆಯ ಅಕ್ರಮ ಕಟ್ಟಡ ತೆರವಿಗೆ ದಮ್ಮು, ತಾಕತ್ತಿದೆಯಾ?

ಬೆಂಗಳೂರು: ಡಿಸಿಎಂ ಡಿ.ಕೆ.ಶಿವಕುಮಾರ್ ಮಾನ್ಯತಾ ಟೆಕ್ ಪಾರ್ಕ್ ಬಳಿ ಭೇಟಿ ನೀಡಿದ್ದು ನೆರೆ ಮತ್ತು ಮಳೆ ಅನಾಹುತ ವೀಕ್ಷಿಸಲಿಕ್ಕಾ ಅಥವಾ ರಾಜಕಾಲುವೆ ಒತ್ತುವರಿದಾರನ್ನು ರಕ್ಷಣೆ ಮಾಡಲಿಕ್ಕಾ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಮಾನ್ಯತಾ ಟೆಕ್ ಪಾರ್ಕ್ ಬಳಿಗೆ ಭೇಟಿ ಕೊಟ್ಟು ಮಳೆ, ನೆರೆ ಪರಿಸ್ಥಿತಿ ವೀಕ್ಷಣೆ ಮಾಡಿರುವುದೇನೋ ಸರಿ. ಆದರೆ, ಅವರ ಭೇಟಿ ಪ್ರವಾಹ ವೀಕ್ಷಣೆಗೋ ಅಥವಾ ರಾಜಕಾಲುವೆ ರಕ್ಕಸರ ರಕ್ಷಣೆಗೋ..? ಈ ಬಗ್ಗೆ ಬೆಂಗಳೂರು ಮಹಾಜನತೆಗೆ ಬೆಂಗಳೂರು ಉಸ್ತುವಾರಿ ಸಚಿವರು ಉತ್ತರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಡಿಸಿಎಂ ಪಾದಸ್ಪರ್ಶ ಮಾಡಿದ್ದ ರಾಜಕಾಲುವೆ ಪುನೀತವಾಗಿರಬೇಕು. ಪಾಪ.. ಅದೇ ರಾಜಕಾಲುವೆ ಮೇಲೆ ಬೃಹದಾಕಾರವಾಗಿ ಎದ್ದು ನಿಂತಿರುವ ಭಾರೀ ಆಸಾಮಿಯೊಬ್ಬರ ಕಟ್ಟಡ ಅವರ ಕಣ್ಣಿಗೆ ಕಾಣಲಿಲ್ಲವೆ? ರಾಜಾರೋಷವಾಗಿ ರಾಜಕಾಲುವೆ ಮುಕ್ಕಿ ತಿಂದಿರುವ ಆಸಾಮಿಯ ಬಗ್ಗೆ ಅವರು ಚಕಾರವನ್ನೇ ಎತ್ತಲಿಲ್ಲ. ಕೊನೆಪಕ್ಷ ಅವರ ಹೆಸರನ್ನೂ ಹೇಳಲಿಲ್ಲ. ರಾಜಕಾಲುವೆಗಳ ಮೇಲೆ ಐಷಾರಾಮಿ ಸೌಧಗಳನ್ನು ಕಟ್ಟಿಕೊಂಡು ಕೋಟಿ ಕೋಟಿ ದುಡಿಯುತ್ತಿರುವ ರಾಜಕಾಲುವೆ ರಕ್ಕಸರ ವಿರುದ್ಧ ಕ್ರಮ ಜರುಗಿಸುವ ದಮ್ಮು ತಾಕತ್ತು ನಿಮಗೆ ಇದೆಯಾ? ಹೋಗಲಿ, ಅಂಥವರ ವಿರುದ್ಧ ಕ್ರಮ ಜರುಗಿಸಲು ನಿಮ್ಮ ಅಧಿಕಾರಿಗಳಿಗೆ ಮುಕ್ತ ಸ್ವಾತಂತ್ರ್ಯ, ಅಧಿಕಾರ ನೀಡಿದ್ದೀರಾ? ಒಂದು ವೇಳೆ ನೀಡಿದ್ದರೆ ಆ ಅಕ್ರಮ ಕಟ್ಟಡಗಳು ಇನ್ನೂ ಯಾಕೆ ಹಾಗೆಯೇ ಇವೆ? ಎಂಬುದನ್ನು ನೀವು ಹೇಳಬೇಕಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿ ನೀವು ಕುರ್ಚಿ ಮೇಲೆ ಕೂತು ಎರಡು ವರ್ಷವಾಯಿತು. ಅದೆಷ್ಟೋ ಬಾರಿ ಸಾಯಿ ಬಡಾವಣೆ ಮುಳುಗಿದ್ದೂ ಆಯಿತು, ತೇಲಿದ್ದೂ ಆಯಿತು. ನಿಮ್ಮಿಂದ ಆಗಲಿ ಅಥವಾ ಕಾಂಗ್ರೆಸ್ ಸರಕಾರದಿಂದ ಆಗಲಿ ಯಾವುದೇ ಪರಿಹಾರ ಸಿಗಲಿಲ್ಲ. ಬಡಾವಣೆಯ ಜನರು ನರಳುತ್ತಿರುವುದು ಮಾತ್ರ ತಪ್ಪಿಲ್ಲ. ಈ ಅಸಡ್ಡೆ ಯಾಕೆ? ಇವರೆಲ್ಲ ತೆರಿಗೆ ಕಟ್ಟುತ್ತಿಲ್ಲವೇ.

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಮೆಟ್ರೋ ಹಳದಿ ಮಾರ್ಗದ ಸಂಚಾರ ಜುಲೈನಲ್ಲಿಆರಂಭ

ಬೆಂಗಳೂರು: ಸ್ವತಂತ್ರ ಮೌಲ್ಯಮಾಪನ ಪ್ರಮಾಣ ಪತ್ರ ಸಿಗದ ಹಿನ್ನೆಲೆ ನಮ್ಮ ಮೆಟ್ರೋದ ಹಳದಿ ಮಾರ್ಗದಲ್ಲಿ ವಾಣಿಜ್ಯ ಸಂಚಾರ ಮತ್ತಷ್ಟು ವಿಳಂಬವಾಗಿದ್ದು, ಜೂನ್‌ನ ಬದಲಾಗಿ ಜುಲೈನಲ್ಲಿ ಸಂಚಾರ ಆರಂಭಿಸಲು ನಮ್ಮ ಮೆಟ್ರೋ ಮುಂದಾಗಿದೆ.

ಬೊಮ್ಮಸಂದ್ರ-ಆರ್ ವಿ ರಸ್ತೆ ನಡುವಿನ ಹಳದಿ ಮಾರ್ಗದಲ್ಲಿ ಹಳಿ ಅಳವಡಿಕೆ, ನಿಲ್ದಾಣ ನಿರ್ಮಾಣ ಕಾಮಗಾರಿಗಳು ವರ್ಷದ ಹಿಂದೆಯೇ ಪೂರ್ಣಗೊಂಡಿದ್ದರೂ ಕೂಡಾ ಚಾಲಕರಹಿತ ಎಂಜಿನ್ ಹೊಂದಿರುವ ಪ್ರೋಟೋ ಟೈಪ್ ಮಾದರಿಯ ಮೊದಲ ರೈಲು 2024ರ ಏಪ್ರಿಲ್‌ನಲ್ಲೇ ಬಂದಿದ್ದು, ಅದೇ ರೈಲನ್ನು ಬಳಸಿಕೊಂಡು ಮೂರು ತಿಂಗಳು ವಿವಿಧ ತಂತ್ರಜ್ಞರು ಹಳದಿ ಮಾರ್ಗದಲ್ಲಿ ಹಲವು ಪರೀಕ್ಷೆ ನಡೆಸಿದ್ದು, ಚಾಲಕ ರಹಿತ ಎಂಜಿನ್ ಕೋಚ್‌ನಲ್ಲಿ ಸಂಚರಿಸಿ ಟ್ರ್ಯಾಕ್ಷನ್ ಮತ್ತು ಬ್ರೇಕಿಂಗ್ ಪರೀಕ್ಷೆ ಕೂಡಾ ಮಾಡಿದ್ದರು.

ಸೆಪ್ಟೆಂಬರ್‌ನಲ್ಲಿ ಸಂಶೋಧನಾ ವಿನ್ಯಾಸ ಮತ್ತು ಗುಣಮಟ್ಟ ಸಂಸ್ಥೆ ಪ್ರಾಯೋಗಿಕ ಸಂಚಾರದ ಮೂಲಕ ಪರೀಕ್ಷೆಗಳನ್ನು ನಡೆಸಿದ್ದು, ರೋಲಿಂಗ್ ಸ್ಟಾಕ್ ತಜ್ಞರು, ಹಳಿ ತಂತ್ರಜ್ಞರು, ಬ್ರೇಕ್ ತಂತ್ರಜ್ಞರು, ವಿವಿಧ ತಾಂತ್ರಿಕ ಪರಿಣಿತರ ತಂಡದ ಸದಸ್ಯರು ಈ ಪರೀಕ್ಷೆಗಳಲ್ಲಿ ಭಾಗವಹಿಸಿದರು. ಆದರೆ ಆ ಬಳಿಕ ರೈಲುಗಳ ಪೂರೈಕೆಯಾಗದ ಹಿನ್ನೆಲೆ ಕಾರ್ಯಾಚರಣೆ ಅಲ್ಲಿಗೆ ಸ್ಥಗಿತಗೊಂಡಿದ್ದು, 2025ರ ಜನವರಿಯಲ್ಲಿ ಪ್ರೊಟೋಟೈಪ್ ಎರಡನೇ ರೈಲು, ಮೇ ತಿಂಗಳಲ್ಲಿ ಮೂರನೇ ರೈಲು ಬಂದಿತ್ತು. ಮೂರು ರೈಲುಗಳು ಬಂದ ಮೇಲೆ ಅರ್ಧ ಗಂಟೆಗೊಮ್ಮೆ ರೈಲು ಓಡಿಸಬಹುದು ಎಂದು ಮೆಟ್ರೋದ ಅಧಿಕಾರಿಗಳು ಹೇಳಿದ್ದರು.

ಇದೀಗ ಮೂರು ರೈಲುಗಳು ಬಂದಿದ್ದರೂ ಸಂಚಾರದ ದಿನ ಮುಂದಕ್ಕೆ ಹೋಗುತ್ತಲೇ ಇದೆ. ಇಂಡಿಪೆಂಡೆಂಟ್ ಸೇಫ್ಟಿ ಅಸೆಸ್ಸರ್ (ಐಎಸ್‌ಎ) ಎಲ್ಲ ದಾಖಲೆ, ಅಂಕಿ ಅಂಶಗಳನ್ನು ಪರಿಶೀಲಿಸಿದ ಬಳಿಕ ಪ್ರಮಾಣ ಪತ್ರ ನೀಡುತ್ತಾರೆ. ಆ ಪ್ರಮಾಣ ಪತ್ರವನ್ನು ರೈಲ್ವೆಯ ಮೆಟ್ರೊ ರೈಲು ಸುರಕ್ಷತಾ ಆಯೋಗಕ್ಕೆ (ಸಿಎಂಎಸ್‌ಆರ್) ಸಲ್ಲಿಸಲಾಗುವುದು. ಬಳಿಕ ಸಿಎಂಎಸ್‌ಆರ್ ಆಯುಕ್ತರು ಬಂದು ಅಂತಿಮ ಪರಿಶೀಲನೆ ನಡೆಸುತ್ತಾರೆ. ಅವರು ಸಂಚಾರಕ್ಕೆ ಒಪ್ಪಿಗೆ ನೀಡಿದರೆ ರಾಜ್ಯ ಮತ್ತು ಕೇಂದ್ರ ಸರಕಾರ ನಿಗದಿಪಡಿಸಿದ ದಿನ ಸಂಚಾರ ಆರಂಭವಾಗುತ್ತದೆ. ಜುಲೈ ಹೊತ್ತಿಗೆ ಇನ್ನೂ ಒಂದು ರೈಲು ಬಂದು ಸೇರಲಿದೆ ಎಂದು ಹೇಳಿದರು.

ಹಳದಿ ಮಾರ್ಗ

ಬೊಮ್ಮಸಂದ್ರ, ಹೆಬ್ಬಗೋಡಿ, ಹುಸ್ಕೂರು ರಸ್ತೆ, ಇನ್ಫೋಸಿಸ್ ಫೌಂಡೇಶನ್ , ಎಲೆಕ್ಟ್ರಾನಿಕ್ ಸಿಟಿ, ಬೆರಟೇನ ಅಗ್ರಹಾರ, ಹೊಸ ರಸ್ತೆ, ಸಿಂಗಸಂದ್ರ, ಕೂಡ್ಲು ಗೇಟ್, ಹೊಂಗಸಂದ್ರ, ಬೊಮ್ಮನಹಳ್ಳಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ, ರಾಗಿಗುಡ್ಡ. ಆರ್.ವಿ. ರಸ್ತೆ ನಿಲ್ದಾಣಗಳನ್ನು ಹೊಂದಿದೆ. ದಕ್ಷಿಣ ಬೆಂಗಳೂರನ್ನು (ಎಲೆಕ್ಟ್ರಾನಿಕ್ ಸಿಟಿ) ನಗರದ ಕೇಂದ್ರಕ್ಕೆ ಸಂಪರ್ಕಿಸುವ ಈ ಮಾರ್ಗವು 18.8 ಕಿ.ಮೀ ಉದ್ದ ಹೊಂದಿದೆ.

ಬೇಕರಿಯಲ್ಲಿ ರಂಪಾಟ: ಸೆರೆ

ಬೆಂಗಳೂರು: ಟೀ, ಸಿಗರೇಟ್ ಕೊಡಲಿಲ್ಲವೆಂದು ಬೇಕರಿಯಲ್ಲಿ ದಾಂಧಲೆ ನಡೆಸಿ, ಪೊಲೀಸರ ಕುರಿತೂ ಅವಾಚ್ಯವಾಗಿ ಮಾತನಾಡಿದ್ದ ಅಶ್ವತ್ಥ್ ಎಂಬಾತನನ್ನು ಸದ್ದುಗುಂಟೆಪಾಳ್ಯ ಪೊಲೀಸರು ಬಂಧಿಸಿದ್ದಾರೆ.

ಮೇ 26ರಂದು ಎ. ಕೆ.ನಗರದ 1ನೇ ಮುಖ್ಯರಸ್ತೆಯಲ್ಲಿರುವ ಎಸ್.ಜಿ.ಬೇಕರ್ಸ್ ಆ್ಯಂಡ್ ಜ್ಯೂಸ್ ಅಂಗಡಿಗೆ ಬಂದಿದ್ದ ಆರೋಪಿ, ಮಾಲೀಕನನ್ನು ಅವಾಚ್ಯವಾಗಿ ನಿಂದಿಸಿ ಅಂಗಡಿ ಸಾಮಗ್ರಿ, ರಸ್ತೆಗೆಸೆದು ಅಟ್ಟಹಾಸ ಪ್ರದರ್ಶಿಸಿದ್ದ.

ಟೀ, ಸಿಗರೇಟ್ ಸಾಲ ನೀಡುವಂತೆ ಕೇಳಿದಾಗ, ಮಾಲೀಕ ನೀಡಿರಲಿಲ್ಲ. ಈ ವೇಳೆ ಮಾಲೀಕನನ್ನು ಬೆದರಿಸಿ ಅಂಗಡಿ ಸಾಮಗ್ರಿ ಎಳೆದಾಡಿದ್ದಾನೆ. ಇದರ ವಿಡಿಯೋ ಚಿತ್ರೀಕರಿಸಿಕೊಳ್ಳುತ್ತಿದ್ದ ಮಾಲೀಕ ಪೊಲೀಸರಿಗೆ ದೂರು ನೀಡುವುದಾಗಿ ಹೇಳಿದಾಗ, ಪೊಲೀಸರು ತನ್ನನ್ನೂ ಏನೂ ಮಾಡಲು ಸಾಧ್ಯವಿಲ್ಲ ಎನ್ನುತ್ತಾ ಅವಾಚ್ಯವಾಗಿ ಮಾತನಾಡಿದ್ದ.

ಏರಿಯಾದಲ್ಲಿ ಮಹಿಳೆಯರನ್ನು ಚುಡಾಯಿಸುತ್ತಾ ಕಂಡಕಂಡವರ ಮೇಲೆ ಹಲ್ಲೆ ಮಾಡುತ್ತಾ ತಿರುಗಾಡುವ ಕಿಡಿಗೇಡಿಗಳ ಉಪಟಳ ಅತಿಯಾಗಿದೆ. ಇತ್ತೀಚಿಗೆ ಒಬ್ಬರಿಗೆ ಹಲ್ಲು ಮುರಿಯುವಂತೆ ಹೊಡೆದಿದ್ದಾರೆ. ಇಂಥವರ ಉಪಟಳದಿಂದ ಪೊಲೀಸರು ನಮಗೆ ಮುಕ್ತಿ ಕೊಡಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದರು.

ಛಲವಾದಿ ನಾರಾಯಣಸ್ವಾಮಿ
ಪರಿಷತ್ ವಿರೋಧ ಪಕ್ಷದ ನಾಯಕ

ಕಲಬುರ್ಗಿ ಜಿಲ್ಲಾಧಿಕಾರಿಯನ್ನು ನಿಂದಿಸಿರುವ ಪ್ರಕರಣದಲ್ಲಿ ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್‌ಅವರ ವಿರುದ್ಧ ದುರುದ್ದೇಶದಿಂದ ಜಾತಿ ನಿಂದನೆ ಪ್ರಕರಣ ದಾಖಲಿಸಿದ್ದಾರೆ. ಜಿಲ್ಲಾಧಿಕಾರಿ ಮತ್ತು ರವಿಕುಮಾರ್ ಇಬ್ಬರೂ ಪರಿಶಿಷ್ಟ ಜಾತಿಗೆ ಸೇರಿದವರಲ್ಲ. ಆದರೂ, ರವಿಕುಮಾರ್ ನ್ಯಾಯಾಲಯದಿಂದ ತಡೆಯಾಜ್ಞೆ ತರಬೇಕಾಯಿತು.

ನಕಲಿ ದಾಖಲೆ ಸೃಷ್ಟಿ: ಮೂವರ ಬಂಧನ

ಬೆಂಗಳೂರು: ವೆರಿಫಿಕೇಷನ್ ಸರ್ಟಿಫಿಕೇಟ್‌ಗೆ ಅಗತ್ಯವಿರುವ ಕೆಲ ದಾಖಲಾತಿಗಳ ನಕಲು ಸೃಷ್ಟಿಸುತ್ತಿದ್ದ ಮೂವರು ಆರೋಪಿ ಗಳನ್ನು ಸಿಸಿಬಿಯ ವಿಶೇಷ ವಿಚಾರಣಾ ದಳದ ಪೊಲೀಸರು ಬಂಧಿಸಿದ್ದಾರೆ.



ದೀಪಕ್, ಉದಯ್ ಕುಮಾರ್ ಹಾಗೂ ರಾಮಕೃಷ್ಣ ಎಂಬ ವರನ್ನು ಬಂಧಿಸಲಾಗಿದ್ದು, ನಕಲಿ ದಾಖಲೆಗಳ ಸೃಷ್ಟಿಗೆ ಬಳಸುತ್ತಿದ್ದ ಕಂಪ್ಯೂಟರ್ ಮತ್ತಿತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ವಿವಿಧ ಕಾರಣಗಳಿಗಾಗಿ ಅಗತ್ಯವಿರುವ ಪೊಲೀಸ್ ವೆರಿಫಿಕೇಷನ್ ಸರ್ಟಿಫಿಕೇಟ್ ಪಡೆಯಲು ಸೇವಾ ಸಿಂಧು ಪೋರ್ಟಲ್‌ನ ಮೂಲಕ ಅರ್ಜಿ ಸಲ್ಲಿಸಲಾಗುತ್ತದೆ. ಇತ್ತೀಚೆಗೆ ಕರ್ನಾಟಕ ಮಾತ್ರವಲ್ಲದೆ ಅನ್ಯ ರಾಜ್ಯದ ಕೆಲವರು ಬೆಂಗಳೂರಿನಲ್ಲಿ ವಾಸವಾಗಿರುವುದಾಗಿ ನಕಲಿ ಬಾಡಿಗೆ ಒಪ್ಪಂದ ಪತ್ರ (ರೆಂಟಲ್ ಅಗ್ರಿಮೆಂಟ್ ಪೇಪರ್) ಸಲ್ಲಿಸಿರುವುದು ಕಂಡುಬಂದಿತ್ತು. ಪ್ರಕರಣ ದಾಖಲಿಸಿಕೊಂಡು ಮೂವರನ್ನು ಬಂಧಿಸಲಾಗಿದೆ. ಆರೋಪಿಗಳೆಲ್ಲರೂ ಸ್ಥಳೀಯರಾಗಿದ್ದು, ಸೆಕ್ಯುರಿಟಿ ಏಜೆನ್ಸಿ ನಡೆಸುತ್ತಿದ್ದರು. ನಗರದ ವಿವಿಧ ಠಾಣೆಗಳ ವ್ಯಾಪ್ತಿಗಳಲ್ಲಿ ಬೇರೆ ಬೇರೆಯವರಿಗೆ ನಕಲಿ ದಾಖಲೆಗಳನ್ನು ತಯಾರಿಸಿ ಕೊಟ್ಟಿರುವುದು ಕಂಡುಬಂದಿದೆ ಎಂದು ಹೆಚ್ಚುವರಿ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದ್ದಾರೆ.

ಬಿ ಖಾತಾ ನೀಡುವ ಯೋಜನೆ ಜುಲೈ ಮಧ್ಯದಲ್ಲಿ ಆರಂಭಿಸಲು ಚಿಂತನೆ: ಪ್ರಿಯಾಂಕ್ ಖರ್ಗೆ

ಗ್ರಾಮೀಣ ಭಾಗಕ್ಕೂ ಬಿ-ಖಾತಾ ವಿಸ್ತರಣೆ?

ಬೆಂಗಳೂರು: ಗ್ರಾಮೀಣ ಪ್ರದೇಶಗಳಲ್ಲಿ ಅನಧಿಕೃತ ಲೇಔಟ್‌ಗಳಲ್ಲಿರುವ ಆಸ್ತಿಗಳ ಮಾಲೀಕರಿಗೆ ಒಂದು ಬಾರಿ ಪರಿಹಾರಕ್ಕಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಹೊಸ ಕಾನೂನನ್ನು ರೂಪಿಸಲಾಗುತ್ತಿದ್ದು, ಅಂತಹ ಆಸ್ತಿಗಳಿಗೆ ಬಿ ಖಾತಾ ನೀಡುವ ಯೋಜನೆ ಆರಂಭಿಸಲು ಚಿಂತನೆ ನಡೆಸಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿ ಖಾತಾ ನೀಡುವ ಯೋಜನೆಯನ್ನು ಜುಲೈ ಮಧ್ಯದಲ್ಲಿ ಆರಂಭಿಸಲು ಚಿಂತನೆ ನಡೆಸಲಾಗಿದೆ. ಈ ಉಪಕ್ರಮದಿಂದ 95 ಲಕ್ಷಕ್ಕೂ ಹೆಚ್ಚು ಜನರು ಪ್ರಯೋಜನ ಪಡೆಯುತ್ತಾರೆ. ಉಪಕ್ರಮದಿಂದ ಸರಕಾರಕ್ಕೆ ಕೋಟ್ಯಂತರ ರುಪಾಯಿ ಆದಾಯದ ನಿರೀಕ್ಷೆಯಿದೆ. ನಮ್ಮ ಇಲಾಖೆಯು 5,770 ಗ್ರಾಮೀಣ ಗ್ರಂಥಾಲಯಗಳನ್ನು ಡಿಜಿಟಲ್ ಗ್ರಂಥಾಲಯಗಳಾಗಿ ಮೇಲ್ದರ್ಜೆಗೇರಿಸಿದ್ದು, ಅಲ್ಲಿ 50.62 ಲಕ್ಷ ಜನರು ಸದಸ್ಯರಾಗಿ ನೋಂದಾಯಿಸಿಕೊಂಡಿದ್ದಾರೆ. ಗ್ರಾಮ ಪಂಚಾಯತ್ ಮಟ್ಟದಲ್ಲಿ 3,469 ಮಹಿಳೆಯರನ್ನು ಕಸ ಸಂಗ್ರಹಣಾ ವಾಹನಗಳ ಚಾಲಕರಾಗಿ ನೇಮಿಸಲಾಗಿದೆ.

ನರೇಗಾ ಅಡಿಯಲ್ಲಿ ಕೆಲಸ ಮಾಡುವ ಯುವ ತಾಯಂದಿರ ಮಕ್ಕಳಿಗಾಗಿ ಇಲಾಖೆಯು 3,888 ಕೂಸಿನಾ ಮನೆಯನ್ನು ಅನ್ನು ಪ್ರಾರಂಭಿಸಿದೆ. ಒಟ್ಟಾರೆಯಾಗಿ, 53,711 ಮಕ್ಕಳನ್ನು ದಾಖಲಿಸಲಾಗಿದೆ. ಇದರರ್ಥ, 50,000ಕ್ಕೂ ಹೆಚ್ಚು ಮಹಿಳೆಯರು ಸ್ವಾವಲಂಬಿಗಳಾಗಲು ಕೆಲಸ ಮಾಡಲು ಪ್ರಾರಂಭಿಸಿದ್ದಾರೆ. ದೈನಂದಿನ ವೇತನವನ್ನು 349 ರು.ಗಳಿಂದ 370 ರು.ಗಳಿಗೆ ಹೆಚ್ಚಿಸಲಾಗಿದೆ. ಇಲಾಖೆಯು ರಾಜ್ಯಾದ್ಯಂತ 20 ಲಕ್ಷ ಆಸ್ತಿಗಳನ್ನು ಅಭಿವೃದ್ಧಿಪಡಿಸಿದೆ ಎಂದು ಹೇಳಿದರು.

ಸಮನ್ವಯತೆಯಿಂದ ಡಿಸಿ, ಸಿಇಒಗಳು ಕಾರ್ಯನಿರ್ವಹಿಸಿ

ಕುಡಿಯುವ ನೀರಿಗೆ ಸಂಬಂಧಿಸಿದ ಹಾಗೂ ಇನ್ನಿತರ ಸರಕಾರದ ಯೋಜನೆಗಳಿಗೆ ಸಂಬಂಧಿಸಿದಂತೆ ಭೂಮಿ ವಶಪಡಿಸಿಕೊಳ್ಳುವ ವಿಚಾರದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತಿ ಸಿಇಒಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಜಲಜೀವನ್ ಮಿಷನ್ ಕಾರ್ಯಕ್ರಮದಲ್ಲಿ ರಾಜ್ಯಾದ್ಯಂತ ಮನೆ ಮನೆಗೆ ನೀರು ಕೊಡುವ ಕಾಮಗಾರಿಗಳು ಭರದಿಂದ ಸಾಗಿದ್ದು, ಈ ಯೋಜನೆಗಾಗಿ ಮಂಜೂರು ಮಾಡಲಾದ ಅನುದಾನವನ್ನು ಪೂರ್ಣವಾಗಿ ಬಳಸಿಕೊಳ್ಳಲಾಗಿದೆ, ರಾಜ್ಯದಾದ್ಯಂತ ಈ ಯೋಜನೆಯನ್ನು ಇನ್ನು ಎರಡರಿಂದ ಮೂರು ವರ್ಷಗಳ ಕಾಲಮಿತಿಯಲ್ಲಿ ಅನುಷ್ಠಾನ ಮಾಡಲಾಗುವುದು. ಸುಸ್ಥಿರ ನೀರಿನ ಮೂಲಗಳಿಂದ ನೀರು ಸರಬರಾಜು ಮಾಡಲಾಗುತ್ತಿದ್ದು, ಇದು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತಿದೆ, ಹಿಂದಿನ ಸರ್ಕಾರದ ಅವಧಿಯಲ್ಲಿ ಕಳಪೆ ಕಾಮಗಾರಿಗಳು ನಡೆದಿದ್ದು, ಅದನ್ನು ಸರಿಪಡಿಸಲು ಸಹ ಹೆಚ್ಚು ಸಮಯ ಹಿಡಿಯುತ್ತಿದೆ ಎಂದು ಸಚಿವರು ಹೇಳಿದರು. ಈ ಸಂಬಂಧ ನಡೆದ ಚರ್ಚೆಯಲ್ಲಿ ನೀರು ಸಂಪರ್ಕ ನೀಡಲು ಕೆಲವೆಡೆ ರಸ್ತೆ ಅಗೆಯಲಾಗಿದ್ದು, ಹಾಳಾಗಿರುವ ರಸ್ತೆಗಳನ್ನು ಟೆಂಡರುದಾರರನ್ನೇ ಹೊಣೆಗಾರರನ್ನಾಗಿಸಿ ರಸ್ತೆಗಳನ್ನು ಸುಸ್ಥಿತಿಗೆ ತರಲಾಗುವುದು ಎಂದೂ ಸಚಿವರು ಹೇಳಿದರು.

ಕಾಮಗಾರಿಗಳ ಲೋಪ ಕುರಿತಂತೆ ಪತ್ರಿಕೆಗಳಲ್ಲಿ ಪ್ರಕಟವಾಗುವ ಸುದ್ದಿಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳು ನೀಡಿದ ಸಲಹೆಗೆ ಪ್ರತಿಕ್ರಿಯಿಸಿದ ಸಚಿವ ಪ್ರಿಯಾಂಕ್ ಖರ್ಗೆ ಅವರು ಜಿಲ್ಲಾ ಪಂಚಾಯತಿ ಅಧಿಕಾರಿಗಳಿಗೆ ಈಗಾಗಲೇ ಈ ಬಗ್ಗೆ ನಿರ್ದೇಶನ ನೀಡಲಾಗಿದ್ದು, ಪ್ರತಿನಿತ್ಯ ಪ್ರಕಟವಾಗುವ ದೂರುಗಳನ್ನು ಗಮನಿಸಿ ವಾರ್ತಾ ಇಲಾಖೆಯ ಮೂಲಕ ಸ್ಪಷ್ಟನೆಯನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

ಸಮಾಚಾರ ಸಣ್ಣದಲ್ಲ

ಮಲಯಾಳಂ ಕಡ್ಡಾಯ ಗಡಿ ಕನ್ನಡಿಗರಿಗೆ ರಿಲೀಫ್

ಕಾಸರಗೋಡು: ಗಡಿ ಜಿಲ್ಲೆಯ ಕನ್ನಡಿಗರು ಸೇರಿದಂತೆ ಕೇರಳದ ಗಡಿ ಜಿಲ್ಲೆಗಳ ಅನ್ಯ ಭಾಷಿಕರಿಗೆ ರಾಷ್ಟ್ರಪತಿಗಳಿಂದ ರಿಲೀಫ್ ಸಿಕ್ಕಿದೆ. ರಾಜ್ಯದಲ್ಲಿ ಮಲೆಯಾಳ ಭಾಷೆಯನ್ನು ಉತ್ತೇಜಿಸುವ ಮತ್ತು ಪೋಷಿಸುವ ಉದ್ದೇಶದಿಂದ ಕೇರಳ ವಿಧಾನಸಭೆ ಅಂಗೀಕರಿಸಿದ ಮಲೆಯಾಳ ಭಾಷಾ ಮಸೂದೆಗೆ ರಾಷ್ಟ್ರಪತಿ ಅಂಕಿತ ಹಾಕಲು ನಿರಾಕರಿಸಿದ್ದಾರೆ. ಅನುಮೋದನೆ ನೀಡಲು ನಿರಾಕರಿಸಿರುವ ರಾಷ್ಟ್ರಪತಿಗಳು, ಅಧಿಸೂಚನೆಯನ್ನು ವಾಪಸ್ ಮಾಡುತ್ತಿರುವುದಕ್ಕೆ ಯಾವುದೇ ಕಾರಣವನ್ನು ತಿಳಿಸಿಲ್ಲ. ಸರಕಾರಿ ವ್ಯವಹಾರಗಳನ್ನು ಸಂಪೂರ್ಣವಾಗಿ ಅಧಿಕೃತ ಭಾಷೆ ಮಲೆಯಾಳದಲ್ಲಿ ಮಾಡುವುದರಿಂದ ತಮಿಳು ಮತ್ತು ಕನ್ನಡ ಭಾಷಾ ಅಲ್ಪಸಂಖ್ಯಾತರ ಹಕ್ಕುಗಳನ್ನು ಕಸಿದಂತಾಗುತ್ತದೆ ಎಂದು ಕೇರಳ ಸರಕಾರದ ಕ್ರಮದ ವಿರುದ್ಧ ದೂರು ನೀಡಲಾಗಿತ್ತು.

ಭಾರತದ ದಾಳಿ: ಸೇನೆಯ ಅರಿವಿಗೆ ಬಂದಿರಲಿಲ್ಲ

ಇಸ್ಲಾಮಾಬಾದ್: ಭಾರತ ನಡೆಸಿದ ದಾಳಿಗೆ ಪಾಕಿಸ್ತಾನ ಬೆಚ್ಚಿಬಿದ್ದಿದ್ದು, ಮೇ 9 ಮತ್ತು 10ರಂದು ಮಧ್ಯರಾತ್ರಿಯಲ್ಲಿ ರಾವಲ್ಪಿಂಡಿ ವಿಮಾನ ನಿಲ್ದಾಣ ಸೇರಿದಂತೆ ಪ್ರಮುಖ ಮಿಲಿಟರಿ ನೆಲೆಗಳ ಮೇಲೆ ಭಾರತ ಬ್ರಹ್ಮೋಸ್ ಕ್ಷಿಪಣಿ ದಾಳಿ ನಡೆಸುವುದು ತನ್ನ ಸೇನೆಯ ಅರಿವಿಗೆ ಬಂದಿರಲಿಲ್ಲ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಒಪ್ಪಿಕೊಂಡಿದ್ದಾರೆ. ಅಜೆರ್‌ಬೈಜಾನ್‌ನಲ್ಲಿ ನಡೆದ ಕಾರ್ಯಕ್ರಮ ವೊಂದರಲ್ಲಿ ಮಾತನಾಡಿದ ಷರೀಫ್, ಸೇನಾ ಮುಖ್ಯಸ್ಥ ಅಸೀಮ್ ಮುನೀರ್ ನೇತೃತ್ವದ ಸೇನೆಯು ಮೇ 10ರಂದು ಬೆಳಗಿನ ಪ್ರಾರ್ಥನೆಯ ನಂತರ ಭಾರತದ ಮೇಲೆ ದಾಳಿ ಮಾಡಲು ಯೋಜಿಸಿತ್ತು. ಆದರೆ ಬೆಳಗಾಗುವ ಮುನ್ನವೇ ದಾಳಿ ನಡೆಯಿತು ಎಂದು ತಿಳಿಸಿದರು.

ಮೊಂಡಾಟಕ್ಕೆ ಬಿದ್ದಿರುವ ನಟ ಕಮಲ್ ಹಾಸನ್ | ಥಗ್‌ಲೈಫ್ ಚಿತ್ರ ಬಿಡುಗಡೆಗೆ ಕೊಕ್ಕೆ ಹಾಕಲು ನಿರ್ಧಾರ

ಕಮಲ್ ಕ್ಷಮೆಗೆ ಹೋರಾಟಗಾರರು ಪಟ್ಟು

ಬೆಂಗಳೂರು: ಕನ್ನಡ ಭಾಷೆಯ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿದ ನಟ ಕಮಲ್ ಹಾಸನ್ ವಿರುದ್ಧ ಕನ್ನಡಪರ ಸಂಘಟನೆಗಳು, ಕಲಾವಿದರು ಸಿಡಿದಿದ್ದಾರೆ. ಕಮಲ್ ತಮ್ಮ ಹೇಳಿಕೆಯನ್ನು ಹಿಂಪಡೆದು ಕನ್ನಡಿಗರಲ್ಲಿ ಕ್ಷಮೆಯಾಚಿಸಬೇಕು ಎಂದು ಪಟ್ಟುಹಿಡಿದಿದ್ದಾರೆ. ಇತ್ತ ಕಮಲ್ ಹಾಸನ್ ಮಾತ್ರ ತಾವು ಯಾವುದೇ ಕಾರಣಕ್ಕೂ ಕ್ಷಮೆ ಕೇಳುವುದಿಲ್ಲ ಎಂದಿದ್ದಾರೆ. ನಾನೇನು ತಪ್ಪು ಮಾಡಿಲ್ಲ ಹಾಗಾಗಿ ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ. ನನ್ನಿಂದ ಯಾವುದೇ ತಪ್ಪಾಗಿಲ್ಲ. ನಾನು ಕಾನೂನು ಹಾಗೂ ನ್ಯಾಯದ ಮೇಲೆ ನಂಬಿಕೆ ಇಟ್ಟಿದ್ದೇನೆ. ನಾನು ಕನ್ನಡದ ಮೇಲಿನ ಪ್ರೀತಿಯಿಂದ ಆ ಮಾತು ಹೇಳಿದ್ದೇನೆ. ಪ್ರೀತಿಯಿಂದ ಆಡಿದ ಮಾತಿಗೆ ಕ್ಷಮೆ ಕೇಳಲಾಗದು, ಸ್ಪಷ್ಟನೆ ಮಾತ್ರ ನೀಡಬಹುದು ಎಂದಿದ್ದಾರೆ.

ಇತ್ತ ಕಮಲ್ ಹಾಸನ್ ಅವರಿಂದ ಕ್ಷಮೆ ಕೇಳಿಸಿಯೇ ಸಿದ್ಧ ಎಂದು ಹಠಕ್ಕೆ ಬಿದ್ದಿರುವ ಕನ್ನಡಪರ ಸಂಘಟನೆಗಳು ಹೋರಾಟ ಮುಂದುವರಿಸಿವೆ. ಅಲ್ಲದೆ ಕಮಲ್ ಹಾಸನ್ ಅಭಿನಯದ ಥಗ್ಸ್ ಲೈಫ್ ಚಿತ್ರವನ್ನು ಬಿಡುಗಡೆ ಮಾಡಲು ಬಿಡುವುದಿಲ್ಲ, ಒಂದು ವೇಳೆ ಬಿಡುಗಡೆ ಮಾಡಿದ ಚಿತ್ರಮಂದಿರಗಳನ್ನು ಧ್ವಂಸ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ. ಇತ್ತ ಕರ್ನಾಟಕದ ಫಿಲಂ ಚೇಂಬರ್ ಕೂಡ ಕಮಲ್ ಹಾಸನ್ ವಿರುದ್ಧ ಮುನಿದಿದೆ.

ಥಗ್ಸ್ ಲೈಫ್‌ಗೆ ಸಂಕಷ್ಟ: ಮಣಿರತ್ನಂ ನಿರ್ದೇಶನದ ಥಗ್ಸ್ ಲೈಫ್ ಚಿತ್ರದಲ್ಲಿ ಕಮಲ್ ಹಾಸನ್ ನಾಯಕನಾಗಿ ನಟಿಸಿದ್ದಾರೆ. ಈ ಚಿತ್ರದ ಪ್ರೀರಿಲೀಸ್ ಈವೆಂಟ್‌ನಲ್ಲಿಯೇ ಕಮಲ್ ತಮಿಳಿನಿಂದಲೇ ಕನ್ನಡ ಹುಟ್ಟಿದ್ದು ಎಂಬ ವಿವಾದಾತ್ಮಕ ಹೇಳಿಕೆ ನೀಡಿದ್ದರು. ಈ ಚಿತ್ರ ಜೂನ್ 5ರಂದು ತೆರೆಗೆ ಬರಲಿದೆ. ಕರ್ನಾಟಕದಲ್ಲಿಯೂ ಈ ಚಿತ್ರವನ್ನು ಬಿಡುಗಡೆ ಮಾಡಲು ಸಿದ್ಧತೆ ನಡೆಸಲಾಗಿದೆ. ವಿತರಕ ವೆಂಕಟೇಶ್ ರಾಜ್ಯದಲ್ಲಿ ಚಿತ್ರದ ವಿತರಣೆಯ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಫಿಲ್ಮಂ ಚೆಂಬರ್ ಅವರು ವೆಂಕಟೇಶ್ ಅವರನ್ನು ಕರೆದು ಸಭೆ ನಡೆಸಿದರು. ಸದ್ಯ ರಾಜ್ಯದಲ್ಲಿ ವಿವಾದದಿಂದ ತಲೆದೋರಿರುವ ಪರಿಸ್ಥಿತಿಯನ್ನು ವೆಂಕಟೇಶ್, ಕಮಲ್ ಹಾಸನ್ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಆದರೂ ಕಮಲ್ ಮಾತ್ರ ಕ್ಷಮೆ ಕೇಳಲು ನಿರಾಕರಿಸಿದ್ದಾರೆ. ಹೀಗಾಗಿ ರಾಜ್ಯದಲ್ಲಿ ಥಗ್ ಲೈಫ್ ಚಿತ್ರದ ಬಿಡುಗಡೆಗೆ ಸಂಕಷ್ಟ ಎದಿರಾಗುವುದು ಖಚಿತವಾಗಿದೆ.

ಕಮಲ್ ಸಿನಿಮಾಗಳು ತಮಿಳುನಾಡಿನಲ್ಲಿ ಉತ್ತಮ ಪ್ರದರ್ಶನ ಕಾಣದಿದ್ದರೂ ಕರ್ನಾಟಕದಲ್ಲಿ ಉತ್ತಮ ಪ್ರದರ್ಶನಕಂಡು ಗಳಿಕೆ ಕಂಡಿವೆ. ಗುಣ ಸಿನಿಮಾ ಇದಕ್ಕೆ ಉದಾಹರಣೆ. ಗುಣ ತಮಿಳುನಾಡಿನಲ್ಲಿ ಫ್ಲಾಪ್, ಕರ್ನಾಟಕದಲ್ಲಿ ಸೂಪರ್ ಹಿಟ್ ಆಯಿತು. ಅದು ಕಮಲ್ ಹಾಸನ್ ಉತ್ತಮ ನಟ ಎಂದು ಕನ್ನಡ ಜನತೆ ಕೊಟ್ಟ ಬೆಲೆ. ಕಮಲ್ ಹಾಸನ್‌ಗೆ ಕನ್ನಡಿಗರ ಋಣ ಇದೆ. ಹಾಗಾಗಿ ಅವರು ಕ್ಷಮೆ ಕೇಳಲೇಬೇಕು

-ಸಾಧುಕೋಕಿಲ, ಚಲನಚಿತ್ರ ಅಕಾಡೆಮಿ ಅಧ್ಯಕ್ಷ

ದೊಡ್ಡ ಕಲಾವಿದರು ಎಂದ ಮೇಲೆ ಯೋಚಿಸಿ ಮಾತನಾಡಬೇಕು. ಇಂತಹ ವಿವೇಚನ ರಹಿತ ಮಾತು ಉಳಿದ ಕಲಾವಿದರ ಮೇಲೆ ಪರಿಣಾಮ ಬೀರಬಹುದು. ನನ್ನ ಸಿನಿಮಾ ತೆರೆಗೆ ಬರಲಿದೆ. ಆಗ ಅಲ್ಲಿನ ಪ್ರೇಕ್ಷಕರು ಚಿತ್ರಕ್ಕೆ ತಡೆಯೊಡ್ಡಬಹುದು. ಇದು ನನ್ನೊಬ್ಬನಿಗೆ ಮಾತ್ರವಲ್ಲ, ನನ್ನಂತಹ ಹಲವು ಕಲಾವಿದರಿಗೆ ಇಂತಹ ವಿವೇಚನ ರಹಿತ ಮಾತುಗಳು ತೊಡಕಾಗಬಹುದು.

-ವಸಿಷ್ಠ ಸಿಂಹ, ನಟ

ಕ್ಷಮೆಯಾಚಿಸದಿದ್ದರೆ ಬ್ಯಾನ್ ಮಾಡಿ

ಬೆಂಗಳೂರು: ಕನ್ನಡ ಭಾಷೆಯ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿರುವ ಕಮಲಹಾಸನ್‌ಗೆ ಇದೀಗ ಕ್ಷಮೆ ಕೇಳದಿದ್ದರೆ ಅವರ ಚಿತ್ರಗಳಿಗೆ ನಿಷೇಧ ಹೇರುವ ಕಠಿಣ ತೀರ್ಮಾನ ಕೈಗೊಳ್ಳಲು ರಾಜ್ಯ ಸರಕಾರವೇ ಸಿದ್ಧತೆ ನಡೆಸಿಕೊಂಡಿದೆ.

ಈ ಸಂಬಂಧ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಪತ್ರ ಬರೆದಿದ್ದು, ನಟ ಕಮಲ್ ಹಾಸನ್ ಅವರು ಕನ್ನಡಿಗರ ಕ್ಷಮೆಯಾಚಿಸದಿದ್ದಲ್ಲಿ ಅವರು ನಟಿಸುವ ಸಿನಿಮಾಗಳಿಗೆ ಕರ್ನಾಟಕದಲ್ಲಿ ನಿಷೇಧ ಹೇರಿ ಎಂದು ಸೂಚಿಸಿದ್ದಾರೆ. ತಮಿಳು ಚಿತ್ರರಂಗದ ನಟ ಕಮಲ್ ಹಾಸನ್ ಅವರು ಇತ್ತೀಚೆಗೆ ಕಾರ್ಯಕ್ರಮ ವೊಂದರಲ್ಲಿ ಕನ್ನಡ ಭಾಷೆಯ ಕುರಿತಾಗಿ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಅವರು ಕನ್ನಡ ಭಾಷೆಯ ಕುರಿತಾಗಿ ಮಾತನಾಡಿರುವುದು ಕನ್ನಡಿಗರಿಗೆ ಹಾಗೂ ನನಗೆ ತೀವ್ರ ನೋವಾಗಿದೆ. ಮತ್ತು ಕನ್ನಡಿಗರ ಭಾವನೆಗಳಿಗೆ ಧಕ್ಕೆಯುಂಟಾಗಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಕಮಲ್ ಹಾಸನ್ ಅವರು ಓರ್ವ ಹಿರಿಯ ನಟರಾಗಿ ಕನ್ನಡ ಭಾಷೆಯ ಹಲವು ಚಿತ್ರಗಳಲ್ಲಿ ನಟಿಸಿ ಕನ್ನಡ ಭಾಷೆಯ ಬಗೆ, ತಿಳಿದವರಾಗಿದ್ದು, ಈ ರೀತಿ ಮಾತನಾಡಿರುವುದು ಅವರಿಗೆ ಶೋಭೆ ತರುವಂತದ್ದಲ್ಲ. ಕನ್ನಡದ ನೆಲ, ಜಲ ಹಾಗೂ ಭಾಷೆ ವಿಚಾರದಲ್ಲಿ ಯಾರೇ, ಎಷ್ಟೇ ದೊಡ್ಡ ವ್ಯಕ್ತಿಯಾಗಿದ್ದರೂ ಅವರಿಂದ ಇಂತಹ ಹೇಳಿಕೆಗಳನ್ನು ಸಹಿಸಲು ಸಾಧ್ಯವಿಲ್ಲ. ಆದ್ದರಿಂದ ಕಮಲ್ ಹಾಸನ್ ಅವರು ಕೂಡಲೇ ಕನ್ನಡಿಗರ ಕ್ಷಮೆಯಾಚಿಸಬೇಕು. ಕಮಲ್ ಹಾಸನ್ ಅವರು ಕನ್ನಡಿಗರ ಕ್ಷಮೆಯಾಚಿಸದಿದ್ದಲ್ಲಿ ಅವರು ನಟಿಸಿರುವ ಚಲನ ಚಿತ್ರಗಳಿಗೆ ಕರ್ನಾಟಕದಲ್ಲಿ ಕೂಡಲೇ ನಿರ್ಬಂಧ ವಿಧಿಸಬೇಕೆಂದು ಈ ಮೂಲಕ ತಿಳಿಸುತ್ತೇನೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅವರು ಸಾಹಿತಿ ಡಾ.ಎಚ್.ಎಸ್. ವೆಂಕಟೇಶ್ ಮೂರ್ತಿ ಅವರ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದರು.

ಕೋಮು ದಳ್ಳುರಿ ಕರಾವಳಿಗೆ ನಷ್ಟ

ಬೆಂಗಳೂರು: ಕೋಮುಗಲಭೆಗಳಿಂದ ಕರಾವಳಿ ಭಾಗಕ್ಕೆ ಕೊಡಲಿ ಪೆಟ್ಟು ಬೀಳುತ್ತಿದೆ. ಇದರಿಂದ ನಷ್ಟವಾಗುತ್ತಿರುವುದು ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಕರ್ನಾಟಕ ರಾಜ್ಯಕ್ಕೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸೌಧ ಹಾಗೂ ಅರಮನೆ ಮೈದಾನದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ನಾವು ಎಲ್ಲಾ ಸಮಾಜ ರಕ್ಷಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಪಕ್ಷದ ವತಿಯಿಂದ ಒಂದು ತಂಡ ಕಳುಹಿಸಿ ವರದಿ ನೀಡಲು ಹೇಳಿದ್ದೇವೆ. ಅಧಿಕಾರಿಗಳು ನೀಡುವ ವರದಿ ಬೇರೆ, ಸಾರ್ವಜನಿಕರ ಜತೆ ಚರ್ಚೆ ಮಾಡಿ ವರದಿ ನೀಡಲು ನಮ್ಮ ಪಕ್ಷದವರಿಗೆ ತಿಳಿಸಿದ್ದೇನೆ. ಕರಾವಳಿ ಭಾಗದಲ್ಲಿ ಶಾಂತಿ ನೆಲೆಸಬೇಕು. ಇದು ಒಂದು ಸಾವು, ಎರಡು ಸಾವಿನ ವಿಚಾರ ಮಾತ್ರವಲ್ಲ. ಇದು ಇಡೀ ಕರಾವಳಿ ಭಾಗಕ್ಕೆ ಬಿದ್ದಿರುವ ಕೊಡಲಿ ಪೆಟ್ಟು. ಜನರು ಆತಂಕಕ್ಕೆ ಒಳಗಾಗುವುದು, ಬಂಡವಾಳ ಹೂಡಿಕೆದಾರರು ಅಲ್ಲಿ ಹೂಡಿಕೆ ಮಾಡಲು ಹಿಂಜರಿಯುತ್ತಿರುವುದನ್ನು ಎಲ್ಲರೂ ಅರಿತುಕೊಳ್ಳಬೇಕು. ಈ ಪರಿಸ್ಥಿತಿ ಅರಿತುಕೊಳ್ಳಬೇಕು ಎಂದು ಬಿಜೆಪಿ ಸ್ನೇಹಿತರು ಹಾಗೂ ಬೇರೆ ಬೇರೆ ಸಂಘಟನೆಗಳಿಗೆ ಮನವಿ ಮಾಡುತ್ತೇನೆ ಎಂದರು.

ಅಲ್ಲಿ ಪರಿಸ್ಥಿತಿ ನಿಯಂತ್ರಿಸಲಾಗುತ್ತಿದೆ. ಬಿಜೆಪಿಯವರು ಹಾಗೂ ಅನೇಕ ಸಂಘಟನೆಗಳು ಈ ಭಾಗದಲ್ಲಿ ಕರ್ನಾಟಕ ರಾಜ್ಯದಲ್ಲಿ ಕೋಮು ಪ್ರಚೋದನೆ ಮಾಡುತ್ತಿದ್ದಾರೆ. ಇದರಿಂದ ನಷ್ಟ ಆಗುವುದು ಕರ್ನಾಟಕ ರಾಜ್ಯ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ಎಂಬು ದನ್ನು ಅವರು ಅರಿತುಕೊಳ್ಳಬೇಕು. ಅಲ್ಲಿರುವ ಪ್ರತಿಭಾವಂತ ಯುವಕರು ಈಗಾಗಲೇ ಉದ್ಯೋಗಕ್ಕಾಗಿ ಬೇರೆ ರಾಜ್ಯ ಹಾಗೂ ದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ನಾವು ಉದ್ಯೋಗ ಸೃಷ್ಟಿಸಲು ಪ್ರಯತ್ನಿಸುತ್ತಿದ್ದೇವೆ ಎಂದರು.

ಎಚ್ಚೆಸ್ವಿ ನಿಧನಕ್ಕೆ ಸಾರಸ್ವತ ಲೋಕ ಕಂಬನಿ

ಬೆಂಗಳೂರು: ತಮ್ಮ ಹೃದಯಗೀತೆಗಳ ಮೂಲಕ ಕನ್ನಡಗರ ಮನಮುಟ್ಟಿದ್ದ ಕವಿ ಎಚ್.ಎಸ್. ವೆಂಕಟೇಶ್ ಮೂರ್ತಿ ಅವರ ಅಗಲಿಕೆಗೆ ಕನ್ನಡದ ಸಾರಸ್ವತ ಲೋಕದ ಅನೇಕ ಗಣ್ಯರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಖ್ಯಾತ ನಿರ್ದೇಶಕ ಟಿ.ಎನ್ ಸೀತಾರಾಮ್ ಅವರು 'ನನ್ನ ಧಾರಾವಾಹಿಗಳ ಹಾಡುಗಳು ತಬ್ಬಲಿಯಾದವು' ಎಂದು ಬರೆದುಕೊಂಡಿದ್ದಾರೆ. ತಮ್ಮ ಕಿರುತೆರೆ ಧಾರಾವಾಹಿಗಳಿಗೆ ಎಚ್‌ಎಸ್‌ವಿ ಬರೆದುಕೊಟ್ಟ ಮುಕ್ತ ಮುಕ್ತ ಮುಕ್ತ, ದೂರದಿಂದಲೇ ಜೀವ ಹಿಂಡುತಿದೆ, ಊರ ಸೇರಬಹುದೇ ನೀನು ದಾರಿ ಮುಗಿಯದೇ ಮೊದಲಾದ ಹಾಡುಗಳನ್ನು ಅವರು ನೆನೆದುಕೊಂಡಿದ್ದಾರೆ.

''ಕಳೆದ 15 ವರ್ಷಗಳಿಂದ ಅವರ ಒಡನಾಟದ ಭಾಗ್ಯ ನನಗೆ ಸಿಕ್ಕಿತ್ತು. ಕೊನೆಯ ಗಳಿಗೆಯವರೆಗೂ ಸಾಹಿತ್ಯವನ್ನು ಜಪಿಸುತ್ತಾ, ಸಾಹಿತ್ಯ ರಚಿಸುತ್ತಾ ಇದ್ದ ಅವರ ಚೇತನ ನನಗೆ ಮಾದರಿ. ಕಳೆದ ತಿಂಗಳು ನಾವೊಂದಿಷ್ಟು ಜನ ಗೆಳೆಯರು ಅವರ ಮನೆಗೆ ಹೋಗಿ ಅವರನ್ನು ಮಾತಾಡಿಸಿ, ಪ್ರೀತಿ ತೋರಿಸಿ ಬಂದೆವು. ಸಾಕಷ್ಟು ಕ್ಷೀಣರಾಗಿದ್ದರೂ ಉತ್ಸಾಹದಿಂದಲೇ ತಮ್ಮ ಬದುಕನ್ನು ಕುರಿತು ಮಾತಾಡಿದರು. ಅವರಿಗೆ ಅಂತಿಮ ನಮನ'' ಎಂದು ಕತೆಗಾರ ವಸುಧೇಂದ್ರ ತಮ್ಮ ಫೇಸ್ ಬುಕ್ ಖಾತೆಯಲ್ಲಿ ಸಂತಾಪ ತಿಳಿಸಿದ್ದಾರೆ. ಕನ್ನಡಿಗರ ಜೀವನೋತ್ಸಾಹವನ್ನು ಹೆಚ್ಚಿಸಿದ ಕವಿ ಎಚ್.ಎಸ್ ವೆಂಕಟೇಶ್ ಮೂರ್ತಿ ಅವರಿಗೆ ಗೌರವಪೂರ್ವಕ

ನಮನಗಳು. ವೆಂಕಟೇಶಮೂರ್ತಿಯವರ ಬರೆಹದ ವಿಸ್ತಾರ ದೊಡ್ಡದು. ಅವರು ಕವಿತೆ, ನಾಟಕ, ಪ್ರಬಂಧ, ಕಾದಂಬರಿ, ಮಕ್ಕಳ ಸಾಹಿತ್ಯ, ಅನುವಾದ, ವಿಮರ್ಶೆ, ಹಳೆಗನ್ನಡ ಇತ್ಯಾದಿ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಸರಳ ಸಜ್ಜನಿಕೆಯ ವ್ಯಕ್ತಿತ್ವ ಅವರದು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ನೆನಪಿಸಿಕೊಂಡಿದ್ದಾರೆ. ''ವ್ಯಕ್ತಿಯಾಗಿ, ಕವಿಯಾಗಿ ನನಗೆ ಇಷ್ಟವಾದ, ಕನ್ನಡದ ಮೇರು ಕವಿಗಳಲ್ಲೊಬ್ಬರಾದ ಎಚ್.ಎಸ್.ವೆಂಕಟೇಶ ಮೂರ್ತಿಯವರ ನಿಧನದ ಸುದ್ದಿ ದುಃಖಕರ. ಕನ್ನಡ ಕಾವ್ಯಲೋಕದ ಒಂದು ಅಪೂರ್ವ ನಕ್ಷತ್ರ ಜಾರಿದೆ. ಅಕ್ಷರಗಳಲ್ಲಿ ಜೀವ ತುಂಬಿದ ಎಚ್ಚೆಸ್ವಿ ಅವರ ಪದಗಳು, ಭಾವಗಳು ಹಾಗೂ ವಿಚಾರಗಳು ನಮ್ಮೊಳಗೆ ಸದಾ ಪ್ರತಿಧ್ವನಿಸುತ್ತಾ ಇರುತ್ತವೆ. ಅವರ ಸಾಹಿತ್ಯ ಸ್ಮರಣೆಯಾಗಿ ಉಳಿಯಲಿ, ಮೃತರಿಗೆ ಸದ್ಗತಿ ದೊರಕಲಿ'' ಎಂದು ವಿಶ್ವವಾಣಿ ಪತ್ರಿಕಾ ಬಳಗದ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಸಂತಾಪ ವ್ಯಕ್ತಪಡಿಸಿದ್ದಾರೆ.

ಚಾಲ್ತಿಯಲ್ಲಿಲ್ಲದ ನಾಣ್ಯ ಕಮಲ್

ಬೆಂಗಳೂರು: ನಟ ಕಮಲಹಾಸನ್ ಅವರು ಸಿನಿಮಾ ಪ್ರಚಾರಕ್ಕಾಗಿ ಕನ್ನಡಕ್ಕೆ ಅವಮಾನವಾಗುವಂತೆ ಮಾತನಾಡಿರುವುದು ಖಂಡನೀಯ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದ್ದಾರೆ.

ನಗರದ ಖಾಸಗಿ ಹೋಟೆಲ್‌ನಲ್ಲಿ ಸಂವಾದದಲ್ಲಿ ಪಾಲ್ಗೊಂಡು, ಕನ್ನಡ, ತಮಿಳು, ತೆಲುಗು, ಮಲಯಾಳ ಸೇರಿ ನಮ್ಮ ದೇಶದ ಯಾವುದೇ ಭಾಷೆ ಇರಬಹುದು. ನಾವೆಲ್ಲರೂ ಭಾರತೀಯರು. ನಾವೆಲ್ಲರೂ ಒಟ್ಟಾಗಿ ಬದುಕಬೇಕಿದೆ. ಕರ್ನಾಟಕ- ತಮಿಳುನಾಡಿನ ನಡುವೆ ನೀರು ಮತ್ತು ಭಾಷೆಯ ವಿಚಾರದಲ್ಲಿ ಬೆಂಕಿ ಹಚ್ಚಲು ತುಂಬ ಜನರು ಪ್ರಯತ್ನಿಸುತ್ತಾರೆ. ಆದರೆ, ನಾವು ಒಟ್ಟಾಗಿ ಬದುಕಬೇಕಾದ, ಒಟ್ಟಾಗಿ ಇರಬೇಕಾದ ಅಗತ್ಯವಿದೆ. ಕಮಲಹಾಸನ್ ಅವರು ಇವತ್ತು ಚಾಲ್ತಿಯಲ್ಲಿ ಇಲ್ಲದ ನಾಣ್ಯ. ಅವರಿಗೆ ಬೆಲೆ ಕೊಡಬೇಕಾದ ಅಗತ್ಯವಿಲ್ಲ ಎಂದರು.

ಬಾನು ಸೇರಿ 15 ನರ್ಸ್‌ಗಳಿಗೆ ಪ್ರಶಸ್ತಿ

ದೆಹಲಿ: ನರ್ಸಿಂಗ್‌ನಲ್ಲಿ ಪಿಎಚ್‌ಡಿ ಪದವಿ ಪಡೆದಿರುವ, ಪಠ್ಯ ಪುಸ್ತಕಗಳನ್ನು ಬರೆದಿರುವ, ಹಲವಾರು ಸಂಶೋಧನಾ ಲೇಖನಗಳನ್ನು ಪ್ರಕಟಿಸಿರುವ, ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಸಹಾಯಕ ನರ್ಸಿಂಗ್ ಸೂಪರಿಂಟೆಂಡೆಂಟ್ ಆಗಿ ಸೇವೆ ಸಲ್ಲಿಸುತ್ತಿರುವ ಪ್ರತಿಭಾನ್ವಿತ ಶಿಕ್ಷಣ ತಜ್ಞ ಡಾ. ಬಾನು ಎಂ.ಆರ್ ಸೇರಿದಂತೆ 15 ದಾದಿಯರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರತಿಷ್ಠಿತ ರಾಷ್ಟ್ರೀಯ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ-2025 ಅನ್ನು ಶುಕ್ರವಾರ ಪ್ರದಾನ ಮಾಡಿದರು.

ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನರ್ಸಿಂಗ್ ವೃತ್ತಿಪರರಿಗೆ ರಾಷ್ಟ್ರೀಯ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಪ್ರದಾನ ಮಾಡಿದರು.

ಕೋವಿಡ್-19 ಸಾಂಕ್ರಾಮಿಕ ರೋಗದ ಸಮಯದಲ್ಲಿ ಅನುಕರಣೀಯ ನಾಯಕತ್ವ ಪ್ರದರ್ಶಿಸಿದ್ದಕ್ಕಾಗಿ ಮತ್ತು ಇತರ ನರ್ಸ್ ಗಳಿಗೆ ಮಾದರಿಯಾಗುವಂತ ಕೆಲಸ ಮಾಡಿದ ಡಾ. ಬಾನು ಅವರಿಗೆ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರ ದಲ್ಲಿ ಎಎನ್‌ಎಂ ಆಗಿ ವೃತ್ತಿ ಜೀವನ ಆರಂಭಿಸಿ, ನಿರ್ವಹಣಾ ಬೋಧಕಿ ಸ್ಥಾನಕ್ಕೇರಿ ಈ ವರ್ಷ ನಿವೃತ್ತಿಯಾದ ಆರೋಗ್ಯ ಶಿಕ್ಷಕಿ ವಲಿವೇಟಿ ಸುಭಾವತಿ ಅವರು ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಸ್ವೀಕರಿಸಿದರು.

ಜಿಕೆವಿಕೆ ಆವರಣದಲ್ಲಿ ನಡೆದ ಅಂಬೇಡ್ಕರ್ ಜಯಂತಿ, ತಾಂತ್ರಿಕ ಸಮ್ಮೇಳನ

ವಿಶ್ವದ ಶ್ರೇಷ್ಠ ಸಂವಿಧಾನ ನೀಡಿದ್ದು ಅಂಬೇಡ್ಕರ್

ಬೆಂಗಳೂರು: ವಿಶ್ವಕ್ಕೆ ಶ್ರೇಷ್ಠ ಸಂವಿಧಾನವನ್ನು ನೀಡಿದ ಶ್ರೇಯಸ್ಸು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಸಲ್ಲಬೇಕು ಎಂದು ಸಮಾಜ ಕಲ್ಯಾಣ ಸಚಿವ ಎಚ್ .ಸಿ.ಮಹದೇವಪ್ಪ ಅಭಿಪ್ರಾಯಪಟ್ಟರು.

ಪಶುವೈದ್ಯಕೀಯ, ಪಶು ಹಾಗು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕೋಶದ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರ ಜೀವನದ ಕಷ್ಟ ಮತ್ತು ಶೋಷಣೆಯ ವಿರುದ್ಧ ನಿರಂತರ ಹೋರಾಡಿಕೊಂಡು ಬಂದವರು. ಭಾರತ ದೇಶಕ್ಕೆ ಶ್ರೇಷ್ಠ ಸಂವಿಧಾನವನ್ನು ನೀಡಿದವರು. ಅಂಬೇಡ್ಕರ್ ನೀಡಿದ ಸಂವಿಧಾನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ 40 ಕೋಟಿ ಜನರ ಹಕ್ಕುಗಳನ್ನು ಕಾಪಾಡುತ್ತಿದೆ ಎಂದು ಅಭಿಪ್ರಾಯಪಟ್ಟರು.

ಕುಲಪತಿ ಕೆ.ಸಿ. ವೀರಣ್ಣ ಮಾತನಾಡಿ, ಜ್ಞಾನಾರ್ಜನೆಗಾಗಿ ತಡರಾತ್ರಿ ಗ್ರಂಥಾಲಯದಲ್ಲಿ ಸಮಯ ಕಳೆದ ಡಾ.ಅಂಬೇಡ್ಕರ್ ಅವರಂತೆ ವಿದ್ಯಾರ್ಥಿಗಳು ಅಧ್ಯಯನ ಮಾಡಲು ಸಲಹೆ ನೀಡಿದರು. ಹೆಬ್ಬಾಳ ಪಶುವೈದ್ಯಕೀಯ ಕಾಲೇಜಿನಲ್ಲಿ ಮೆಗಾ ಆಡಿಟೋರಿಯಂ ರೂಪದಲ್ಲಿ ಅಂಬೇಡ್ಕರ್ ಭವನವನ್ನು ಸ್ಥಾಪಿಸಲು ಅವರು ವಿನಂತಿಸಿದ್ದಾರೆ. ಹೆಬ್ಬಾಳ ಕ್ಯಾಂಪಸ್‌ನಲ್ಲಿ ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯ ನಿರ್ಮಿಸುವಂತೆ ವಿನಂತಿಸಿದ್ದಾರೆ. ಬೋಧಕ ಮತ್ತು ಬೋಧಕೇತರ ಹುದ್ದೆಗಳಲ್ಲಿ ಬಾಕಿಯಿರುವ ಹುದ್ದೆಗಳನ್ನು ಭರ್ತಿ ಮಾಡುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಪಿ ಟಿ ರಮೇಶ್, ಡೀನ್ ಡಾ. ಎನ್.ಕೆ. ಶಿವಕುಮಾರ್ ಗೌಡ ಸೇರಿ ಹಲವರಿದ್ದರು. ಈ ವೇಳೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್‌ಗಳನು ವಿತರಿಸಲಾಯಿತು.

ಜಿಕೆವಿಕೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಸ್‌ಸಿ, ಎಸ್‌ಟಿ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಿಸಲಾಯಿತು.

ಅತಿಥಿ ಉಪನ್ಯಾಸಕರಿಗೆ 5 ಲಕ್ಷ ಇಡುಗಂಟು

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ 60 ವರ್ಷ ಪೂರೈಸಿದ ಮತ್ತು ಮರಣ ಹೊಂದಿದ ಅತಿಥಿ ಉಪನ್ಯಾಸಕರಿಗೆ 5 ಲಕ್ಷ ಇಡುಗಂಟು ನೀಡಲು ರಾಜ್ಯ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ. ವಿವಿಧ ಸೌಲಭ್ಯಗಳು 2024ರ ಜ.1ರಿಂದ ಜಾರಿಗೆ ಬರುವಂತೆ ಮಂಜೂರಾಗಲಿದ್ದು, ಕನಿಷ್ಠ ಒಂದು ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಅಥವಾ ಮರಣ ಹೊಂದಿರುವ ಎಲ್ಲಾ ಅತಿಥಿ ಉಪನ್ಯಾಸಕರಿಗೂ ಇಡುಗಂಟು ಯೋಜನೆಯ ಪ್ರಯೋಜನ ಸಿಗಲಿದೆ.

ಯೋಜನೆ ಅನುಷ್ಠಾನಕ್ಕೆ ಬಂದ ಹಿಂದಿನ ಐದು ವರ್ಷಗಳಲ್ಲಿ ಕನಿಷ್ಠ ಒಂದು ವರ್ಷ ಸೇವೆ ಸಲ್ಲಿಸಿ 60 ವರ್ಷ ಪೂರ್ಣಗೊಳಿಸಿರುವ ಅತಿಥಿ ಉಪನ್ಯಾಸಕರಿಗೂ ಈ ಯೋಜನೆಗೆ ಒಳಪಡಲಿದ್ದಾರೆ. ಈ ಯೋಜನೆಗೆ ಒಟ್ಟಾರೆ 44.15 ಕೋಟಿ ರು.ಗಳನ್ನು ಸರ್ಕಾರ ಕಾಯ್ದಿರಿಸಿದೆ.

ಸೇವಾ ಭದ್ರತೆ ಸೇರಿ ಹಲವು ಬೇಡಿಕೆಗಳ ಈಡೇರಿಕೆಗೆ 2024ರಲ್ಲಿ ಅತಿಥಿ ಉಪನ್ಯಾಸಕರು ನಡೆಸಿದ್ದ ಧರಣಿ, ಪಾದಯಾತ್ರೆಯ ನಂತರ ಸರ್ಕಾರ ನಡೆಸಿದ ಮಾತುಕತೆಯಲ್ಲಿ ಇಡುಗಂಟು ನೀಡುವ ಭರವಸೆ ಸೇರಿತ್ತು. ಅಂದು ನೀಡಿದ್ದ ಭರವಸೆಯಂತೆ ಉನ್ನತ ಶಿಕ್ಷಣ ಇಲಾಖೆ ಕ್ರಮ ಕೈಗೊಂಡಿದೆ.

ಇಡುಗಂಟು ಯೋಜನೆ ಜನವರಿ 2024ರಿಂದಲೇ ಪೂರ್ವಾನ್ವಯವಾಗಲಿದ್ದು, ಆ ದಿನಾಂಕಕ್ಕೆ ಹಾಗೂ ನಂತರ 60 ವರ್ಷ ಪೂರೈಸಿದ ಎಲ್ಲರಿಗೂ ಸೌಲಭ್ಯ ಸಿಗಲಿದೆ. 2024ರ ಜನವರಿ 1ಕ್ಕಿಂತ ಹಿಂದಿನ ಐದು ವರ್ಷಗಳಲ್ಲಿ ಕನಿಷ್ಠ ಒಂದು ವರ್ಷ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, 60 ವರ್ಷ ದಾಟಿದವರು ಇಟುಗಂಟು ಸೌಲಭ್ಯ ಪಡೆಯಬಹುದು.

PUBLIC NOTICE

This is to inform the general public that my client **Sri. K Ganesh** S/o Late P Krishnamurthy, aged about 58 Years, Residing at No.151, Jolly Mosque Road, Cottonpet Main Road, Chickpet, Bangalore South, Bangalore-560 053, is the absolute owner of the properties mentioned below and intend to avail loan facility on the security of the Schedule Properties from IDFC First Bank Limited, Koramangala Branch, Bangalore, by way of registered Deed of Mortgage/ Deposit of Title Deed, if any persons including an individual, a Hindu Undivided family, a Company, Banks, Non-Banking Financial Institution(s), lender/s and/ or Creditors having any objection, claim, right, title and/or interest in respect of said properties or any part or portion thereof by way of sale, Memorandum of understanding, exchange, mortgage, pledge, charge, gift, trust, inheritance, succession, possession, lease, tenancy, maintenance easement, license, bequeath, bequest, share, assignment, lien, attachment or otherwise or demand of any nature whatsoever are hereby requested to inform the same in writing supported with original/certified copies of documents with the undersigned advocate ***within 7 days*** from the date of the publication of this Notice, failing which the claim or objection if any shall deemed to have been waived.

THE SCHEDULE ABOVE REFERRED TO

Item No.1: All that Piece and Parcel of the Property Bearing Southern Side of Western Portion of Corporation No.4, Earlier Southern portion of the Corporation No.4, Old Municipal No.52 then 51, As per Computerized BBMP E-Aasthi (Form- A) property No.4, Property New E PID No.9004115047, Situated at **Beli Masjid Road, Measuring East to West 9 Feet and North to South 13 Feet** in all **measuring 117 Square Feet,** and bounded on:
East by: Same number portion of property belongs to Sri.K.Ganesh,
West by: Conservancy Galli,
North by: Same number portion of property belongs to Sri.K.Ganesh,
South by: Beli Masjid Road.

Item No.2: All that Piece and Parcel of the Property Bearing Northern Portion of Corporation No.4, **Measuring East to West 18 Feet and North to South 14 Feet** And Eastern Side of Southern Portion of Corporation No.4, **Measuring East to West 9 Feet** and **North to South 13 Feet,** Both Earlier Southern portion of the Corporation No.4, Old Municipal No. 52 then 51, As per Computerized BBMP E-Aasthi (Form-A) property No.4/2, Property New E PID No.2926227825, Situated at **Beli Masjid Road, Jolly Mohalla, Totally Measuring 369 Square Feet** and bounded on:
East by: House belongs to Gafoor Shariff @ Pasha Sabi,
West by: Conservancy Galli and Property belongs to Sri. K Ramesh,
North by: House No.4/1, belongs to Angamuttu,
South by: Beli Masjid Road and Property belongs to Sri. K Ramesh.

A. Vijikumar, Advocates
M/s. Next Gen Legal Services
No.13/154, 2nd floor, 1st cross, 5th Main, Shankara Mutt Main Road, Chamarajpet, Bangalore-560 018
Phone:9845309040, 9945309040

PUBLIC NOTICE

This is to bring to the notice of the general public that our client **Smt.M.Seethalakshmi W/o Sri.Muthu Venkatachalam** is intending to purchase the schedule property mentioned hereunder from **Sri.V.Yallareddy S/o Sri.Venkatareddy;** any person/s objecting for the proposed purchase or are having any right, title, interest or any type of claim over the scheduled property is hereby called upon to file their objections/claims what so ever along with documentary proof on or before **7 days** from the date of publication of this notice with the under mentioned advocate failing which; our clients shall proceed and complete the sale transaction with the above stated person.

SCHEDULE PROPERTY

All that piece and parcel of the Property bearing Vacant **Site No.430** Katha No.184/430, PID No.150200102701000524, measuring East to West: 18.288 meter (60 Feet) and North to South: 12.192 meter (40feet) totally 222.97 8q Meter (2400 Sq. feet), formed in Sy Nos. 64, 72, 73/2, 76/1, 77/1, 14(P) 78, 161/2, 162/1,2,4, 175, 176/1, 177, 183/1, 2, & 184 totally measuring 19 acre 0.09 gunta layout Known as BEML Layout, situated at **S. Medahally (S.Medahalli) Village, Sarjapura Hobli, Anekal Taluk, Bangalore District** as per the layout plan approved by BMRDA vide its letter Nos.) (1)No. BMRDA/LAO/160/97-98, dated: 11-05-2000, (2)No. BMRDA/LAO/48/98-99, dated: 16-01-2001, (3) No.BMRDA/LAO/146/97-98, BMRDA/LAO/08/2003-04, dated: 05-07-2003 and bounded on:
East By : Site No. 417, West By : Road, North By: Site No.429, South By: Site No.431.

C.K.V.K. LAW ASSOCIATES
Mr. VENKATESH CHANDRAN M.A., L.L.B.
Advocates & Legal Consultants Bangalore-43
M : 9845846428, 9108784843, 080-48658774
E- Mail: rvlaw.76@gmail.com

THE SOUTH INDIA PAPER MILLS LIMITED
CIN : L85110KA1959PLC001352
Regd. Office: Chikkayana Chatra, Nanjangud - 571 302 Karnataka State
₹. In Lakhs except per share data

STATEMENT OF AUDITED FINANCIAL RESULTS FOR THE QUARTER / YEAR ENDED 31st MARCH 2025

Sl No	Particulars	Quarter Ended 31/03/2025	Quarter Ended 31/03/2024	Year ended 31/03/2025	Year ended 31/03/2024
1	Total income from operations	9,414.36	9,065.88	36,931.47	31,230.62
2	Net profit for the the period (before Tax, Exceptional and / or Extraordinary Items)	(291.79)	(340.86)	(1,366.38)	(1,757.15)
3	Net profit for the the period before Tax, (after Exceptional and / or Extraordinary Items)	(291.79)	(357.34)	(1,278.49)	(1,787.16)
4	Net Profit for the period after tax,(after exceptional and/ or extraordinary items)	(225.72)	(272.80)	(964.07)	(1,342.77)
5	Total comprehensive Income for the period [comprising profit for the period (after tax) and other comprehensive income (after tax)]	(187.76)	(214.75)	(926.11)	(1,284.72)
6	Equity Share Capital	1,875.00	1,875.00	1,875.00	1,875.00
7	Reserves (excluding Revaluation Reserve as shown in the Balance Sheet of previous year) i.e., Other Equity	19,103.33 (as on 31-3-2025)	20,067.42 (as on 31-3-2024)	19,103.33 (as on 31-3-2025)	20,067.42 (as on 31-3-2024)
8	Earnings Per Share (of Rs. 10/- each) in Rs.				
	Basic :	(1.20)	(1.45)	(5.14)	(7.16)
	Diluted :	(1.20)	(1.45)	(5.14)	(7.16)

1. The above is an extract of the detailed format of Quarterly / Annual Financial Results filed with the Stock Exchange under Regulation 33 of the SEBI (Listing Obligations and Disclosure Requirements) Regulations, 2015. The full format of the Quarterly / Annual Financial Results are available on the website of BSE Limited at www.bseindia.com & Company's website www.sipaper.com and can be accessed by using the QR Code provided below

Place : Nanjangud
Date : 29-05-2025

By Order of the Board
Sd/-
MANISH M PATEL
MANAGING DIRECTOR
DIN: 00128179

OLA ELECTRIC
OLA Electric Mobility Limited
(formerly known as OLA Electric Mobility Private Limited)
CIN: L74999KA2017PLC099619
Registered Office: Wing C, Prestige RMZ Startech, Hosur Road, Municipal Ward No.67, Municipal No. 140, Koramangala VI Bk, Bangalore, Bangalore South, Karnataka 560095 India **Tel:** 080-35440050, **Email Id:** companysecretary@olaelectric.com

STATEMENT OF AUDITED STANDALONE AND CONSOLIDATED FINANCIAL RESULTS FOR THE FOURTH QUARTER AND FINANCIAL YEAR ENDED MARCH 31, 2025

The Audited Standalone and Consolidated Financial Results for the Fourth Quarter and Financial Year ended March 31, 2025 have been reviewed by the Audit Committee and approved by Board of Directors at their meetings held on May 29, 2025.

The full format of the Fourth Quarter and Financial Year ended March 31, 2025 financial results are available on the Stock Exchange websites www.nseindia.com and www.bseindia.com and company website https://www.olaelectric.com/investor-relations/financials and can be accessed by scanning the QR code.

For Ola Electric Mobility Limited
(formerly known as Ola Electric Mobility Private Limited)
Sd/-
Bhavish Aggarwal
Chairman and Managing Director
(DIN: 03287473)

Place: Bangalore
Date: May 29, 2025

CONCEPT

@vishwavaninews

ಚಿತ್ತವಿಹಾರ

ನೆಮ್ಮದಿಯ ಗೂಡಲ್ಲಿ ಮನದ ಹಕ್ಕಿ

• ಮಾಯಾ ಬಾಲಚಂದ್ರ

ಹೊರನೋಟಕ್ಕೆ ಹೇಗೆಯೇ ಕಾಣಿಸಿಕೊಳ್ಳುತ್ತಿದ್ದರೂ ಒಳಗಿನಿಂದ ಎಲ್ಲರ ಅಪೇಕ್ಷೆಯೂ ಒಂದೇ, ಅದೆಂದರೆ ಸಂತೋಷವನ್ನು ಹೊಂದುವುದು. ಅದಕ್ಕಾಗಿ ಕೆಲವರು ಹೊರಗಿನ ಪರಿಸರದಲ್ಲಿ, ತಮ್ಮ ಮನಸ್ಥಿತಿಗೆ ಹೊಂದದ ವಿಚಾರಗಳನ್ನು ದೋಷವೆಂದು ಪರಿಗಣಿಸಿ, ಅದನ್ನು ತಿದ್ದಿ ಸರಿಪಡಿಸಲು ಪ್ರಯತ್ನಿಸುತ್ತಿರುತ್ತಾರೆ. ನಾವಿರುವ ಸಮಾಜ, ಪರಿಸರ ಸಂಪೂರ್ಣ ಸರಿಯಾದ ಮೇಲೆ ಸಂತೋಷದಿಂದ ಇರಲು ಸಾಧ್ಯ ಎನ್ನುವುದು ಅವರ ನಂಬಿಕೆ. ಈ ನಂಬಿಕೆ ವಾಸ್ತವದಲ್ಲಿ ನಿಜವಾಗದೆ ಉಳಿದುಬಿಡುತ್ತದೆ. ಮೊದಲಿ ನಿಂದಲೂ ಸಮಾಜದಲ್ಲಿ ಒಳ್ಳೆಯದು - ಕೆಟ್ಟದ್ದು ಎರಡೂ ಹಾಸು ಹೊಕ್ಕಾಗಿವೆ.

ವ್ಯಕ್ತಿಯಿಂದಾಗಿಯೇ ಸಮಾಜ ನಿರ್ಮಾಣ ವಾಗಿದೆ. ಅದೇ ಸಮಾಜದಿಂದಲೇ ವ್ಯಕ್ತಿಯ ನಿರ್ಮಾಣವೂ ಆಗಿದೆ. ಸರಿಯಾಗಿ ಗಮನಿಸಿದರೆ ಸಮಾಜದಲ್ಲಿ ಒಳ್ಳೆಯ ವಿಚಾರಗಳು ಕೆಟ್ಟದ್ದಕ್ಕಿಂತ ಬಹಳ ಹೆಚ್ಚೇ ಇವೆ. ಇವುಗಳೆಡೆಗೆ ಗಮನ ನೀಡಲು ಪ್ರಾರಂಭಿಸಿದರೆ, ಸದ್ವಿಚಾರಗಳೆಲ್ಲಾ ಕಾಣಲು ಪ್ರಾರಂಭಿಸುತ್ತವೆ. ಒಳ್ಳೆಯ ವಿಚಾರಗಳು ಮನ ವನ್ನು ಮುದಗೊಳಿಸುತ್ತಾ ಹೋದಂತೆ, ಆ ವ್ಯಕ್ತಿಯು ತನ್ನ ಸಮಾಜಕ್ಕೆ ಮುದವನ್ನೇ ನೀಡುತ್ತಾ ಸಾಗುತ್ತಾನೆ. ದುರ್ವಿಚಾರಗಳೆಡೆಗೆ ಪ್ರಾಶಸ್ತ್ಯ ನೀಡುತ್ತಾ ಹೋದರೆ ಮನಸ್ಸು ಮುದುಡುತ್ತಾ, ದುಃಖವನ್ನೇ ಅನುಭವಿ ಸಲು ಪ್ರಾರಂಭಿಸಿ, ಆ ವ್ಯಕ್ತಿಯು ಅದೇ ದುಃಖವನ್ನು ತನ್ನ ಪರಿಸರ ದಲ್ಲಿಯೂ ಪಸರಿಸುತ್ತಾ ಸಾಗುತ್ತಾನೆ. ಚಿಂತಾ ಕ್ರಾಂತ ವ್ಯಕ್ತಿಯು ಬಹಳ ಬೇಗ ಭಯ ಮತ್ತು ಉದ್ವೇಗಗಳಿಗೆ ಒಳಗಾಗು ತ್ತಾನೆ. ಇವೆಲ್ಲವೂ ಆತನ ಆಕ್ರೋಶಕ್ಕೂ ಕಾರಣವಾಗುತ್ತವೆ. ಈ ಎಲ್ಲಾ ವ್ಯತಿರಿಕ್ತ ಭಾವಗಳು ಶರೀರದಲ್ಲಿ ಮಾರಕ ರಾಸಾಯನಿಕ ಬದಲಾವಣೆಗಳಿಗೆ ಕಾರಣವಾಗುತ್ತವೆ.

ಸ್ವಲ್ಪಮಟ್ಟಿನ ಒತ್ತಡವನ್ನು ಸಹಿಸುವ ಸಾಮರ್ಥ್ಯ ಸಾಮಾನ್ಯ ವ್ಯಕ್ತಿಗಳಲ್ಲಿ ಇದ್ದೇ ಇದೆ. ತೀವ್ರ ಕ್ರೋಧೋನ್ಮತ್ತತೆಯನ್ನು ದೀರ್ಘಕಾಲದವರೆಗೆ ಮುಂದುವರಿಸಿಕೊಂಡು ಹೋಗಲು ಬಹಳಷ್ಟು ಜನರು ಅಶಕ್ಯರು. ಶರೀರ ಮತ್ತು ಮನಸ್ಸು ಅತಿಯಾದ ಒತ್ತಡದ ಸ್ಥಿತಿಯನ್ನು ಭರಿಸಲಾರವು. ಹೊರನೋಟಕ್ಕೆ ಮುಗುಳ್ನಗುತ್ತಾ, ಒತ್ತಡವನ್ನು ಮನಸ್ಸಿನಾಳದಲ್ಲಿ ಹುದುಗಿಸಿಡಲು ಪ್ರಯತ್ನಿ ಸುತ್ತಿದ್ದರೆ, ಅದು ಅಂತರ್ಮನಸ್ಸಿನಲ್ಲಿಯೇ ತನ್ನ ಕೆಲಸ ಮಾಡುತ್ತಿರುತ್ತದೆ. ಒಳಗೆ ಕುದಿಯುವ ಜ್ವಾಲಾಮುಖಿಯಂತಾಗಿ, ಎಂದಾದರೊಮ್ಮೆ ಘನ ಸ್ಫೋಟವಾಗಿ ಬಿಡುತ್ತದೆ. ಆಗ ಆ ನಷ್ಟವನ್ನು ಭರಿಸುವ ಚೈತನ್ಯವೇ ಉಳಿದಿರುವುದಿಲ್ಲ. ಮಾನವನಲ್ಲಿ ಪರಿಸ್ಥಿತಿಗೆ ಹೊಂದಿಕೊಳ್ಳಲು, ಪ್ರಕೃತಿಯೇ ನೀಡಿದ ಚಾತುರ್ಯ ಇದ್ದೇ ಇದೆ. ಅದನ್ನು ವಿವೇಚನೆಯಿಂದ ಬಳಸಿದರೆ, ಬಾಹ್ಯದ ಪರಿಸ್ಥಿತಿಗಳು ಮನದ ಸಂತೋಷವನ್ನು ನಷ್ಟಗೊಳಿಸಿ, ನೆಮ್ಮದಿಯ ಗೂಡನ್ನು ಕೆಡವಲಾರವು.

ಹನಿ ಮಳೆ

ಬೇಕು ಸ್ವಲ್ಪ ಬಿಡುವು

ಒಮ್ಮೆಗೇ ಸುರಿದಿದೆ ಜೋರಾದ ಮಳೆ
ಚೆನ್ನಾಗಿ ನೀರು ಕುಡಿದಿದೆ ಸುತ್ತಲಿನ ಇಳೆ
ತುಸು ಬಿಡುವು ಕೊಡೋ ಮಳೆರಾಯ!
ಇಲ್ಲವಾದರೆ ಹೋಗಬೇಕಾದೀತು ಗುಳೆ

• ಕಿರಣ್ ಕೊಕ್ಕರ್ಣೆ

ಮಧುಮೇಹಿಗಳು ಹೆಚ್ಚು ತಿನ್ನಬಾರದೇ?

ಮಧುಮೇಹ ಎಂಬ ಆರೋಗ್ಯ ಸಮಸ್ಯೆ ಈಗ ವ್ಯಾಪಕವಾಗಿದೆ; ಇದು ಆಧುನಿಕ ಎನಿಸುವ, ಹೆಚ್ಚು ದೈಹಿಕ ಚಟುವಟಿಕೆ ಇಲ್ಲದ ಜೀವನಶೈಲಿಯಿಂದ ಉದ್ಭವಿಸುವ ಸಮಸ್ಯೆ ಎಂದು ತಜ್ಞರು ಹೇಳಿದ್ದಾರೆ. ನಾವು ಸೇವಿಸಿದ ಆಹಾರದಿಂದ ತಯಾರಾಗುವ ಸಕ್ಕರೆಯ ಅಂಶವು ಅಧಿಕ ಪ್ರಮಾಣದಲ್ಲಿ ರಕ್ತದಲ್ಲಿ ಉಳಿದುಕೊಂಡಿರುವುದರಿಂದ ಈ ಸಮಸ್ಯೆ ಉದ್ಭವವಾಗುತ್ತದೆ. ಕಡಿಮೆ ಆಹಾರ ಸೇವನೆ, ಹೆಚ್ಚು ಕ್ಯಾಲೊರಿಯನ್ನು ಖರ್ಚು ಮಾಡುವಂತಹ ಲಘು ವ್ಯಾಯಾಮಗಳು ಮಧುಮೇಹ ನಿಯಂತ್ರಣಕ್ಕೆ ಉತ್ತಮ.

• ಡಾ.ಕರವೀರಪ್ರಭು ಕ್ಯಾಲಕೊಂಡ

ಮನುಷ್ಯನಿಗೆ ಆದಿಯಿಂದಲೇ ಆಹಾರವೆಂದರೆ ಎಲ್ಲಿಲ್ಲದ ಆಸಕ್ತಿ. ತನ್ನ ಆಹಾರದ ವಿಷಯದಲ್ಲಿ ಯಾವುದೇ ರೀತಿಯ ನಿರ್ಬಂಧಗಳಿರಬಾರದೆಂದುಕೊಳ್ಳುತ್ತಾನೆ. ತಮಗೆ ಯಾವುದು ಇಷ್ಟವಾಗುತ್ತದೆಯೋ ಅದನ್ನು ಮನಸಾರೆ ತಿನ್ನಲು ಸ್ವಾತಂತ್ರ್ಯ ಬಯಸುತ್ತಾನೆ. ಆಹಾರದ ವಿಷಯದಲ್ಲೇನಾ ದರೂ ನಿಯಮಗಳನ್ನು ಅನುಸರಿಸಬೇಕಾದಾಗ, ಅದೊಂದು ದೊಡ್ಡ ಶಿಕ್ಷೆಯೆಂದು ಭಾವಿಸುತ್ತಾರೆ. ಮಧುಮೇಹ ಸಮಸ್ಯೆ ಇರುವವರಿಗೆ ಔಷಧಿಗಳಿಗಿಂತ ಆಹಾರವೇ ಪರಮ ಔಷಧ. ಮಧುಮೇಹ ಇಲ್ಲದ ವ್ಯಕ್ತಿ ಹಾನಿಕಾರಕವಾದ ಪದಾರ್ಥ ಗಳನ್ನು ಸೇವಿಸಿದರೆ ಅವುಗಳ ಪ್ರಭಾವ ಸ್ವಲ್ಪ ವಿಳಂಬವಾಗಿ ಕಾಣಿಸುತ್ತದೆ. ಆದರೆ, ಮಧುಮೇಹಿಗಳಲ್ಲಿ ಅದು ತಕ್ಷಣ ಕಾಣಿಸಿಕೊಳ್ಳುತ್ತದೆ. ಆದ್ದರಿಂದಲೇ ಆಹಾರದ ವಿಷಯದಲ್ಲಿ ಮಧುಮೇಹಿಗಳು ಮತ್ತಷ್ಟು ಮತ್ತಷ್ಟು ಶ್ರದ್ಧೆ ವಹಿಸಬೇಕು.

ಊಟ ಎಷ್ಟು ಬಾರಿ ಮಾಡಬೇಕು?: ಎರಡು ಊಟದ ಮಧ್ಯೆ ಹೆಚ್ಚು ಸಮಯದ ಅಂತರ ಇರಬಾರದು. ಹೆಚ್ಚು ಗಂಟೆಗಳು ಕಳೆದಂತೆಲ್ಲಾ ರಕ್ತದಲ್ಲಿ ಸಕ್ಕರೆಯ ಪ್ರಮಾಣ ಕಡಿಮೆಯಾಗಿ, ಊಟ ಮಾಡಿದ ತಕ್ಷಣ ಹಠಾತ್ತಾಗಿ ಬೆಳೆದುಬಿಡುತ್ತದೆ. ಆದ್ದರಿಂದ ಊಟವನ್ನು ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ – ಈ ರೀತಿಯಾಗಿ ಮೂರು ಹೊತ್ತುಗಳಿಗೆ ವಿಭಜಿಸಬೇಕು. ಇವುಗಳ ಜೊತೆಗೆ ಬೆಳಿಗ್ಗೆ 11 ಗಂಟೆಗೆ ಮತ್ತು ಸಂಜೆ 5 ಗಂಟೆಗೆ ಉಪಹಾರ ಸೇವಿಸುವುದೂ ಕೂಡ ಅಗತ್ಯ. ಇದರಿಂದಾಗಿ ಸಕ್ಕರೆಯ ಶೇಕಡತೆಯಲ್ಲಿ ಏರು ಪೇರುಗಳಿಲ್ಲದೆ ನಿಯಂತ್ರಣದಲ್ಲಿರುತ್ತದೆ.

ಎಲ್ಲಾ ಜನರಂತೆಯೇ ಮಧುಮೇಹ ಇರುವವರಿಗೂ ಕೂಡಾ ಎಲ್ಲಾ ಬಗೆಯ ಆಹಾರ ಪದಾರ್ಥಗಳ ಅಗತ್ಯತೆ ಇರುತ್ತದೆ. ಆದರೆ ಬೇಗ ಜೀರ್ಣವಾಗುವ ಆಹಾರ ಪದಾರ್ಥಗಳ (ಕಾರ್ಬೋಹೈಡ್ರೇಟ್) ನ್ನು ಸೇವಿಸಬಾರದು. ಆ ರೀತಿಯಾಗಿ ಸೇವಿಸಿದರೆ ಸಕ್ಕರೆಯ ಪ್ರಮಾಣ ಬಹಳ ವೇಗವಾಗಿ ಹೆಚ್ಚಾಗುತ್ತದೆ. ಇನ್ಸುಲಿನ್ ಲೋಪಗಳಿರುವುದು ಅಥವಾ ಅದು ಸಕ್ರಮವಾಗಿ ಕೆಲಸ ಮಾಡದಿರುವುದೇ ಇದಕ್ಕೆ ಕಾರಣ. ಆದ್ದರಿಂದ ಸಕ್ಕರೆ, ಸಿಹಿ ತಿಂಡಿಗಳು, ಹಣ್ಣಿನ ರಸ , ಬಾಳೆಹಣ್ಣು, ಮಾವಿನಹಣ್ಣು , ದ್ರಾಕ್ಷಿ, ತಂಪು ಪಾನೀಯ, ಚಾಕೊಲೇಟ್ ಹಾಗೂ ಅನ್ನದಂತಹ ಪದಾರ್ಥಗಳನ್ನು ಅತಿ ಕಡಿಮೆ ಪ್ರಮಾಣದಲ್ಲಿ ಮಾತ್ರ ಸೇವಿಸಬೇಕು. ಪಾಲಿಶ್ ಮಾಡಿದ ಅಕ್ಕಿಯಿಂದ ತಯಾರಿಸಿದ ಅನ್ನದಲ್ಲಿ ಎಲ್ಲಕ್ಕಿಂತ ವೇಗವಾಗಿ ಜೀರ್ಣವಾಗುವ ಕಾರ್ಬೋಹೈಡ್ರೇಟ್ ಗಳಿರುತ್ತವೆ.

ಮೊಳಕೆ ಕಾಳು ಉತ್ತಮ: ಮಧುಮೇಹ ಇರುವವರು ಈ ಎಲ್ಲಾ ಪದಾರ್ಥಗಳನ್ನು ಸಂಪೂರ್ಣವಾಗಿ ದೂರ ಇಡಬೇಕೆಂದೇನಿಲ್ಲ. ಆದರೆ ಇವನ್ನು ಹೆಚ್ಚಿನ ಪ್ರಮಾಣದಲ್ಲಿ ಸೇವಿಸಿದರೆ ಸಕ್ಕರೆಯ ಪ್ರಮಾಣ ವಿಪರೀತವಾಗಿ ಹೆಚ್ಚಾಗುತ್ತದೆ .ಪ್ರತಿದಿನ ಸೇವಿಸುವ ಸಾಮಾನ್ಯ ಔಷಧಿಗಳು ಹಠಾತ್ತಾಗಿ ಬೆಳೆಯುವ ಸಕ್ಕರೆಯನ್ನು ನಿಯಂತ್ರಿಸಲಾಗದಂತಹ ಸ್ಥಿತಿ ಉಂಟಾಗುತ್ತದೆ. ಗೋಧಿ, ಮೆಕ್ಕೆಜೋಳ, ಸಿರಿಧಾನ್ಯಗಳು, ತರಕಾರಿ ಅಥವಾ ಹಣ್ಣುಗಳಲ್ಲೂ ಕೂಡ ಕಾರ್ಬೋಹೈಡ್ರೇಟ್ಸ್ ಸಿಗುತ್ತವೆ. ಹಿಟ್ಟು ಮಾಡುವುದಕ್ಕಿಂತ ಧಾನ್ಯಗಳನ್ನು ಬೇಯಿಸಿ ಅಥವಾ ಮೊಳಕೆಯೊಡೆದ ಧಾನ್ಯಗಳನ್ನು ತಿನ್ನುವುದು ಒಳ್ಳೆಯದು.

ಪ್ರೋಟೀನ್‌ಗಳು: ಮಧುಮೇಹ ಇರುವವರಿಗೆ, ಇತರರ ಹಾಗೆಯೇ ಪ್ರೋಟೀನ್ ಅಗತ್ಯ ಇರುತ್ತದೆ. ಶರೀರದಲ್ಲಿ ಜೀವಕೋಶಗಳ ನಿರ್ಮಾಣದಲ್ಲಿ ಇವುಗಳ ಅಗತ್ಯತೆ ಬಹಳ ಹೆಚ್ಚು. ತೃಣ ಧಾನ್ಯಗಳು, ಬೇಳೆಕಾಳುಗಳು ಮುಂತಾದವುಗಳಲ್ಲಿ ಅಗತ್ಯ ಇರುವಷ್ಟರಮಟ್ಟಿಗೆ ಪ್ರೋಟೀನ್ ಗಳು ಲಭಿಸುತ್ತವೆ. ಇವುಗಳ ಜೊತೆಗೆ ಹಾಲು, ಮೊಸರು ಹಾಗೂ ಸೋಯಾ ಪದಾರ್ಥಗಳು, ಕಡಿಮೆ ಕೊಬ್ಬು ಪದಾರ್ಥಗಳಿರುವ ಪನ್ನೀರ್ ಪದಾರ್ಥಗಳನ್ನು ಪ್ರತಿನಿತ್ಯ ಸೇವಿಸುವುದೊಳ್ಳೆಯದು. ಮಾಂಸಾಹಾರಿಗಳು ಲಿವರ್, ಕಿಡ್ನಿ, ಮೆದುಳುಗಳಂತಹ ಭಾಗಗಳನ್ನು ಕೂಡಾ ಸೇವಿಸಬಾರದು. ಸಕ್ಕರೆಯನ್ನು ಸಂಪೂರ್ಣವಾಗಿ ನಿಯಂತ್ರಣದಲ್ಲಿಡುವ ಕ್ರಮದಲ್ಲಿ ಪ್ರೋಟೀನ್‌ಗಳನ್ನು ನಿರ್ಲಕ್ಷಿಸಬಾರದು. ಪ್ರೋಟೀನ್‌ಗಳು ಕಡಿಮೆಯಾದರೆ ಜೀವಕೋಶಗಳು ದುರ್ಬಲಗೊಳ್ಳುತ್ತವೆ. ಆಂಟಿಬಾಡಿಗಳ ಉತ್ಪತ್ತಿ ಕಡಿಮೆಯಾಗಿ ಶರೀರ ಸೋಂಕುಗಳಿಗೆ ತುತ್ತಾಗುತ್ತದೆ.

ಸೊಪ್ಪು ಮತ್ತು ಸಲಾಡ್: ತೃಣಧಾನ್ಯಗಳು, ತರಕಾರಿ ಹಾಗೂ ಹಣ್ಣುಗಳಲ್ಲೂ ಕೂಡಾ ಕೊಬ್ಬು ಪದಾರ್ಥಗಳಿರುತ್ತವೆ. ಆದರೆ ಬಾದಾಮಿಗಳಂತಹ ಡ್ರೈ ಫ್ರೂಟ್ಸ್ ನಲ್ಲಿ ಕೊಬ್ಬು ಪದಾರ್ಥಗಳು ಮತ್ತಷ್ಟು ಹೆಚ್ಚಾಗಿರುತ್ತವೆ. ಎಣ್ಣೆ ಪದಾರ್ಥಗಳು, ಮಾಂಸವನ್ನು ಸಂಪೂರ್ಣವಾಗಿ ನಿಷೇಧಿಸಿಕೊಂಡರೆ ಇವುಗಳನ್ನು ನಿಯಂತ್ರಣದಲ್ಲಿಡಬಹುದು. ಆಹಾರದಲ್ಲಿ ತೃಣ ಧಾನ್ಯಗಳು, ತರಕಾರಿ, ಹಣ್ಣು ಹಂಪಲುಗಳು ಹಾಗೂ ಹಾಲು ಉತ್ಪನ್ನಗಳನ್ನು ತಕ್ಕಷ್ಟು ಸೇವಿಸಿದರೆ ಅಗತ್ಯವಿರುವಷ್ಟು ವಿಟಮಿನ್ ಮತ್ತು ಲವಣಗಳೆಲ್ಲಾ ಇವುಗಳ ಮೂಲಕವೇ ಲಭಿಸುತ್ತವೆ. ಏನಾದರೂ ಪ್ರತ್ಯೇಕ ಕಾರಣದ ಹೊರತಾಗಿ ಬಿ – ಕಾಂಪ್ಲೆಕ್ಸ್ , ಕ್ಯಾಲ್ಸಿಯಂ, ಐರನ್ ಮಾತ್ರೆಗಳ ಅಗತ್ಯವೇ ಇರುವುದಿಲ್ಲ. ಬಗೆಬಗೆಯ ಸೊಪ್ಪು ಹಾಗೂ ಸಲಾಡ್ ಗಳನ್ನು ಆಗಾಗ್ಗೆ ಸೇವಿಸುತ್ತಿದ್ದರೆ ಎಲ್ಲಾ ಪೌಷ್ಟಿಕಗಳು ಸಿಗುತ್ತವೆ. ಹಸಿ ಸೌತೆಕಾಯಿ ಸೇವನೆ ಉತ್ತಮ.

ಮೆಂತ್ಯೆ, ಬೇವಿನೆಲೆ ಹಾಗೂ ಬೇವಿನಕಾಯಿಯಿಂದಾಗಿ ಸಕ್ಕರೆ ನಿಯಂತ್ರಣಗೊಳ್ಳುತ್ತದೆಯೆಂಬುದು ಯಾವುದೇ ಸಂಶೋಧನೆಯಲ್ಲಿ ಸಾಬೀತಾಗಿಲ್ಲ. ಆದರೂ ಸಕ್ಕರೆಯನ್ನು ನಿಯಂತ್ರಿಸಲು ಶರೀರವನ್ನು ಕಹಿ ಪದಾರ್ಥಗಳಿಂದ ಅಷ್ಟಾಗಿ ಕಷ್ಟಕ್ಕೊಳಪಡಿಸಬೇಕಾದ ಅಗತ್ಯವಿಲ್ಲ. ಮಧುಮೇಹಿಗಳು ಸೋಂಕಿಗೆ ಗುರಿಯಾಗುವ ಅವಕಾಶ ಹೆಚ್ಚಾಗಿರುತ್ತದೆ. ಅವುಗಳನ್ನು ನಿರೋಧಿಸಲು ವಿಟಮಿನ್ 'ಸಿ'ಗಾಗಿ ನಿಂಬೆರಸ, ಮೂಸಂಬಿಗಳಂತಹ ಹಣ್ಣುಗಳನ್ನು ಹೇರಳವಾಗಿ ಸೇವಿಸುವುದೊಳ್ಳೆಯದು.

ಕಪ್ಪು ದ್ರಾಕ್ಷಿಯಲ್ಲಿ ಆಂಟಿ ಆಕ್ಸಿಡೆಂಟ್‌ಗಳು ಹೆಚ್ಚಾಗಿರುತ್ತವೆ. ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಇವರಿಗೆ ಇದು ಸಾಕಷ್ಟು ಅಗತ್ಯವಿದೆ. ಆಹಾರಕ್ಕೆ ಸಂಬಂಧಪಟ್ಟಂತೆ ಎಲ್ಲಾ ಜಾಗ್ರತೆಗಳನ್ನು ತೆಗೆದುಕೊಳ್ಳುತ್ತಿದ್ದೇವಲ್ಲ ಎಂದು ನಿಯಮಿತ ವ್ಯಾಯಾಮವನ್ನು ನಿರ್ಲಕ್ಷಿಸಬಾರದು. ಆಹಾರದ ಮೂಲಕ ತೆಗೆದುಕೊಂಡ ಕ್ಯಾಲರಿಗಳು ಖರ್ಚಾಗುವುದಕ್ಕೆ ಪ್ರತಿದಿನ ಅರ್ಧ ಗಂಟೆಯಿಂದ ಒಂದು ಗಂಟೆಯವರೆಗೆ ಬಿರುಸು ನಡಿಗೆ ಅಥವಾ ವ್ಯಾಯಾಮ, ಧ್ಯಾನ, ಯೋಗಾಸನ, ಪ್ರಾಣಾಯಾಮ, ಈಜುಗಾರಿಕೆ ಮುಂತಾದ ಚಟುವಟಿಕೆಗಳನ್ನು ಮಾಡಬೇಕಾದ ಅಗತ್ಯವಿದೆ.

ಮಿತವೇ ಮೂಲಮಂತ್ರ

ಆಹಾರ ಸೇವನೆಯಲ್ಲಿ ಮಿತ ಎಂಬ ಮಂತ್ರ ಸೂಕ್ತ. ನಮ್ಮ ದೇಹವು ಸುಲಭವಾಗಿ ಎಷ್ಟು ಜೀರ್ಣ ಮಾಡಿಕೊಳ್ಳಲು ಸಾಧ್ಯವೋ, ಅಷ್ಟು ಮಾತ್ರ ಸೇವಿಸಬೇಕು. ಅಧಿಕ ಆಹಾರವನ್ನು ಹೊಟ್ಟೆಗೆ ತುಂಬುವುದರಿಂದ, ದೇಹದ ಅಂಗಾಗಂಗಳ ಮೇಲೆ ಒತ್ತಡ ಬೀಳುತ್ತದೆ. ಅದರಲ್ಲೂ ಮುಖ್ಯವಾಗಿ, ರಾತ್ರಿ ಹೊತ್ತು ಆಹಾರ ಲಘುವಾಗಿರಬೇಕು, ಇದರಿಂದ ಜೀರ್ಣವಾಗುವುದು ಸುಲಭ ಎನಿಸುತ್ತದೆ. ಸಕ್ಕರೆ ಬೆರೆಸಿದ ಕಾಫಿ, ಚಹಾ, ಹಾಲುಗಳನ್ನು ಸಾಧ್ಯವಾದಷ್ಟೂ ಕಡಿಮೆ ಸೇವಿಸಬೇಕು; ಪೂರ್ತಿ ತೊರೆದರೂ ಅದರಿಂದ ನಷ್ಟವಿಲ್ಲ. ಪಾಲಿಶ್ ಮಾಡಿದ ಅಕ್ಕಿಯ ಬಳಕೆಯನ್ನು ಕಡಿಮೆ ಮಾಡಬೇಕು.



ನಡಿಗೆಯೆಂಬ ವ್ಯಾಯಾಮ

ಮಧುಮೇಹ ಸಮಸ್ಯೆ ತಡೆಯಲು ವ್ಯಾಯಾಮ ಉತ್ತಮ ಪರಿಹಾರ. ಪ್ರತಿ ದಿನ, ಅವರವರ ದೈಹಿಕ ಶಕ್ತಿಗನುಸಾರವಾಗಿ, ಅರ್ಧ ಗಂಟೆಯಿಂದ ಒಂದು ಗಂಟೆಯ ತನಕ ನಡೆಯುವುದು ಉತ್ತಮ. ಹೆಚ್ಚು ಹೊತ್ತು ಕುಳಿತು ಕೆಲಸ ಮಾಡುವವರು, ಆಗಾಗ ಎದ್ದು ಓಡಾಡುವುದು ಉತ್ತಮ. ಬೆಳಗ್ಗೆ ಮತ್ತು ಸಂಜೆ ಹೀಗೆ ಎರಡು ಬಾರಿ ವಾಕಿಂಗ್ ಮಾಡಬಹುದು. ಓಡುವ ವ್ಯಾಯಾಮ ಉತ್ತಮವಾದರೂ, ಅದರಿಂದ ಕಾಲಿನ ಮೇಲೆ ಹೆಚ್ಚು ಒತ್ತಡ ಬೀರುವುದರಿಂದಾಗಿ, ನಡಿಗೆ ಹೆಚ್ಚು ಹಿತಕಾರಿ.

ಬದುಕಿನ ತಳಹದಿಯನ್ನು ಕಾಪಾಡಬೇಕು

ಒಡೆಯದಿರು ತಳಹದಿಯ ಸರಿವಡಿಪೆನದನೆಂದು
ಸಡಲಿಸುವ ನೀಂ ಮರಳಿ ಕಟ್ಟಲರಿತವನೇಂ
ಗಿಡವ ಸರಿ ಬೆಳೆಯಿಸಲು ಬುಡವ ಕೀಳ್ವುದು ಸರಿಯೆ
ದುಡುಕದಿರು ತಿದ್ದಿಕೆಗೆ - ಮಂಕುತಿಮ್ಮ॥

ಮನುಷ್ಯನ ಜೀವನವೇ ಸುಖಲೋಭಕ್ಕಾಗಿ, ಐಚ್ಛಿಕ ವಾಂಛೆಗಳ ಸಫಲತೆಗಾಗಿ ಹೊಸ ಹೊಸ ಅವಿಷ್ಕಾರ ಮಾಡುವುದು, ಇರುವುದನ್ನೇ ಸುಧಾರಿಸುವಂತಹ ಮನಸ್ಥಿತಿ ನಿರಂತರವಾಗಿ ಇದ್ದೇ ಇರುತ್ತದೆ. ಇರುವುದನ್ನೇ ಹೊಸದಾಗಿ ಹೊಂದಿಸಿಕೊಂಡು ಮತ್ತೆ ಅದಕ್ಕೆ ಹೊಸ ಹೊಸ ಆಯಾಮ ನೀಡುತ್ತಾ, ಹೊಸದಾಗಿ ಮತ್ತಷ್ಟನ್ನು ಜೋಡಿಸುತ್ತಾ ಇರುವುದಕ್ಕೆ ಹೊಸ ರೂಪ ಕೊಡುವುದು ಸರ್ವೇ ಸಾಮಾನ್ಯದ ವಿಷಯವೂ ಹೌದು. ಆದರೆ ಬದಲಾವಣೆಯ ನೆಪದಲ್ಲಿ, ಹೊಸ ಅವಿಷ್ಕಾರದ ತಂತ್ರದಲ್ಲಿ ತಲ್ಲೀನನಾಗಿ ಮೂಲ ವಸ್ತುವನ್ನೇ ನಾಶ ಮಾಡಿದಲ್ಲಿ ಹೊಸತನ್ನು ನೀನು ಹೇಗಾದರೂ ಕಂಡುಕೊಳ್ಳುವೆ? ಮೂಲವನ್ನು ನಾಶಮಾಡಿ ಹೊಸದನ್ನು ಅರಸುವುದು ಎಂದಿಗೂ ಸಾಧ್ಯವಾಗದಿರುವ ಮಾತು.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ನಮ್ಮ ಪುರಾತನರು ಹಾಕಿಕೊಟ್ಟಿರುವಂತಹ ಮನುಷ್ಯನ ತನ್ನ ಮೂಲ ಅಸ್ಮಿತೆಯಂತಿರುವ ಮನುಷ್ಯತ್ವ, ಜೀವನ ಶೈಲಿ, ಜೀವನ ಮೌಲ್ಯಗಳು, ಸಂಸ್ಕೃತಿ, ಸಂಸ್ಕಾರಗಳು, ಜ್ಞಾನದ ಪ್ರಕಾರಗಳು, ಕಾರುಣ್ಯತೆ ಹೀಗೆ ಹಲವು ವಿಚಾರಗಳು ನಮ್ಮ ಬದುಕಿಗೆ ಅಡಿಪಾಯವಾಗಿದ್ದು, ಹಳೆಯದನ್ನು ಸರಿಪಡಿಸುವ ಯತ್ನದಲ್ಲಿ ಆ ಪರಂಪರೆಗೆ ಧಕ್ಕೆ ತರಬಾರದು. ಏಕೆಂದರೆ ಅವುಗಳೇ ನಮ್ಮ ಬದುಕಿನ ಮೂಲ ಧಾತುಗಳು ಹಾಗೂ ಸತ್ಯಗಳು. ಅವುಗಳನ್ನು ಅಲುಗಾಡಿಸಿದರೆ ನಮ್ಮ ಇಡೀ ಅಸ್ತಿತ್ವವೇ ಅಲುಗಾಡಿ, ನಾವು ಖಂಡಿತ ನಾಶವಾಗುತ್ತೇವೆ. ನಮ್ಮ ಬದುಕಿನ ಹೊರ ರೂಪ ಬದಲಾಗುತ್ತಿದ್ದರೂ ಆ ಬದುಕಿಗ ಆಧಾರ ಸ್ತಂಭವಾದ ನಮ್ಮ ಮೂಲ ಸಂಸ್ಕೃತಿ, ಸಂಸ್ಕಾರ, ಪರಂಪರೆಗಳು ನಮ್ಮ ಬದುಕಿನ ಬೆನ್ನುಲುಬಿನಂತೆ ನಿಂತಿರುತ್ತವೆ. ಇವುಗಳು ನಮ್ಮ ಬದುಕಿಗೆ ಭದ್ರ ಅಡಿಪಾಯವೂ ಆಗಿರುತ್ತದೆ. ಹೊಸ ಹೊಸತನದ ಅವಿಷ್ಕಾರದಲ್ಲಿ ಮಾನವನ ಮೂಲ ಧಾತುವಾದ ಸಂಸ್ಕೃತಿ, ಪರಂಪರೆ, ಸಂಸ್ಕಾರಗಳೆಂಬ ಅಡಿಪಾಯವನ್ನೇ ಕಿತ್ತೊಗೆದರೆ ಇಲ್ಲಿ ಬದುಕಲಾದರೂ ಸಾಧ್ಯವೇ? ಎಂದಿಗೂ ಸಾಧ್ಯವೂ ಇಲ್ಲ. ಬೇರೂರಿದ ಗಿಡದ ಕೊಂಬೆ-ರೆಂಬೆಗಳನ್ನು ಕತ್ತರಿಸಿದಾಗ, ಹೊಸ ಚಿಗುರು ಮೂಡುತ್ತದೆ, ಮತ್ತೆ ಆ ಮರ ಹೂ ಹಣ್ಣುಗಳಿಂದ ನಳನಳಿಸುತ್ತದೆ. ಅದನ್ನು ಬಿಟ್ಟು ಆ ಗಿಡವನ್ನು ಸರಿಮಾಡುತ್ತೇನೆ ಎಂದು ಅದರ ಬೇರನ್ನೇ ಕತ್ತರಿಸಿದರೆ ಆ ಮರ ಸಾಯುತ್ತದೆ ಮತ್ತು ಮತ್ತೆಂದಿಗೂ ಅದು ಚಿಗುರುವುದೇ ಇಲ್ಲ. ಮತ್ತೆ ಒಡೆದ ತಳಹದಿಯನ್ನಾಗಲಿ, ತಳ ಇಲ್ಲದೆ ಮನೆಯನ್ನು ಕಟ್ಟುವುದಾಗಲಿ, ಬೇರಿರದ ಗಿಡವನ್ನು ಮತ್ತೆ ಬೆಳೆಸುವ ಕಲೆ ನಿನ್ನಲ್ಲಿ ಇಲ್ಲವೇ ಇಲ್ಲ. ಆದುದರಿಂದ ಬದುಕಿನಾಧಾರವಾದ ತಳಹದಿಯನ್ನಾಗಲಿ, ಜೀವನವೆಂಬ ಸಿರಿಸೋಗದ ಗಿಡದ ಬೇರನ್ನಾಗಲಿ ಕತ್ತರಿಸದೆ ಅವುಗಳ ಆಧಾರದ ಮೇಲೆ ನಿನ್ನ ಅವಿಷ್ಕಾರ, ಬದಲಾವಣೆ, ಮಾರ್ಪಾಡು, ವಿಜ್ಞಾನಗಳನ್ನು ಕಟ್ಟಿಕೊಳ್ಳುವುದು ಸೂಕ್ತ.

ಮಳೆಗಾಗಿ ಕಾಯುವ ಹೂ!

ಪಿಂಕ್ ರೇನ್ ಲಿಲಿ ಎಂದು ಸಾಮಾನ್ಯವಾಗಿ ಕರೆಯಲಾಗುವ ಈ ಹೂವು, ಮನೆಯಂಗಳದ ತೋಟದಲ್ಲಿ ಇದ್ದರೂ ವರ್ಷವಿಡೀ ಹೂ ಬಿಡದು. ಆದರೆ ಗಿಡಕ್ಕೆ ಬೆಳೆಯುವ ವಾತಾವರಣ ಬಂದಾಗ, ಮೈತುಂಬ ಹೂಗಳನ್ನು ಹೊದ್ದುಕೊಂಡ ರಾಜಕುಮಾರಿ ಇದು. ಅಷ್ಟೇ ಸೂಕ್ಷ್ಮ. ಸಸ್ಯಲೋಕದಲ್ಲಿ ಹಲವಾರು ಬಗೆಯ ಇಂತಹ ಲಿಲಿಗಳಿವೆ. ಮಳೆ ಪ್ರಾರಂಭವಾದ ಎರಡು ವಾರಗಳನಂತರ ಹೂ ಬಿಡುತ್ತವೆ. ಥಂಡರ್ ಲಿಲಿಯನ್ನೂ ಇಲ್ಲಿನೆ ನೆನಪಿಸಿಕೊಳ್ಳಬಹುದು. ಹವ್ಯಾಸಕ್ಕಾಗಿ ಗಿಡ ಬೆಳೆಸುವವರಿಗೆ ಇದು ಸೋಜಿಗ. ಯಾಕೆಂದರೆ ನಿರಂತರವಾಗಿ ಗೊಬ್ಬರ, ನೀರು ಹಾಕಿದರೂ ನೆಲದಿಂದ ಮೇಲೇಳುವುದನ್ನು ಕಾಣುವುದು ಕಷ್ಟ; ಆದರೆ, ಈ ಲಿಲಿ ಮಳೆ ಬಂದ ನಂತರ, ತಾನಾಗಿಯೆ ಎದ್ದು ಬಿಡುವ ಗುಣವನ್ನು ಹೊಂದಿದೆ. ಗುಡುಗು ಮಳೆಯನ್ನೇ ಕಾದು ಹೂ ಬಿಡುವ ಪಿಂಕ್ ರೇನ್ ಲಿಲಿ, ನಿಜಕ್ಕೂ ಒಂದು ಪುಟ್ಟ ಸೋಜಿಗ.

• ಮೋಹನಭಟ್, ಅಗಸೂರು.

ನೀವಿಲ್ಲದೆ..

• ಎಸ್.ಎಲ್.ವರಲಕ್ಷ್ಮೀಮಂಜುನಾಥ್
ನಂಜನಗೂಡು

ಭಾವಗೀತೆಗಳ ಸುರಲೋಕಕೆಳೆದು
ತನಿರಸಭಾವದ ಸುರೆಯ ಕುಡಿಸಿ ತಣಿಸಿ
ಲೋಕದ ಕಣ್ಣಿಗೆ ರಾಧೆಯಂತರಂಗವ ಕಾಣಿಸಿ
ಕಾವ್ಯದೊಸಗೆಯ ಕಣಕಣದಿ ಪೂಸಿ
ಎಲ್ಲಿ ಮರೆಯಾದಿರಿ ಎಚ್ಚೆಸ್ವಿ?॥

'ಚಿನ್ನಾರಿ ಮುತ್ತ'ರಿಗೆ ಹಕ್ಕಿ ಸಾಲಿನ ಬೆರಗ ತೋರಿ
'ಹೂವಿನ ಶಾಲೆ'ಯಲಿ ಇಣುಕಿ
'ಸುಣ್ಣದ ಸುತ್ತ ' ಸುತ್ತಿ ಹೂವಿ ಸಂಧಾನ ಮಾಡಿಸಿ
'ಅಳಿಲು ರಾಮಾಯಣ'ಕೆ ಬೆಳಕ ತೂರಿ
ದೇವರಾಣೆಗೂ ಮನವ ಕದ್ದು



'ಓಡೋ ಮೇಘ'ವನೇರಿ ಹೋದಿರೆಲ್ಲಿಗೆ?॥

ಮಾಗಿದ ಮನದೊಳಗೆ 'ಹುಚ್ಚು ಕೋಡಿ
ಮನಸ್ಸು' ಬಂದದ್ದು ಹೇಗೆ?
ನಮ್ಮೆದೆಯಲಿ ಮಿಗಿಲಿಲ್ಲದ ಸ್ಥಾನ
'ಮೂವತ್ತು ಮಳೆಗಾಲ'ಕೆ; ಪ್ರೀತಿ ಕೊಟ್ಟ ರಾಧೆಗೆ
'ನದಿ ತೀರ'ದಿ ಕಾವ್ಯನಾದ ತಂತುವಾದಿರಿ ಮೆಲ್ಲಗೆ
ಕಾವ್ಯ ಸಾಲುಗಳೆಲ್ಲ ಸವಿ ಹಾಲ್ದೆನೆಯ ಬಗೆ॥

ಕಾವ್ಯವನೇ ಜೀವಿಸಿ ಕಾವ್ಯವನೇ ಧ್ಯಾನಿಸಿ
'ಬುದ್ಧಚರಣ'ಕೆರಗಿ ನಮಿಸಿ
ಶಬ್ದದಾಚೆಯ ಶಬ್ದ ಭಾವದಾಚೆಯ ಭಾವ ತೋರಿ
ತೂಗಿದಿರಂದು ತೂಗುಮಂಚದಿ ಕೂರಿಸಿ
ಇಂದು ಮುಕ್ತ ಗೀತೆಯ ಹಾಡಿ
ಮೌನಮನೆಗೆ ಸಾರಿರುವುದು ಸರಿಯೇ?
ತುಂಬಲಾಗದ ನಿಮ್ಮ ಸ್ಥಾನಕೆ ಇನ್ನಾರು
ನಮಗಿದುವೇ 'ಸಾವಿರ ಚಿಂತೆ'॥

ನೀವಿಲ್ಲದೆ 'ಮರದ ಗಿಳಿ'ಬಳಗ ಒಣಗಿದೆ
ಮುಗಿಲು ಮಳೆ ಹನಿಸಿ ಎಷ್ಟೊಂದು ಮರುಗುತಿದೆ
'ಬಿಲ್ಲು ಹಬ್ಬ' ವಿವರ್ಣವಾಗಿದೆ
'ಋತು ವಿಲಾಸ' ಕಳೆದು ವಿಲಪಿಸುತಿದೆ
ಬೇಡುವೆನು ಮತ್ತೆ ಬಂದು ಬೀಡಿ ನೀವು!
ಮತ್ತೆ ಹಾಡಿ ಬಿಡಿ ರಾಧೆ ಎದೆಯ ಹಾಡು!

ಯಮನಿಗೆ ಶಾಪಕೊಟ್ಟ ಅಣಿ ಮಾಂಡವ್ಯ ಋಷಿ

ಸಕಲಜೀವಿಗಳಿಗೆ ಹುಟ್ಟಿಂದ ಮೇಲೆ ಸಾವು ಇದ್ದೇ ಇರುತ್ತದೆ. ನಾವು ಮಾಡಿದ ಪಾಪ ಕರ್ಮಗಳ ಫಲಾನುಸಾರವಾಗಿ ನಮಗೆ ಶಿಕ್ಷೆಗಳು ನಿರ್ಣಯವಾಗಿರುತ್ತವೆ. ಸತ್ತ ನಂತರ ನಮ್ಮ ಪಾಪಗಳಿಗನುಗುಣವಾಗಿ ಸ್ವರ್ಗ ನರಕಗಳು ಪ್ರಾಪ್ತಿಯಾಗುತ್ತವೆಯಂತೆ. ಅಷ್ಟಕ್ಕೂ ಸ್ವರ್ಗ ಎಂದರೇನೆಂದು ಕೇಳಿದರೆ ನಮ್ಮ ಹಿರಿಯರು ಹೇಳುವ ಪ್ರಕಾರ ಒಳ್ಳೆಯದನ್ನು ಮಾಡುವ, ಒಳ್ಳೆಯದನ್ನೇ ಬಯಸುವ, ಒಳ್ಳೆಯವನಾಗೇ ಇರುವ ಸದ್ಗುಣ ಸಂಪನ್ನನಿಗೆ ಸಕಲ ಸುಖಗಳು ದೊರೆಯುತ್ತವೆ. ಜೊತೆಗೆ ಮನಸ್ಸಿಗೆ ಸದಾ ನೆಮ್ಮದಿ ಇದ್ದು ಸುಖವೇ ಸುತ್ತಲೂ ಇರುತ್ತದೆ. ಇಂಥಹ ಸ್ಥಳಕ್ಕೆ ಸ್ವರ್ಗ ಎಂದು ಹೆಸರು.

ನರಕ ಎಂದರೇ ವಿಚಿತ್ರ ಕಲ್ಪನೆಗಳಿವೆ. ಸಣ್ಣ ಪುಟ್ಟ ತಪ್ಪುಗಳಿಗೂ ಉಗ್ರ ಶಿಕ್ಷೆ ಕೊಡುವ ಊಹಿಸಿಕೊಳ್ಳಲು ಭಯವಾಗುವ ಒಂದು ಕ್ರೂರ ಸ್ಥಳ. ಅಲ್ಲಿ ಕಾದ ಎಣ್ಣೆಯ ಬಾಂಡಲಿ, ಶೂಲಗಳು, ಕಣ್ಣು ಕೀಳುವ, ಕಿವಿಗೆ ಕಾದ ಎಣ್ಣೆ ಸುರಿಯುವ, ದೇಹದ ಚರ್ಮವನ್ನು ಸುಲಿಯುವ ಯಮಭಟರು ಹೀಗೆ ಹೇಳುತ್ತಾ ಹೋದರೇ ಸಾಲದು. ಇಂಥ ಸ್ವರ್ಗ ನರಕಗಳನ್ನು ನೋಡಿಕೊಳ್ಳಲು ಒಬ್ಬೊಬ್ಬ ಅಧಿಪತಿಗಳಿದ್ದಾರೆ. ಅದರಂತೆ ಇಂದ್ರ ಸ್ವರ್ಗಕ್ಕೆ ಅಧಿಪತಿಯಾದರೇ ಯಮನು ನರಕದ ಅಧಿಪತಿ. ಬ್ರಹ್ಮನಿಂದ ನೇಮಿಸಲ್ಪಟ್ಟವರು.

ಎಲ್ಲರ ತಪ್ಪುಗಳಿಗೆ ಶಿಕ್ಷೆಕೊಡುವ ಯಮನಿಗೆ ಶಾಪಕೊಟ್ಟು ಅವನನ್ನು ಮಾನವನನ್ನಾಗಿ ಹುಟ್ಟುವಂತೆ ಮಾಡಿ ಅನೇಕ ಕಷ್ಟಗಳನ್ನು ಅನುಭವಿಸುವಂತೆ ಮಾಡಿದ ಮುನಿಯೇ ಅಣಿಮಾಂಡವ್ಯ. ಅಣಿಮಾಂಡವ್ಯ ಮಾಡದ ತಪ್ಪಿಗೆ ರಾಜನಿಂದ ಬಂಧಿಸಲ್ಪಟ್ಟು ಅವನಿಂದ ಶೂಲಕ್ಕೇರಿಸಿದ್ದಾಗ ಯಮಭಟರು ಬಂದು ಅವರನ್ನು ಕರೆದೊಯ್ದಿದ್ದರು. ಆದರೆ ವಿಧಿನಿಯಮದಂತೆ ಅವರಿಗೆ ಇನ್ನೂ ಒಂದು ದಿವಸ ಆಯುಷ್ಯವಿತ್ತು. ಆದರೇ ಒಂದು ದಿನ ಮೊದಲೇ ಅವರನ್ನ ಯಮಲೋಕಕ್ಕೆ ಕರೆದು ಬಂದಿದ್ದರಿಂದ ದೇವರ ಸ್ಮರಣೆ ಮಾಡಲು ಸಾಧ್ಯವಾಗದ ಕಾರಣ, ಜೊತೆಗೆ ಅವರು ಚಿಕ್ಕವಯಸ್ಸಿನಲ್ಲಿ ಕೀಟಗಳನ್ನು ಕೊಂದಿದ್ದ ಕಾರಣಕ್ಕಾಗಿ ಅಣಿಮಾಂಡವ್ಯನಿಗೆ ಭೂಮಿಯಲ್ಲಿಯೇ ಶೂಲದ ಶಿಕ್ಷೆಯನ್ನು ಯಮನೇ ರಾಜಭಟರ ಮೂಲಕ ಕೊಟ್ಟಿದ್ದನು ತಿಳಿದ ಜ್ಞಾನಿಗಳಾದ ಅಣಿಮಾಂಡವ್ಯ ನೀನು ಮಾನವನಾಗಿ ಜನಿಸಿ ಕಷ್ಟಗಳನ್ನು ಅನುಭವಿಸು ಎಂದು ಶಾಪಕೊಡುತ್ತಾರೆ.

ಇದರಿಂದ ಕಂಗಾಲಾದ ಯಮ ವಿಷ್ಣುವಿನ ಬಳಿ ಅಣಿಮಾಂಡವ್ಯನನ್ನು ಕರೆದುಕೊಂಡು ಹೋದಾಗ ಅಣಿಮಾಂಡವ್ಯರು ಚಿಕ್ಕ ವಯಸ್ಸಿನಲ್ಲಿ ಬುದ್ಧಿಯಿಲ್ಲದ ಕಾರಣ ಯಾವುದು ಸರಿ, ಯಾವುದು ತಪ್ಪು ಎಂದು ತಿಳಿಯಲು ಅರ್ಹರಾಗಿರುವುದಿಲ್ಲ. ಹಾಗಾಗಿ ಚಿಕ್ಕವಯಸ್ಸಿನ ತಪ್ಪುಗಳಿಗೆ ನರಕದಲ್ಲಿ ಶಿಕ್ಷೆ ವಿಧಿಸಬಾರದೆಂದು ಹರಿಯನ್ನು ಬೇಡಿಕೊಂಡಾಗ ಹರಿಯು ನಸುನಕ್ಕು ತಥಾಸ್ತು ಎಂದಾಗ ಕಣ್ಣಂಚಲಿ ನೀರು ಸುರಿಸುತ್ತಾ ಅಣಿಮಾಂಡವ್ಯ ದೇವರ ಪಾದಕ್ಕೆರಗಿ ಯಮನಿಗೆ ಶಾಪ ನೀಡಿದ್ದಕ್ಕೆ ಮನ್ನಿಸಬೇಕೆಂದು ಕೇಳಿಕೊಳ್ಳು ತ್ತಾನೆ. ಆದರೆ ಜ್ಞಾನಿಯಾದ ಅಣಿಮಾಂಡವ್ಯ ಕೊಟ್ಟ ಶಾಪದಿಂದ ಯಮನೇ ಮುಂದೆ ಧರ್ಮರಾ ಯನಾಗಿ ಹುಟ್ಟಿ ಅನೇಕ ಕಷ್ಟಗಳನ್ನು ಎದುರಿಸಿ, ಕೋಪಗೊಳ್ಳದೇ ಧಾರ್ಮಿಕನಾಗಿಯೇ ಉಳಿಯು ತ್ತಾನೆ.

ಅಣಿಮಾಂಡವ್ಯರ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಾಗ ಯಮರಾಜ ತಪ್ಪು ಮಾಡಿದ್ದರು ಕೂಡ ನಂತರ ಅದನ್ನು ತಿದ್ದುಕೊಂಡು ವಿಷ್ಣುವಿನ ಬಳಿ ಅವರ ಪರವಾಗಿ ಮಾತನಾಡಿದ್ದರ ಪರಿಣಾಮವಾಗಿ ಧಾರ್ಮಿಕನಾಗಿಯೇ ಉಳಿದು ಧರ್ಮರಾಯನಾಗಿ ಜನಿಸುವ ಅವಕಾಶ ಸಿಗುತ್ತದೆ. ತಪ್ಪು ಮಾಡುವುದು ದೊಡ್ಡದಲ್ಲ ಆದರೆ ಅದನ್ನು ತಿದ್ದಿ ನಡೆದಾಗ ಎಂತಹವರಿಗೂ ಕೂಡ ಭಗವಂತ ಮತ್ತೊಂದು ಅವಕಾಶವನ್ನು ಕೊಡುತ್ತಾನೆ ಎನ್ನುವುದಕ್ಕೆ ಮೇಲಿನ ಕಥೆಯೇ ಉದಾಹರಣೆ.

ಕೆಲವೊಮ್ಮೆ ನಮ್ಮಿಂದಾದ ತಪ್ಪುಗಳಿಗೆ ನಾವು ಎಷ್ಟು ವಿಚಲಿತರಾಗುತ್ತೇವೆ ಎಂದರೆ ಅದನ್ನು ಒಪ್ಪಿಕೊಂಡರೆ ಮತ್ತಷ್ಟು ಜನರ ಮುಂದೆ ಕುಗ್ಗಿ ಹೋಗುತ್ತೇವೆ ಎಂದು ಎಣಿಸುತ್ತಾ ವಿತಂಡವಾದ ಮಾಡುತ್ತಲೇ ಸಾಗುತ್ತೇವೆ. ಆದರೆ ನೆನಪಿರಲಿ ನಮ್ಮ ತಪ್ಪನ್ನು ನಾವು ಸಮರ್ಥಿಸಿಕೊಂಡಷ್ಟು ನಾವು ಮತ್ತೂ ನೋಡುವವರ ಚಿಕ್ಕವರಾಗುತ್ತಾ ಹೋಗುತ್ತೇವೆ. ತಪ್ಪು ಮಾಡಿದ್ದಾಗ ಕ್ಷಮೆಯಾಚಿಸುವುದರಲ್ಲಿ ಯಾವ ಅವಮಾನವೂ ಇಲ್ಲ. ಬದಲಾಗಿ ಇದರಿಂದ ನಮಗೆ ಒಳ್ಳೆಯದಾಗುವ ಅವಕಾಶಗಳೇ ಹೆಚ್ಚು. ಪಶ್ಚಾತ್ತಾಪ ಪಡುವುದು ಕ್ಷಮೆ ಯಾಚಿಸುವುದು ವಿವೇಕಿಗಳ ಲಕ್ಷಣ. ಇನ್ನಾದರೂ ಬದಲಾಗೋಣ.

ಒಂದೊಳ್ಳೆ ಮಾತು



ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ದಂತವೈದ್ಯರೊಂದಿಗೆ ಸಾಹಿತ್ಯ ಚರ್ಚೆ!

ಹಲ್ಲು ನೋವಿಗೂ ಸಾಹಿತ್ಯ ಚರ್ಚೆಗೂ ಬಹುದೂರದ ನಂಟು! ಇತ್ತೀಚೆಗೆ ದಂತವೈದ್ಯರ ಬಳಿ ಚಿಕಿತ್ಸೆಗೆಂದು ಹೋದಾಗ, ಕನ್ನಡ ಸಾಹಿತ್ಯದ ಕುರಿತು ಮಾತನಾಡಿದೆವು! ಕುತೂಹಲಕಾರಿಯಾದ ಸಂಭಾಷಣೆ ಇದು.

• ಕಾರ್ತಿಕ್ ಕೃಷ್ಣ

ಹಲ್ಲಿಗೆ ಚಿಕಿತ್ಸೆ ಮಾಡಿಸಿಕೊಳ್ಳಲು ದಂತವೈದ್ಯರ ಬಳಿ ಹೋಗಿದ್ದೆ. ಚಿಕಿತ್ಸೆ ಪಡೆಯುತ್ತಿರು ವಾಗ, ಅಚಾನಕ್ ಆಗಿ ಅವರ ಗಮನ ನನ್ನ ಕೈಯಲ್ಲಿದ್ದ ಫೋನಿಗೆ ಅಂಟಿಸಿದ್ದ ಪೂರ್ಣಚಂದ್ರ ತೇಜಸ್ವಿ ಅವರ ಸ್ಟಿಕ್ಕರ್ ಮೇಲೆ ಬಿತ್ತು. ಆಮೇಲೆ ನಮ್ಮಿಬ್ಬರ ನಡುವೆ ಒಂದು ಮಾತುಕತೆ ನಡೀತು ನೋಡಿ, ಅದು ಸದಾ ನೆನಪಿನಲ್ಲಿ ಉಳಿಯುವಂತದ್ದು. ಅನಸ್ತೇಶಿಯಾ ಇಲ್ಲದೆ ನಡೆಯುತ್ತಿದ್ದ ಡ್ರಿಲ್ಲಿಂಗ್ಗಿನ ನೋವು ಕೂಡ ಮರೆತೋಗಿತ್ತು.



ವೈದ್ಯರು: ಒಹ್.. ನೀವು ತೇಜಸ್ವಿ ಅವರ ಅಭಿಮಾನಿನ ?
ನಾನು: ಹೌದು ಸರ್.
ತುಂಬಾ ಸಂತೋಷ..ಯಾವೆಲ್ಲ ಪುಸ್ತಕ ಓದಿದ್ದೀರಾ?
ನಾನು: ಹೆಚ್ಚಿನ ಎಲ್ಲಾ ಪುಸ್ತಕ ಓದಿದಿನಿ ಸರ್.
ಯಾವುದು ನಿಮ್ಮ ಫೇವರಿಟ್?
ಕರ್ವಾಲೋ..
ಅದೊಂದು ಉತ್ತಮ ಕಾದಂಬರಿ. ನಮಗೆ ಪಠ್ಯವಾಗಿತ್ತು.ತುಂಬಾ ಸಿಂಪಲ್ ಆಗಿ ಎಲ್ಲರಿಗೂ ಅರ್ಥ ಆಗೋ ರೀತಿ ಬರ್ದಿದ್ದಾರೆ.
ಹೂ ಸರ್..
ಅಣ್ಣನ ನೆನಪು' ಓದಿದ್ದೀರಾ?
ಹೌದು ಸರ್..ಈಗ ಮತ್ತೆ ಓದ್ತಾ ಇದ್ದೇನೆ..
ಮೊದ್ಲಿಗೆ ಎಲ್ಲಿ ಓದಿದ್ರಿ? 'ಲಂಕೇಶ್ ಪತ್ರಿಕೆ' ನಲ್ಲಾ?
ಇಲ್ಲ ಸರ್. ಲಂಕೇಶ್ ಪತ್ರಿಕೆಯಲ್ಲಿ ಬಂದಾಗ, ನಾನಿನ್ನೂ ಚಿಕ್ಕವನು...
ನಾನು ಲಂಕೇಶ್ ಪತ್ರಿಕೆ ನಲ್ಲಿ 'ಅಣ್ಣನ ನೆನಪು' ಅಂಕಣ ಬರ್ತಿದ್ದಾಗ ಓದುತ್ತಿದ್ದೆ..ತುಂಬಾ ಚೆನ್ನಾಗ್ ಇರ್ತಿತ್ತು..
ಜುಗಾರಿ ಕ್ರಾಸ್ ಕೂಡ ನಂಗೆ ಇಷ್ಟ..
ಲಂಕೇಶ್ ಅವ್ರನ್ನ ಓದಿದ್ದೀರಾ?
ತುಂಬಾ ಕಮ್ಮಿ ಸರ್...
ಮೊದ್ಲು ಓದಿ..
ಸರಿ ಸರ್..
ಎಷ್ಟು ವರ್ಷ ನಿಮಗೆ?
31 ಸರ್.
ನಿಮ್ಮ ವಯಸ್ಸಿನೋರು ಕನ್ನಡ ಸಾಹಿತ್ಯದ ಮೇಲೆ ಒಲವು ಬೆಳೆಸಿಕೊಂಡಿರೋದು ಕಂಡು ಬಹಳ ಇಷ್ಟ ವಾಯಿತು.
ಈಗೀಗ ಯುವ ಓದುಗರು ಜಾಸ್ತಿ ಆಗ್ತಿದ್ದಾರೆ ಸರ್.
ಒಳ್ಳೇದು.. ನೀವು ಬರೀತೀರಾ?
ಆಗಾಗ ಕಥೆ, ಲೇಖನ ಬರೀತೀನಿ ಸರ್..
ಹೌದೆ, ಖುಷಿ ಆಯ್ತು.
ನೀವು ಪುಸ್ತಕ ಓದುತ್ತೀರಾ ಸರ್?
ತುಂಬಾ ಕಡಿಮೆ ಈಗ..ಟೈಮ್ ಸಿಗೋಲ್ಲ.
(ಅಷ್ಟೊತ್ತಿಗೆ ನನ್ನ ಅಂದಿನ ದಂತ ಚಿಕಿತ್ಸೆ ಮುಗಿದಿತ್ತು.)
ಇನ್ನೂ ಎರಡು ಅಪಾಯಿಂಟ್ಮೆಂಟ್ ಬಾಕಿ ಇದೆ. ಮುಂದಿನ ಬಾರಿ ಹೋದಾಗ ಕೆಲವು ಪುಸ್ತಕಗಳನ್ನು ಅವರಿಗೆ ಕೊಡುವ ಅಂತ ಇದ್ದೇನೆ. ಸಾಹಿತ್ಯಪ್ರಿಯ ವೈದ್ಯರ ಭೇಟಿ ಇಂದಿನ ಭೇಟಿ ಸದಾ ನೆನಪಿನಲ್ಲಿ ಉಳಿಯಲಿದೆ!

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಗಣೇಶನ ಸಹೋದರ ಸ್ಕಂದ (4)
5. ಕರದಲ್ಲಿ ಕಂಡ ಹೂವು ಪದ್ಮ (3)
6. ಮಾನವನಲ್ಲ, ಈತ ರಾಕ್ಷಸ (3)
8. ತಿರುಗಿ ಬಂದಿರುವ ಮಂಗ (3)
9. ನಳನ ಪತ್ನಿ (4)
11. ಮರಣವಾದಾಗ ಇಲ್ಲೇ ಮನೆ (3)
13. ಅಲ್ಲಾಡು, ಕಂಪಿಸು (3)
15. ಈ ರಾಮನ ಕೈಯಲ್ಲಿದೆ ಕೊಡಲಿ (3)
16. ದಾಕ್ಷಿಣ್ಯ ಅಥವಾ ಸಂಕೋಚ (4)
18. ಹಿತವಾದ ವಾದ-ವಿವಾದ (3)
20. ಇದೊಂದು ಮಾದರಿ (3)
22. ಕಾಕ ಮಾಡಬಯಸಿದ ಕಾರ್ಯ (3)
23. ಅಡ್ಡಿ, ಆಕ್ಷೇಪ (4)

ಮೇಲಿಂದ ಕೆಳಕ್ಕೆ

1. ಹೂವಿನಿಂದ ಹೂವಿಗೆ ಹಾರಿ ದುಂಬಿಯು ಸಂಗ್ರಹಿಸುವುದು (4)
2. ಎರಡಕ್ಷರದ ಸಮಯ (2)
3. ಆತನ ಬಾವುಟ (3)
4. ಅರಿವು ಅಥವಾ ತಿಳಿವಳಿಕೆ (2)
7. ಮಳೆಯ ದೇವರು (3)
8. ಅಸ್ತವ್ಯಸ್ತವಾಗಿರುವ ಕತ್ತಲೆ, ಅಜ್ಞಾನ ಕೂಡಾ (3)
10. ಮರವೇರಿದೆ ನಮ್ಮ ರಾಷ್ಟ್ರಪಕ್ಷಿ (3)
12. ಅಡೆತಡೆಯಿಲ್ಲದೆ, ಸಲೀಸಾದ (3)
14. ನೈದಿಲೆಗೆ ಮತ್ತೊಂದು ಹೆಸರು (3)
15. ಬೀಸುವ ಗಾಳಿ (3)
17. ಸಮುದ್ರಕ್ಕೆ ಮತ್ತೊಂದು ಹೆಸರು (4)
19. ಓದುವವನು ಇಲ್ಲಿದ್ದಾನೆ (3)
21. ಎರಡಕ್ಷರದ ಎಲುಬು (2)
22. ಇದೊಂದು ಬಗೆಯ ಮೋಟಾರು ವಾಹನ (2)

ಪದಬಂಧ ಉತ್ತರ

[illegible]

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಕನಿಷ್ಠ ಎರಡು ಅವಕಾಶಕ್ಕೆ ಅರ್ಹರಿದ್ದೇವೆ

'ಗುರುವಾರ ರಾತ್ರಿಯ ಪಂದ್ಯದಲ್ಲಿ ನಾವು ಉತ್ತಮವಾಗಿ ಆಡಿಲ್ಲ. ಆದರೆ ಫೈನಲ್ ಪ್ರವೇಶಿಸಲು ಮತ್ತೊಂದು ಅವಕಾಶ ಇರುವುದರಿಂದ ಕಠಿಣ ಅಭ್ಯಾಸ ನಡೆಸುವುದು ಅನಿವಾರ್ಯ. ಹಲವು ತಿಂಗಳು ಬೆವರು ಹರಿಸಿದ್ದೇವೆ, ಹೀಗಾಗಿ ನಾವು ಕನಿಷ್ಠ ಎರಡು ಅವಕಾಶಕ್ಕೆ ಅರ್ಹರು ಎಂದು ಭಾವಿಸಿದ್ದೇನೆ. ಆ ಎರಡನೇ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುತ್ತೇವೆ. ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಬ್ಯಾಟರ್‌ಗಳಿಗೆ ಹೆಚ್ಚು ನೆರವಾಗಲಿದೆ, ಹೀಗಾಗಿ ಭಾನುವಾರದ ಪಂದ್ಯದಲ್ಲಿ ಬೇಗನೆ ಉತ್ತಮ ಸ್ಕೋರ್ ಕಲೆ ಹಾಕಬೇಕೆಂದರೆ ಕಠಿಣ ಅಭ್ಯಾಸ ಅಗತ್ಯ'

-ಜೇಮ್ಸ್ ಹೋಪ್ಸ್ ಪಂಜಾಬ್ ಬೌಲಿಂಗ್ ಕೋಚ್

ಕೊಹ್ಲಿ ವಿರುದ್ಧ ಆಕ್ರೋಶ

ಅಪಾರ ಅಭಿಮಾನಿ ಬಳಗವನ್ನ ಸೃಷ್ಟಿಸಿಕೊಂಡಿರುವ ಆರ್‌ಸಿಬಿ ಆಟಗಾರ ವಿರಾಟ್ ಕೊಹ್ಲಿ ಮೈದಾನದಲ್ಲಿ ಕೆಲವೊಮ್ಮೆ ತಮ್ಮ ನಡೆಯಿಂದ ಸುಖಾಸುಮ್ಮನೆ ವಿವಾದಕ್ಕೂ ಕಾರಣವಾಗುತ್ತಾರೆ. ಗುರುವಾರ ಚಂಡೀಗಢದ ಮುಲ್ಲಾನ್‌ಪುರ ಕ್ರೀಡಾಂಗಣದಲ್ಲಿ ನಡೆದಿದ್ದ ಪಂಜಾಬ್ ಕಿಂಗ್ಸ್ ವಿರುದ್ಧದ ಮೊದಲ ಕ್ವಾಲಿಫೈಯರ್-1 ಪಂದ್ಯದಲ್ಲಿ ಕೊಹ್ಲಿ ಪಂಜಾಬ್ ತಂಡದ ಯುವ ಆಟಗಾರ ಮುಶೀರ್ ಖಾನ್‌ಗೆ ಅಸಭ್ಯವಾಗಿ ನಿಂದಿಸಿ ವಿವಾದವೊಂದನ್ನು ಮೈಮೇಲೆ ಎಳೆದುಕೊಂಡಿದ್ದಾರೆ. ಸತತವಾಗಿ ವಿಕೆಟ್ ಕಳೆದು ಕೊಂಡು ಸಂಕಷ್ಟದಲ್ಲಿ ಸಿಲುಕಿದ್ದ ಪಂಜಾಬ್ ಮುಶೀರ್ ಅವರನ್ನು ಅಚ್ಚರಿ ಎಂಬಂತೆ ಇಂಪ್ಯಾಕ್ಟ್ ಆಟಗಾರನಾಗಿ ಕಣಕ್ಕಿಳಿಸಿತು. ಅದರಂತೆ ಬ್ಯಾಟಿಂಗ್‌ಗೆ ಬಂದ ಮುಶೀರ್, ಬ್ಯಾಟಿಂಗ್ ನಡೆಸಲು ಮುಂದಾದ ವೇಳೆ ಕೊಹ್ಲಿ ವಾಟರ್ ಬಾಯ್ ಎಂದು ಕರೆದಿದ್ದಾರೆ. ಯೇ ಪಾನಿ ಪಿಲಾತಾ ಹೈ (ಈ ವ್ಯಕ್ತಿ ಪಾನೀಯಗಳನ್ನು ಒಯ್ಯುತ್ತಾನೆ) ಎಂದು ಕೊಹ್ಲಿ ಹೇಳಿದ್ದಾಗಿ ಸಾಮಾಜಿಕ ಜಾಲತಾಣದಲ್ಲಿ ಅವರ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ.



ಸ್ಕೋರ್ ಬೋರ್ಡ್

228/5 20 ಓವರ್

ಮುಂಬೈ ಇಂಡಿಯನ್ಸ್			
ರೋಹಿತ್	ಕಾಟ್: ರಶೀದ್, ಬೌಲರ್: ಪ್ರಸಿದ್ಧ್	81	50
ಬೈರ್‌ಸ್ಟೋವ್	ಕಾಟ್: ಕೊಯೆಟ್ಜ್, ಬೌಲರ್: ಕಿಶೋರ್	47	22
ಸೂರ್ಯಕುಮಾರ್	ಕಾಟ್: ಸುಂದರ್, ಬೌಲರ್: ಕಿಶೋರ್	33	20
ತಿಲಕ್	ಕಾಟ್: ಮೆಂಡಿಸ್, ಬೌಲರ್: ಸಿರಾಜ್	25	11
ಪಾಂಡ್ಯ	ನಾಟೌಟ್	22	9
ನಮನ್	ಕಾಟ್: ರಶೀದ್, ಬೌಲರ್: ಪ್ರಸಿದ್ಧ್	9	6
ಸ್ಯಾಂಟ್ನರ್	ನಾಟೌಟ್	0	2

ಗುಜರಾತ್ ಟೈಟಾನ್ಸ್	ಓವರ್	ರನ್	ವಿಕೆಟ್
ಸಿರಾಜ್	4	37	1
ಪ್ರಸಿದ್ಧ್	4	53	2
ಕಿಶೋರ್	4	42	2
ರಶೀದ್	4	31	0
ಕೊಯೆಟ್ಜ್	3	51	0
ಸುಂದರ್	1	7	0

ಮುಂಬೈ ಇಂಡಿಯನ್ಸ್	ಓವರ್	ರನ್	ವಿಕೆಟ್
ಬೌಲ್ಟ್	4	56	2
ಬುಮ್ರಾ	3	27	1
ಗ್ಲೀಸನ್	3.3	39	2
ಸ್ಯಾಂಟ್ನರ್	1	10	1
ನಮನ್	1	9	0
ಪಾಂಡ್ಯ	3	37	0
ಅಶ್ವನಿ	3.3	28	0

208/6 20 ಓವರ್

ಗುಜರಾತ್ ಟೈಟಾನ್ಸ್			
ಸುದರ್ಶನ್	ಬೌಲ್ಡ್-ಬೌಲರ್: ಗ್ಲೀಸನ್	80	49
ಗಿಲ್	ಎಲ್‌ಬಿಡಬ್ಲ್ಯು ಬೌಲ್ಟ್	1	2
ಕೆ.ಮೆಂಡಿಸ್	ಹಿಟ್ ವಿಕೆಟ್-ಬೌಲರ್: ಸ್ಯಾಂಟ್ನರ್	20	10
ಸುಂದರ್	ಬೌಲ್ಡ್-ಬೌಲರ್: ಬುಮ್ರಾ	48	24
ರುದರ್‌ಫೋರ್ಡ್	ಕಾಟ್: ತಿಲಕ್, ಬೌಲರ್: ಬೌಲ್ಟ್	24	15
ತೆವಾಟಿಯಾ	ನಾಟೌಟ್	16	11
ಶಾರುಖ್	ಕಾಟ್: ಸೂರ್ಯಕುಮಾರ್, ಬೌಲರ್: ಗ್ಲೀಸನ್	13	7
ರಶೀದ್	ನಾಟೌಟ್	0	2

ಐಪಿಎಲ್‌ನಿಂದ ಗುಜರಾತ್ ಹೊರಕ್ಕೆ | ಭಾನುವಾರ ಕ್ವಾಲಿಫೈಯರ್-2ನೇ ಪಂದ್ಯ

ನಾಳೆ ಪಂಜಾಬ್‌ಗೆ ಮುಂಬೈ ಎದುರಾಳಿ

ಚಂಡೀಗಢ: ಇಲ್ಲಿ ಶುಕ್ರವಾರ ನಡೆದ ಐಪಿಎಲ್ ಎಲಿಮಿನೇಟರ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಅದ್ಭುತ ಪ್ರದರ್ಶನ ತೋರಿ 20 ರನ್‌ಗಳ ಗೆಲುವು ಸಾಧಿಸಿ ಕ್ವಾಲಿಫೈಯರ್-2 ಪಂದ್ಯಕ್ಕೆ ಅರ್ಹತೆ ಪಡೆದುಕೊಂಡಿದೆ. ಮುಂಬೈ ಎದುರು ಸೋತ ಗುಜರಾತ್ ತಂಡವು ಈ ಸಲದ ಐಪಿಎಲ್ ಟೂರ್ನಿಯಿಂದ ಹೊರ ಬಿತ್ತು. ಭಾನುವಾರ ನಡೆಯಲಿರುವ ಪಂಜಾಬ್ -ಮುಂಬೈ ಪಂದ್ಯದಲ್ಲಿ ಜಯ ಗಳಿಸುವ ತಂಡವು ಮಂಗಳವಾರ ಆರ್‌ಸಿಬಿಯನ್ನು ಫೈನಲ್ ಪಂದ್ಯದಲ್ಲಿ ಎದುರಿಸಲಿದೆ.

ಮುಂಬೈ ನೀಡಿದ್ದ 229ರನ್‌ಗಳ ಗುರಿ ಬೆನ್ನಟ್ಟಿದ ಗುಜರಾತ್ ಟೈಟನ್ಸ್‌ಗೆ ಉತ್ತಮ ಆರಂಭ ಸಿಗಲಿಲ್ಲ. ಮೊದಲ ಓವರ್‌ನಲ್ಲೇ ನಾಯಕ ಶುಭ್‌ಮನ್ ಗಿಲ್ (1) ಟ್ರೆಂಟ್ ಬೌಲ್ಟ್ ಬೌಲಿಂಗ್‌ನಲ್ಲಿ ಎಲ್‌ಬಿ ಬಲೆಗೆ ಬಿದ್ದರು. ನಂತರ 2ನೇ ವಿಕೆಟ್‌ಗೆ ಮೆಂಡಿಸ್ ಹಾಗೂ ಸಾಯಿ ಸುದರ್ಶನ್ 64 ರನ್‌ಗಳ ಜತೆಯಾಟ ನೀಡಿ ತಂಡಕ್ಕೆ ಚೇತರಿಕೆ ನೀಡಿದರು. ಕುಸಾಲ್ ಮೆಂಡಿಸ್ 10 ಎಸೆತಗಳಲ್ಲಿ 1 ಬೌಂಡರಿ, 2 ಸಿಕ್ಸರ್ ಸಹಿತ 20 ರನ್ ಗಳಿಸಿ ಸ್ಯಾಂಟ್ನರ್ ಬೌಲಿಂಗ್‌ನಲ್ಲಿ ಹಿಟ್ ವಿಕೆಟ್ ಆದರು.

24 ಎಸೆತಗಳಲ್ಲಿ 5 ಬೌಂಡರಿ, 3 ಸಿಕ್ಸರ್ ಸಹಿತ 48 ರನ್ ಗಳಿಸಿದ್ದ ಸುಂದರ್ ಅವರನ್ನು ಬುಮ್ರಾ ಕ್ಲೀನ್ ಬೌಲ್ಡ್ ಮಾಡಿ ಮುಂಬೈಗೆ ಬಿಗ್ ಬ್ರೇಕ್ ತಂದುಕೊಟ್ಟರು. 2 ಓವರ್ ನಂತರ ಸಾಯಿ ಸುದರ್ಶನ್ ಕೂಡ ಗ್ಲೀಸನ್ ಬೌಲಿಂಗ್‌ನಲ್ಲಿ ಔಟ್ ಆದರು. 49 ಎಸೆತಗಳಲ್ಲಿ 10 ಬೌಂಡರಿ, 1 ಸಿಕ್ಸರ್ ಸಹಿತ 80 ರನ್ ಗಳಿಸಿದರು. ಶೆರ್ಫಾನ್ ರುದರ್‌ಫೋರ್ಡ್ 15 ಎಸೆತಗಳಲ್ಲಿ 4 ಬೌಂಡರಿ ಸಹಿತ 24 ರನ್ ಗಳಿಸಿ ಬೌಲ್ಟ್‌ಗೆ ವಿಕೆಟ್ ಒಪ್ಪಿಸುತ್ತಿದ್ದಂತೆ ಮುಂಬೈ ಗೆಲುವು ಬಹುತೇಖ ಖಚಿವಾಯಿತು.

ರಾಹುಲ್ ತೆವಾಟಿಯಾ 11 ಎಸೆತಗಳಲ್ಲಿ ಅಜೇಯ 16, ಶಾರುಖ್ ಖಾನ್ 7 ಎಸೆತಗಳಲ್ಲಿ 13 ರನ್ ರನ್ ಗಳಿಸಿ 200ರ ಗಡಿದಾಟಲಷ್ಟೇ ಶಕ್ತರಾದರು. ನಿಗದಿತ ಓವರ್‌ಗಳಲ್ಲಿ ಗುಜರಾತ್ ತಂಡವು 6 ವಿಕೆಟ್ ನಷ್ಟಕ್ಕೆ 208 ರನ್ ಗಳಿಸಲಷ್ಟೇ ಶಕ್ತವಾಯಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡುವ ಅಚ್ಚರಿಯ ನಿರ್ಧಾರ ತೆಗೆದುಕೊಂಡ ಮುಂಬೈ ಇಂಡಿಯನ್ಸ್‌ಗೆ ರೋಹಿತ್ ಶರ್ಮಾ ಹಾಗೂ ಬೈರ್‌ಸ್ಟೋವ್ ಭರ್ಜರಿ ಆರಂಭ ನೀಡಿದರು. ಈ ಇಬ್ಬರು ಬ್ಯಾಟ್ಸ್‌ಮನ್‌ಗಳು ಪವರ್‌ಪ್ಲೇನಲ್ಲಿ 79 ರನ್ ಗಳಿಸಿದರು. ಬೈರ್‌ಸ್ಟೋವ್ 22 ಎಸೆತಗಳಲ್ಲಿ 4 ಬೌಂಡರಿ, 3 ಸಿಕ್ಸರ್‌ಗಳ ಸಹಿತ 47 ರನ್ ಗಳಿಸಿ ಪೆವಿಲಿಯನ್‌ಗೆ ಮರಳಿದರು.

ಸೂರ್ಯಕುಮಾರ್ 2ನೇ ವಿಕೆಟ್‌ಗೆ ರೋಹಿತ್ ಜೊತೆಗೆ ಸೇರಿ 34 ಎಸೆತಗಳಲ್ಲಿ 59 ರನ್‌ಗಳ ಜೊತೆಯಾಟ ನೀಡಿದರು. ಉತ್ತಮವಾಗಿ ಆಡುತ್ತಿದ್ದ ಸೂರ್ಯಕುಮಾರ್ ಯಾದವ್ 20 ಎಸೆತಗಳಲ್ಲಿ 1 ಬೌಂಡರಿ, 3 ಸಿಕ್ಸರ್‌ಗಳ ಸಹಿತ 33 ರನ್ ಗಳಿಸಿ ಪೆವಿಲಿಯನ್‌ಗೆ ಮರಳಿದರು. ಇವರನ್ನೂ ಕೂಡ ಸಾಯಿ ಕಿಶೋರ್ ಪೆವಿಲಿಯನ್‌ಗೆ ಅಟ್ಟಿದರು. 28 ಎಸೆತಗಳಲ್ಲಿ 47ನೇ ಅರ್ಧಶತಕ ಪೂರೈಸಿದ ರೋಹಿತ್ ಶರ್ಮಾ 50 ಎಸೆತಗಳಲ್ಲಿ 9 ಬೌಂಡರಿ, 4 ಸಿಕ್ಸರ್‌ಗಳ ನೆರವಿನಿಂದ 81 ರನ್ ಗಳಿಸಿ ಪ್ರಸಿದ್ಧ್ ಕೃಷ್ಣಗೆ ವಿಕೆಟ್ ನೀಡಿದರು. ತಿಲಕ್ ವರ್ಮಾ 11 ಎಸೆತಗಳಲ್ಲಿ 3 ಸಿಕ್ಸರ್ ಜೊತೆ 25 ರನ್ ಗಳಿಸಿ ಸಿರಾಜ್ ಬೌಲಿಂಗ್‌ನಲ್ಲಿ ಕುಸಾಲ್ ಮೆಂಡಿಸ್‌ಗೆ ಕ್ಯಾಚ್ ನೀಡಿ ನಿರ್ಗಮಿಸಿದರು.

ಮುಂಬೈ ತಂಡದ ಪರ ತಿಲಕ್ ವರ್ಮ 25 ರನ್, ಹಾರ್ದಿಕ್ ಪಾಂಡ್ಯ 22 ರನ್ ಮತ್ತು ನಮನ್ ಧೀರ್ 9 ರನ್ ಗಳಿಸಿದರು.

ಗುಜರಾತ್ ಪರ ಪ್ರಸಿದ್ಧ್ ಕೃಷ್ಣ 2 ವಿಕೆಟ್, ಸಾಯಿ ಕಿಶೋರ್ 2 ವಿಕೆಟ್ ಮತ್ತು ಸಿರಾಜ್ 1 ವಿಕೆಟ್ ಪಡೆದರು.

ಒಂದೇ ಓವರ್‌ನಲ್ಲಿ ಬೈರ್‌ಸ್ಟೋವ್ 26 ರನ್

ವಿಲ್ ಜ್ಯಾಕ್ಸ್ ಅವರ ಬದಲು ಮುಂಬೈ ಇಂಡಿಯನ್ಸ್ ತಂಡಕ್ಕೆ ಸೇರ್ಪಡೆಯಾಗಿದ್ದ ಇಂಗ್ಲೆಂಡ್ ಆಟಗಾರ ಜಾನಿ ಬೈರ್‌ಸ್ಟೋವ್, ಪ್ರಥಮ ಇನಿಂಗ್ಸ್‌ನ ನಾಲ್ಕನೇ ಓವರ್ ಬೌಲ್ ಮಾಡಲು ಬಂದ ಪ್ರಸಿದ್ಧ್ ಕೃಷ್ಣ ವಿರುದ್ಧ ಮೊದಲ ಎಸೆತದಲ್ಲಿ ಸಿಕ್ಸರ್ ಬಾರಿಸಿದರು. ನಂತರ ಎರಡನೇ ಎಸೆತದಲ್ಲಿ ಅವರು ಪ್ರಸಿದ್ಧ್ ಬಾಲ್‌ನಲ್ಲಿ ಬೌಂಡರಿ ಬಾರಿಸಿದರು. ಮೂರು ಹಾಗೂ ನಾಲ್ಕನೇ ಎಸೆತಗಳಲ್ಲಿ ಎರಡು ಸಿಕ್ಸರ್ ಬಾರಿಸಿದ ಬಳಿಕ ಅವರು ಕೊನೆಯ ಎಸೆತದಲ್ಲಿ ಬೌಂಡರಿ ಸಿಡಿಸಿದ್ದರು. ಆ ಮೂಲಕ ಪ್ರಸಿದ್ಧ್ ಕೃಷ್ಣ ಅವರ ಒಂದು ಓವರ್‌ನಲ್ಲಿ ಜಾನಿ ಬೈರ್‌ಸ್ಟೋವ್ ಒಟ್ಟು 26 ರನ್‌ಗಳನ್ನು ಬಾರಿಸಿದ್ದರು.

ಆರ್‌ಸಿಬಿ ಚಾಂಪಿಯನ್ ಆಗುತ್ತದೆನ್ನುವುದಕ್ಕೆ ಪೂರಕ ಅಂಕಿ-ಅಂಶ

ಈ ಸಲ ಕಪ್ ನಮ್ದೆ.. ಸಾಕಾರದ ನಿರೀಕ್ಷೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಗುರುವಾರ ನಡೆದ ಐಪಿಎಲ್ ಕ್ವಾಲಿಫೈಯರ್-1 ಪಂದ್ಯದಲ್ಲಿ ಪಂಜಾಬ್ ವಿರುದ್ಧ ಭರ್ಜರಿ ಅಂತರದಲ್ಲಿ ಗೆದ್ದು, ಫೈನಲ್ ಪಂದ್ಯಕ್ಕೆ ಬಹು ಸುಲಭವಾಗಿ ಪ್ರವೇಶ ಪಡೆದ ಬೆನ್ನಲ್ಲೇ 'ಈ ಸಲ ಕಪ್ ನಮ್ದೆ' ಎಂಬ ನಿರೀಕ್ಷೆಯ ಆತ್ಮವಿಶ್ವಾಸ ಆರ್‌ಸಿಬಿ ಅಭಿಮಾನಿಗಳ ಮನಸ್ಸಿನಲ್ಲಿ ಇದೀಗ ಗಟ್ಟಿಗೊಂಡಿದೆ.

ಆರ್‌ಸಿಬಿ ತಂಡವು ಈ ಬಾರಿ ಟ್ರೋಫಿ ಎತ್ತಿ ಹಿಡಿಯುವುದು ಬಹುತೇಕ ಖಚಿತ ಎಂದೆನ್ನುತ್ತಾರೆ ಹೆಚ್ಚಿನ ಕ್ರಿಕೆಟ್ ವಿಶ್ಲೇಷಕರು. ಈ ಹಿಂದಿನ ಅಂಕಿ-ಅಂಶಗಳನ್ನು ಬಹು ಸೂಕ್ಷ್ಮವಾಗಿ ಗಮನಿಸಿ, ಈ ಬಾರಿ ಟ್ರೋಫಿ ಗೆಲ್ಲುವ ಫೇವರೇಟ್ ತಂಡವು ಬೆಂಗಳೂರು ಎಂಬುದು ಅವರೆಲ್ಲರ ಲೆಕ್ಕಾಚಾರ.

ಐಪಿಎಲ್ ಇತಿಹಾಸದಲ್ಲಿ ಅಂಕಪಟ್ಟಿಯಲ್ಲಿ ದ್ವಿತೀಯ ಸ್ಥಾನ ಅಲಂಕರಿಸಿದ ತಂಡವು ಹೆಚ್ಚಿನ ಆವೃತ್ತಿಗಳಲ್ಲಿ ಕಪ್ ಗೆಲ್ಲುವ ಫೇವರೇಟ್ ಆಗಿ ಗುರುತಿಸಿಕೊಂಡಿದೆ. ಈ ಬಾರಿ ಆರ್‌ಸಿಬಿ ಅಂಕ ಪಟ್ಟಿಯಲ್ಲಿ ದ್ವಿತೀಯ ಸ್ಥಾನವನ್ನು ಅಲಂಕರಿಸಿದೆ.

ಅಂಕ ಪಟ್ಟಿಯಲ್ಲಿ ದ್ವಿತೀಯ ಸ್ಥಾನ ಅಲಂಕರಿಸಿದ ತಂಡ ಎಲ್ಲಾ ಸೀಸನ್‌ನಲ್ಲೂ ಫೈನಲ್‌ಗೇರಿದೆ, ಅದರಂತೆ ಈ ಬಾರಿ ಕೂಡ ಆರ್‌ಸಿಬಿ ಫೈನಲ್‌ಗೆ ಪ್ರವೇಶವನ್ನು ಬಹು ಸುಲಭವಾಗಿ ಗಟ್ಟಿಸಿದೆ.

ಪಾಯಿಂಟ್ಸ್ ಟೇಬಲ್‌ನಲ್ಲಿ ದ್ವಿತೀಯ ಸ್ಥಾನ ಅಲಂಕರಿಸಿದ ತಂಡ ಬಹುತೇಕ ಬಾರಿ ಕಪ್ ಗೆದ್ದಿದೆ. ಅಂಕಪಟ್ಟಿಯಲ್ಲಿ 2ನೇ ಸ್ಥಾನದಲ್ಲಿದ್ದ ತಂಡವು ಐಪಿಎಲ್‌ನಲ್ಲಿ ಕಪ್ ಗೆಲ್ಲುವ ಸಾಧ್ಯತೆ 57ರಷ್ಟು ಮತ್ತು ಮೊದಲ ಸ್ಥಾನದಲ್ಲಿದ್ದ ತಂಡದ ಅವಕಾಶ ಶೇ.35ರಷ್ಟು ಮತ್ತು ಮೂರನೇ ಸ್ಥಾನದಲ್ಲಿ ಕಾಣಿಸಿಕೊಂಡ ತಂಡದ ಚಾನ್ಸ್ ಶೇ. 7ರಷ್ಟಿದೆ, ಅಂದರೆ ದ್ವಿತೀಯ ಸ್ಥಾನದಲ್ಲಿದ್ದ ತಂಡಗಳೇ ಹೆಚ್ಚಿನ ಬಾರಿ ಟ್ರೋಫಿ ಗೆದ್ದಿದೆ ಎಂಬುದು ಗಮನಾರ್ಹ.

ಐಪಿಎಲ್ ಇತಿಹಾಸದಲ್ಲಿ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಗೆದ್ದ ತಂಡವು 11 ಬಾರಿ ಟ್ರೋಫಿಯನ್ನು ಎತ್ತಿ ಹಿಡಿದಿದೆ, ಈ ಬಾರಿ ಮೊದಲ ಕ್ವಾಲಿಫೈಯರ್ ಪಂದ್ಯವನ್ನು ಗೆದ್ದ ತಂಡ ಆರ್‌ಸಿಬಿ ಆಗಿರುವುದರಿಂದ ಫೈನಲ್‌ನಲ್ಲಿ ಟ್ರೋಫಿ ಗೆಲ್ಲುವ ನೆಚ್ಚಿನ ತಂಡ ಅದೇ ಆಗಿದೆ ಎಂಬುದು ವಿಶ್ಲೇಷಕರ ಅಭಿಮತ.

ಕಳೆದ 7 ಐಪಿಎಲ್ ಆವೃತ್ತಿಗಳಲ್ಲಿ ಮೊದಲ ಕ್ವಾಲಿಫೈಯರ್ ಪಂದ್ಯವನ್ನು ಗೆದ್ದ ತಂಡ ಫೈನಲ್‌ನಲ್ಲಿ ಸೋತಿಲ್ಲ, ಹೀಗಾಗಿ ಈ ಬಾರಿ ಆರ್‌ಸಿಬಿ ತಂಡವೇ ಗೆಲ್ಲುವ ಟ್ರೋಫಿ ಗೆಲ್ಲುವ ಸಾಧ್ಯತೆಯೇ ಹೆಚ್ಚು.

ಈ ಎಲ್ಲಾ ಅಂಕಿ-ಅಂಶಗಳ ಪ್ರಕಾರ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ಆವೃತ್ತಿಯಲ್ಲಿ ಕಪ್ ಗೆಲ್ಲುವುದು ಬಹುತೇಕ ಖಚಿತವಾದಂತಿದೆ. ಅದರಂತೆ ಜೂನ್ 3ರಂದು, ಮಂಗಳವಾರ ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ 'ಈ ಸಲ ಕಪ್ ನಮ್ದೆ' ಎನ್ನುವ ಘೋಷವಾಕ್ಯ ಮೊಳಗುವುದರಲ್ಲಿ ಸಂದೇಹವೇ ಇಲ್ಲ ಎಂದಂತಾಗಿದೆ.

ಆರ್‌ಸಿಬಿಗೆ ಅದೃಷ್ಟ ಆಟಗಾರನ ಶ್ರೀರಕ್ಷೆ

ಆರ್‌ಸಿಬಿ ತಂಡವು ಫೈನಲ್‌ನಲ್ಲಿ ಎಂದಿಗೂ ಸೋತಿಲ್ಲದ ಒಬ್ಬ ಅದೃಷ್ಟ ಆಟಗಾರನನ್ನು ಹೊಂದಿದೆ, ಹಾಗಾಗಿ ಆತನ ವರ್ಚಸ್ಸೂ ಈ ಸಲದ ಐಪಿಎಲ್ ಫೈನಲ್‌ನಲ್ಲಿ ಬೆಂಗಳೂರು ತಂಡ ಚಾಂಪಿಯನ್ ಆಗುವುದಕ್ಕೆ ಪೂರಕವಾಗಬಹುದು ಎನ್ನುವ ಲೆಕ್ಕಾಚಾರವೂ ಆರಂಭವಾಗಿದೆ. ಆರ್‌ಸಿಬಿ ತಂಡದಲ್ಲಿ ಆಸ್ಟ್ರೇಲಿಯಾದ ವೇಗದ ಬೌಲರ್ ಜೋಶ್ ಹ್ಯಾಜಲ್‌ವುಡ್ ಇರುವ ತಂಡವು ಇದುವರೆಗೆ ಯಾವುದೇ ಫೈನಲ್ ಪಂದ್ಯವನ್ನು ಸೋತಿಲ್ಲ, ಅವರು ತಮ್ಮ ವೃತ್ತಿಜೀವನದಲ್ಲಿ 6 ಫೈನಲ್ ಪಂದ್ಯಗಳನ್ನು ಆಡಿದ್ದಾರೆ. ಅವರು ಪ್ರತಿನಿಧಿಸಿರುವ ಎಲ್ಲಾ ತಂಡಗಳೂ ಫೈನಲ್ ಪಂದ್ಯಗಳನ್ನು ಗೆದ್ದಿದೆ. 2012ರಲ್ಲಿ ಹ್ಯಾಜಲ್‌ವುಡ್ ಸಿಡ್ನಿ ಸಿಕ್ಸರ್ಸ್ ಪರ ಚಾಂಪಿಯನ್ಸ್ ಲೀಗ್ ಟಿ20 ಫೈನಲ್‌ನಲ್ಲಿ ಆಡಿದ್ದರು, ಆಗ ಅವರ ತಂಡ ಗೆದ್ದಿತ್ತು. 2015ರ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಅವರು ಆಸ್ಟ್ರೇಲಿಯಾ ತಂಡದ ಭಾಗವಾಗಿದ್ದರು, ಆಗ ಆಸೀಸ್ ವಿಶ್ವಕಪ್ ಹಿಡಿದೆತ್ತಿರು. 2020ರ ಬಿಗ್ ಬ್ಯಾಷ್ ಲೀಗ್, 2021ರ ಐಪಿಎಲ್ ಮತ್ತು 2021ರ ಟಿ20 ವಿಶ್ವಕಪ್ ವಿಜೇತ ತಂಡದಲ್ಲಿ ಜೋಶ್ ಹ್ಯಾಜಲ್‌ವುಡ್ ಕೂಡ ಇದ್ದರು. ಅದಲ್ಲದೆ ಅವರಿದ್ದ ಆಸ್ಟ್ರೇಲಿಯಾ 2023ರ ಏಕದಿನ ವಿಶ್ವಕಪ್ ಗೆದ್ದಿತು. ಈ ಐಪಿಎಲ್‌ನಲ್ಲಿ ಜೋಶ್ ಹ್ಯಾಜಲ್‌ವುಡ್ 11 ಪಂದ್ಯಗಳಲ್ಲಿ 21 ವಿಕೆಟ್ ಪಡೆದಿದ್ದು, ಆರ್‌ಸಿಬಿ ಅಭಿಮಾನಿಗಳ ನಿರೀಕ್ಷೆ ಅವರತ್ತ ನೆಟ್ಟಿದೆ.

ಕಾಲೇಜ್ ಕಲಾವಿದನ ಟ್ರೇಲರ್ ರಿಲೀಸ್

ಅಪರೂಪದ ಪ್ರೇಮಕಥೆಯ ಕಾಲೇಜ್ ಕಲಾವಿದ ಚಿತ್ರ ತೆರೆಗೆ ಸಿದ್ಧವಾಗಿದೆ. ಹೊಸಬರೇ ಸೇರಿ ನಿರ್ಮಿಸಿ, ನಿರ್ದೇಶಿಸಿರುವ ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಸಿನಿಪ್ರಿಯರ ಮನಸೂರೆಗೊಂಡಿದೆ. ಖಳನಟ ಕೋಟೆ ಪ್ರಭಾಕರ್, ನಟ ನಿರ್ದೇಶಕ ನಾಗೇಚಿದ್ರ ಅರಸ್ ಈ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ಕಾಲೇಜು ಕಥೆಯ ಈ ಸಿನಿಮಾದಲ್ಲಿ ಲವ್, ಆ್ಯಕ್ಷನ್, ಕಾಮಿಡಿ, ಸೆಂಟಿಮೆಂಟ್ ಎಲ್ಲವೂ ಬೆರೆತಿದೆ. ಕಿರುತೆರೆ ಧಾರಾವಾಹಿಗಳಲ್ಲಿ ನಟಿಸಿ ಮನಗೆದ್ದಿರುವ ಆರಾವ್ ಸೂರ್ಯ ನಾಯಕನಾಗಿ ನಟಿಸಿದ್ದು, ಚಿತ್ರ ಕಲಾವಿದನ ಪಾತ್ರದಲ್ಲಿ ನಟಿಸಿದ್ದಾರೆ. ಚೈತ್ರಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಮಜಾ ಟಾಕೀಸ್ ಖ್ಯಾತಿಯ ಹುಲಿ ಕಾರ್ತಿಕ್ ಇಲ್ಲಿಯೂ ಕಾಮಿಡಿ ಕಮಾಲ್ ಮಾಡಲಿದ್ದಾರೆ. ಹಿರಿಯ ನಟ ರಮೇಶ್ ಭಟ್, ಹರಿಣಿ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಇದೊಂದು ಮ್ಯೂಸಿಕಲ್ ಲವ್ ಜರ್ನಿ ಚಿತ್ರವಾಗಿದ್ದು ಚಿತ್ರದ ಹಾಡುಗಳಿಗೆ ಸೂರಜ್ ಜೋಯಿಸ್ ಸಂಗೀತ ಸಂಯೋಜಿಸಿದ್ದಾರೆ. ಈ ಚಿತ್ರದಲ್ಲಿ ಒಟ್ಟು ನಾಲ್ಕು ಹಾಡುಗಳಿದ್ದು, ಎರಡು ಹಾಡಿಗೆ ಸೂರಜ್ ದನಿಯಾಗಿದ್ದಾರೆ. ಆನಂದ್ ಸುಂದರೇಶ್ ಛಾಯಾಗ್ರಹಣ, ಬಾಲ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ಬೆಂಗಳೂರು, ಚಿಕ್ಕಮಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಜೂನ್ 6 ರಂದು ಕಾಲೇಜ್ ಕಲಾವಿದನ ಕೈಚಳಕ ಶುರುವಾಗಲಿದೆ.

ನಾನು ವೃತ್ತಿಯಲ್ಲಿ ಉದ್ಯಮಿ, ನನಗೆ ಹಿಂದಿನಿಂದಲೂ ಸಿನಿಮಾ ನಿರ್ಮಾಣ ಮಾಡಬೇಕು ಎಂಬ ಆಸೆಯಿತ್ತು. ಹೀಗಿರುವಾಗಲೇ ನಿರ್ದೇಶಕರು ಕಾಲೇಜ್ ಕಲಾವಿದನ ಕಥೆ ಹೇಳಿದಾಗ ಕೇಳಿ ಇಷ್ಟವಾಯಿತು. ಅಂದುಕೊಂಡಂತೆ ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ. ಚಿತ್ರದಲ್ಲಿ ನಾನು ಖಳನಾಗಿ ಕಾಣಿಸಿಕೊಂಡಿದ್ದೇನೆ.

-ತರುಣ್ ಶರ್ಮಾ ನಿರ್ಮಾಪಕ

ಹಲವು ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಸಹಾಯಕ ನಿರ್ದೇಶಕನಾಗಿ ಹಲವು ಸಿನಿಮಾಗಳಲ್ಲಿ ಕಾರ್ಯನಿರ್ವಹಿಸಿದ್ದೇನೆ. ಈಗ ಮೊದಲ ಪ್ರಯತ್ನವಾಗಿ ಕಾಲೇಜ್ ಕಲಾವಿದ ಚಿತ್ರವನ್ನು ನಿರ್ದೇಶಿಸಿದ್ದೇನೆ. ಇಲ್ಲಿ ನವಿರಾದ ಪ್ರೇಮಕಥೆ ಇದ್ದು, ಅದು ಮ್ಯೂಸಿಕಲ್ ಜರ್ನಿಯಲ್ಲಿ ಸಾಗುತ್ತದೆ. ಕಾಲೇಜು ವಿದ್ಯಾರ್ಥಿಗಳ ಸ್ನೇಹ, ಪ್ರೀತಿ, ಸಂಬಂಧ, ಹಾಸ್ಯ, ಸಾಹಸ ಹೀಗೆ ಎಲ್ಲವೂ ಬೆರೆತಿದೆ. ಕಾಲೇಜ್ ಕಲಾವಿದ ಯುವ ಸಮೂಹಕ್ಕೆ ಮಾತ್ರ ಸೀಮಿತವಾದ ಸಿನಿಮಾವಲ್ಲ, ಕೌಟುಂಬಿಕ ಕಥೆಯೂ ಬೆರೆತಿದೆ.

-ಸಂಜಯ್ ಮಳವಳ್ಳಿ ನಿರ್ದೇಶಕ

ಶ್ರೇಯಸ್ ಮಂಜು ನಾಯಕನಾಗಿ ನಟಿಸಿರುವ ದಿಲ್‌ದಾರ್ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಬ್ಯುಸಿಯಾಗಿದೆ. ಈ ಚಿತ್ರದಲ್ಲಿ ಭಜರಂಗಿ ಲೋಕಿ ಖಳನಾಗಿ ಕಾಣಿಸಿಕೊಂಡಿದ್ದು ಅವರ ಪಾತ್ರದ ಫಸ್ಟ್ ಲುಕ್ ರಿಲೀಸ್ ಆಗಿದೆ. ಲೋಕಿಯ ದಿಲ್‌ದಾರ್ ಲುಕ್ ಸಿನಿಪ್ರಿಯರ ಮನಗೆದ್ದಿದೆ. ಲೋಕಿ ಇದುವರೆಗೂ ಹಲವು ವಿಭಿನ್ನ ಪಾತ್ರಗಳನ್ನು ನಿರ್ವಹಿಸಿದ್ದಾರೆ. ನಾನಾ ಶೇಡುಗಳಲ್ಲಿ ವಿಲನ್ ಆಗಿ ಅಬ್ಬರಿಸಿದ್ದಾರೆ, ದಿಲ್‌ದಾರ್ ಚಿತ್ರದಲ್ಲಿ ಕಾಲೇಜ್ ಸ್ಟೂಡೆಂಟ್ ಪಾತ್ರದಲ್ಲಿ ನಟಿಸಿದ್ದು, ಈ ಹಿಂದಿನ ಎಲ್ಲಾ ಸಿನಿಮಾಗಳಿಗಿಂತಲು ವಿಭಿನ್ನವಾದ ಅವತಾರದಲ್ಲಿ ಮಿಂಚಿದ್ದಾರೆ. ದಿಲ್‌ದಾರ್ ಲವ್ ಸ್ಟೋರಿಯ ಸಿನಿಮಾವಾಗಿದ್ದು, ಮಧುಗೌಡ ಗಂಗೂರ್ ನಿರ್ದೇಶನ ಮಾಡಿದ್ದಾರೆ. ಶ್ರೇಯಸ್ ಮಂಜು ಈ ಚಿತ್ರದಲ್ಲಿಯೂ ಲವ್ವರ್ ಬಾಯ್ ಆಗಿ ಕಾಣಿಸಿಕೊಂಡಿದ್ದಾರೆ. ಚಿತ್ರದ ಹಾಡುಗಳಿಗೆ ಅದ್ಭುತವಾಗಿ ಹೆಜ್ಜೆ ಹಾಕಿದ್ದಾರೆ. ನಟ ಶರಣ್ ಅವರ ತಂಗಿಯ ಪುತ್ರಿ ಕೀರ್ತಿ ಕೃಷ್ಣ ನಾಯಕಿಯಾಗಿ ಬಣ್ಣಹಚ್ಚಿದ್ದು, ಈ ಚಿತ್ರದ ಮೂಲಕ ನಾಯಕಿಯಾಗಿ ಚಂದನವನಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಆಂಡ್ರೋ ಅವಿನಾಶ್, ಅರ್ಪಿತ್ ಖಳ ನಟರಾಗಿ ಅಬ್ಬರಿಸಿದ್ದಾರೆ. ಸಾಧು ಕೋಕಿಲಾ, ಚಂದ್ರಪ್ರಭ, ಕಾರ್ತಿಕ್, ಚಿಲ್ಲರ್ ಮಂಜು ಹೀಗೆ ಹಾಸ್ಯ ನಟರದಂಡೇ ಈ ಚಿತ್ರದಲ್ಲಿದೆ.

ಭಜರಂಗಿ ಲೋಕಿಯ ದಿಲ್‌ದಾರ್ ಲುಕ್

ಕನಸುಗಾರನಿಗೆ ಹುಟ್ಟುಹಬ್ಬದ ಸಂಭ್ರಮ ಮುಸುಕಾಗದ ರವಿಮಾಮನ ಕ್ರೇಜ್

ಸ್ಯಾಂಡಲ್‌ವುಡ್‌ನ ಕ್ರೇಜಿಸ್ಟಾರ್, ಕನಸುಗಾರ ವಿ.ರವಿಚಂದ್ರನ್ ಅವರಿಗೆ ಹುಟ್ಟುಹಬ್ಬದ ಸಂಭ್ರಮ. ರವಿಮಾಮ ಹುಟ್ಟುಹಬ್ಬಕ್ಕೆ ಅಭಿಮಾನಿಗಳು, ಕಲಾವಿದರು ಶುಭಕೋರಿ ಸಂಭ್ರಮಿಸಿದ್ದಾರೆ. ಕನ್ನಡದಲ್ಲಿ ಎಂದಿಗೂ ಮರೆಯದ ಹಲವು ಸೂಪರ್ ಹಿಟ್ ಸಿನಿಮಾಗಳನ್ನು ನೀಡಿರುವ ಕನಸುಗಾರನ ಕನಸಿನಲಿ ಇಂದಿಗೂ ಹಲವು ಸಿನಿಮಾಗಳಿವೆ. ರವಿಮಾಮ ಸಾಲು ಸಾಲು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ವಿಭಿನ್ನ ಪಾತ್ರಗಳನ್ನು ಆಯ್ದುಕೊಳ್ಳುತ್ತಿದ್ದಾರೆ. ಅದರಲ್ಲಿ ಕೆಡಿ ಚಿತ್ರದಲ್ಲಿನ ಪಾತ್ರವೂ ಒಂದು. ಜೋಗಿ ಪ್ರೇಮ್ ನಿರ್ದೇಶನದ ಕೆಡಿ ಚಿತ್ರದಲ್ಲಿ ರವಿಮಾಮ ಅಣ್ಣಯ್ಯಪ್ಪ ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಕೆಡಿ ಭೂಗತ ಲೋಕದ ಕಥೆಯನ್ನು ಒಳಗೊಂಡಿದ್ದು ರವಿಚಂದ್ರನ್ ಪವರ್ ಫುಲ್ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಇದರ ಜತೆಗೆ ಕಿರೀಟಿ ಅಭಿನಯದ ಜೂನಿಯರ್ ಚಿತ್ರದಲ್ಲಿಯೂ ನಟಿಸಿದ್ದಾರೆ.

ಪ್ಯಾರ್ ಎಂದ ಕ್ರೇಜಿಸ್ಟಾರ್

ಚಂದನವನದಲ್ಲಿ ಪ್ರೇಮಕಥೆಗೆ ಹೊಸತನ ತಂದುಕೊಟ್ಟವರೇ ರವಿಚಂದ್ರನ್. ಹಾಗಾಗಿ ಲವ್ ಸ್ಟೋರಿಯ ಚಿತ್ರಗಳು ಎಂದರೆ ರವಿಮಾಮನಂತೆ ಸಿನಿಮಾ ಆಡಬೇಕು ಎಂದು ಎಲ್ಲರೂ ಹೇಳುತ್ತಾರೆ. ಅಂತೆಯೇ ಈಗ ನವಿರಾದ ಪ್ರೇಮಕಥೆಯ ಪ್ಯಾರ್ ಚಿತ್ರದಲ್ಲಿಯೂ ರವಿಚಂದ್ರನ್ ಅಭಿನಯಿಸಿದ್ದು, ನಾಯಕಿಯ ತಂದೆಯ ಪಾತ್ರದಲ್ಲಿ ಬಣ್ಣಹಚ್ಚಿದ್ದಾರೆ. ವಿಶೇಷ ಎಂದರೆ ಈ ಚಿತ್ರದಲ್ಲಿಯೂ ಕೂಡ ಕ್ರೇಜಿಸ್ಟಾರ್‌ಗೆ ನಾಯಕಿ ಇದ್ದಾರೆ. ಚಿತ್ರೀಕರಣ ಮುಗಿಸಿರುವ ಪ್ಯಾರ್ ಶೀಘ್ರದಲ್ಲಿಯೇ ತೆರೆಗೆ ಬರಲಿದೆ. ಇದರ ಜತೆಗೆ ತ್ರಿಶೂಲಂ ಸಿನಿಮಾ ಕೂಡ ಬಿಡುಗಡೆಗೆ ಸಿದ್ಧವಾಗಿದೆ.

ಮತ್ತೆ ಬರಲಿದೆ ಪ್ರೇಮಲೋಕ

ರವಿಚಂದ್ರನ್ ಎಂದಾಕ್ಷಣ ನಮಗೆ ನೆನಪಾಗುವುದು ಪ್ರೇಮ ಲೋಕ ಚಿತ್ರ. ಪ್ರೇಮಲೋಕದಿಂದ ಬಂದ ಪ್ರೇಮದ ಸಂದೇಶ ಯುವ ಪ್ರೇಮಿಗಳ ಮನಗೆದ್ದಿತು. ಕನ್ನಡ ಚಿತ್ರರಂಗದ ಗೋಲ್ಡನ್ ಸಿನಿಮಾವಾಗಿ ಹೊಸ ದಾಖಲೆ ಬರೆಯಿತು. ಈಗ ಪ್ರೇಮಲೋಕ 2 ಚಿತ್ರ ತೆರೆಗೆ ಸೆಟ್ಟೇರಿದೆ. ರವಿಚಂದ್ರನ್ ಅವರೇ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಈಗಾಗಲೇ ಚಿತ್ರದ ಕಥೆ ಸಿದ್ಧವಾಗಿದ್ದು, ಶೂಟಿಂಗ್‌ಗೆ ಹೊರಡಲು ರವಿಮಾಮ ಅಣಿಯಾಗಿದ್ದಾರೆ. ವಿಶೇಷ ಎಂದರೆ ಈ ಸಿನಿಮಾದಲ್ಲಿಯೂ ಇಪ್ಪತ್ತು ಹಾಡುಗಳಿವೆಯಂತೆ. ಹಾಗಾಗಿ ಪ್ರೇಮಲೋಕ 2 ಚಂದನವನದ ಚಂದದ ಚಿತ್ರಗಳಲ್ಲಿ ಒಂದಾಗಲಿದೆ. ಈ ಚಿತ್ರದಲ್ಲಿ ರವಿಚಂದ್ರನ್ ಪುತ್ರರಾದ ವಿಕ್ರಮ್ ಹಾಗೂ ಮನೋರಂಜನ್ ಪ್ರಮುಖ ಪಾತ್ರ ನಿರ್ವಹಿಸಲಿದ್ದಾರೆ. ಇದರ ಜತೆಗೆ ಮತ್ತಷ್ಟು ಅದ್ಭುತ ಪ್ರೇಮಕಥೆಯ ಸಿನಿಮಾಗಳನ್ನು ನಿರ್ದೇಶಿಸಲು ಕ್ರೇಜಿಸ್ಟಾರ್ ಸಿದ್ಧವಾಗಿದ್ದಾರೆ.

ತೆರೆಗೆ ಸಿದ್ಧವಾದ ಎಕ್ಸ್ ಅಂಡ್ ವೈ

ರಾಮಾ ರಾಮಾ ರೇ ಖ್ಯಾತಿಯ ಡಿ.ಸತ್ಯಪ್ರಕಾಶ್ ನಿರ್ಮಿಸಿ, ನಿರ್ದೇಶಿಸಿರುವ ವಿಭಿನ್ನ ಶೀರ್ಷಿಕೆಯ ಎಕ್ಸ್ ಅಂಡ್ ವೈ ಚಿತ್ರ ತೆರೆಗೆ ಸಿದ್ಧವಾಗಿದೆ. ಈ ಚಿತ್ರದಲ್ಲಿ ಸತ್ಯಪ್ರಕಾಶ್ ಅವರೇ ನಾಯಕನಾಗಿಯೂ ನಟಿಸಿದ್ದಾರೆ. ಬಹು ನಿರೀಕ್ಷಿತ ಎಕ್ಸ್ ಅಂಡ್ ವೈ ಚಿತ್ರವನ್ನು ವೀಕ್ಷಿಸಿದ ಪ್ರಾದೇಶಿಕ ಸೆನ್ಸಾರ್ ಮಂಡಳಿ ಯು/ಎ ಪ್ರಮಾಣಪತ್ರವನ್ನು ನೀಡಿದೆ. ಹಾಗಾಗಿ ಜೂನ್‌ನಲ್ಲಿ ಚಿತ್ರ ರಾಜ್ಯಾದ್ಯಂತ ತೆರೆಗೆ ಬರಲಿದೆ. ಈಗಾಗಲೇ ಪೋಸ್ಟರ್ ಸೇರಿದಂತೆ ಕೆಲವು ಕಂಟೆಂಟ್‌ಗಳ ಮೂಲಕ ಕುತೂಹಲ ಮೂಡಿಸಿರುವ ಈ ಚಿತ್ರಕ್ಕೆ ನಿರ್ದೇಶಕ ಸತ್ಯಪ್ರಕಾಶ್ ಅವರೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಈ ಮೊದಲು ರಾಮಾ ರಾಮಾ ರೇ, ಒಂದಲ್ಲಾ ಎರಡಲ್ಲಾ ಮತ್ತು ಮ್ಯಾನ್ ಆಫ್ ದಿ ಮ್ಯಾಚ್ ಚಿತ್ರಗಳನ್ನು ನಿರ್ದೇಶಿಸಿದ್ದ ಸತ್ಯಪ್ರಕಾಶ್‌ಗೆ ಇದು ನಾಲ್ಕನೆಯ ಚಿತ್ರವಾಗಿದೆ. ಮೂರು ಚಿತ್ರಗಳು ವಿಭಿನ್ನ ಕಥೆಯ ಮೂಲಕ ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದ್ದವು ಅಂತೆಯೇ ಈಗ ಈ ಸಿನಿಮಾವೂ ಕುತೂಹಲ ಮೂಡಿಸಿದೆ. ಬೃಂದಾ ಆಚಾರ್ಯ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಅಯಾನಾ, ಅಥರ್ವ ಪ್ರಕಾಶ್, ದೊಡ್ಡಣ್ಣ, ವೀಣಾ ಸುಂದರ್, ಸುಂದರ್ ವೀಣಾ, ಹರಿಣಿ, ಧರ್ಮಣ್ಣ ಕಡೂರ್, ತೇನಪ್ಪನ್ ಮುಂತಾ ದವರು ತಾರಾಗಣ ದಲ್ಲಿದ್ದಾರೆ. ಲವಿತ್ ಛಾಯಾಗ್ರಹಣ, ಕೆಂಪರಾಜು ಸಂಕಲನ, ಕೌಶಿಕ್ ಹರ್ಷ ಸಂಗೀತ ನಿರ್ದೇಶನ ಹಾಗೂ ವರದರಾಜ್ ಕಾಮತ್ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.



ಜೂನ್‌ನಲ್ಲಿ ತಿಮ್ಮನ ಮೊಟ್ಟೆಗಳು

ರಕ್ಷಿತ್ ತೀರ್ಥಹಳ್ಳಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ತಿಮ್ಮನ ಮೊಟ್ಟೆಗಳು ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. ವಾಸುಕಿ ವೈಭವ್ ಕಂಠ ಸಿರಿಯಲ್ಲಿ ಮೂಡಿಬಂದಿರುವ ಕಾಡು ದಾರಿ.. ಎಂಬ ಹಾಡಿನ ಲಿರಿಕಲ್ ವಿಡಿಯೊ ಬಿಡುಗಡೆ ಮಾಡಿರುವ ಚಿತ್ರತಂಡ ಬಿಡುಗಡೆಯ ದಿನಾಂಕವನ್ನು ಘೋಷಿಸಿದೆ. ತಿಮ್ಮನ ಮೊಟ್ಟೆಗಳು ಜೂನ್ 27ರಂದು ತೆರೆಗೆ ಬರಲಿದೆ. ರಕ್ಷಿತ್ ತೀರ್ಥಹಳ್ಳಿ ಅವರೇ ಬರೆದಿರುವ ಕಾಡಿನ ನೆಂಟರು ಕಥಾಸಂಕಲನದಿಂದ ತಿಮ್ಮನ ಮೊಟ್ಟೆಗಳು ಕಥೆಯನ್ನು ಆಯ್ದುಕೊಳ್ಳಲಾಗಿದೆ.

ಪ್ರಕೃತಿ ಮತ್ತು ಮನುಷ್ಯನ ನಡುವಿನ ಸೂಕ್ಷ್ಮ ಸಂವೇದನೆಗಳನ್ನೊಳಗೊಂಡ ಈ ಚಿತ್ರದಲ್ಲಿ ಕೇಶವ್ ಗುತ್ತಳಿಕೆ, ಸುಚೇಂದ್ರ ಪ್ರಸಾದ್, ಆಶಿಕಾ ಸೋಮಶೇಕರ್, ಶೃಂಗೇರಿ ರಾಮಣ್ಣ, ಪ್ರಗತಿ ಪ್ರಭು, ರಘು ರಾಮನಕೊಪ್ಪ, ಮಾಸ್ಟರ್ ಹರ್ಷ, ವಿನಯ್ ಕಣಿವೆ, ಪೃಥ್ವಿರಾಜ್ ಕೊಪ್ಪ, ಪ್ರಾಣೇಶ್ ಕೂಳೆಗದ್ದೆ ಮುಂತಾದವರು ನಟಿಸಿದ್ದಾರೆ.

ಶ್ರೀಕೃಷ್ಣ ಪ್ರೊಡಕ್ಷನ್ಸ್ ಬ್ಯಾನರ್‌ನಲ್ಲಿ ಆದರ್ಶ್ ಅಯ್ಯಂಗಾರ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಕಾಳಿಂಗ ಹಾವು ಚಿತ್ರದ ಕಥಾವಸ್ತುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಮಾನವ ಮತ್ತು ಪ್ರಾಣಿ ಸಂಬಂಧದ ಸಣ್ಣ ಎಳೆಯ ಭಾವುಕತೆ ಗಮನಸೆಳೆಯಲಿದೆ. ಈಗಾಗಲೇ ಈ ಚಿತ್ರ ಕೋಲ್ಕತ್ತ ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನ ಗೊಂಡಿದ್ದು, ಪ್ರಶಸ್ತಿ ಯನ್ನು ಪಡೆದು ಕೊಂಡಿದೆ.